
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಭಿಮಾನದ ನಮನ...

ಅಭಿಮಾನೋತ್ಸವದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶಿರಬಾಗಿ ನಮಿಸಿ ಅಭಿನಂದಿಸಿದ್ದು ಹೀಗೆ...ಜತೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದರು.

ಹುಬ್ಬಳ್ಳಿ

ಭಾನುವಾರ, 10 ಮೇ 2026

ಸಂಪುಟ 16, ಸಂಚಿಕೆ 46, ಪುಟಗಳು 14

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/2011/64413

hosadigantha.com

epaper.hosadigantha.com

Hosadigantha Digital

ಚಿತ್ರದುರ್ಗದಲ್ಲಿ ಯಡಿಯೂರಪ್ಪಗೆ ಅದ್ದೂರಿ ಅಭಿಮಾನೋತ್ಸವ | ಲಕ್ಷಾಂತರ ಜನ ಭಾಗಿ | ಶ್ರೀಗಳ ಉಪಸ್ಥಿತಿ

ದಕ್ಷಿಣ ಭಾರತದ ಕೆಚ್ಚೆದೆಯ ಹೋರಾಟಗಾರ, ಸೈಕಲ್‌ನಲ್ಲೇ ಸುತ್ತಿ ಪಕ್ಷ ಕಟ್ಟಿದ ಬಿಎಸ್‌ವೈ: ಶಾ ಗುಣಗಾನ

ಧೀಮಂತ, ಅಭಿಮಾನದ ಶ್ರೀಮಂತ

ಚಿತ್ರದುರ್ಗ: ಬಿಜೆಪಿ ನಾಯಕ ಮತ್ತು ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ 5 ದಶಕಗಳ ಸುದೀರ್ಘ ಸಾರ್ವಜನಿಕ ಜೀವನ, ಹೋರಾಟವು ಯುವಜನತೆಗೆ ಮಾದರಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ.

ನಗರದ ಮಾದಾರ ಚೆನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ ಸುವರ್ಣೋತ್ಸವದ ಅಂಗವಾಗಿ ಏರ್ಪಡಿಸಿದ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಜನಸೇವೆ, ರೈತರ ಕಲ್ಯಾಣಕ್ಕಾಗಿ ಯಡಿಯೂರಪ್ಪ ಅವರು ದುಡಿದವರು. ಕರ್ನಾಟಕದ ಮುಖ್ಯಮಂತ್ರಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಇರುವ ರಸ್ತೆಯಲ್ಲೇ ಚಲಿಸುವವರು, ಹೊಸದಾಗಿ ಮಾರ್ಗದರ್ಶನ ಮಾಡುವವರು ಇರುತ್ತಾರೆ. ಯಡಿಯೂರಪ್ಪ ಅವರು ಮಾರ್ಗದರ್ಶನ ಮಾಡುವ



ನಾಯಕರಾಗಿ ಹೊರಹೊಮ್ಮಿದ್ದಾರೆ. ಅವರು ಸಾಧಾರಣ ಕುಟುಂಬದಿಂದ ಬಂದವರು. ಅವರ ಇಚ್ಛಾಶಕ್ತಿ, ಸಂಘದ ಸಂಸ್ಕಾರ, ರಾಷ್ಟ್ರಭಕ್ತಿಯು ಅವರ ಜೀವನದುದ್ದಕ್ಕೂ ಮಾರ್ಗದರ್ಶನ ನೀಡಿದೆ ಎಂದು ತಿಳಿಸಿದರು.

ದಕ್ಷಿಣ ಭಾರತದಲ್ಲಿ ಯಡಿಯೂರಪ್ಪ ಅವರಂಥ ಹೋರಾಟಗಾರ ಯಾರೂ ಇಲ್ಲ, ಬಸ್ಸು ಅಥವಾ ಸೈಕಲ್ಲಿನಲ್ಲಿ ಹಳ್ಳಿಗಳಿಗೆ ತೆರಳಿ ತಮ್ಮ ಹೋರಾಟದ ಜೀವನ ನಡೆಸಿದ್ದಾರೆ. ಸಾವಿರಾರು ಕಿ.ಮೀ. ಪಾದಯಾತ್ರೆ ಮಾಡಿ ರೈತರ ಪರವಾಗಿ ಹೋರಾಟ ಮಾಡಿದವರು. ಈ ಮೂಲಕ ರೈತ ನಾಯಕರಾಗಿ ಹೊರಹೊಮ್ಮಿದರು. ಇದಕ್ಕಾಗಿ ಅವರು ಜೈಲುವಾಸ ಅನುಭವಿಸಬೇಕಾಯಿತು ಎಂದರು.

2014ರಿಂದ ಕರ್ನಾಟಕಕ್ಕೆ ಬರುತ್ತಿದ್ದೇನೆ. ಅಲ್ಲಿಂದ ಈವರೆಗೆ ಸ್ವಾಮೀಜಿಗಳ ಜತೆ ಅನೇಕ ವೇದಿಕೆಗಳನ್ನು ಹಂಚಿಕೊಂಡಿದ್ದೇನೆ. ಯಡಿಯೂರಪ್ಪ ಅವರ ವ್ಯಕ್ತಿತ್ವದಿಂದ ಎಲ್ಲ ಮತ- ಸಂಪ್ರದಾಯಗಳ ಸ್ವಾಮೀಜಿಗಳು ಇಲ್ಲಿದ್ದಾರೆ. ➡ಪುಟ ೪

ಸರ್ವರ ಏಳಿಗೆಗೆ ಶ್ರಮಿಸಿದ ಬಿಎಸ್‌ವೈ | ವಿಶೇಷ ಪುಟ ೧೨

ಅಮಿತ್ ಶಾ ಹೇಳಿದ್ದು

- ಯಡಿಯೂರಪ್ಪ ಅವರ ಜೇಬಿನಲ್ಲಿ ಸಣ್ಣ ಡೈರಿ ಇರುತ್ತದೆ. ಅವರನ್ನು ಸಂಪರ್ಕ ಮಾಡುವವರು ಮತ್ತು ಅವರ ಸಮಸ್ಯೆಯನ್ನು ಅದರಲ್ಲಿ ಬರೆಯುತ್ತಿದ್ದರು. ಅವರ ಇಂಥ ಸಂಪರ್ಕ ಸೂತ್ರವು ನನ್ನಂಥವನಿಗೂ ಜನರ ಸಂಪರ್ಕ ಮಾಡುವುದಕ್ಕೆ ಸ್ಫೂರ್ತಿಯಾಗಿದೆ. ಯುವ ಕಾರ್ಯಕರ್ತರು ಯಡಿಯೂರಪ್ಪ ಅವರ ಜೀವನದಿಂದ ಒಂದಲ್ಲ ಒಂದು ಆದರ್ಶವನ್ನು ಪಡೆಯಬೇಕು.
- ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಬಾಗಿಲು ತೆರೆಯುವಂತೆ ಮಾಡಿದ್ದೇ ಯಡಿಯೂರಪ್ಪ. ದಕ್ಷಿಣದ ಬಿಜೆಪಿ ಇತಿಹಾಸದಲ್ಲಿ ಯಡಿಯೂರಪ್ಪ ಅವರ ಪಾತ್ರ ಸುವರ್ಣಾಕ್ಷರಗಳಲ್ಲಿ ದಾಖಲಾಗುವುದು ಖಚಿತ. ಅನೇಕ ದಶಕಗಳಿಂದ ಯಡಿಯೂರಪ್ಪ ಬಿಜೆಪಿಗೆ ಮಾರ್ಗದರ್ಶನ ಮಾಡಿ ಮುನ್ನಡೆಸಿದ್ದಾರೆ ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.
- ಚಿತ್ರದುರ್ಗದ ಮದಕರಿ ನಾಯಕ ಮತ್ತು ಒನಕೆ ಓಬವ್ವನ ಕಥೆಯನ್ನು ಪ್ರತಿ ಪೋಷಕರು ಮಕ್ಕಳಿಗೆ ಹೇಳಿ ಪ್ರೇರಣೆ ನೀಡಿದ್ದಾರೆ. ಹೈದರಾಲಿಯ ಸೇನೆಗೆ ಮಣ್ಣು ಮುಕ್ಕಿಸಿದ ಯಶೋಗಾಥೆ ಸ್ಫೂರ್ತಿದಾಯಕವಾದದ್ದು. ಇಂತಹ ನೆಲಕ್ಕೆ ನಾನು ಬಂದಿರುವುದು ಸಂತೋಷವಾಗಿದೆ.



ಅಭಿಮಾನಿಗಳ ಜನಸಾಗರ, ಎಲ್ಲೆಲ್ಲೂ ಸಡಗರ...


ಚಿತ್ರದುರ್ಗ: ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರಿಗೆ ಹೊದಿಸಿ ಸನ್ಮಾನಿಸಿದ ಶಾಲನ್ನು ಕಾರ್ಯಕ್ರಮದ ಕೊನೆಯಲ್ಲಿ ಯಡಿಯೂರಪ್ಪ ಅವರು ಮಗ ವಿಜಯೇಂದ್ರ ಅವರ ಹೆಗಲಿಗೆ ಹಾಕಿ ಆಶೀರ್ವದಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವಲಾಗಿರುವ ಸಂದೇಶ ರವಾನಿಸಿದರು. ಈ ನಡುವೆ ಕಾರ್ಯಕರ್ತರೆಲ್ಲರೂ ಒಂದಾಗಿ ಸಂಘಟನೆಗಾಗಿ ಶ್ರಮಿಸುವ ಶುಭ ಸಂದೇಶ ನೀಡಲಾಯಿತು.

ವಿವರ ಪುಟ ೪

ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ: ಯಡಿಯೂರಪ್ಪ

ನನ್ನ ಜೀವನದ ಪರ್ವ ದಿನ, ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ

ಚಿತ್ರದುರ್ಗ: ನನ್ನ ಜೀವನದ ಕೊನೆಯ ಉಸಿರು ಇರುವವರೆಗೂ ವಿರಮಿಸುವುದಿಲ್ಲ, ದೇಶಕ್ಕಾಗಿ,



ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಇದು ನನ್ನ ಜೀವನದ ಪರ್ವ ದಿನ. ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ. ನಾನಿಂದು ರಾಜಕೀಯ ನಾಯಕನಾಗಿ ನಿಂತಿಲ್ಲ, ನಿಮ್ಮ ಮಗನಾಗಿ ನಿಂತಿದ್ದೇನೆ. ನಿಮ್ಮ ಅಭಿಮಾನದ ಜನಸಾಗರದ ಮುಂದೆ ನನ್ನ ಮಾತು ಬರುತ್ತಿಲ್ಲ, ಜನ್ಮ ಜನ್ಮಾಂತರದಲ್ಲೂ ನಾನು ಋಣಿಯಾಗಿರುತ್ತೇನೆ ಎಂದು ತಿಳಿಸಿದರು. ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿರುವುದರಿಂದ ಹಿಡಿದು, ಅನೇಕ ಹೋರಾಟ ಮಾಡಿ ಬಂದಿದ್ದೇನೆ. ➡ಪುಟ ೪

ಬಿಎಸ್‌ವೈ ಜನನಾಯಕ: ಬಿ.ವೈ.ವಿಜಯೇಂದ್ರ

ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ

ಚಿತ್ರದುರ್ಗ: ನಾಡು ಕಂಡ ಧೀಮಂತ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಕ್ಕಾಗಿ



ಹೋರಾಟ ಮಾಡಲಿಲ್ಲ, ಬದಲಿಗೆ ಜನರಿಗಾಗಿ ಹೋರಾಟ ಮಾಡಿದವರು. ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ಬಿಎಸ್‌ವೈ ಅವರು ಜನನಾಯಕರಾದವರು. ನನ್ನಂತಹ ಅನೇಕರಿಗೆ ಪ್ರೇರಣೆಯಾದವರು. ಇಂದು ಈ ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಜನರು ಬಂದಿರುವುದು ನೋಡಿದರೆ ಬಿಎಸ್‌ವೈ ಅವರ ಮೇಲೆ ಎಂತಹ ಅಭಿಮಾನವಿದೆ ಎಂಬುದು ತಿಳಿಯುತ್ತದೆ. ಇದೊಂದು ಐತಿಹಾಸಿಕ ಕ್ಷಣ. ಬಿಎಸ್‌ವೈ ಅವರ ಐವತ್ತು ವರ್ಷಗಳ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಕ್ಷಣ ಎಂದು ಹೇಳಿದರು. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಇದ್ದಿಲನ್ನು ಆಸಕ್ತಿಯಿಂದ ಸಮುದ್ರದ ನೀರಿನಲ್ಲಿ ತೊಳೆದರೆ ಅದು ಬೆಳ್ಳಗಾಗುವುದೇ?

▲ ನೀತಿಮಂಜರಿ

ಕಿರುಸುದ್ದಿ

ರಾಜ್ಯದಲ್ಲೂ ಬಿಜೆಪಿ ಹವಾ

ಶಿವಮೊಗ್ಗ: ಪಂಚ ರಾಜ್ಯ ಚುನಾವಣೆ ಫಲಿತಾಂಶದ ಬಳಿಕ ಅತೀವ ಉತ್ಸಾಹದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಇದೀಗ ಕರ್ನಾಟಕದಲ್ಲೂ ತನ್ನ ಹವಾ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದೆ.

ಪುಟ ೧೨

ಭಾರತ-ಆಫ್ರಿಕಾ ನಡುವಿನ ಸಂಬಂಧ ವೃದ್ಧಿಗೆ ಸಿದ್ಧತೆ

ಪುಟ ೭

ಹಾರ್ಮುಜ್ ಬಳಿ ಭಾರತೀಯ ನಾವಿಕನ ಸಾವು

ಪುಟ ೭

ಆಪ್ ಸಚಿವನ ಬಂಧನ

ಪುಟ ೭

ಸಿಎಂ ಆಗಿ ಸುವೇಂದು, ಸಚಿವರಾಗಿ ಐವರು ಪ್ರಮಾಣ

ಪ.ಬಂಗಾಳದಲ್ಲಿ ಇನ್ನು ಬಿಜೆಪಿ ಶಕೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಶನಿವಾರ ಹೊಸ ಅಧ್ಯಾಯವೊಂದು ಆರಂಭವಾಗಿದೆ. ಕೋಲ್ಕತ್ತಾದ ಐತಿಹಾಸಿಕ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಸುವೇಂದು ಅಧಿಕಾರಿ, ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ರಾಜ್ಯಪಾಲ ಆರ್.ಎನ್. ರವಿ, ಸುವೇಂದು ಅವರಿಗೆ ಗೌಪ್ಯತೆ ಮತ್ತು ಅಧಿಕಾರದ ಪ್ರಮಾಣವಚನ ಬೋಧಿಸಿದರು. ಈ ಐತಿಹಾಸಿಕ ಕ್ಷಣಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿಯ ರಾಷ್ಟ್ರೀಯ ನಾಯಕರು ಹಾಗೂ ಎನ್‌ಡಿಎ ಆಡಳಿತವಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾದರು. ➡ಪುಟ ೪



- ವೇದಿಕೆಯಿಂದ ಬಂಗಾಳ ಜನತೆಗೆ ಶಿರಬಾಗಿ ನಮಸ್ಕರಿಸಿದ ಪ್ರಧಾನಿ
- ಪಕ್ಷದ ಹಿರಿಯ ಕಾರ್ಯಕರ್ತ 94 ವರ್ಷದ ಮಖನ್ಲಾಸ್ ಸರ್ಕಾರ್ ಕಾಲಿಗೆರಗಿ ಆಶೀರ್ವಾದ ಪಡೆದ ಮೋದಿ

ಸರ್ಕಾರ ರಚಿಸಲು ಟಿವಿಕೆಗೆ ರಾಜ್ಯಪಾಲರ ಅನುಮತಿ

ತಮಿಳ್ನಾಡಲ್ಲಿಂದು ದಳಪತಿ ಪ್ರತಿಜ್ಞೆ

ಚೆನ್ನೈ: ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ನಟ ಹಾಗೂ ರಾಜಕಾರಣಿ ಜೋಸೆಫ್ ವಿಜಯ್ ಅವರಿಗೆ ರಾಜ್ಯಪಾಲರು ಶನಿವಾರ ಅನುಮತಿ ನೀಡಿದ್ದಾರೆ. 234 ಸದಸ್ಯ ಬಲದ ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಾದ ಬೆಂಬಲವನ್ನು ಅವರ ಪಕ್ಷ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಡೆದುಕೊಂಡಿದೆ. ವಿಜಯ್ ಅವರು ಭಾನುವಾರ ಬೆಳಗ್ಗೆ 10 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ವಿಜಯ್ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿ 120 ಶಾಸಕರ ಬೆಂಬಲ ಪತ್ರಗಳನ್ನು ಸಲ್ಲಿಸಿದರು. ಬಳಿಕ ವಿದಲೈ ಚಿರುತೈಗಲ್ ಕಚ್ಚಿ (ವಿಸಿಕೆ), ಭಾರತೀಯ ಕಮ್ಯೂನಿಸ್ಟ್ ಪಕ್ಷ (ಸಿಪಿಐ), ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್) ಸಿಪಿಐ(ಎಂ) ಮತ್ತು ಕಾಂಗ್ರೆಸ್ ಪಕ್ಷಗಳು ಟಿವಿಕೆ ಮುಖ್ಯಸ್ಥ ವಿಜಯ್ ಅವರಿಗೆ ಬೇಷರತ್ ಬೆಂಬಲ ಘೋಷಿಸಿ ಮೈತ್ರಿ ಸರ್ಕಾರ ರಚನೆಗೆ ಬೆಂಬಲ ನೀಡಿವೆ.



59 ವರ್ಷಗಳ ಬಳಿಕ ತಮಿಳುನಾಡಿಗೆ ಮೊದಲ ಬಾರಿಗೆ ದ್ರಾವಿಡೇತರ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ವಿಜಯ್ ಪಾತ್ರರಾಗಿದ್ದಾರೆ. ಆದರೆ, ಅವರೊಂದಿಗೆ ಸಚಿವ ಸಂಪುಟಕ್ಕೆ ಎಷ್ಟು ಮಂದಿಯನ್ನು ಸೇರಿಸಿಕೊಳ್ಳಲಾಗುತ್ತದೆ ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ➡ಪುಟ ೪

ಸತೀಶನ್ ಆಯ್ಕೆಗೆ ಮುಸ್ಲಿಂ ಒತ್ತಡ

ಹೊಸದಿಲ್ಲಿ/ತಿರುವನಂತಪುರಂ: ಕೇರಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಗೆಲುವು ಸಾಧಿಸಿ ಆರು ದಿನಗಳು ಕಳೆದಿದ್ದು, ಇನ್ನೂ ಸಿಎಂ ಯಾರಾಗಬೇಕು ಎಂಬುದರ ಬಗ್ಗೆ ನಿರ್ಣಯಿಸಲು ಕಾಂಗ್ರೆಸಿನಲ್ಲಿ ತೀವ್ರ ಕಸರತ್ತು ನಡೆದಿದೆ. ಸಿಎಂ ಸ್ಥಾನಕ್ಕೆ ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ರಮೇಶ್ ಚೆನ್ನಿತ್ತಲ ಅವರ ನಡುವೆ ತೀವ್ರ ಪೈಪೋಟಿ ನಡೆದಿದೆ. ಈ ನಡುವೆ ಮುಸ್ಲಿಂಲೀಗ್ ಸೇರಿದಂತೆ ಮತೀಯವಾದಿ ಗುಂಪುಗಳು ವಿ.ಡಿ.ಸತೀಶನ್ ಅವರನ್ನೇ ಸಿಎಂ ಗಾದಿಗೆ ಆಯ್ಕೆ ಮಾಡಬೇಕೆಂದು ತೀವ್ರ ಒತ್ತಡ ಹೇರಿದ್ದು, ಅವರ ಆಯ್ಕೆಗಾಗಿ ಬೀದಿಗಳಲ್ಲಿ ಶಕ್ತಿ ಪ್ರದರ್ಶನಕ್ಕೂ ಸಿದ್ಧ ಎಂಬ ಎಚ್ಚರಿಕೆ ಸಂದೇಶವನ್ನೂ ನೀಡಿವೆ. ➡ಪುಟ ೪

ಕೇರಳ ಸಿಎಂ ಆಯ್ಕೆಗೆ ಕಾಂಗ್ರೆಸ್ ಕಸರತ್ತು, ಕೆ.ಸಿ.ವೇಣುಗೋಪಾಲ್ ಆಯ್ಕೆಯತ್ನ ವಿರುದ್ಧ ಆಕ್ರೋಶ



ಲೆ.ಜನರಲ್ ರಾಜಾ ಸುಬ್ರಮಣಿ ನೂತನ ಸಿಡಿಎಸ್

ನೌಕಾಪಡೆ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಸ್ವಾಮಿನಾಥನ್ ನೇಮಕ



ಸುಬ್ರಮಣಿ



ಸ್ವಾಮಿನಾಥನ್

ಹೊಸದಿಲ್ಲಿ: ಭಾರತೀಯ ಸಶಸ್ತ್ರ ಪಡೆಗಳ ಉನ್ನತ ಹುದ್ದೆಗಳಿಗೆ ಕೇಂದ್ರ ಸರ್ಕಾರ ಶನಿವಾರ ಪ್ರಮುಖ ನೇಮಕಾತಿಗಳನ್ನು ಪ್ರಕಟಿಸಿದೆ. ದೇಶದ ಮುಂದಿನ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ(ಸಿಡಿಎಸ್) ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ(ನಿವೃತ್ತ) ಮತ್ತು ನೌಕಾಪಡೆಯ ಮುಂದಿನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ನೇಮಕ ಮಾಡಲಾಗಿದೆ. ವಿವರ ಪುಟ ೭

ಅಥಣಿ ರೈತನ ಮಗ ದೇಶಕ್ಕೇ ಪ್ರಥಮ

ಬೆಳಗಾವಿ: ಯುಪಿಎಸ್‌ಸಿ ಅಖಿಲ ಭಾರತ ಸೇವಾ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಐಎಫ್‌ಎಸ್ (ಇಂಡಿಯನ್ ಫಾರೆಸ್ಟ್ ಸರ್ವೀಸ್) ನಲ್ಲಿ ಜಿಲ್ಲೆಯ ಅಭ್ಯರ್ಥಿ ದೇಶಕ್ಕೇ ಪ್ರಥಮ ಸ್ಥಾನ ಪಡೆದಿದ್ದಾರೆ.



ಐಎಫ್‌ಎಸ್ ಫಲಿತಾಂಶ

2025ನೇ ಸಾಲಿನ ಐಎಫ್‌ಎಸ್ ಪರೀಕ್ಷೆಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸವದಿ ಗ್ರಾಮದ ಯುವಕ ಬಸವರಾಜ ಕೆಂಪವಾಡ ಇಡೀ ದೇಶಕ್ಕೆ ಪ್ರಥಮ ಸ್ಥಾನ ಗಿಟ್ಟಿಸಿದ್ದಾರೆ. ಜಿಲ್ಲೆಗೆ ಹೆಸರು ತಂದ ಪ್ರತಿಭಾನ್ವಿತ ಯುವಕನ ಸಾಧನೆಗೆ ಸಾಮಾಜಿಕ ವಲಯದಲ್ಲಿ ಸಂತಸ ಮೇರೆ ಮೀರಿದೆ. ಐಎಫ್‌ಎಸ್ ಫಲಿತಾಂಶದಲ್ಲಿ ಕರ್ನಾಟಕದ ಬಸವರಾಜ್ ಪ್ರಥಮ ಸ್ಥಾನ ಗಳಿಸಿದ್ದರೆ, ಅಂಶುಮನ್ ಕುಮಾರ್ ದ್ವಿತೀಯ ರ್‍ಯಾಂಕ್ ಮತ್ತು ಸಿದ್ಧಾರ್ಥ್ ತೃತೀಯ ರ್‍ಯಾಂಕ್ ಪಡೆದಿದ್ದಾರೆ. ➡ಪುಟ ೪

ಉಡುಪಿ ಜಿಲ್ಲೆಗೇ ಐದು ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ

ಬೆಂಗಳೂರು/ಹೊಸದಿಲ್ಲಿ: ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು 2025ನೇ ಸಾಲಿನ ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ ವಿಜೇತರನ್ನು ಘೋಷಿಸಿದ್ದು, ರಾಜ್ಯದ 6 ಗ್ರಾಮ ಪಂಚಾಯತ್‌ಗಳು ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾಗಿವೆ. ಅದರಲ್ಲೂ ಐದು ಪ್ರಶಸ್ತಿಗಳು ಉಡುಪಿ ಜಿಲ್ಲೆಗೆ ಸಂದಿರುವುದು ಮತ್ತೊಂದು ವಿಶೇಷ. ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣದ 9 ವಿಷಯಗಳಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಗ್ರಾಮ ಪಂಚಾಯತ್‌ಗಳನ್ನು ಗುರುತಿಸುತ್ತದೆ. ಇದರಲ್ಲಿ ಅತ್ಯುತ್ತಮ ಸಾಧನೆ ತೋರಿ ವಿಜೇತರಾಗುವ ಗ್ರಾಮ ಪಂಚಾಯತ್‌ಗಳಿಗೆ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ್ ಪುರಸ್ಕಾರಗಳನ್ನು ನೀಡುತ್ತದೆ. ➡ಪುಟ ೪

ರಾಜ್ಯದ 6 ಗ್ರಾ.ಪಂಗಳು ಪ್ರಶಸ್ತಿಗೆ ಭಾಜನ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000**(2,75,000) ಅಪರಂಜಿ ಚಿನ್ನ: **1,52,350**(1,52,680) ಆಭರಣ ಚಿನ್ನ: **1,39,650**(1,39,950) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | $1 = ₹94.25

ಕಿರುಸುದ್ದಿ

ಮೂರು ಜೋಡಿ ಡೆಮೋ ವಿಶೇಷ ರೈಲು ಕಾಯಂ ಘೋಷಣೆ

ಹುಬ್ಬಳ್ಳಿ: ಪ್ರಯಾಣಿಕ ಬೇಡಿಕೆ ಅನುಗುಣವಾಗಿ ಪ್ರಸ್ತುತ ಸಂಚರಿಸುತ್ತಿರುವ ಮೂರು ಜೋಡಿ ಡೆಮೋ ವಿಶೇಷ ರೈಲು ಕಾಯಂಗೊಳಿಸುವುದಾಗಿ ನೈರುತ್ಯ ರೈಲ್ವೆ ಘೋಷಿಸಿದೆ.

ಈ ಸೇವೆಗಳು ಮೇ 2026 ರಿಂದ ನಿಯಮಿತ ಡೆಮೋ ರೈಲುಗಳಾಗಿ ಸಂಚರಿಸಲಿದ್ದು, ಬಳ್ಳಾರಿ-ಹೊಸಪೇಟೆ-ಹುಬ್ಬಳ್ಳಿ ಮತ್ತು ಬಳ್ಳಾರಿ-ದಾವಣಗೆರೆ ಭಾಗಗಳಲ್ಲಿ ಪ್ರಯಾಣಿಸುವ ದೈನಂದಿನ ಪ್ರಯಾಣಿಕರಿಗೆ ಸುಧಾರಿತ ಸಂಪರ್ಕ ಮತ್ತು ಹೆಚ್ಚಿನ ಪ್ರಯಾಣದ ಅನುಕೂಲವನ್ನು ಒದಗಿಸಲಿವೆ.

ಹೊಸಪೇಟೆ-ಎಸ್‌ಎಸ್‌ಎಸ್ ಹುಬ್ಬಳ್ಳಿ- ಹೊಸಪೇಟೆ ಡೆಮು(07393/07394 ರೈಲು ಸಂಖ್ಯೆ) ವಿಶೇಷ ರೈಲು, ಹೊಸಪೇಟೆ-ಎಸ್‌ಎಸ್‌ಎಸ್ ಹುಬ್ಬಳ್ಳಿ-ಹೊಸಪೇಟೆ ಡೆಮು (76507/76508) ಸೇವೆ ಕಾಯಂಗೊಳಿಸಲಾಗಿದೆ.

ಆದರಂತೆ ಹೊಸಪೇಟೆ-ಎಸ್‌ಎಸ್‌ಎಸ್ ಹುಬ್ಬಳ್ಳಿ ಡೆಮೋ ರೈಲು(76508) 10.05.2026 ರಿಂದ ಜಾರಿಗೆ ಬರುವಂತೆ ಪ್ರತಿ ಭಾನುವಾರ ನಿಯಮಿತವಾಗಿ ಸಂಚರಿಸಲಿದೆ. ಎಸ್‌ಎಸ್‌ಎಸ್ ಹುಬ್ಬಳ್ಳಿ-ಹೊಸಪೇಟೆ ಡೆಮೋ ರೈಲು(76507) 16.05.2026 ರಿಂದ ಜಾರಿಗೆ ಬರುವಂತೆ ಪ್ರತಿ ಶನಿವಾರ ಸಂಚರಿಸಲಿದೆ.

ಬಳ್ಳಾರಿ-ದಾವಣಗೆರೆ-ಬಳ್ಳಾರಿ ಡೆಮೋ (07395/07396) ವಿಶೇಷ ರೈಲು ಹಾಗೂ ಬಳ್ಳಾರಿ-ದಾವಣಗೆರೆ-ಬಳ್ಳಾರಿ(76509/76510) ಡೆಮೋ ರೈಲು ಕಾಯಂಗೊಳಿಸಲಾಗುವುದು.

ಬಳ್ಳಾರಿ-ದಾವಣಗೆರೆ-ಬಳ್ಳಾರಿ ಡೆಮೋ (76509/76510) ರೈಲು ಸೇವೆ 11.5. 2026 ರಿಂದ ಜಾರಿಗೆ ಬರುವಂತೆ ಕಾಯಂಗೊಳಸಲಾಗಿದೆ. ಸೋಮವಾರದಿಂದ ಶನಿವಾರದವರೆಗೆ ಸಂಚರಿಸಲಿವೆ. ಹೊಸಪೇಟೆ-ಬಳ್ಳಾರಿ-ಹೊಸಪೇಟೆ ಡೆಮು (07397/07398) ವಿಶೇಷ ರೈಲು ಹಾಗೂ ಹೊಸಪೇಟೆ-ಬಳ್ಳಾರಿ-ಹೊಸಪೇಟೆ ಡೆಮು(76511/76512) ರೈಲು ಸೇವೆ ಕಾಯಂಗೊಳಿಸಲಾಗುವುದು. ಹೊಸಪೇಟೆ-ಬಳ್ಳಾರಿ-ಹೊಸಪೇಟೆ(76511/76512) ಡೆಮೋ ರೈಲು 11.5. 2026 ರಿಂದ ಕಾಯಂ ಸೋಮವಾರದಿಂದ ಶನಿವಾರದ ವರಗೆ ಸಂಚರಿಸಲಿದೆ. ಈ ಹಿಂದೆ ಡೆಮೋ ವಿಶೇಷ ರೈಲುಗಳಿಗಾಗಿ ನಿಗದಿಪಡಿಸಲಾಗಿದ್ದ ವೇಳಾಪಟ್ಟಿ ಮತ್ತು ನಿಲುಗಡೆಗಳೇ ಕಾಯಂ ರೈಲುಗಳಿಗೂ ಅನ್ವಯವಾಗಲಿವೆ. ಈ ಎಲ್ಲಾ ರೈಲುಗಳು 8 ಬೋಗಿಗಳ ಡೆಮು ರೇಕ್ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸಲಿವೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಧ್ವನಿ ಸಂಸ್ಕೃತಿ ಕಾರ್ಯಾಗಾರ ಇಂದು

ಧಾರವಾಡ: ಭಾರತೀಯ ಸಂಗೀತ ವಿದ್ಯಾಲಯ, ಐಎಂಎ ಧಾರವಾಡ ಶಾಖೆ, ಸಂಸ್ಕಾರ ಭಾರತಿ ಧಾರವಾಡ ಸಹಯೋಗದಲ್ಲಿ ಧ್ವನಿ ಸಂಸ್ಕೃತಿ ಕಾರ್ಯಾಗಾರ ಮೇ 10ರಂದು ಬೆಳಗ್ಗೆ 10.30ಕ್ಕೆ ಯುಬಿ ಹಿಲ್‌ನ ಐಎಂಎ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಕಾರ ಭಾರತಿ ಉತ್ತರ ಪ್ರಾಂತ ಅಧ್ಯಕ್ಷ ಡಾ.ಶಶಿಧರ ನರೇಂದ್ರ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಾರ್ಯಾಗಾರದಲ್ಲಿ ಪಣೆಯ ಧ್ವನಿತಜ್ಞ ಪ್ರೊ. ಡಾ.ಮಿಲಿಂದ ಭೋಯ್ ಉಪನ್ಯಾಸ ನೀಡಲಿದ್ದು, ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಡಾ. ಮೃತ್ಯುಂಜಯ ಅಗಡಿ ಅತಿಥಿಗಳಾಗಿ ಪಾಲ್ಗೊಳ್ಳುವುದಾಗಿ ತಿಳಿಸಿದರು.

ಧಾರವಾಡ ಸುತ್ತಮುತ್ತಲಿನ ಹಾಡುಗಾರಿಕೆ ಕಲಾವಿದರು ಹಾಗೂ ಮಾತುಗಾರಿಕೆ ಕಲಾವಿದರು, ಹಾಡುಗಾರಿಕೆ ಕಲೆ ಬೆಳೆಸಿಕೊಳ್ಳುವವರು. ಧ್ವನಿಗೆ ಸಂಬಂಧಿಸಿದ ಎಲ್ಲ ಮಾಹಿತಿ ಪಡೆದುಕೊಳ್ಳಲು ಈ ಉಪನ್ಯಾಸದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ ಎಂದರು. ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವವರು ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಉಚಿತವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಕಾರ ಭಾರತಿ ಅಧ್ಯಕ್ಷೆ ಡಾ.ಸೌಭಾಗ್ಯ ಕುಲಕರ್ಣಿ, ಡಾ. ಶ್ರಿಧರ ಕುಲಕರ್ಣಿ ಇದ್ದರು.

ಅಪರಿಚಿತ ಶವ ಪತ್ತೆ

ಕಲಘಟಗಿ: ಪಟ್ಟಣದ ಹಳಿಯಾಳ ರಸ್ತೆಗೆ ಹೋಗುವ ಉಡುಪಿ ಪಾರ್ಕ್ ಪ್ಲಾಟಿನಲ್ಲಿನ ಎರಡನೇ ರಸ್ತೆಯ ಚರಂಡಿ ಪಕ್ಕದ ಜಾಗದಲ್ಲಿ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದೆ.

ಮೃತ ವ್ಯಕ್ತಿಗೆ ಅಂದಾಜು 50 ರಿಂದ 55 ವಯಸ್ಸಾಗಿದ್ದು, ಮೈಮೇಲೆ ಬಿಳಿ ಬಣ್ಣದ ಬನಿಯನ್ ಹಾಗೂ ಕಪ್ಪು ಬಣ್ಣದ ಬರ್ಮುಡಾ ಇದ್ದು, ಮೃತ ವ್ಯಕ್ತಿಯ ದೇಹವು ಕೊಳೆತ ಸ್ಥಿತಿಯಲ್ಲಿ ಇರುವುದರಿಂದ ಮೃತ ಅನಾಮಧೇಯ ವ್ಯಕ್ತಿಯ ಹೆಸರು ಮತ್ತು ವಿಳಾಸ ಹಾಗೂ ವಾರಸುದಾರರು ತಿಳಿದುಬಂದಲ್ಲಿ ಕಲಘಟಗಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ. ಕಲಘಟಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನವಜಾತ ಶಿಶು ಪತ್ತೆ

ಕಲಘಟಗಿ: ಪಟ್ಟಣದ ಹುಲಗಿನಕಟ್ಟಿ ರಸ್ತೆಯಲ್ಲಿ ಶುಕ್ರವಾರ ಮುಂಜಾನೆ 6 ಗಂಟೆಗೆ ನವಜಾತ ಗಂಡು ಶಿಶು ಪತ್ತೆಯಾಗಿದೆ.

ಯಾರೋ ಮಗುವನ್ನು ತಿಪ್ಪೆಯಲ್ಲಿ ಎಸೆದು ಹೋಗಿರುವ ಘಟನೆ ನಡೆದಿದೆ. ಹುಲಗಿನಕಟ್ಟಿ ರಸ್ತೆಯ ಪಕ್ಕದ ತಿಪ್ಪೆಯಲ್ಲಿ ಕಪ್ಪು ಪ್ಲಾಸ್ಟಿಕ್‌ನಲ್ಲಿ ಮಗು ಒದ್ದಾಡುವುದನ್ನು ಗಮನಿಸಿದ ಮಹಿಳೆಯೊಬ್ಬರು ಕೂಡಲೇ ಪ್ಲಾಸ್ಟಿಕ್ ಹೊದಿಕೆಯನ್ನು ತೆಗೆದು ನೋಡಿ, ಅದರಲ್ಲಿ ನವಜಾತ ಪುಟ್ಟ ಕಂದಮ್ಮ ಅಳುತ್ತಿರುವುದು ಕಂಡು ಕೂಡಲೇ ಮಗುವನ್ನು ಕೈಗೆತ್ತಿಕೊಂಡಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಘಟಗಿ ತಾಲೂಕು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಘಟನಾ ಸ್ಥಳಕ್ಕೆ ಬಂದ ಕಲಘಟಗಿ ಪೊಲೀಸರು ತನಿಖೆ ನಡೆಸಿದ್ದು, ಈ ಕುರಿತು ಕಲಘಟಗಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಮಕ್ಕಳ ರಕ್ಷಣಾ ಸಮಿತಿಯವರು ಆಗಮಿಸಿ ಮಗುವನ್ನು ರಕ್ಷಣೆ ಮಾಡಿದ್ದಾರೆ. ಮಗುವನ್ನು ಸಂರಕ್ಷಿಸಿ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ರಕ್ಷಣಾಧಿಕಾರಿ ಕರಿಯಪ್ಪ ಕೌಜಲಗಿ ತಿಳಿಸಿದರು.



ಹುಬ್ಬಳ್ಳಿ: ಗೋಪನಕೊಪ್ಪದ ಶಿವ ಕಾಲೋನಿಯಲ್ಲಿ ಜರುಗಿದ ನಾಗದೇವತಾ ಮೂರ್ತಿ ಪ್ರತಿಷ್ಠಾಪನ ಮಹೋತ್ಸವದಲ್ಲಿ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ್ ಮಹಾದೇವಪ್ಪನವರ ಭೇಟಿ ನೀಡಿ ಆಶೀರ್ವಾದ ಪಡೆದರು.

ಅಲ್ಪಸಂಖ್ಯಾತರ ಓಲೈಕೆ ಸಲ್ಲ: ಅಂಚಟಗೇರಿ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಅಧಿಕಾರೇತರ ಸದಸ್ಯರ ನೇಮಕಾತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಮತ್ತೆ ಅಲ್ಪಸಂಖ್ಯಾತರ ಓಲೈಕೆಯ ರಾಜಕಾರಣಕ್ಕೆ ಮುಂದಾಗಿದೆ ಎಂದು ಮಾಜಿ ಮಹಾಪೌರ ಹಾಗೂ ಸಭಾನಾಯಕ ಈರೇಶ ಅಂಚಟಗೇರಿ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ನಗರದ ಅಭಿವೃದ್ಧಿಗೆ ಪೂರಕವಾಗುವಂತೆ ವಿವಿಧ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವ ಸಮಾಜಮುಖಿ ವ್ಯಕ್ತಿಗಳಿಗೆ ಅವಕಾಶ ಕಲ್ಪಿಸಬೇಕಾದ ಅಧಿಕಾರೇತರ ಸದಸ್ಯರ ನೇಮಕಾತಿಯನ್ನು ಕಾಂಗ್ರೆಸ್ ಸರ್ಕಾರ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ. ಸಮುದಾಯಗಳ ನಡುವೆ ಸಮಾನತೆ ಕಾಪಾಡಬೇಕಾದ ಸರ್ಕಾರವು ಮತಬ್ಯಾಂಕ್ ರಾಜಕಾರಣದ ಉದ್ದೇಶದಿಂದ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುತ್ತಿರುವುದು ಖಂಡನೀಯ ಎಂದರು. ಮಹಾನಗರ ಪಾಲಿಕೆಯ ಅಧಿಕಾರೇತರ ಸದಸ್ಯರ ಹುದ್ದೆಗಳು ಕೇವಲ ರಾಜಕೀಯ ಪುರಸ್ಕಾರಗಳಾಗಿ ಮಾರ್ಪಡಬಾರದು. ಸಾರ್ವಜನಿಕ ಜೀವನದಲ್ಲಿ ಅನುಭವ ಹೊಂದಿರುವವರು, ನಗರಾಭಿವೃದ್ಧಿ ಬಗ್ಗೆ ದೃಷ್ಟಿಕೋನ ಹೊಂದಿರುವವರು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವವರನ್ನು ಆಯ್ಕೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಕಾಂಗ್ರೆಸ್ ಸರ್ಕಾರ ಈ ಜವಾಬ್ದಾರಿಯನ್ನು ಮರೆತು ರಾಜಕೀಯ ಪ್ರೇರಿತ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ ಎಂದು ಅವರು ಟೀಕಿಸಿದರು. ಸರ್ಕಾರವು ತಕ್ಷಣವೇ ಅಧಿಕಾರೇತರ ಸದಸ್ಯರ ನೇಮಕಾತಿಯಲ್ಲಿ ಪಾರದರ್ಶಕತೆ ಹಾಗೂ ನ್ಯಾಯಸಮ್ಮತ ಮಾನದಂಡಗಳನ್ನು ಅನುಸರಿಸಬೇಕು. ಎಲ್ಲ ವರ್ಗಗಳಿಗೂ ಸಮಾನ ಅವಕಾಶ ನೀಡುವ ಮೂಲಕ ಜನತಾಂತ್ರಿಕ ಮೌಲ್ಯಗಳನ್ನು ಉಳಿಸಬೇಕು. ಇಲ್ಲವಾದಲ್ಲಿ ಸಾರ್ವಜನಿಕರ ಪರವಾಗಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ಹುಬ್ಬಳ್ಳಿ: ಎಸ್‌ಡಿಎಂ ಜೈನ್ ಮಠ ಟ್ರಸ್ಟ್ ಎಜಿಎಂ ರೂರಲ್ ಕಾಲೇಜ್ ಆಫ್ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಕಾಲೇಜ್‌ನಲ್ಲಿ ಏರ್ಪಡಿಸಿದ್ದ ಅಗ್ರಥ 2ಕೆ26 ಹ್ಯಾಕ್ ಫ್ಯೂಶನ್ 2.0 ರಾಷ್ಟ್ರೀಯ ತಾಂತ್ರಿಕ ಜ್ಞಾನ ಹ್ಯಾಕ್‌ಥಾನ್ ಸ್ಪರ್ಧೆಯಲ್ಲಿ ನಗರದ ಕೆಎಲ್‌ಇ ಸಂಸ್ಥೆ ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜ್‌ನ ಎಂಸಿಎ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳಾದ ಸುಮೀತ ಜಾಧವ, ಶ್ರೀಶೈಲ ಎಂ., ಸಹನಾ ಡಿ., ಜಯಲಕ್ಷ್ಮೀ ಎಸ್ ಎಂಬುವರು 18ಸಾವಿರ ಪ್ರಥಮ ಬಹುಮಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಧಾರವಾಡಕ್ಕೆ ಪ್ರತ್ಯೇಕ ಅಸ್ತಿತ್ವದ ಕಿಚ್ಚು !

▸ ಮಹಾಂತೇಶ ಕಣವಿ

ದಿಗಂತ ವಿಶೇಷ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಹೋರಾಟ ಮತ್ತೊಮ್ಮೆ ತೀವ್ರ ಸ್ವರೂಪ ಪಡೆಯುವ ಲಕ್ಷಣಗಳು ಗೋಚರಿಸಿವೆ. ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಸತ್ಯಪ್ರತಿಪಾದನೆಯ ರಾಜಭವನ ಚಲೋ ಜೊತೆಗೆ ಧಾರವಾಡ ಬಂದ್ ಕರೆಗೆ ನಿರ್ಧರಿಸಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಪಕ್ಷಾತೀತ ಚಿಂತನ-ಮಂಥನ ಸಭೆಯಲ್ಲಿ ಧಾರವಾಡದ ಹಿತದೃಷ್ಟಿಯಿಂದ ಪ್ರತ್ಯೇಕ ಮಹಾನಗರ ಪಾಲಿಕೆಯ ಅಗತ್ಯವನ್ನು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡಲು ಭೇಟಿಗೆ ಅವಕಾಶ ಕೋರಿದೆ. ಹುಬ್ಬಳ್ಳಿ-ಧಾರವಾಡ ಒಂದೇ ಪಾಲಿಕೆಯ ಅಡಿಯಲ್ಲಿ ಬಂದರೂ, ಧಾರವಾಡಕ್ಕೆ ಆಗುತ್ತಿರುವ ಅನ್ಯಾಯ, ಅನುದಾನದ ಕೊರತೆ, ಅಭಿವೃದ್ಧಿ ಕುಂಠಿತ ಕುರಿತು ಅಂಕಿಅಂಶಗಳೊಂದಿಗೆ ಸತ್ಯಪ್ರತಿಪಾದನೆ ಮಾಡುವುದಕ್ಕೂ ಸಮಿತಿಯು ಸನ್ನದ್ಧಗೊಂಡಿದೆ. ಕೇವಲ ಮನವಿಗಳಿಗೆ ಸೀಮಿತವಾಗಿದ್ದ ಪ್ರತ್ಯೇಕ ಪಾಲಿಕೆ ಹೋರಾಟ ಮತ್ತೊಂದು ಹಂತಕ್ಕೆ ತಲುಪಿದೆ. ರಾಜ್ಯಪಾಲರು ಪ್ರತ್ಯೇಕ ಪಾಲಿಕೆಯ ಕಡತಕ್ಕೆ ಅನುಮೋದನೆ ನೀಡದಿದ್ದರೆ, ಧಾರವಾಡ ಬಂದ್ ಮಾಡುವ ಮೂಲಕ ಒಗ್ಗಟ್ಟು ಪ್ರದರ್ಶನಕ್ಕೆ ಸಿದ್ಧತೆ ನಡೆಸಿದೆ.

ಪ್ರತ್ಯೇಕ ಪಾಲಿಕೆ ಏಕೆ?
ಧಾರವಾಡದ ಸಣ್ಣಪುಟ್ಟ ಕೆಲಸಗಳಿಗೂ ಹುಬ್ಬಳ್ಳಿಗೆ ಅಲೆಯುವುದು, ಅನುದಾನದ ಹಂಚಿಕೆ ತಾರತಮ್ಯ, ಹುಬ್ಬಳ್ಳಿಗೆ ಹೋಲಿಸಿದರೆ ಧಾರವಾಡ ಅಭಿವೃದ್ಧಿ ಕುಂಠಿತ, ಮೂಲಸೌಕರ್ಯಗಳ ಕೊರತೆ ಕಾರಣಕ್ಕೆ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಡಿಕೆ ತೀವ್ರಗೊಂಡಿದೆ.



ಜನಾಂದೋಲನ
ಪ್ರಸ್ತುತ ಹೋರಾಟ ಸಂಘಟನೆಗಳಿಗೆ ಸೀಮಿತವಾಗದೆ, ಇದೀಗ ಧಾರವಾಡದ ಪ್ರತಿ ನಾಗರಿಕನ ಧ್ವನಿಯಾಗುತ್ತಿದೆ. ಸಾಹಿತಿಗಳು, ಬುದ್ಧಿಜೀವಿಗಳು ಧಾರವಾಡದ ಗರಿಮೆ ಉಳಿಸಲು ಪ್ರತ್ಯೇಕ ಆಡಳಿತ ಅಗತ್ಯತೆಗೆ ಬೆಂಬಲಿಸಿರುವುದು ಹೋರಾಟಕ್ಕೂ ಬಲ ಬಂದಿದೆ.

ಬೆಂಬಲ
ಧಾರವಾಡ ಬಂದ್ ಕರೆಗೆ ನಗರದ ವಿವಿಧ ಸಂಘ-ಸಂಸ್ಥೆ ಜೊತೆ ವ್ಯಾಪರಸ್ಥರು ಬೆಂಬಲಿಸಿದ್ದು, ಮುಖ್ಯವಾಗಿ ಯುವಜನತೆ ಸಹ ಸಾಮಾಜಿಕ ಜಾಲತಾಣದಲ್ಲಿ ಧಾರವಾಡ ಪ್ರತ್ಯೇಕ ಪಾಲಿಕೆ ಅಭಿಯಾನದ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

» ಧಾರವಾಡದ ಆತ್ಮಗೌರವ ಮತ್ತು ಅಭಿವೃದ್ಧಿಗಾಗಿ ಪ್ರತ್ಯೇಕ ಪಾಲಿಕೆ ಅನಿವಾರ್ಯ ರಾಜ್ಯಪಾಲರು ತಮ್ಮ ನ್ಯಾಯಯುತ ಬೇಡಿಕೆಗೆ ಅಂಕಿತ ಹಾಕಿದ್ದರೆ, ಭವಿಷ್ಯದಲ್ಲಿ ತೀವ್ರ ಸ್ವರೂಪದ ಹೋರಾಟ ಎದುರಿಸಬೇಕಾದಿತೆಂದು ಹೋರಾಟ ಸಮಿತಿ ಎಚ್ಚರಿಕೆ

» ಧಾರವಾಡದ ಈ ಸತ್ಯಪ್ರತಿಪಾದನೆಯ ರಾಜಭವನ ಚಲೋ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರನ್ನು ಎಚ್ಚರಿಸುತ್ತದೆಯೇ ಅಥವಾ ಎಂದಿನಂತೆ ಭರವಸೆಗಳಲ್ಲಿ ಈ ಹೋರಾಟವು ಕೊನೆಗೊಳ್ಳಲಿದೆಯೇ? ಎಂಬುದು ಹೋರಾಟ ಸಮಿತಿ ಪ್ರಶ್ನೆ

“ ಪ್ರತ್ಯೇಕ ಪಾಲಿಕೆ ರಚನೆ ರಾಜ್ಯಪಾಲರ ಬಳಿಯಲ್ಲಿ ಕಾರಣ ಚರ್ಚೆ ಬೇಡ. ಅವರಿಗೆ ಒತ್ತಡ ಹಾಕೋಣ. ಇದಕ್ಕೆ ಧಾರವಾಡದ ಸಾಹಿತ್ಯ ವಲಯದ ಬೆಂಬಲವೂ ಇದೆ.
■ ಡಾ.ವೀರಣ್ಣ ರಾಜೂರ, ಅಧ್ಯಕ್ಷ, ಡಾ. ಎಂಎಂ. ಕಲಬುರ್ಗಿ ಪ್ರತಿಷ್ಠಾನ

“ ಅನುದಾನ ನೆಪ. ಜನರ ಆಶಯಗಳಿಗೆ ಸ್ಪಂದಿಸಬೇಕಿದೆ. ಪ್ರತ್ಯೇಕ ಪಾಲಿಕೆ ವಿರುದ್ಧ ನಡೆದರೆ, ಜನಪ್ರತಿನಿಧಿಗಳು ಮನೆಗೆ ಹೋಗಲು ಸಿದ್ಧರಿರಬೇಕು. ಭವಿಷ್ಯದಲ್ಲಿ ತಕ್ಕ ಪಾಠ ಕಲಿಸುತ್ತೇವೆ.
■ ಆರ್.ಡಿ.ಕುಲಕರ್ಣಿ ಅಧ್ಯಕ್ಷ, ತಾಲೂಕು ಬ್ರಾಹ್ಮಣ ಸಭಾ

“ ಧಾರವಾಡ ಪ್ರತ್ಯೇಕ ಪಾಲಿಕೆಗೆ ರಾಜ್ಯಪಾಲರು ಸಹಿ ಹಾಕದಿದ್ದರೆ, ಹೈಕೋರ್ಟ್‌ಗೆ ಸಾರ್ವಜನಿಕ ಹಿತಾತಕ್ತಿ ಅರ್ಜಿ ಸಲ್ಲಿಸುತ್ತೇವೆ.
■ ಬಿ.ಡಿ.ಹಿರೇಮಠ, ಹೈಕೋರ್ಟ್ ಹೋರಾಟಗಾರ

ಅಂದುಕೊಂಡಿದ್ದನ್ನು ಸಾಧಿಸುವ ಛಲ ಅವಶ್ಯ: ಗರಿಮಾಪನ್ವಾರ್

ಹುಬ್ಬಳ್ಳಿ: ಪ್ರತಿದಿನ ಮಾನವೀಯ ನೆಲೆಯಲ್ಲಿ ಪರಿಹಾರ ಪರಿಶ್ರಮದಿಂದ ಕೆಲಸ ನಿರ್ವಹಿಸುವುದೇ ಯಶಸ್ಸಿನ ಸೂತ್ರ ಎಂದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಗರಿಮಾಪನ್ವಾರ್ ಹೇಳಿದರು.

ಇಲ್ಲಿನವಿದ್ಯಾನಗರದಕೆಎಲ್‌ಇಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಆ್ಯಂಡ್ ರಿಸರ್ಚ್ ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಮ್ಯಾಡ್ ಮೀಟ್-ಪದವಿ ವಿದ್ಯಾರ್ಥಿಗಳಿಗಾಗಿ ಉತ್ಸವದಲ್ಲಿ ಮಾತನಾಡಿದರು.

ಆಧುನಿಕ ತಂತ್ರಜ್ಞಾನ ಅನೇಕ ಅವಕಾಶಗಳನ್ನು ನೀಡಿದರೂ, ನಾವೇನು ಮಾಡುತ್ತೇವೆ ಎಂಬುದೇ ಅಂತಿಮವಾಗಿರುತ್ತದೆ. ಯಾವುದೇ ಕ್ಷೇತ್ರದಲ್ಲಿ ಉತ್ತಮ ಆಲೋಚನೆಯೊಂದಿಗೆ ಕಾರ್ಯಪ್ರವೃತ್ತರಾಗಿ. ಆತ್ಮವಿಶ್ವಾಸ, ಸಮಾಜದ ಬಗ್ಗೆ ಕಾಳಜಿ, ಅಂದುಕೊಂಡಿದ್ದನ್ನು ಸಾಧಿಸುವ ಹಠ ಅತ್ಯವಶ್ಯ ಎಂದರು.

ಕಾಲೇಜಿನ ಆಡಳಿತಮಂಡಳಿ ಸದಸ್ಯ ಶಂಕರಣ್ಣ ಮುನವಳ್ಳಿ ಮಾತನಾಡಿ, ಪರಿಶ್ರಮ ಇಲ್ಲದೆ ಏನನ್ನೂ ಸಾಧಿಸಲಾಗದು. ನಿರ್ದಿಷ್ಟ ಗುರಿಯೊಂದಿಗೆ ಅವಕಾಶ ಸದ್ಬಳಕೆ ಮಾಡಿಕೊಂಡು ದೇಶದ ಸತ್ಪಜೆಯಾಗಬೇಕು ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕ ರಾಜೇಂದ್ರಪ್ರಸಾದ್ ಹನಗಂಡಿಮಾತನಾಡಿ, ಸಾಮಾಜಿಕ ಸಮಸ್ಯೆ ಪರಿಹರಿಸಲು, ಜನರಿಗೆ ನೆರವಾಗುವ ಉದ್ದೇಶದಿಂದ ಸ್ಥಾಪಿಸುವ ಉದ್ಯಮ ಯಶಸ್ವಿಯಾಗುತ್ತದೆ. ದೇಶದಲ್ಲಿ ಸದ್ಯ 1.56 ಲಕ್ಷ ನವೋದ್ಯಮ-ಗಳಿದ್ದು, ಹೊಸ ಆಲೋಚನೆ ಉಳ್ಳವರಿಗೆ ಇದು ಸಕಾಲ. ಆದರೆ, ತಪ್ಪುಗಳಾದಾಗ ಹಿಂಜರಿಯಬಾರದು; ಮತ್ತದೇ ತಪ್ಪುಗಳನ್ನು ಮಾಡಬಾರದು ಎಂದು ಸಲಹೆ ನೀಡಿದರು.

ಹಣಕ್ಕಾಗಿಯೇ ಅಲ್ಲದೆ, ಬದ್ಧತೆ ಹಾಗೂ ಆಸಕ್ತಿಯಿಂದ ಕೆಲಸ ಮಾಡಿದರೆ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಗಳಿಸಬಹುದು.ಸೋಲು, ಗೆಲುವಿನ ಭಾಗವೇ ಆಗಿದ್ದು,ಅದನ್ನು ಒಪ್ಪಿಕೊಂಡು ಮುನ್ನಡೆಯಬೇಕು ಎಂದು ಬೆಂಗಳೂರಿನ ಚಾಯಿ ಲೈಫ್‌ಸ್ಟೈಲ್‌ನ ಸಹ ಸಂಸ್ಥಾಪಕಿ ಪಾರ್ವತಿ ವೇಣು ಎಂ.ಹೇಳಿದರು.

ಕಾರ್ಯಕ್ರಮದ ಸಂಯೋಜಕಿ ಪ್ರೊ. ಅರುಣಾ ಬಟ್ಟೂರ, ಸಹ ಪ್ರಾಧ್ಯಾಪಕ ಅಮಿತ್ ಅಂಗಡಿ ಇದ್ದರು.

ವೈಫಲ್ಯ ಸ್ವೀಕರಿಸಿ
ವ್ಯಕ್ತಿಯಲ್ಲಿ ಎಷ್ಟೇ ಪ್ರತಿಭೆ ಇದ್ದರೂ ಪರಿಶ್ರಮವೂ ಅಗತ್ಯವಿರುತ್ತದೆ. ಪ್ರಾಮಾಣಿಕತೆ ಹಾಗೂ ಪರಿಶ್ರಮವನ್ನೇ ಎಲ್ಲ ಕ್ಷೇತ್ರಗಳು ಬಯಸುತ್ತವೆ. ಉದ್ಯಮ ರಂಗದಲ್ಲಿ ಹಲವಾರು ಸವಾಲುಗಳು ಎದುರಾಗುತ್ತವೆ. ಕ್ಷೇತ್ರದಲ್ಲಿನ ಸಮಸ್ಯೆ ಗುರುತಿಸಿ, ಪರಿಹಾರ ಕಂಡುಕೊಳ್ಳಬೇಕು. ಉದ್ಯಮಿಗಳು ವೈಫಲ್ಯವನ್ನೂ ಸ್ವೀಕರಿಸಬೇಕು ಎಂದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಗರಿಮಾಪನ್ವಾರ್ ಹೇಳಿದರು.

ಬಿಎಸ್ಸಿ ಪದವಿ ಕಾಲೇಜು ಕಟ್ಟಡ ಉದ್ಘಾಟನೆ ಇಂದು

ಧಾರವಾಡ: ಮರಾಠ ವಿದ್ಯಾಪ್ರಸಾರಕ ಮಂಡಳದ ಐಟಿಐ ಕಾಲೇಜು ಮತ್ತು ವಸತಿ ನಿಲಯ ಕಟ್ಟಡ ಶಂಕು ಸ್ಥಾಪನೆ, ಮಂಡಳದ ನೂತನ ಕಚೇರಿ, ಪಿಯುಸಿ ವಿಜ್ಞಾನ ಮತ್ತು ಬಿಎಸ್ಸಿ ಪದವಿ ಕಾಲೇಜು ಕಟ್ಟಡ ಉದ್ಘಾಟನಾ ಸಮಾರಂಭ ಮೇ 10ರಂದು ಹಮ್ಮಿಕೊಂಡಿದ್ದಾಗಿ ಮರಾಠ ಮಂಡಳದ ಅಧ್ಯಕ್ಷ ಮನೋಹರ ಮೋರೆ ಮಾಹಿತಿ ನೀಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 11ಕ್ಕೆ ಅಂಬಾರ್ರೈ ಗಾರ್ಡನ್ ಪಕ್ಕದಲ್ಲಿ ಐಟಿಐ ಕಾಲೇಜು ಹಾಗೂ ವಸತಿ ನಿಲಯದ ಕಟ್ಟಡಕ್ಕೆ ಸಚಿವ ಸತೀಶ ಜಾರಕಿಹೊಳಿ ಶಂಕು ಸ್ಥಾಪನೆ ಬಳಿಕ ಮಂಡಳದಲ್ಲಿ ಸಚಿವ ಸಂತೋಷ ಲಾಡ್ ಪಿಯು ವಿಜ್ಞಾನ ಹಾಗೂ ಬಿಎಸ್ಸಿ ಪದವಿ ಕಾಲೇಜು ಕಟ್ಟಡ ಉದ್ಘಾಟಿಸುವುದಾಗಿ ಹೇಳಿದರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಭಾಪತಿ ಬಸವರಾ ಹೊರಟ್ಟಿ, ಶಾಸಕರಾದ ಅರವಿಂದ ಬೆಲ್ಲದ, ಎಫ್. ಎಚ್.ಜಕ್ಕಪ್ಪನವರ, ನಗರ ನೀರು ಸರಬರಾಜು ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ, ಪಾಲಿಕೆಯ ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವುದಾಗಿ ಹೇಳಿದರು. ಪಾಲಿಕೆ ಸದಸ್ಯರಾದ ಡಾ.ಮಯೂರ ಮೋರೆ, ಶಂಕರ ಶೇಳಕೆ, ಪ್ರಕಾಶ ಘಾಟಗೆ, ಮಂಡಳದ ಕಾರ್ಯಾಧ್ಯಕ್ಷ ಸುನಿಲ ಮೋರೆ, ಗೌರ ಕಾರ್ಯದರ್ಶಿ ರಾಜು ಬಿರಜೆನವರ, ಸಹ ಕಾರ್ಯದರ್ಶಿ ರಾಜು ಕಾಳೆ ಹಾಗೂ ಮಂಡಳದ ಭಾಗವಹಿಸಲಿದ್ದು, ಮಂಡಳದ ಅಧ್ಯಕ್ಷ ಎಂ.ಎನ್.ಮೋರೆ ಅಧ್ಯಕ್ಷತೆ ವಹಿಸುವುದಾಗಿ ಮಾಹಿತಿ ನೀಡಿದರು.

ಸಂಸ್ಥೆ ಗೌರವ ಕಾರ್ಯದರ್ಶಿ ರಾಜು ಬಿರಜೆನವರ ಮಾತನಾಡಿ, ಭಾರತ ಸರ್ಕಾರ ಎಸ್ಸೆಸ್ಸೆಲ್ಸಿ ಅನುತ್ತೀರ್ಣ ಮಕ್ಕಳಿಗೆ ಸ್ಕಿಲ್ ಇಂಡಿಯಾದಡಿ ಐಟಿಐ ಕಲಿಕೆಗೆ ಅವಕಾಶ ನೀಡಿದ ಹಿನ್ನಲೆ ಸಮಾಜದ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಫಿಟರ್ ಮತ್ತು ಎಲೆಕ್ಟ್ರಿಕಲ್ ಒಳಗೊಂಡ ಐಟಿಐ ಕಾಲೇಜು ಸ್ಥಾಪಿಸುವತ್ತ ದಿಟ್ಟ ಹೆಜ್ಜೆ ಇರಿಸಿದೆ ಎಂದರು.

ಸಮಾಜದ ಹೆಣ್ಣು ಮಕ್ಕಳ ಅನುಕೂಲಕ್ಕೆ ಹೊಲಿಗೆ ಯಂತ್ರದ ಉಚಿತ ತರಬೇತಿ ಬಳಿಕ ಹೊಲಿಗೆ ಯಂತ್ರ ವಿತರಿಸಲಿದೆ. ಮೊದಲ ಬ್ಯಾಚ್ ತರಬೇತಿ ಪೂರ್ಣಗೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಡಳದ ಉಪಾಧ್ಯಕ್ಷ ಯಲ್ಲಪ್ಪ ಚವ್ಹಾಣ, ಕಾರ್ಯಾಧ್ಯಕ್ಷ ಸುನಿಲ ಮೋರೆ, ಗೌರವ ಕಾರ್ಯದರ್ಶಿ ರಾಜು ಬಿರಜೆನವರ, ಸಹ ಕಾರ್ಯದರ್ಶಿ ರಾಜು ಕಾಳೆ, ನಿರ್ದೇಶಕರಾದ ಮಹೇಶ ಶಿಂಧೆ, ಸುಭಾಷ ಶಿಂಧೆ, ಪುರುಷೋತ್ತಮ ಜಾದವ, ಪ್ರಸಾದ ಹಂಗಳಕಿ ಇದ್ದರು.



ಕೆರೆಯ ನೀರು ಸಂಗ್ರಹದಿಂದ ಅಂತರ್ಜಲ ಮಟ್ಟ ಹೆಚ್ಚಳ: ಹನುಮಂತ ನಾಯ್ಕ

ಅಳ್ನಾವರ: ಕೆರೆಗಳ ಹೂಳು ತೆಗೆದು ದುರಸ್ತಿ ಮಾಡಿ ನೀರು ಸಂಗ್ರಹಿಸುವುದರಿಂದ ಗ್ರಾಮೀಣ ಭಾಗದ ಅಂತರ್ಜಲ ಮಟ್ಟ ಹೆಚ್ಚುವುದರ ಜೊತೆಗೆ ರೈತರಿಗೆ ನೀರಾವರಿ ಅನುಕೂಲವೂ ದೊರೆಯುತ್ತದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಧಾರವಾಡ ಜಿಲ್ಲಾ ನಿರ್ದೇಶಕ ಹನುಮಂತ ನಾಯ್ಕ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಪಟ್ಟಣಕ್ಕೆ ಹೊಂದಿಕೊಂಡಿರುವ ಕೆರೆ ಅಭಿವೃದ್ಧಿ ಸಮಿತಿಯ ಸಹಭಾಗಿತ್ವದಲ್ಲಿ ಅಳ್ನಾವರದ ಕೆರೆಯ ಹೂಳೆತ್ತುವ ರೂ.13.80 ಲಕ್ಷವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿ, ರಾಜ್ಯಾದ್ಯಂತ ಈ ಯೋಜನೆಯಡಿ ಸಾವಿರಕ್ಕೂ ಅಧಿಕ ಕೆರೆಗಳ ಹೂಳು ತೆಗೆಯುವ ಕಾಮಗಾರಿ ಕೈಗೊಳ್ಳಲಾಗಿದೆ. ಕೆರೆಗಳ ಅಭಿವೃದ್ಧಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.



ದಾಂಡೇಲಿ ತಾಲೂಕು ಯೋಜನಾಧಿಕಾರಿ ಬೋಜಾ ಪ್ರಾಸ್ತಾವಿಕವಾಗಿ ಮಾತನಾಡಿ, ಕೆರೆಯ ವಿಸ್ತೀರ್ಣ 11.9 ಎಕರೆ ಇದ್ದು, ಅದರಲ್ಲಿ 10.20 ಎಕರೆ ಪ್ರದೇಶದಲ್ಲಿ ಹೂಳು ತೆಗೆಯಲು ಉದ್ದೇಶಿಸಲಾಗಿದೆ. ಕೆರೆ ಅಭಿವೃದ್ಧಿಯಿಂದ ಈ ಭಾಗದ ರೈತರ ಬದುಕು ಹಸನಾಗುವುದರ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಾಗಿ ಸುತ್ತಮುತ್ತಲಿನ ರೈತರಿಗೆ ಪ್ರಯೋಜನವಾಗಲಿದೆ. ಕೆರೆಯ ಪುನಶ್ಚೇತನದಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯವೂ ದೊರೆಯಲಿದೆ ಎಂದರು.

ಕೆರೆ ಅಭಿವೃದ್ಧಿ ಸಮಿತಿಯ ಸದಸ್ಯರು ಅಳ್ನಾವರ ಕಾರ್ಯಕ್ಷೇತ್ರದ ಸ್ವ ಸಹಾಯ ಸಂಘದ ಸದಸ್ಯರು, ಒಕ್ಕೂಟದ ಪದಾಧಿಕಾರಿಗಳು, ವಲಯ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಇದ್ದರು.

ಅಧಿಕಾರೇತರ ಸದಸ್ಯರಾಗಿ ನಾಮನಿರ್ದೇಶನ

ಹುಬ್ಬಳ್ಳಿ: ಹು-ಧಾ ಮಹಾನಗರ ಪಾಲಿಕೆಯ ಅಧಿಕಾರೇತರ ಸದಸ್ಯರನ್ನಾಗಿ ನಾಲ್ವರನ್ನು ನಾಮನಿರ್ದೇಶನ ಮಾಡಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಧಾರವಾಡದ ನೆಹರೂ ನಗರದ ಮೆಹಬೂಬ್ ಖಾನ್ ಅಮಾನುಲ್ಲಾ ಖಾನ್ ಪಠಾಣ, ಹಳೇಹುಬ್ಬಳ್ಳಿ ಅಯೋಧ್ಯಾನಗರ ಶಿವಶಂಕರ ಕಾಲೊನಿಯ ಸಂತೋಷ ರಾಜಪ್ಪ ಪೂಜಾರ, ನಾರಾಯಣಸೋಪದ ಬಶೀರ್ ಅಹಮ್ಮದ್ ಎಚ್. ಗುಡಮಾಲ, ಖರಾದಿ ಮೊಹಲ್ಲಾ ಯಕ್ಕುಂಡಿಯ ಮೊಹಮ್ಮದ್ ಸಾದಿಕ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. 2024ರ ಆಗಸ್ಟ್ 8ರಂದು ಪಾಲಿಕೆಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದ್ದ ಧಾರವಾಡದ ಪ್ರಕಾಶ ಬಾಬುರಾವ್ ಘಾಟಗೆ ಅವರನ್ನು ಹೊರತುಪಡಿಸಿ, ಉಳಿದ ಸದಸ್ಯರ ನಾಮನಿರ್ದೇಶನವನ್ನು ಹಿಂದೆಪಡೆಯಲಾಗಿದೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಮಕ್ಕಳ ಶಿಬಿರ ಸಮಾರೋಪ ಇಂದು

ಧಾರವಾಡ: ಕಲಾಶಕ್ತಿ ಫೌಂಡೇಶನ್ ಹಮ್ಮಿಕೊಂಡ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಮೇ 10ರಂದು ಬೆಳಗ್ಗೆ 10.30ಕ್ಕೆ ದಕ್ಷಿಣ ಭಾರತ ಹಿಂದೆ ಪ್ರಚಾರ ಸಭಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ತಾಯಂದಿರ ದಿನ ಹಾಗೂ ಕಲಾ ಲೋಕದಲ್ಲಿ ಒಂದು ಪುಟ್ಟ ಹೆಜ್ಜೆ ವಿನೂತನ ಕಾರ್ಯಕ್ರಮಕ್ಕೆ ಮೇಯರ್ ಜ್ಯೋತಿ ಪಾಟೀಲ ಹಾಗೂ ಜೆಎಸ್ಸೆಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಚಾಲನೆ ನೀಡಲಿದ್ದು, ಸಾಹಿತಿ ಮಾರ್ತಂಡಪ್ಪ ಕತ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ವಕೀಲೆ ಶೀಲಾ ಈರೇಶ ಅಂಚಟಗೇರಿ, ಉದ್ಯಮಿ ಉಮಾ ಜೋಶಿ, ಕಲಾ ಫೌಂಡೇಶನ್ ಅಧ್ಯಕ್ಷೆ ಅನ್ನಪೂರ್ಣ ಪಾಟೀಲ ಪಾಲ್ಗೊಳ್ಳಲಿದ್ದು, ಬಿಜೆಪಿ ಯುವ ಮೋರ್ಚಾ ನಗರ ಅಧ್ಯಕ್ಷ ಶಕ್ತಿ ಪಾಟೀಲ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆಗೆ ತಿಳಿಸಲಾಗಿದೆ.

ನೈರ್ಮಲೀಕರಣ ಉತ್ತಮ ಆರೋಗ್ಯದ ಅಡಿಪಾಯ

ನವಲಗುಂದ: ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಘಟಕ, ಆಂತರಿಕ ಭರವಸೆ ಗುಣಮಟ್ಟ ಕೋಶ ಹಾಗೂ ತಾಲೂಕು ಆಸ್ಪತ್ರೆ ನವಲಗುಂದ ಇವುಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ರೆಡ್ ಕ್ರಾಸ್ ದಿನಾಚರಣೆ ಆಯೋಜಿಸಲಾಗಿತ್ತು.

ಅಳಗವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅವಿನಾಶ.ಎಸ್. ಜಿ. ಮಾತನಾಡಿ, ಇಂದಿನ ಒತ್ತಡದ ದಿನಮಾನಗಳಲ್ಲಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದೇ ಸವಾಲಿನ ಕೆಲಸವಾಗಿದೆ ಹಾಗೂ ನೈರ್ಮಲೀಕರಣ ಉತ್ತಮ ಆರೋಗ್ಯದ ಅಡಿಪಾಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಂ.ಬಿ.ಬಾಗಡಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಯುವಕರು ದುಶ್ಚಟಗಳಿಗೆ ಮಾರುಹೋಗಿ ತಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ ಹಾಗೂ ವೈಯಕ್ತಿಕ ಶುಚಿತ್ವದತ್ತ ಗಮನ ಹರಿಸುತ್ತಿಲ್ಲ. ಹೀಗಾಗಿ ಅತೀ ಚಿಕ್ಕ ವಯಸ್ಸಿನಲ್ಲಿ ಹೃದಯಾಘಾತದಂತಹ ಮಾರಕ ಕಾಯಿಲೆಗಳಿಗೆ ಬಲಿ ಆಗುತ್ತಿದ್ದಾರೆ. ಹೀಗಾಗಿ ಯುವಜನತೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ದೀರ್ಘಾಯುಷ್ಯವಂತರಾಗಿ ಜೀವನ ನಡೆಸಲು ಸಲಹೆ ನೀಡಿದರು.



ಖಾದಿರಬಿ ನಧಾಪ ನಿರೂಪಿಸಿದರು. ಡಾ ಸಂತೋಷ ಹುಬ್ಬಳ್ಳಿ ಸ್ವಾಗತಿಸಿದರು. ರೆಡ್ ಕ್ರಾಸ್ ಘಟಕ ಸಂಚಾಲಕಿ ಸವಿತಾ ಚಿಕ್ಕಣ್ಣವರ ಪ್ರಾಸ್ತಾವಿಸಿದರು. ಡಾ ಪ್ರಸನ್ನ ಪಂಢರಿ ಅತಿಥಿಗಳನ್ನು ಪರಿಚಯಿಸಿದರು. ವಸಂತ ಮುಂದಿನಮನಿ ವಂದಿಸಿದರು. ಪ್ರೊ. ಸಾತಿಹಾಳ ಐ.ಬಿ., ಡಾ. ನಾಗರತ್ನ ಕುರಡೇಕರ್, ಬಿ.ವಿ.ಏಣಗಿ, ಶ್ರೀಧರ ಲೋನಕರ, ಗಣೇಶ ಧೋಂಗಡಿ, ಗಂಗಾಧರ ಗೌಡರ, ಚೈತ್ರಾ ಟಿ., ಪ್ರತಿಭಾ ನಿಡಗುಂದಿ, ಸಮೀರ ನಧಾಪ, ಡಾ. ವೈ.ಎನ್. ಗುಳುಗಂದಿ, ಡಾ. ಪ್ರವೀಣ ದೊಡಮನಿ, ಡಾ. ಸುಜಾತಾ ಬರದೂರ್, ಚೈತ್ರಾ ಪಾಟೀಲ, ಮಲ್ಲಿಕಾರ್ಜುನ ಗಡಾದ, ಜ್ಯೋತಿಭಾ ದೊಡಮನಿ, ಮಧು ಹುಣಸಗಿ, ಸುರೇಶ ಬಾರಕೇರ, ಮಂಜುನಾಥ ಜಾಡರ ಮುಂತಾದವರಿದ್ದರು.

ನೂತನ ಶಿಲಾಮೂರ್ತಿಗಳ ಪುರಪ್ರವೇಶ

ಕುಂದಗೋಳ: ತಾಲೂಕಿನ ದೇವನೂರು ಗ್ರಾಮದಲ್ಲಿ ಗ್ರಾಮದೇವತೆಗಳಾದ ದ್ಯಾಮವ್ವದೇವಿ, ಕರಿಯಮ್ಮದೇವಿ ಹಾಗೂ ದುರ್ಗಮ್ಮದೇವಿಯರ ನೂತನ ಶಿಲಾಮೂರ್ತಿಗಳ ಪುರಪ್ರವೇಶ ಕಾರ್ಯಕ್ರಮ ಶುಕ್ರವಾರ ಭಕ್ತಿ ಭಾವದಿಂದ ಜರುಗಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವದೊಂದಿಗೆ ನಡೆದ ಮೆರವಣಿಗೆಯಲ್ಲಿ 500ಕ್ಕೂ ಹೆಚ್ಚು ಮಹಿಳೆಯರು ಕುಂಭ ಹೊತ್ತು ಭಾಗವಹಿಸಿದರು. ಭಕ್ತರು ಭಂಡಾರ ಎರಚಿ ದೇವಿಯರಿಗೆ ಭಕ್ತಿ ಸಮರ್ಪಿಸಿದರು. ಮೇ 14ರಂದು ಗಣಹೋಮ, ದುರ್ಗಾಹೋಮ ಹಾಗೂ ನವಗ್ರಹ ವಾಸ್ತು ಶಾಂತಿ ಪೂಜೆಗಳೊಂದಿಗೆ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಮತ್ತು ಪಲ್ಲಕ್ಕಿ ಮಹೋತ್ಸವ ನಡೆಯಲಿದೆ. ಮೇ 15ರಂದು ಹಣ್ಣು ಕಾಯಿ ಸಮರ್ಪಣೆ ಕಾರ್ಯಕ್ರಮ ಜರುಗಲಿದ್ದು, ಮೇ 16ರಂದು ಸಂಜೆ ಧಾರ್ಮಿಕ ಸಭೆ ಏರ್ಪಡಿಸಲಾಗಿದೆ.



ದೇವಿಯರ ಜಾತ್ರಾ ಮಹೋತ್ಸವ: ಟಗರಿನ ಕಾಳಗ

ಧಾರವಾಡ: ನಗರದ ಹಾವೇರಿಪೇಟೆಯ ದ್ಯಾಮವ್ವ ಹಾಗೂ ದುರ್ಗವ್ವ ದೇವಿಯರ ಜಾತ್ರಾ ಮಹೋತ್ಸವ ಅಂಗವಾಗಿ ಮೃತ್ಯುಂಜಯ ನಗರದ ಆವರಣದಲ್ಲಿ ನಡೆದ ಭಾರೀ ಜಿದ್ದಾಜಿದ್ದಿನ ಟಗರಿನ ಕಾಳಗವು ಕಿಕ್ಕಿರಿದು ತುಂಬಿದ್ದ ಜನಸ್ತೋಮದ ನಡುವೆ ಅತ್ಯಂತ ಯಶಸ್ವಿಯಾಗಿ ಜರುಗಿತು.

ಜಾತ್ರೆಯ ಸಂಭ್ರಮಕ್ಕೆ ಈ ಕಾಳಗವು ವಿಶೇಷ ಮೆರುಗು ನೀಡಿತು. ಕಣಕ್ಕೆ ಇಳಿದ ಟಗರುಗಳು ಅಕ್ಷರಶಃ ರಣ ವೀರರಂತೆ ಪರಸ್ಪರ ಮುಖಾಮುಖಿಯಾಗಿ ನೆರೆದಿದ್ದ ಸಹಸ್ರ ಕ್ರೀಡಾಭಿಮಾನಿಗಳ ಹರ್ಷೋದ್ಗಾರ, ಶಿಳ್ಳೆ, ಚಪ್ಪಾಳೆಗಳ ನಡುವೆ ಟಗರುಗಳ ಕಾದಾಟ ಬಹಳ ರೋಚಕವಾಗಿತ್ತು. ವಿವಿಧ ಜಿಲ್ಲೆಗಳಿಂದ ಸ್ಪರ್ಧೆಗೆ ಬಂದ ಬಲಿಷ್ಠ ಟಗರುಗಳು ಸತತ ಪರಸ್ಪರ ಡಿಕ್ಕಿ ಹೊಡೆಯುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ಮಾಡಿದವು. ಕೇವಲ ಧಾರವಾಡ ಮಾತ್ರವಲ್ಲದೆ, ಸುತ್ತಮುತ್ತಲಿನ ಹಳ್ಳಿಗಳಿಂದ ಈ ಸಾಹಸ ಕ್ರೀಡೆ ಕಣ್ತುಂಬಿಕೊಳ್ಳಲು ಸಾವಿರಾರು ಜನರು ಆಗಮಿಸಿದ್ದರು.

ದೇವಿಯರ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿದ್ದು, ಜಾತ್ರೆಯ ಭಾಗವಾಗಿ ಈ ಜಾನಪದ ಕ್ರೀಡೆ ಯುವ ಸಮೂಹವನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಿತು. ವಿಜೇತ ಟಗರುಗಳ ಮಾಲೀಕರಿಗೆ ಆಕರ್ಷಕ ನಗದು ಬಹುಮಾನ, ಫಲಕ ನೀಡಿ ಗೌರವಿಸಲಾಯಿತು. ಗೌರವ ಕಾರ್ಯದರ್ಶಿ ವಿಜಯ ಬೋಸ್ಲೆ, ಖಜಾಂಚಿ ಆರ್.ಜಿ.ಕೆಲಗೇರಿ, ಗಂಗಣ್ಣ ಜವಮದಾಳೆ, ಆರ್.ಆರ್ .ಬೋಸ್ಲೆ ಇದ್ದರು.



“ ನಮ್ಮ ಗ್ರಾಮೀಣ ಸೊಗಡಿನ ಕ್ರೀಡೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ದ್ಯಾಮವ್ವ-ದುರ್ಗವ್ವ ದೇವಿಯರ ಜಾತ್ರೆಯ ಪ್ರಯುಕ್ತ ಆಯೋಜಿಸಿದ ಈ ಟಗರಿನ ಕಾಳಗಕ್ಕೆ ಜನರ ಬೆಂಬಲ ಅದ್ಭುತವಾಗಿದೆ.
■ ಕೆ.ಎಸ್.ಭೀಮಣ್ಣವರ, ಅಧ್ಯಕ್ಷ, ಜಾತ್ರಾ ಮಹೋತ್ಸವ ಸಮಿತಿ

ಉಡುಪಿ ಜಿಲ್ಲೆಗೇ 5 ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ

ಪುಟ ೧➜ ಈ ಬಾರಿ ಕೇಂದ್ರ ಸರ್ಕಾರ ದೇಶಾದ್ಯಂತ ಒಟ್ಟು 42 ಪಂಚಾಯತ್‌ಗಳನ್ನು ಆಯ್ಕೆಮಾಡಿದೆ. ಜೂ.3ರಂದು ಹೊಸದಿಲ್ಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಎರಡು ವಿಭಾಗಗಳಲ್ಲಿ ಪ್ರಶಸ್ತಿ: ಪ್ರಶಸ್ತಿಗಳನ್ನು ಎರಡು ವಿಭಿನ್ನ ವರ್ಗಗಳ ಅಡಿಯಲ್ಲಿ ನೀಡಲಾಗುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣದ 9 ವಿಷಯಗಳಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಗ್ರಾಮ ಪಂಚಾಯತ್‌ಗಳನ್ನು ಗುರುತಿಸುತ್ತದೆ, ಅವುಗಳೆಂದರೆ, ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯದ ಪಂಚಾಯತ್, ಆರೋಗ್ಯಕರ ಪಂಚಾಯತ್, ಮಕ್ಕಳ ಸ್ನೇಹಿ ಪಂಚಾಯತ್, ನೀರು ಸಮೃದ್ಧ ಪಂಚಾಯತ್, ಸ್ವಚ್ಛ ಮತ್ತು ಹಸಿರು ಪಂಚಾಯತ್, ಮೂಲಸೌಕರ್ಯದಲ್ಲಿ ಸ್ವಾವಲಂಬಿ ಪಂಚಾಯತ್, ಸಾಮಾಜಿಕವಾಗಿ ನ್ಯಾಯಯುತ ಮತ್ತು ಸಾಮಾಜಿಕ ಭದ್ರತೆ ಹೊಂದಿದ ಪಂಚಾಯತ್, ಉತ್ತಮ ಆಡಳಿತ ಹೊಂದಿದ ಪಂಚಾಯತ್ ಮತ್ತು ಮಹಿಳಾ ಸ್ನೇಹಿ ಪಂಚಾಯತ್ ಎಂದು ಗುರುತಿಸುತ್ತದೆ.

ವಿಜೇತ ಪಂಚಾಯತ್‌ಗಳಿಗೆ ಅವುಗಳ ಶ್ರೇಣಿ ಮತ್ತು ವರ್ಗವನ್ನು ಅವಲಂಬಿಸಿ ಪ್ರತಿ ಪ್ರಶಸ್ತಿ ವಿಜೇತರಿಗೆ 50 ಲಕ್ಷ ರೂ.ನಿಂದ 5 ಕೋಟಿ ರೂ.ವರೆಗಿನ ಹಣಕಾಸಿನ ಪ್ರೋತ್ಸಾಹಧನವನ್ನು ಪಡೆಯುತ್ತವೆ. ಈ ಪ್ರಶಸ್ತಿಗಳನ್ನು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನದ, ಕೇಂದ್ರ ಪ್ರಾಯೋಜಿತ ಯೋಜನೆಯ ಕೇಂದ್ರ ಘಟಕವಾದ ಪಂಚಾಯತ್‌ಗಳಿಗೆ ಪ್ರೋತ್ಸಾಹ ನೀಡುವ ಯೋಜನೆಯಲ್ಲಿ ನೀಡಲಾಗುತ್ತದೆ.





ಬಿ.ಎಸ್.ಯಡಿಯೂರಪ್ಪ ಅವರಿಗೆ ವಚನಾನಂದ ಶ್ರೀ, ಪೇಜಾವರ ಶ್ರೀಗಳಿಂದ ಆಶೀರ್ವಾದ .

ಅನನ್ಯ ನಾಯಕತ್ವಕ್ಕೆ ಉಡುಗೊರೆ ಭರಪೂರ

•**ಚಿತ್ರದುರ್ಗ:** ಬಿಜೆಪಿ ರಾಜ್ಯ ರಾಜಕಾರಣದ ಭೀಷ್ಮ ಬಿ.ಎಸ್. ಯಡಿಯೂರಪ್ಪ ಅವರು ಸಾರ್ವಜನಿಕ ಜೀವನದಲ್ಲಿ 50 ಸಂವತ್ಸರಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇದರಲ್ಲಿ ಸಾರ್ವಜನಿಕವಾಗಿ ಅವರನ್ನು ಗೌರವಿಸಿದರೆ, ಶಾಸಕರು ಮತ್ತು ಪಕ್ಷದ ಮುಖಂಡರು ವೈಯಕ್ತಿಕವಾಗಿಯೂ ಅವರನ್ನು ಅಭಿನಂದಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಯಡಿಯೂರಪ್ಪ ಅವರು ವೇದಿಕೆಗೆ ಆಗಮಿಸುತ್ತಲೇ ಅವರನ್ನು ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಶಾಲು ಹೊದಿಸಿ ಆಶೀರ್ವದಿಸಿದರು.

ನಂತರ ವೇದಿಕೆಯಲ್ಲಿ ಶಾಸಕರು, ಕೇಂದ್ರ ಸಚಿವರು ತಮ್ಮ ಗೌರವವನ್ನು ಸಲ್ಲಿಸುತ್ತಲೇ ಇದ್ದರು. ವೇದಿಕೆಯ ಕಾರ್ಯಕ್ರಮ ಮುಗಿಯುತ್ತಲೇ ಪಕ್ಷದ ಮುಖಂಡರು, ಕಾರ್ಯಕ್ರಮ ಶಾಲು, ಹೂಮಾಲೆ, ನಾನಾ ಉಡುಗೊರೆಗಳೊಂದಿಗೆ ಯಡಿಯೂರಪ್ಪ ಅವರನ್ನು ಅಭಿನಂದಿಸುತ್ತಿದ್ದರು.

ಸೆಲ್ಫಿ ಪಾಯಿಂಟ್ ಆದ ಕಾರು

•**ಚಿತ್ರದುರ್ಗ:** ಬಿ.ಎಸ್. ಯಡಿಯೂರಪ್ಪ ಅವರು ಕಾಲಿಗೆ ಚಕ್ರ ಕಟ್ಟಿದಂತೆ ರಾಜ್ಯಾದ್ಯಂತ ಸಂಚರಿಸಿ ಪಕ್ಷ ಸಂಘಟನೆ ಮತ್ತು ಜನಪರ ಹೋರಾಟ ನಡೆಸುತ್ತಿದ್ದರು. ಇದಕ್ಕಾಗಿ ಆರಂಭದಲ್ಲಿ ಅವರು ಸೈಕಲ್ ಬಳಸುತ್ತಿದ್ದರೆ, ನಂತರ ಸಿಕೆಆರ್ 45 ನೋಂದಣಿ ಸಂಖ್ಯೆಯ ಅಂಬಾಸಿಡರ್ ಕಾರನ್ನು ಪ್ರಯೋಗಿಸುತ್ತಿದ್ದರು. ಅವರ ಮೆಚ್ಚಿನ ಕಾರನ್ನು ಈಗಲೂ ಸುಸ್ಥಿತಿಯಲ್ಲಿಟ್ಟಿದ್ದಾರೆ.

ಆಗಾಗ್ಗೆ ಅದನ್ನು ಬಳಸುತ್ತಲೂ ಇದ್ದಾರೆ. ಅವರ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ಕಾರು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಈ ಕಾರ್ ಸೆಲ್ಫಿ ಪಾಯಿಂಟ್ ಆಗಿ ಬಳಕೆಯಾಯಿತು. ಸಾವಿರಾರು ಮಂದಿ ಅದನ್ನು ವೀಕ್ಷಿಸಿದ್ದಲ್ಲದೇ ಅದರ ಜೊತೆಯಲ್ಲಿ ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಿಸಿದರು.

ರಸ್ತೆ ಅಪಘಾತ: ನಾಲ್ವರ ಸಾವು

•**ಕುಣಿಗಲ್:** ತಾಲೂಕಿನ ಹೊನ್ನೇನಹಳ್ಳಿ ಬಳಿ ಶನಿವಾರ ಲಾರಿ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿದ್ದು, ಒಂದೇ ಕುಟುಂಬದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗೊಬ್ಬರ ತುಂಬಿದ್ದ ಲಾರಿಗೆ ಆಲ್ಟೋ ಕಾರು ಡಿಕ್ಕಿ ಹೊಡೆದಿದ್ದು, ಡಿಕ್ಕಿಯ ರಭಸಕ್ಕೆ ಕಾರು ಛಿದ್ರ ಛಿದ್ರವಾಗಿದೆ. ಭೀಕರ ಅಪಘಾತದಲ್ಲಿ ಕಾರು ಚಾಲಕ ಸೇರಿದಂತೆ ಮಂಡ್ಯ ಮೂಲದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಂಡ್ಯ ಪಟ್ಟಣದ ಕುಮಾರ ನರಸಿಂಹ ಸ್ವಾಮಿ(65) ಪತ್ನಿ ಗಾಯಿತ್ರಿ(62) ಕುಮಾರ ನರಸಿಂಹ ಸ್ವಾಮಿಯ ತಂಗಿ ಗಾಯಿತ್ರಿ (63) ಚಾಲಕ ರಘು ಕುಮಾರ್(56) ಅಪಘಾತಕ್ಕೀಡಾಗಿ ಮೃತಪಟ್ಟಿದ್ದಾರೆ. ಈ ಬಗ್ಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕನೇಜಿ

ಓಂಕಾರದಲ್ಲಿ ಭಗವಂತನಿದ್ದಾನೆ, ಓಂಕಾರ ಜಪಿಸಿದರೆ ಅಹಂಕಾರ ನಿವಾರಣೆಯಾಗುತ್ತದೆ
– ಗುರುದೇವಾನಂದ ಸ್ವಾಮಿಜಿ

– ಅಹಂಕಾರ ನಿವಾರಣೆಯಾದರೆ ಅಜ್ಞಾನವೆಂಬ ಅಂಧಕಾರ ಸರಿಯುತ್ತದೆ, ಅಂಧಕಾರ ಸರಿದಾಗ ಬದುಕು ಸರಿ ದಾರಿಯಲ್ಲಿ ಸಾಗುತ್ತದೆ!

ದಿನ ಭವಿಷ್ಯ

ಮೇಷ ನಿಮ್ಮ ಪ್ರಗತಿ ಯಾರೂ ತಡೆಯಲಾರರು. ನಿಮ್ಮ ಕಾರ್ಯನಿಷ್ಠೆ ಮೆಚ್ಚುಗೆ ಗಳಿಸುವುದು. ಖರ್ಚು ಏರಿಕೆ ಚಿಂತೆಗೆ ಕಾರಣವಾದೀತು.

ವೃಷಭ ಹಣದ ಕೊರತೆ ಎದುರಿಸುವಿರಿ. ನಿಮ್ಮ ಮನೋಸ್ಥೈರ್ಯ ಕುಗ್ಗಿಸುವ ಜನರಿಂದ ದೂರವಿರಿ. ಏಕಾಂಗಿಗಳಿಗೆ ವಿವಾಹ ನೆಂಟಸ್ತಿಕೆ.

ಮಿಥುನ ವೃತ್ತಿಯಲ್ಲೂ ಖಾಸಗಿ ಬದುಕಲ್ಲೂ ಪೂರಕ ಬೆಳವಣಿಗೆ. ಶಂಕಾಸ್ಪದ ವ್ಯವಹಾರದಲ್ಲಿ ಹಣ ಹೂಡಬೇಡಿ. ಕೌಟುಂಬಿಕ ಸಾಮರಸ್ಯ. ಮಿತ್ರ ಭೇಟಿ.

ಕಟಕ ಹೊರಗೆ ಸಂತೋಷ ಹುಡುಕಬೇಡಿ. ನಿಮ್ಮೊಳಗೇ ಅದು ಇದೆ. ಕುಟುಂಬದ ಜತೆ ಕಾಲ ಕಳೆಯಿರಿ. ಕಲಾವಿದರಿಗೆ ಪ್ರೋತ್ಸಾಹ ಸಿಗಲಿದೆ. ಧನಲಾಭ.

ಸಿಂಹ ನೆಮ್ಮದಿ ಪಡೆಯಬೇಕೆ? ನಿಮ್ಮ ಕಾರ್ಯವೈಖರಿ, ಚಿಂತನಾ ಶೈಲಿ ಬದಲಿಸಿಕೊಳ್ಳಿ. ಎಲ್ಲರ ಜತೆ ಹೊಂದಾಣಿಕೆ ಮಾಡಿಕೊಳ್ಳಿ.

ಕನ್ಯಾ ಕೌಟುಂಬಿಕ ಕಾರ್ಯಕ್ರಮದಲ್ಲಿ ಭಾಗಿ. ನಿಮ್ಮ ಕೆಲಸಕ್ಕೆ ಟೀಕೆ ಕೇಳಿಬಂದೀತು. ಲೋಪ ಸರಿಪಡಿಸಿಕೊಳ್ಳಿ. ಹಠ ಹಿಡಿದು ಕೂರಬೇಡಿ.

ತುಲಾ ವೃತ್ತಿ ಗುರಿ ಸಾಧನೆ. ಸಣ್ಣಪುಟ್ಟ ಜಗಳದಲ್ಲಿ ಭಾಗವಹಿಸಬೇಡಿ. ಹಣಕಾಸು ವ್ಯವಹಾರದಲ್ಲಿ ಏರಿಳಿತ ಕಂಡೀತು. ಆರೋಗ್ಯ ಗಮನಿಸಿ.

ವೃಶ್ಚಿಕ ಅನರ್ಹರ ಕುರಿತಂತೆ ಅಧಿಕ ಮುತುವರ್ಜಿ ವಹಿಸಿ ನಿಮ್ಮ ಶ್ರಮ ವ್ಯಯಿಸಬೇಡಿ. ಹಿತೈಷಿಗಳ ಮಾತು ಕೇಳಿ. ಕೌಟುಂಬಿಕ ಅಸಮಾಧಾನ.

ಧನು ಹಣದ ವ್ಯವಹಾರ ತೃಪ್ತಿಕರ. ಕಾರ್ಯಸಾಫಲ್ಯ. ಆತ್ಮೀಯರ ಜತೆ ಕಾಲ ಕಳೆಯುವ ಅವಕಾಶ. ಸಂಬಂಧದಲ್ಲಿ ಪೊಸೆಸಿವ್ ಪ್ರವೃತ್ತಿ ಬಿಟ್ಟುಬಿಡಿ.

ಮಕರ ಕೆಲಸದಿಂದ ವಿರಾಮ ಪಡೆದು ಪ್ರವಾಸ ಹೊರಡಿ. ಒತ್ತಡ ನಿವಾರಣೆಗೆ ಇದು ದಾರಿ. ನಿರೀಕ್ಷೆ ಈಡೇರಿಸಲು ಹೆಚ್ಚು ಪರಿಶ್ರಮ ಅಗತ್ಯ.

ಕುಂಭ ಹಣದ ವ್ಯವಹಾರ ನಿರಾಶೆ ತಂದೀತು. ನೀವು ಬಯಸಿದ ಪ್ರಗತಿ ಕಾಣೆಸದು. ಶೀತದಂತಹ ಆರೋಗ್ಯ ಸಮಸ್ಯೆ. ಬಂಧುಗಳ ಜತೆ ಕಲಹ.

ಮೀನ ನಿಮ್ಮ ಮನಸ್ಸಿನ ಮಾತು ಕೇಳಿ. ಇತರರ ಮಾತಿಗೆ ಮರುಳಾಗಿ ಕೆಟ್ಟ ನಿರ್ಧಾರ ತಾಳಬೇಡಿ. ಸಮಾರಂಭದಲ್ಲಿ ಭಾಗಿ. ಬಂಧುಮಿತ್ರರ ಭೇಟಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 4,9,5,1

ಅಥಣಿ ರೈತನ ಮಗ ದೇಶಕ್ಕೇ ಪ್ರಥಮ

ಪುಟ ೧➜ **ಸಚಿವರ ಶ್ಲಾಘನೆ:** ಅಥಣಿ ತಾಲೂಕಿನ ಸವದಿ ಗ್ರಾಮದ ಸಾಮಾನ್ಯ ಕೃಷಿಕ ಕುಟುಂಬದ ಬಸವರಾಜ್ ದರೇಪ್ಪ ಕೆಂಪವಾಡ ಅವರು 2025ರ ಐಎಫ್‌ಎಸ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ‍್ಯಾಂಕ್ ಗಳಿಸಿ, ಕೇವಲ ಎರಡನೇ ಪ್ರಯತ್ನದಲ್ಲಿ ಸಾಧನೆಗೈದ ಬಸವರಾಜ್ ಅವರನ್ನು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಶ್ಲಾಘಿಸಿದ್ದಾರೆ.

ತಮಿಳ್ನಾಡಲ್ಲಿಂದು ದಳಪತಿ ಪ್ರತಿಜ್ಞೆ

ಪುಟ ೧➜ ಕಳೆದ ಒಂದು ವಾರದಲ್ಲಿ ಸರ್ಕಾರ ರಚಿಸಲು ಆಹ್ವಾನ ಕೋರಿ ವಿಜಯ್ ಅವರು ರಾಜ್ಯಪಾಲರನ್ನು ನಾಲ್ಕು ಬಾರಿ ಭೇಟಿ ಮಾಡಿದ್ದರು. ಅಗತ್ಯ ಬೆಂಬಲ ಪತ್ರಗಳ ಕೊರತೆಯಿಂದ ಅವರ ಮೊದಲ ಪ್ರಯತ್ನಗಳು ವಿಫಲವಾಗಿದ್ದವು. ಡಿಎಂಕೆ ಮೈತ್ರಿಕೂಟದ ಪಕ್ಷಗಳು ಅಂತಿಮವಾಗಿ ವಿಜಯ್ ಪಕ್ಷಕ್ಕೆ ಬೆಂಬಲ ನೀಡಿದ ನಂತರ ತಮಿಳುನಾಡಿನ ರಾಜಕೀಯ ಅನಿಶ್ಚಿತತೆಗೆ ತೆರೆ ಬಿದ್ದಿದೆ. ಇದರಿಂದ 234 ಸದಸ್ಯರ ವಿಧಾನಸಭೆಯಲ್ಲಿ ಟಿವಿಕೆ ಬಹುಮತದ ಗಡಿ ದಾಟಲು ಸಾಧ್ಯವಾಗಿದೆ.

ಆದಾಗ್ಯೂ, ಮೈತ್ರಿಕೂಟವು ಕೇವಲ 120 ಶಾಸಕರ ಅಲ್ಪ ಬಹುಮತವನ್ನೇ ಹೊಂದಿದೆ. ಈ ಬೆಳವಣಿಗೆಯ ನಂತರ ಚೆನ್ನೈನಲ್ಲಿರುವ ಪಕ್ಷದ ಕಚೇರಿ ಹೊರಗೆ ಟಿವಿಕೆ ಕಾರ್ಯಕರ್ತರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಮೊದಲ ಬಾರಿಗೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವಲಾಗಿರಲು ಬಿಎಸ್‌ವೈ ಸಂದೇಶ

ಅಭಿಮಾನೋತ್ಸವದಲ್ಲಿ ಜನಸಾಗರ

▸ನೆಲ್ಲಿಜೆ ನವ್ಯಜ್ಯೋತಿ

•**ಚಿತ್ರದುರ್ಗ:** ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರಿಗೆ ಹೊದಿಸಿ ಸನ್ಮಾನಿಸಿದ ಶಾಲನ್ನು ಕಾರ್ಯಕ್ರಮದ ಕೊನೆಯಲ್ಲಿ ಯಡಿಯೂರಪ್ಪ ಅವರು ಮಗ ವಿಜಯೇಂದ್ರ ಅವರ ಹೆಗಲಿಗೆ ಹಾಕಿ ಆಶೀರ್ವದಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವಲಾಗಿರುವ ಸಂದೇಶ ರವಾನಿಸಿದರು. ಈ ನಡುವೆ ಕಾರ್ಯಕರ್ತರೆಲ್ಲರೂ ಒಂದಾಗಿ ಸಂಘಟನೆಗಾಗಿ ಶ್ರಮಿಸುವ ಶುಭ ಸಂದೇಶದೊಂದಿಗೆ ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.

ಶನಿವಾರ ನಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಲಕ್ಷೋಪಲಕ್ಷ ಸಂಖ್ಯೆಯ ಜನಸಾಗರವು ಹರಿದು ಬಂತು. ಎಲ್ಲರೂ ನಾಯಕರ ಪ್ರಖರ ಮಾತುಗಳನ್ನಾಲಿಸಿ, ತೃಪ್ತ ಭಾವನೆಯಲ್ಲಿ ಹಾಗೂ ಹೊಸ ಹುಮ್ಮಸ್ಸಿನಲ್ಲಿದ್ದದ್ದು ಕಂಡುಬಂತು.



ಇದಿಷ್ಟಕ್ಕೇ ಸೀಮಿತವಾಗದ ಕಾರ್ಯಕ್ರಮವು ರಾಜ್ಯದ ಮುನ್ನೂರಕ್ಕೂ ಅಧಿಕ ಸ್ವಾಮೀಜಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿತ್ತು. ಮುಖ್ಯ ವೇದಿಕೆಯಲ್ಲಿ ನಾಡಿನ ಪ್ರಮುಖ 15–20 ಸ್ವಾಮೀಜಿಗಳು ಆಸೀನರಾಗಿ ಯಡಿಯೂರಪ್ಪ ಅವರ ಕೊಡುಗೆಗಳನ್ನು ಮೆಲುಕು ಹಾಕಿದರು. ಜತೆಗೆ ಸಮಾನಾಂತರ ವೇದಿಕೆಯಲ್ಲಿ ಮುನ್ನೂರಕ್ಕೂ ಹೆಚ್ಚಿನ ಸಂತರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಅವರ ಜೀವನ ಚರಿತ್ರೆ ಕೆಂದಾವರೆ – ಕಮಲ ಅರಳಿದ ಕಥೆ ಹಾಗೂ ವಿಧಾನ ಮಂಡಲದಲ್ಲಿ ಅವರ ಭಾಷಣಗಳ ಸಂಗ್ರಹ ಸದನ ಶಿಕಾರಿ– ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಡುಗಡೆ ಮಾಡಿದರು.

ನಿಮ್ಮೆಲ್ಲರ ಆಶೀರ್ವಾದ ಇರಲಿ:

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಯಡಿಯೂರಪ್ಪ ಅವರ ಬಗೆಗಿನ ನಿರೀಕ್ಷೆ ಮತ್ತು ಅಪೇಕ್ಷೆಗಳಂತೆ ಜನರ ಪ್ರೀತಿ ವಿಶ್ವಾಸ ಉಳಿಸಿಕೊಂಡು ಕೆಲಸ ಮಾಡುತ್ತೇನೆ. ನನ್ನ ಹಾದಿಯಲ್ಲಿ ಯಾವುದೇ ಸವಾಲು ಎದುರಾದರೂ ಅದನ್ನು ಎದುರಿಸಲು ನಿಮ್ಮ ಆಶೀರ್ವಾದ ಇರಲಿ ಎಂದು ಕೋರಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿ, ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಅಶ್ವಮೇಧ ಬಿಡುತ್ತಿದ್ದೇವೆ. ತಡೆಯುವ ಶಕ್ತಿ ಯಾರಿಗೂ ಇಲ್ಲ, ಹಿಂದು ಧರ್ಮ, ಸನಾತನ ಧರ್ಮ ರಕ್ಷಣೆಗಾಗಿ ಈ ಕರೆ ಕೊಡುತ್ತಿದ್ದೇನೆ ಎಂದು ಪ್ರತಿಪಾದಿಸಿದರು. ಸಂಸದ ಬೊಮ್ಮಾಯಿ ಅವರು, ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ. ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಆಡಳಿತ ನಡೆಸುವಂತಾಗುತ್ತದೆ ಎಂದು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಬಂದಿದೆ. ದಕ್ಷಿಣದಲ್ಲಿ ಏಕೈಕ ರಾಜ್ಯ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಬಂದಿತ್ತು, ಮುಂದೆಯೂ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೈಹಿಡಿದು ಕರೆತಂದ ಅಮಿತ್ ಶಾ

ಯಡಿಯೂರಪ್ಪ ಅವರಿಗೆ ಅಭಿಮಾನದ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಈ ವೇಳೆ ಅವರಿಗೆ ಕುಳಿತುಕೊಳ್ಳಲು ವೇದಿಕೆಯ ಮುಂಭಾಗದಲ್ಲಿ ಆಸನ ತಂದಿರಿಸಿದರು. ಅದನ್ನು ಅಲ್ಲಿಂದ ತೆಗೆಯಲು ಸೂಚಿಸಿದ ಯಡಿಯೂರಪ್ಪ, ತಾನು ಕುಳಿತಲ್ಲಿಯೇ ಸನ್ಮಾನಿಸುವಂತೆ ಸೂಚಿಸಿದರು. ಇದನ್ನು ಗಮನಿಸಿದ ಕೇಂದ್ರ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರನ್ನು ಕೈಹಿಡಿದು ವೇದಿಕೆಯ ಮುಂದಿರಿಸಿದ ಆಸನದಲ್ಲಿ ಕೂರಿಸಿ ಸನ್ಮಾನ ಮಾಡಿದರು. ಅದಕ್ಕೂ ಮೊದಲು ವೇದಿಕೆಗೆ ಆಗಮಿಸುತ್ತಲೇ ಅಮಿತ್ ಶಾ ಅವರು ಯಡಿಯೂರಪ್ಪ ಅವರ ಕೈ ಹಿಡಿದು ಮೇಲೆತ್ತಿ ಕಾರ್ಯಕರ್ತರತ್ತ ಕೈಬೀಸಿದರು.

ಪ.ಬಂಗಾಳದಲ್ಲಿ ಇನ್ನು ಬಿಜೆಪಿ ಶಕೆ

ಪುಟ ೧➜ ಸುವೇಂದು ಅವರೊಂದಿಗೆ ದಿಲೀಪ್ ಘೋಷ್, ಅಗ್ನಿಮಿತ್ರ ಪಾಲ್, ಅಶೋಕ್ ಕೀರ್ತನಿಯಾ, ಕ್ಷುದಿರಾಮ್ ತುಡು ಮತ್ತು ನಿಸಿತ್ ಪ್ರಮಾಣಿಕ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಸಮತೋಲಿತ ಸಚಿವ ಸಂಪುಟ: ಸದ್ಯ ಆರು ಸದಸ್ಯರನ್ನು ಒಳಗೊಂಡಿರುವ ಈ ಸಚಿವ ಸಂಪುಟದಲ್ಲಿ ಜಾತಿ ಮತ್ತು ಪ್ರಾದೇಶಿಕ ಸಮತೋಲನಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬ್ರಾಹ್ಮಣ, ಒಬಿಸಿ, ಕಾಯಸ್ಥ, ಮಟುವಾ, ಬುಡಕಟ್ಟು ಮತ್ತು ರಾಜವಂಶಿ ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ಭೌಗೋಳಿಕವಾಗಿ ಉತ್ತರ ಬಂಗಾಳದ ಇಬ್ಬರು ಹಾಗೂ ದಕ್ಷಿಣ ಬಂಗಾಳದ ಮೂವರು ಶಾಸಕರಿಗೆ ಸಚಿವ ಸ್ಥಾನ ನೀಡಲಾಗಿದ್ದರೂ, ಕೋಲ್ಕತ್ತಾದ ಯಾವುದೇ ಶಾಸಕರಿಗೆ ಮೊದಲ ಹಂತದಲ್ಲಿ ಸ್ಥಾನ ಸಿಕ್ಕಿಲ್ಲ. ಸಚಿವರಿಗೆ ಇಲಾಖೆಗಳ ಹಂಚಿಕೆ ಇನ್ನೂ ಬಾಕಿ ಇದೆ. ಉಳಿದ ಸಚಿವರು ಸೋಮವಾರ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದ್ದು, ಅಂದೇ ಮೊದಲ ಸಂಪುಟ ಸಭೆಯೂ ನಡೆಯಲಿದೆ.

ಕೇಸರಿಮಯವಾದ ಬಂಗಾಳ: ಒಟ್ಟು 294 ಸದಸ್ಯ ಬಲದ ಪ.ಬಂಗಾಳ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆಲ್ಲುವ ಮೂಲಕ ಭರ್ಜರಿ ಬಹುಮತ ಸಾಧಿಸಿದೆ. ಈ ಮೂಲಕ ರಾಜ್ಯದಲ್ಲಿದ್ದ ತೃಣಮೂಲ ಕಾಂಗ್ರೆಸ್‌ನ 15 ವರ್ಷಗಳ ಸುದೀರ್ಘ ಆಡಳಿತಕ್ಕೆ ತೆರೆಬಿದ್ದಿದೆ. ಸಿಎಂ ಸುವೇಂದು ಅಧಿಕಾರಿ, ಭವಾನಿಪುರ ಮತ್ತು ನಂದಿಗ್ರಾಮ ಎರಡೂ ಕ್ಷೇತ್ರಗಳಲ್ಲಿ ಅಭೂತಪೂರ್ವ ಜಯ ಸಾಧಿಸಿದ್ದಾರೆ.

ಮೊಳಗಿದ ಜಯಘೋಷ

ಈ ಹಿಂದೆ ಎಡರಂಗ ಮತ್ತು ಟಿಎಂಸಿಯ ಭದ್ರಕೋಟೆಯಾಗಿದ್ದ ಬ್ರಿಗೇಡ್ ಪರೇಡ್ ಮೈದಾನವು ಇಂದು ಕೇಸರಿ ಸಮುದ್ರದಂತೆ ಕಂಗೊಳಿಸುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಬಿಜೆಪಿ ಕಾರ್ಯಕರ್ತರು ಸಮಾರಂಭದಲ್ಲಿ ಭಾಗವಹಿಸಿದ್ದರು. ಪ್ರಮಾಣವಚನ ಸ್ವೀಕಾರದ ವೇಳೆ ಮೈದಾನದಾದ್ಯಂತ ಮೊಳಗಿದ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳು ಗಮನ ಸೆಳೆದವು.

ಧೀಮಂತ, ಅಭಿಮಾನದ ಶ್ರೀಮಂತ

ಪುಟ೧➜ ಯಡಿಯೂರಪ್ಪ ಅವರದು ಮಾದರಿ ಜೀವನವಾಗಿದೆ. ಬಿಜೆಪಿ, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದವರ ದಾಖಲೆ ಬರೆಯುವಾಗ ದೊಡ್ಡ ನಾಯಕರಾಗಿ ಯಡಿಯೂರಪ್ಪ ಅವರು ಇರುತ್ತಾರೆ. ಸಮಾಜವನ್ನು ಪ್ರೀತಿಸುವ ಯಡಿಯೂರಪ್ಪ ಅವರು ಹಸಿರು ಶಾಲಿನೊಂದಿಗೆ ಕೃಷಿ ಬಜೆಟ್ ಮಂಡಿಸಿದವರು ಎಂದು ವಿವರಿಸಿದರು. ಯಡಿಯೂರಪ್ಪ ಅವರು ಶತಾಯು ವಾಗಲಿ ಎಂದು ಹಾರೈಸಿದರು. ಯಡಿಯೂರಪ್ಪ ಅವರ ಜನಸೇವೆಯಲ್ಲಿ ಸಾರ್ಥಕ 50 ವರ್ಷದ ಸಾಧನೆಗಳ ವಿವರವನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ನೀಡಿದರು. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಬಿ.ವೈ. ರಾಘವೇಂದ್ರ, ಗೋವಿಂದ ಕಾರಜೋಳ ಹಾಗೂ ಗಣ್ಯರು, ಸ್ವಾಮೀಜಿಗಳು ಭಾಗವಹಿಸಿದ್ದರು. ಇದೇ ವೇಳೆ ಅಮಿತ್ ಶಾ ಅವರನ್ನು ಗೌರವಿಸಲಾಯಿತು.

ಶೀಘ್ರದಲ್ಲೇ ಮದಕರಿ ನಾಯಕನ ಸ್ಮಾರಕ: ಚಿತ್ರದುರ್ಗವು ರಾಜಾ ಮದಕರಿ ನಾಯಕನ ನಾಡು. ಚಿತ್ರದುರ್ಗದಲ್ಲಿ ಹಿಂದಿನ ವಿಧಾನಸಭಾ ಚುನಾವಣೆಯ ವೇಳೆ ವೀರ ಮದಕರಿ ನಾಯಕ ಸ್ಮಾರಕ ನಿರ್ಮಿಸುವುದಾಗಿ ಘೋಷಣೆ ಮಾಡಿದ್ದೆ. ಆದರೆ, ಚುನಾವಣೆಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿಲ್ಲ, ಆದ್ದರಿಂದ ಸ್ಮಾರಕ ಮಾಡಲಾಗಿಲ್ಲ. ಈ ಕುರಿತಾಗಿ ಅನೇಕರು ಆಪಾದಿಸುತ್ತಿದ್ದಾರೆ. ಆದರೆ, ಹೆದರಬೇಕಿಲ್ಲ, ಕೇಂದ್ರದಲ್ಲಿ ಪ್ರಧಾನಿ ಮೋದಿ ಅವರಿದ್ದಾರೆ. ಮದಕರಿ ನಾಯಕನ ಸ್ಮಾರಕವನ್ನು ಶೀಘ್ರದಲ್ಲೇ ಮಾಡುತ್ತೇವೆ. ಮದಕರಿ ನಾಯಕ ಹೈದರಾಲಿಯನ್ನು ಸೋಲಿಸಿ ಓಡಿಸಿದ್ದರು. ಈ ಭಾಗವನ್ನು ಸ್ವತಂತ್ರವಾಗಿ ಇಡುವುದರಲ್ಲಿ ದೊಡ್ಡ ಪಾತ್ರ ವಹಿಸಿದ್ದರು. ವೀರ ನಾರಿ ಓಬವ್ವನ ಹೋರಾಟವು ಮಕ್ಕಳಿಗೆ ಪ್ರೇರಣೆ ನೀಡುವಂಥದ್ದು. ಅವರಿಗೆ ನಮನ ಸಲ್ಲಿಸುವುದಾಗಿ ಹೇಳಿದರು.

ಪಶ್ಚಿಮ ಬಂಗಾಲದಲ್ಲಿ ಇಂದು ಬಿಜೆಪಿಯ ಮುಖ್ಯಮಂತ್ರಿಯ ಪದಗ್ರಹಣ ನಡೆದಿದೆ. ಇದೇ ದಿನ ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಸೇವೆಗೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿದೆ. ವಿವೇಕಾನಂದರು, ಶ್ಯಾಮಪ್ರಸಾದ ಮುಖರ್ಜಿ ಮೊದಲಾದವರು ಹುಟ್ಟಿದ ನಾಡಿನಲ್ಲಿ ಹೊಸ ಶಕೆ ಆರಂಭವಾಗಿದೆ.

■ **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸರ್ಕಾರದ ಗೃಹಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ ಅಗರವಾಲ್, ಸುಧಾಕರ ರೆಡ್ಡಿ, ಸಂಸದರಾದ ಗೋವಿಂದ ಕಾರಜೋಳ, ಬಿ.ವೈ. ರಾಘವೇಂದ್ರ, ಡಾ. ಮಂಜುನಾಥ್, ಕೋಟ ಶ್ರೀನಿವಾಸ್ ಪೂಜಾರಿ, ಮಾಜಿ ಮುಖ್ಯಮಂತ್ರಿಗಳಾದ ಸದಾನಂದ ಗೌಡ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮಾಜಿ ಸಂಸದ ಪ್ರಭಾಕರ್ ಖೋರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್, ಪರಿಷತ್ ಸದಸ್ಯ ಸಿ.ಟಿ. ರವಿ, ಮಾಜಿ ಸಚಿವ ಅಶ್ವತ್ಥ ನಾರಾಯಣ, ಎ. ನಾರಾಯಣಸ್ವಾಮಿ, ಶಾಸಕ ಡಾ.ಎಂ. ಚಂದ್ರಪ್ಪ, ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಮಾಜಿ ಸಚಿವ ಬಿ.ಸಿ. ಪಾಟೀಲ್, ರೇಣುಕಾಚಾರ್ಯ ಮತ್ತಿತರರು ಭಾಗವಹಿಸಿದ್ದರು.

ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ: ಯಡಿಯೂರಪ್ಪ

ಪುಟ ೧➜ ನನಗೆ ಸಂಸ್ಕಾರ ಕೊಟ್ಟ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂಸೇವಕ ಸಂಘ)ನ್ನು ಎಂದಿಗೂ ಮರೆಯುವುದಿಲ್ಲ. ನಾನೊಬ್ಬ ಸ್ವಯಂಸೇವಕ ಎನ್ನಲು ನನಗೆ ಹೆಮ್ಮೆ ಇದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಬಳಿಕ, ಉಕ್ಕಿನ ಗೃಹಸಚಿವ ಅಮಿತ್ ಶಾ ಅವರಿಗೆ ಧನ್ಯವಾದಗಳು ಎಂದರು. ಎಲ್ಲಾ ವೇದಿಕೆಯ ಮೇಲಿರುವ ಪೂಜ್ಯರಿಗೆ ನನ್ನ ವಂದನೆಗಳು. ಅಭಿಮಾನೋತ್ಸವ ಬಗ್ಗೆ ಈಗಾಗಲೇ ಅನೇಕರು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಬಸವಣ್ಣ ಅವರ ಇವನಾರವ ಇವನಾರವ ಎನ್ನದೇ ಯಡಿಯೂರಪ್ಪ ನಮ್ಮವ ಎಂದು ಎಲ್ಲರೂ ಭಾವಿಸಿದ್ದೀರಿ. ನನ್ನ ದೇಹದಲ್ಲಿ ಉಸಿರಿರುವವರೆಗೆ ವಿರಮಿಸುವುದಿಲ್ಲ. ರಾಷ್ಟ್ರಕ್ಕಾಗಿ ಮತ್ತು ಪಕ್ಷಕ್ಕಾಗಿ ಶ್ರಮಿಸುವುದಾಗಿ ಯಡಿಯೂರಪ್ಪ ಹೇಳಿದರು.

ಇನ್ನೂ 10 ವರ್ಷ ಮೋದಿ ದೇಶ ಮುನ್ನಡೆಸಲಿ

•**ಚಿತ್ರದುರ್ಗ:** ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು ವಿಶ್ವದಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನ ಮಾಡುತ್ತಿದ್ದು ಇನ್ನೂ 10 ವರ್ಷ ಅವರು ದೇಶವನ್ನು ಮುನ್ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟರು.



ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ದೇಶ ಮುನ್ನಡೆಸುವ ಕೆಲಸ ಪ್ರಧಾನಿ ಮೋದಿ ಮಾಡುತ್ತಿದ್ದರೆ, ರಕ್ಷಣೆ ಮಾಡುವ ಕೆಲಸ ಅಮಿತ್ ಶಾ ಮಾಡುತ್ತಿದ್ದಾರೆ. ಈ ಜೋಡಿಯಿಂದ ಭಾರತದ ಚಿತ್ರಣವೇ ಬದಲಾಗಿದೆ. ಇದು ಇನ್ನಷ್ಟು ಕಾಲ ಮುಂದುವರಿಯಬೇಕು ಎಂದರು. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ನುಸುಳುಕೋರರಿಗೆ ಅವಕಾಶವಿತ್ತು. ಅಂತಹ ರಾಜ್ಯದಲ್ಲಿ ಬಿಜೆಪಿ ಆರಿಸಿ ಬಂದಿದ್ದು ಸಂತೋಷಕರ. ಎಲ್ಲ ಅಕ್ರಮಗಳಿಗೂ ಕಡಿವಾಣ ಹಾಕಬೇಕಿದೆ ಎಂದರು.

ಬಿಎಸ್‌ವೈ ಜನನಾಯಕ: ಬಿವೈವಿ

ಪುಟ ೧➜ ಚಿತ್ರದುರ್ಗದ ಪುಣ್ಯಭೂಮಿ ವೀರರ ಭೂಮಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ ಜಾತಿ ಪಂಥಗಳ ಸ್ವಾಮೀಜಿಯವರು ಒಂದೇ ವೇದಿಕೆಯಲ್ಲಿದ್ದಾರೆ. ಕರ್ನಾಟಕದ ಲಕ್ಷಾಂತರ ಅಭಿಮಾನಿಗಳು ಯಡಿಯೂರಪ್ಪ ಅವರನ್ನು ತಮ್ಮ ನಾಯಕರೆಂದು ಕೊಂಡಾಡುತ್ತಿದ್ದಾರೆ ಎಂದರು.

ಜನಹಿತಕ್ಕಾಗಿ ಹೋರಾಟ: ಅಧಿಕಾರಕ್ಕಾಗಿ ಹೋರಾಟ ಅಲ್ಲ, ಜನರ ಹಿತಕ್ಕಾಗಿ ಹೋರಾಟ ನಡೆಸಿದವರು. ಬಿಎಸ್‌ವೈ ಅವರ ಹೋರಾಟಗಳನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಅವರು ತಮ್ಮ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ. ಜೀವನದುದ್ದಕ್ಕೂ ಯಾವುದೇ ಸವಾಲುಗಳು ಬಂದರೂ ಬೆನ್ನು ತೋರಿಸಿ ಓಡಿ ಹೋದವರಲ್ಲ, ಯಾವುದೇ ರಾಜಕೀಯ ಷಡ್ಯಂತ್ರ, ಸವಾಲು ಬಂದರೂ ಅದನ್ನು ಧೈರ್ಯವಾಗಿ ಎದುರಿಸಿದವರು ಎಂದು ವಿವರಿಸಿದರು. ರಾಜ್ಯದ ಇತಿಹಾಸದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ರೈತರಿಗಾಗಿ ಬಜೆಟ್ ಮಂಡಿಸಿದವರು. ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಆರಂಭಿಸಿ ಹೆಣ್ಣು ಶಾಪ ಅಲ್ಲ ಎಂಬ ಭಾವನೆಯನ್ನು ಮೂಡಿಸಿದವರು. ರಾಜ್ಯದ ಎಲ್ಲ ಮಠಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬಿದವರು ಎಂದರು.

ರಾಜ್ಯದ ಜನರು ಯಡಿಯೂರಪ್ಪ ಅವರ ಬಗ್ಗೆ ಇಟ್ಟುಕೊಂಡ ನಿರೀಕ್ಷೆ, ಅಪೇಕ್ಷೆಯನ್ನು ಅವರು ಅಧಿಕಾರಾವಧಿಯಲ್ಲಿ ಪೂರೈಸಿದ್ದಾರೆ. ಮಗನಾಗಿ ನಾನು ಕೂಡ ಅವರಂತೆಯೇ ರಾಜ್ಯದ ಜನರ ಕೆಲಸ ಮಾಡುತ್ತೇನೆ.

■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಸತೀಶನ್ ಆಯ್ಕೆಗೆ ಮುಸ್ಲಿಂ ಲೀಗ್ ಒತ್ತಡ

ಪುಟ ೧➜ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ದಿಲ್ಲಿ ನಿವಾಸದಲ್ಲಿ ಶನಿವಾರ ಸಂಜೆ 4 ಗಂಟೆಗೆ ರಾಹುಲ್ ಗಾಂಧಿ, ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ರಮೇಶ್ ಚೆನ್ನಿತ್ತಲ, ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಮುಂತಾದವರ ಉಪಸ್ಥಿತಿಯಲ್ಲಿ ಸಭೆ ನಡೆದಿದೆ. ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್, ಅಜಯ್ ಮಾಕನ್ ಅವರು ಶುಕ್ರವಾರವೇ ಕೇರಳದ ರಾಜಕೀಯ ವಿದ್ಯಮಾನಗಳ ಬಗ್ಗೆ ಖರ್ಗೆ ಅವರಿಗೆ ವರದಿ ನೀಡಿದ್ದು, ಇದು ಕೂಡ ಚರ್ಚೆಯಲ್ಲಿ ಪ್ರಸ್ತಾವವಾಗಿದೆ.

ಗುರುವಾರ ತಿರುವನಂತಪುರಂನ ಇಂದಿರಾ ಭವನದಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರು ಕಾಂಗ್ರೆಸ್ ವೀಕ್ಷಕರನ್ನು ಭೇಟಿ ಮಾಡಿದ್ದು, ಈ ವೀಕ್ಷಕರು ಕಾಂಗ್ರೆಸ್ ಸಂಸದರು ಮತ್ತು ಮಿತ್ರ ಪಕ್ಷಗಳ ನಾಯಕರ ಜತೆಗೂ ಚರ್ಚೆ ನಡೆಸಿದ್ದರು. ಮುಖ್ಯಮಂತ್ರಿ ಆಯ್ಕೆ ಕುರಿತ ಚರ್ಚೆಗಳು 24 ಗಂಟೆಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಕೆ.ಮುರಳೀಧರನ್ ತಿರುವನಂತಪುರಂನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರೂ, ಸಿಎಂ ಆಯ್ಕೆ ಇನ್ನೂ ಅಂತಿಮಗೊಳ್ಳದೆ ಇರುವುದು ಚರ್ಚೆಗೆ ಕಾರಣವಾಗಿದೆ.

ಸನ್ನಿ ಜೋಸೆಫ್ ವಿರುದ್ಧ ಘೋಷಣೆ: ಮುಖ್ಯಮಂತ್ರಿ ಗಾದಿಗಾಗಿ ಲಾಬಿಗಳು ತೀವ್ರಗೊಂಡಿರುವಂತೆಯೇ ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್ ಅವರು ಶುಕ್ರವಾರ ರಾತ್ರಿಯೇ ದಿಲ್ಲಿ ತಲುಪಿದ್ದರು. ಅಲ್ಲಿ ಸತೀಶನ್ ಅವರಿಗೆ ಮುಸ್ಲಿಂ ಲೀಗ್, ಮುಸ್ಲಿಂ ಸ್ಟೂಡೆಂಟ್ ಫೆಡರೇಶನ್ ಬೆಂಬಲಿಗರಿಂದ ಕೇರಳ ಭವನದಲ್ಲಿ ಭಾರೀ ಸ್ವಾಗತ ನೀಡಲಾಯಿತು. ಇದೇ ವೇಳೆ ಮುಸ್ಲಿಂ ಸ್ಟೂಡೆಂಟ್ ಫೆಡರೇಶನ್ ಕಾರ್ಯಕರ್ತರು ಕಾಂಗ್ರೆಸ್‌ನ ಕೇರಳ ರಾಜ್ಯಾಧ್ಯಕ್ಷ ಸನ್ನಿ ಜೋಸೆಫ್ ವಿರುದ್ಧ ಘೋಷಣೆ ಕೂಗಿದ ಘಟನೆಯೂ ನಡೆಯಿತು. ಇದು ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟದೊಳಗೆ ಹೆಚ್ಚುತ್ತಿರುವ ಗುಂಪುಗಾರಿಕೆಗೂ ಸಾಕ್ಷಿಯಾಯಿತು.

ನಾಯಕರಿಗೆ ದಿಲ್ಲಿ ಬುಲಾವ್: ಇದಕ್ಕೂ ಮೊದಲು ಕಾಂಗ್ರೆಸ್ ಹೈಕಮಾಂಡ್ ಕೇರಳದ ನಾಯಕರಿಗೆ ದಿಲ್ಲಿಗೆ ಬರುವಂತೆ ಬುಲಾವ್ ನೀಡಿತ್ತು. ಕೇರಳದ ಮುಂದಿನ ಮುಖ್ಯಮಂತ್ರಿ ಆಯ್ಕೆ ಕುರಿತ ಅಂತಿಮ ನಿರ್ಣಯಕ್ಕೆ ಮುನ್ನ ಕೇರಳದ ಉಸ್ತುವಾರಿ ದೀಪಾ ದಾಸ್‌ಮುನ್ಷಿ ಅವರ ಜತೆಗೂ ಚರ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಅಂತಿಮವಾಗಿ ಈಗ ರಮೇಶ್ ಚೆನ್ನಿತ್ತಲ ಹೆಸರು ಬದಿಗೆ ಸರಿದು ವಿ.ಡಿ.ಸತೀಶನ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಗಾಂಧಿ ಕುಟುಂಬದ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಅವರ ಹೆಸರು ಉಳಿದಿದೆ ಎನ್ನಲಾಗಿದ್ದು, ಅನಿಶ್ಚಿತತೆ ಮುಂದುವರಿದಿದೆ.

ಸಿಎಂ ಆಯ್ಕೆ ಕಾಂಗ್ರೆಸ್ ಬದಲು ಪಾಣಕ್ಕಾಡ್ ಕೈಯ್ಯಲ್ಲಿ–ಬಿಜೆಪಿ: ಸತೀಶನ್ ಪರವಾಗಿ ಮುಸ್ಲಿಂಲೀಗ್ ಸೇರಿದಂತೆ ಕಾಂಗ್ರೆಸಿನ ಮಿತ್ರಪಕ್ಷಗಳು ಬಲವಾದ ಒತ್ತಡ ಹೇರುತ್ತಿದ್ದರೆ, ಬಹುಸಂಖ್ಯೆಯ ಕಾಂಗ್ರೆಸ್ ಶಾಸಕರು ಗಾಂಧಿ ಕುಟುಂಬದ ಆಪ್ತ ಕೆ.ಸಿ.ವೇಣುಗೋಪಾಲ್ ಪರವಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮುಂದಿನ ಯುಡಿಎಫ್ ಸರಕಾರದ ಮುಖ್ಯಮಂತ್ರಿ ಆಯ್ಕೆ ಮುಸ್ಲಿಂಲೀಗಿನ ಪಾಣಕ್ಕಾಡ್ ತಂಙಳ್ ಹೇಳಿದಂತೆ ನಡೆಯಲಿದೆಯೇ ವಿನಾ ಕಾಂಗ್ರೆಸ್ ಶಾಸಕರ ಬೆಂಬಲದಂತೆ ಅಲ್ಲ ಎಂಬುದಾಗಿ ಬಿಜೆಪಿ ನಾಯಕ ಕೆ.ಸುರೇಂದ್ರನ್ ವ್ಯಂಗ್ಯವಾಡಿರುವುದನ್ನು ಇಲ್ಲಿ ಸ್ಮರಿಸಬಹುದು. ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ತಮ್ಮ ಹಿರಿತನದ ನೆಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಹಕ್ಕು ಮಂಡಿಸಿದ್ದರೂ, ಸತೀಶನ್ ಮತ್ತು ಕೆ.ಸಿ.ವೇಣುಗೋಪಾಲ್ ಅವರ ಪ್ರಭಾವದ ಮುಂದೆ ಚೆನ್ನಿತ್ತಲ ಅವರ ಬೇಡಿಕೆಗೆ ಬೆಂಬಲ ಲಭಿಸುವ ಸಾಧ್ಯತೆ ಎಷ್ಟು ಎಂಬ ಪ್ರಶ್ನೆ ಕೇಳಿಬಂದಿದೆ. ಇದೇ ವೇಳೆ, ಕಾಂಗ್ರೆಸ್ ಬೆಂಬಲಿಗರು ಕೇರಳದಾದ್ಯಂತ ಸಾಮಾಜಿಕ ಮಾಧ್ಯಮಗಳ ಮೂಲಕ ಮತ್ತು ಪ್ರತಿಭಟನಾ ಜಾಥಾಗಳ ಮೂಲಕ ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದು ಒತ್ತಡ ಹೇರುತ್ತಿದ್ದಾರೆ. ಇದರ ಹೊರತಾಗಿ ಉಪಚುನಾವಣೆ ಮೂಲಕ ಅಭ್ಯರ್ಥಿಯೊಬ್ಬರನ್ನು ಈ ಸ್ಥಾನಕ್ಕೆ ಆಯ್ಕೆ ಮಾಡುವ ಯತ್ನದ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಕೆ.ಸಿ.ವೇಣುಗೋಪಾಲ್ ಆಲಪ್ಪುಳದ ಸಂಸದರಾಗಿದ್ದು, ಕಾಂಗ್ರೆಸ್ ಹೈಕಮಾಂಡ್ ಅವರನ್ನು ಸಿಎಂ ಸ್ಥಾನಕ್ಕೆ ಆಯ್ಕೆ ಮಾಡಲು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದೆ ಎಂಬ ವರದಿಗಳ ನಡುವೆ ಈ ವಿದ್ಯಮಾನಗಳು ನಡೆಯುತ್ತಿವೆ.

ಯುಡಿಎಫ್ 102 ಸ್ಥಾನಗಳನ್ನು ಗೆದ್ದಿದ್ದು, ಕಾಂಗ್ರೆಸ್ 63 ಸ್ಥಾನಗಳೊಂದಿಗೆ ದೊಡ್ಡ ಪಕ್ಷವಾಗಿ ಮೂಡಿಬಂದಿದೆ. 2ನೇ ದೊಡ್ಡಪಕ್ಷವಾಗಿ ಮುಸ್ಲಿಂಲೀಗ್ 22 ಸ್ಥಾನಗಳನ್ನು ಗೆದ್ದಿದೆ. ಆಡಳಿತದಲ್ಲಿದ್ದ ಎಡರಂಗ 35 ಸ್ಥಾನಗಳೊಂದಿಗೆ ಹೀನಾಯ ಸೋಲುಂಡಿತ್ತು. ಬಿಜೆಪಿ ಇದೇ ಮೊದಲ ಬಾರಿಗೆ 3 ಸ್ಥಾನಗಳೊಂದಿಗೆ ಕೇರಳದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಗುರುತಿಸಿಕೊಂಡಿದೆ.

ಸತೀಶನ್ ಪರ ಬಲಪ್ರದರ್ಶನ: ವಿ.ಡಿ.ಸತೀಶನ್ ಅವರ ಪರವಾಗಿ ಶುಕ್ರವಾರ ರಾತ್ರಿ ಮಲಬಾರ್ ಜಿಲ್ಲೆಗಳಲ್ಲಿ ಮುಸ್ಲಿಂಲೀಗ್, ತೀವ್ರವಾದಿ ಜಮಾತೆ ಇಸ್ಲಾಮಿ ಬೆಂಬಲಿತ ವೆಲ್ಫೇರ್ ಪಾರ್ಟಿ ಸೇರಿದಂತೆ ವಿವಿಧ ಮುಸ್ಲಿಂ ಸಂಘಟನೆಗಳು ಬೃಹತ್ ಪ್ರದರ್ಶನ ನಡೆಸಿ ಕಾಂಗ್ರೆಸ್ ಹೈಕಮಾಂಡಿಗೆ ಎಚ್ಚರಿಕೆ ಸಂದೇಶ ರವಾನಿಸಿವೆ. ಬೀದಿ ಪ್ರದರ್ಶನಗಳ ವಿರುದ್ಧ ಕಾಂಗ್ರೆಸ್ ಹೈಕಮಾಂಡಿನ ಖಡಕ್ ಎಚ್ಚರಿಕೆಯ ಹೊರತಾಗಿಯೂ ಇಂತಹ ಪ್ರದರ್ಶನಗಳು ನಡೆದಿರುವುದು ಕುತೂಹಲ ಮೂಡಿಸಿದೆ. ಕೋಯಿಕ್ಕೋಡು ಜಿಲ್ಲೆಯ ನಾದಾಪುರಂ, ವಡಗರ, ಪೆರಂಬ್ರ, ತೊಟ್ಟಿಲಪಾಲಮ್ ಮುಂತಾದೆಡೆ ಸತೀಶನ್ ಪರ ಪ್ರದರ್ಶನಗಳು ನಡೆದಿದ್ದು, ಇ.ಟಿ.ಮೊಹಮ್ಮದ್ ಬಶೀರ್ ಮತ್ತಿತರ ಮುಸ್ಲಿಂ ಲೀಗಿನ ನಾಯಕರು ಪ್ರಿಯಾಂಕಾ ವಾದ್ರಾ, ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಸತೀಶನ್ ಅವರನ್ನೇ ಸಿಎಂ ಗಾದಿಗೆ ಆಯ್ಕೆ ಮಾಡಬೇಕೆಂದು ಒತ್ತಡ ಹೇರಿದ್ದಾರೆನ್ನಲಾಗಿದೆ.

ಕಿರುಸುದ್ದಿ

ನಾಳೆ ಶಾಸಕರಾಗಿ ಉಮೇಶ ಮೇಟಿ ಪ್ರಮಾಣ ವಚನ



• ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಜಯ ಗಳಿಸಿರುವ ಉಮೇಶ ಮೇಟಿಯವರು ವಿಧಾನಸಭೆಯ ನೂತನ ಸದಸ್ಯರಾಗಿ ಮೇ 11ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಮೇ 11ರಂದು ಬೆಳಗ್ಗೆ 10 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 334ರಲ್ಲಿ ಪ್ರಮಾಣ ವಚನವನ್ನು ಬೋಧಿಸಲು ಸಭಾಧ್ಯಕ್ಷರು ಸಮಯವನ್ನು ನಿಗದಿ ಪಡಿಸಿದ್ದಾರೆ ಎಂದು ಉಮೇಶ ಮೇಟಿಯವರಿಗೆ ಪತ್ರ ಮುಖೇನ ಕರ್ನಾಟಕ ವಿಧಾನಸಭೆಯ ಸಚಿವಾಲಯದ ಕಾರ್ಯದರ್ಶಿ ಎಂ.ಕೆ.ವಿಶಾಲಕ್ಷ್ಮೀ ತಿಳಿಸಿದ್ದಾರೆ. ಮೇ 4ರಂದು ನಡೆದ ವಿಧಾನಸಭೆಯ ಬಾಗಲಕೋಟೆಯ ಉಪಚುನಾವಣೆಯಲ್ಲಿ 22 ಸಾವಿರ ಮತಗಳ ಅಂತರದಿಂದ ಕಾಂಗ್ರೆಸ್‌ನಿಂದ ಜಯಗಳಿಸಿದ್ದು ಈಗ ಮೊದಲ ಬಾರಿಗೆ ಉಮೇಶ ಮೇಟಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಡ್ರಗ್ಸ್ ಪೆಡ್ಲರ್ ಬಂಧನ: ಬಳ್ಳಾರಿ ಜೈಲಿಗೆ ರವಾನೆ

• ದಾಂಡೇಲಿ: ಡ್ರಗ್ಸ್ ಮಾರಾಟ, ಸಾಗಣೆ ಮತ್ತು ಸಂಗ್ರಹಣೆ ಚಟುವಟಿಕೆಯಲ್ಲಿ ತೊಡಗಿದ್ದ ದಾಂಡೇಲಿಯ ಡ್ರಗ್ ಪೆಡ್ಲರ್‌ಗೆ ಬಂಧನದಲ್ಲಿಡಲು ಪಶ್ಚಿಮ ವಲಯದ ಪೊಲೀಸ್ ಮಹಾ ನಿರೀಕ್ಷಕರು ಆದೇಶವನ್ನು ಹೊರಡಿಸಿದ್ದು, ಈ ನಿಟ್ಟಿನಲ್ಲಿ ಆತನನ್ನು ಬಂಧಿಸಿ ಬಳ್ಳಾರಿಯ ಕೇಂದ್ರ ಕಾರಾಗೃಹಕ್ಕೆ ರವಾನಿಸಲಾಗಿದೆ. ನಗರದ ಸುಭಾಷ ನಗರ ನಿವಾಸಿಯಾದ ಆಯಾನ್ ಅಲಿಯಸ್ ಶಾನವಾಜ್ ತಂದೆ ಇಮ್ತಿಯಾಜ್ ಖಾನ್ (23) ಈತನು ಮಾದಕ ವಸ್ತುಗಳ ಸಂಗ್ರಹ, ಸಾಗಾಟ/ ಸರಬರಾಜು ಮತ್ತು ಮಾರಾಟ ಮಾಡುವ ವೃತ್ತಿಪರ ಡ್ರಗ್ ಪೆಡ್ಲರ್ ಆಗಿದ್ದು, ಈತನ ಮೇಲೆ ದಾಂಡೇಲಿ ನಗರ ಪೊಲೀಸ್ ಠಾಣೆಯಲ್ಲಿ 5 ಪ್ರಕರಣಗಳು ಹಾಗೂ ಹುಬ್ಬಳ್ಳಿಯ ಗೋಕುಲ್ ರೋಡ್ ಪೊಲೀಸ್ ಠಾಣೆಯಲ್ಲಿ01 ಪ್ರಕರಣ ಎನ್.ಡಿ.ಪಿ.ಎಸ್ ಕಾಯಿದೆಯ ಅಡಿಯಲ್ಲಿ ಒಟ್ಟೂ 06 ಪ್ರಕರಣಗಳು ದಾಖಲಾಗಿರುತ್ತದೆ. ಈತನ ಮೇಲೆ ಪ್ರಕರಣಗಳು ದಾಖಲಾಗಿದ್ದರೂ ಸಹ ಈತನು ಕಾನೂನು ಬಾಹಿರ ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆಯಲ್ಲಿ ತೊಡಗಿಕೊಂಡಿದ್ದರಿಂದ ಈತನಿಗೆ ಅಪರಾಧ ಪ್ರಕರಣಗಳಲ್ಲಿ ಹಲವಾರು ಬಾರಿ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರೂ, ಸುಧಾರಣೆಗೊಳ್ಳದೇ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿ ಪದೇ ಪದೇ ಇಂತಹ ಕೃತ್ಯಗಳಲ್ಲಿ ಭಾಗಿಯಾಗಿರುತ್ತಿದ್ದಾನೆ. ಇದರಿಂದ ಕಾನೂನು ಸುವ್ಯವಸ್ಥೆ ದಕ್ಕೆಯಾಗುವುದರ ಜೊತೆಗೆ ಯುವ ಜನತೆಯ ಆರೋಗ್ಯ, ಭವಿಷ್ಯ ಮತ್ತು ಆರ್ಥಿಕತೆಯ ಮೇಲೆ ಅಡ್ಡಪರಿಣಾಮ ಬಿರುತ್ತದೆ. ಆದ್ದರಿಂದ ಇತನನ್ನು ಬಳ್ಳಾರಿ ಜಿಲ್ಲೆಯ ಕೇಂದ್ರ ಕಾರಾಗೃಹಕ್ಕೆ ಒಪ್ಪಿಸಲಾಗಿದೆ.

ಕಾರ್ ಡಿಕ್ಕಿ: ಬಾಲಕಿ ಸಾವು

• ಸಿಂಧನೂರು: ನಗರದ ಗಂಗಾವತಿ ರಸ್ತೆಯ ಪ್ರವಾಸಿ ಮಂದಿರದ ಹತ್ತಿರದಲ್ಲಿ ಶುಕ್ರವಾರ ಕಾಲೇಜಿನ ತರಗತಿಗಳನ್ನು ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದ ವಿದ್ಯಾರ್ಥಿನಿಯರ ಮೇಲೆ ಅತಿ ವೇಗವಾಗಿ ಥಾರ್ ಕಾರನ್ನು ರಿವರ್ಸ್ ತೆಗೆದಾಗ ಕಾಲೇಜು ವಿದ್ಯಾರ್ಥಿನಿಯರಿಗೆ ಡಿಕ್ಕಿ ಹೊಡೆದಿದೆ. ಈ ದುರ್ಘಟನೆಯಲ್ಲಿ ಓರ್ವ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪಟ್ಟಣದಲ್ಲಿ ಮೇ 8 ಮಧ್ಯಾಹ್ನ ಹೃದಯವಿದ್ರಾವಕ ಘಟನೆಯೊಂದು ಸಂಭವಿಸಿದೆ. ಅತಿವೇಗ ಹಾಗೂ ಅಜಾಗರೂಕತೆಯಿಂದ ಕಾರನ್ನು ರಿವರ್ಸ್ ಮಾಡುವಾಗ ಕಾಲೇಜು ಮುಗಿಸಿ ಮನೆಗೆ ಮರಳುತ್ತಿದ್ದ ವಿದ್ಯಾರ್ಥಿನಿಯರಿಗೆ ಡಿಕ್ಕಿ ಹೊಡೆದ ಪರಿಣಾಮ, ಓರ್ವ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪೊಲೀಸರು ಚಾಲಕನನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಪಟ್ಟಣದ ಚೇತನ ಆಸ್ಪತ್ರೆಯ ಮುಂಭಾಗದಲ್ಲಿ ಈ ಅಪಘಾತ ಸಂಭವಿಸಿದೆ. ಎವಿಎಸ್ ಬ್ರಿಲಿಯಂಟ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಐವರು ವಿದ್ಯಾರ್ಥಿನಿಯರು ಕಾಲೇಜು ಮುಗಿಸಿಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಅಲ್ಲಿ ನಿಲ್ಲಿಸಿದ್ದ ಮಹೇಂದ್ರ ಥಾರ್ ಕಾರನ್ನು ಚಾಲಕ ಏಕಾಏಕಿ ವೇಗವಾಗಿ ರಿವರ್ಸ್ ತೆಗೆದಿದ್ದಾನೆ. ನಿಯಂತ್ರಣ ತಪ್ಪಿದ ಕಾರು ನೇರವಾಗಿ ವಿದ್ಯಾರ್ಥಿನಿಯರಿಗೆ ಡಿಕ್ಕಿ ಹೊಡೆದಿದೆ. ಈ ಭೀಕರ ಅಪಘಾತದಲ್ಲಿ ಜವಳಗೇರಾ ಗ್ರಾಮದ ನಿವಾಸಿ ಭೂಮಿಕಾ (17) ಎಂಬ ವಿದ್ಯಾರ್ಥಿನಿ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾಳೆ. ಉಳಿದಂತೆ ಮೇಘನಾ (17), ಮಹೇಶ್ವರಿ (17) ಮತ್ತು ಜಹೀದಾ (17) ಎಂಬ ವಿದ್ಯಾರ್ಥಿನಿಯರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ತಕ್ಷಣವೇ ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನೊಬ್ಬ ವಿದ್ಯಾರ್ಥಿನಿಯು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾಳೆ.

ಸಂಕಷ್ಟದಲ್ಲಿ ಅನ್ನದಾತ | ಸೂಕ್ತ ಪರಿಹಾರಕ್ಕೆ ಆಗ್ರಹ

ಈರುಳ್ಳಿ ಬೆಲೆ ದಿಢೀರ್ ಕುಸಿತ

▸ ಹುಸೇನಸಾಬ ಕಟಗಿ

ದಿಗಂತ ವಿಶೇಷ



• ಹನುಮಸಾಗರ: ಸಮೀಪದ ಕಾಟಾಪುರ, ಕಬ್ಬರಗಿ, ಹೂಲಗೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಈರುಳ್ಳಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಉತ್ತಮ ಮಳೆಯ ನಿರೀಕ್ಷೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಬೆಳೆದಿದ್ದ ರೈತರಿಗೆ, ಮಾರುಕಟ್ಟೆಯಲ್ಲಿನ ಬೆಲೆ ಕುಸಿತವು ದೊಡ್ಡ ಆಘಾತ ನೀಡಿದೆ.

ಉತ್ತಮ ಆದಾಯದ ಕನಸು ಕಂಡಿದ್ದ ರೈತರು, ಬ್ಯಾಂಕ್ ಮತ್ತು ಖಾಸಗಿ ಸಾಲ ಮಾಡಿ ಬೀಜ, ರಸಗೊಬ್ಬರ, ಔಷಧಿ ಮತ್ತು ಕೂಲಿ ಕೆಲಸಗಳಿಗೆ ಸಾವಿರಾರು ರೂ. ಖರ್ಚು ಮಾಡಿದ್ದರು. ಆದರೆ, ಈಗ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಭಾರೀ ಕುಸಿತ ಕಂಡಿರುವುದರಿಂದ ಅವರ ಬದುಕು ಅತಂತ್ರವಾಗಿದೆ.

ಕಾಟಾಪುರ ಗ್ರಾಮದ ರೈತ ನಾಗೇಶ ಗಂಗಾಧರ್ ಬಡಿಗೇರ ಅವರ ಪರಿಸ್ಥಿತಿ ಇದಕ್ಕೆ ತಾಜಾ ಉದಾಹರಣೆ. ಅವರು 1 ಎಕರೆ ಪ್ರದೇಶದಲ್ಲಿ ಈರುಳ್ಳಿ ಬೆಳೆದಿದ್ದು, ಬೀಜಕ್ಕೆ 850 ರೂ. (10 ಪಾಕೇಟ್ ಬೀಜ), 10 ಚೀಲ ಗೊಬ್ಬರ, 2 ಟ್ರ್ಯಾಕ್ಟರ್ ದನದ ಗೊಬ್ಬರ, 15,000 ರೂ. ಬಾಡಿಗೆ ಮತ್ತು 10,000 ರೂ.ಕೂಲಿ ಕೆಲಸಗಳಿಗೆ ಖರ್ಚು ಮಾಡಿದ್ದಾರೆ. ಆದರೆ, ಇಳಕಲ್ ಮಾರುಕಟ್ಟೆಯಲ್ಲಿ 1 ಕೆಜಿ ಈರುಳ್ಳಿಗೆ ಕೇವಲ 8 ರೂ. ಬೆಲೆ ಸಿಗುತ್ತಿದ್ದು, 1 ಕ್ವಿಂಟಾಲ್‌ಗೆ 800 ರೂ. ಮಾತ್ರ ದೊರೆಯುತ್ತಿದೆ. ರೈತರು ಕನಿಷ್ಠ 15-25 ರೂ. ಬೆಲೆಯನ್ನು ನಿರೀಕ್ಷಿಸುತ್ತಿದ್ದರು. 6 ತಿಂಗಳಿಗೊಮ್ಮೆ ಬರುವ ಈ ಬೆಳೆಯಲ್ಲಿ ಭಾರೀ ನಷ್ಟ ಅನುಭವಿಸಿದ್ದಾರೆ.

ಅವರಂತೆ ಹಲವಾರು ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡದೆ ಗೋದಾಮುಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಕೆಲ ರೈತರು ನಷ್ಟದ ನಡುವೆಯೇ ಈರುಳ್ಳಿಯನ್ನು ರಸ್ತೆ ಬದಿಯಲ್ಲಿ ಮತ್ತು ಹೊಲದಲ್ಲಿ ಸುರಿದು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಇದೇ ರೀತಿ, ನೀಲಪ್ಪ ಮಾಲಿಪಾಟೀಲ ಅವರು 1 ಎಕರೆ 25 ಗುಂಟೆ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲು 70,000 ರಿಂದ 80,000 ರೂ.ಖರ್ಚು ಮಾಡಿದ್ದಾರೆ. ಹೊಸದಾಗಿ ಬೋರ್‌ವೆಲ್ ಕೊರೆಸಿ, ಹೊಸದಾಗಿ ಬೆಳೆ ಬೆಳೆದಿದ್ದ ಅವರಿಗೆ 1 ಕ್ವಿಂಟಾಲ್‌ಗೆ 2500-3000 ರೂ. ಬೆಲೆ ಸಿಗುವ ನಿರೀಕ್ಷೆಯಿತ್ತು. ಆದರೆ, ಈಗ ಬೆಲೆ ಇಲ್ಲದೆ 100 ಕ್ವಿಂಟಾಲ್‌ಗೂ ಹೆಚ್ಚು ಈರುಳ್ಳಿ ಹಾಗೆಯೇ ಉಳಿದಿದೆ. ಉತ್ತಮ ಬೆಳೆ ಬಂದರೂ ಬೆಲೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಸರ್ಕಾರವು ರೈತರಿಗೆ ಸೂಕ್ತ ಪರಿಹಾರ ನೀಡಲು ಮತ್ತು ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆಯನ್ನು ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

> **ರೈತರಿಗೆ ನ್ಯಾಯಯುತ ಬೆಲೆ ಸಿಗದೇ ಸಂಕಷ್ಟ ಎದುರಾಗುತ್ತಿದೆ. ಸರ್ಕಾರ ತಕ್ಷಣ ಮೆಕ್ಕೆಜೋಳ ಬೆಳೆದ ರೈತರಿಗೆ ನೀಡಿದ ಪರಿಹಾರ ರೀತಿಯಲ್ಲಿ ಈರುಳ್ಳಿ ಬೆಳೆದ ರೈತರಿಗೆ ಎಕರೆಗೆ 40 ಸಾವಿರ ರೂ. ಪರಿಹಾರಧನ ನೀಡಬೇಕು ಹಾಗೂ ಬೆಂಬಲ ಬೆಲೆ ಘೋಷಿಸಿ ನೇರ ಖರೀದಿ ಕೇಂದ್ರ ಆರಂಭಿಸಬೇಕು. ಮಧ್ಯವರ್ತಿಗಳ ಹಾವಳಿ ತಡೆದು ರೈತರಿಗೆ ನ್ಯಾಯ ಒದಗಿಸಬೇಕು.**
> ■ ನಜೀರಸಾಬ ಮೂಲಿಮನಿ, ರೈತ ಸಂಘದ ರಾಜ್ಯ ಕಾರ್ಯದರ್ಶಿ

> **ಈರುಳ್ಳಿ ಬೆಳೆ ಬೆಳೆಸಲು ತುಂಬಾ ಹಣ ಖರ್ಚಾಗಿದೆ. ಒಂದು ಎಕರೆ ಬೆಳೆಗಾಗಿ ಲಕ್ಷಾಂತರ ರೂ. ವೆಚ್ಚ ಮಾಡಿದ್ದೇವೆ. ಆದರೆ, ಈಗ ಮಾರುಕಟ್ಟೆಯಲ್ಲಿ ಸಿಗುತ್ತಿರುವ ದರ ನಮ್ಮ ಖರ್ಚಿಗೂ ಸಾಲುತ್ತಿಲ್ಲ. ಒಂದು ಕ್ವಿಂಟಲ್ ಈರುಳ್ಳಿಗೆ ಸಿಗುತ್ತಿರುವ ಬೆಲೆ ಸಾಗಾಟ ವೆಚ್ಚಕ್ಕೂ ಸಾಕಾಗುತ್ತಿಲ್ಲ. ಸಾಲ ತೀರಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ.**
> ■ ನಾಗೇಶ ಗಂಗಾಧರ ಬಡಿಗೇರ, ಕಾಟಾಪುರ ಗ್ರಾಮದ ಈರುಳ್ಳಿ ಬೆಳೆದ ರೈತ

ಬೇಸಿಗೆ ನೀಗಿಸಲು ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರು

• ರಬಕವಿ-ಬನಹಟ್ಟಿ: ನದಿಯಲ್ಲಿ ನೀರು ಸಂಗ್ರಹ ಸಾಮರ್ಥ್ಯ ಉತ್ತಮವಾಗಿದೆ. ರಬಕವಿ-ಬನಹಟ್ಟಿ, ತೇರದಾಳ, ಅಥಣಿ ಸೇರಿದಂತೆ ಹಲವರು ಪಟ್ಟಣ ಹಾಗೂ ಗ್ರಾಮಗಳಲ್ಲಿನ ಜನತೆ ನದಿ ನೀರನ್ನು ಮಿತವಾಗಿ ಬಳಸಿದರೆ ಈ ಬಾರಿಯ ಬೇಸಿಗೆಯಲ್ಲಿ ನೀರಿನ ಕೊರತೆಯಾಗದೆ ಸರಾಗವಾಗವಾಲಿದೆ.

ಒಟ್ಟು 1.13 ಟಿಎಂಸಿಯಷ್ಟು ನೀರು ಸಂಗ್ರಹವಿದೆ. ಡೆಡ್ ಸ್ಟೋರೇಜ್‌ನ 0.8 ಟಿಎಂಸಿಯಲ್ಲಿ 0.35 ಟಿಎಂಸಿಯಷ್ಟು ನೀರು ಬ್ಯಾರೇಜ್‌ನಲ್ಲಿದೆ. ಇದರಿಂದ ಸಂಪೂರ್ಣ ಬೇಸಿಗೆ ದಿನಗಳನ್ನು ನಿಭಾಯಿಸುವಲ್ಲಿ ಯಶಸ್ವಿ ಕಾಣುವ ಲೆಕ್ಕಾಚಾರ ಅಧಿಕಾರಿಗಳದ್ದು. ನೀರಿನ ಸಮಸ್ಯೆಗೆ ಹಿಪ್ಪರಗಿ ಬ್ಯಾರೇಜ್ ಸಹಕಾರಿಯಾಗಿದ್ದು, ಜೂನ್ ಮೊದಲ ವಾರದವರದ ಅವಧಿಗೆ ಯಾವುದೇ ರೀತಿ ನೀರಿನ ಕೊರತೆಯಾಗದು.

ಸದ್ಯ ಸಂಗ್ರಹಗೊಂಡಿರುವ ನೀರು ಹಿಪ್ಪರಗಿ ಹಿಂಭಾಗದಲ್ಲಿನ ಅಥಣಿ, ರಬಕವಿ-ಬನಹಟ್ಟಿ, ತೇರದಾಳ ಸೇರಿದಂತೆ ಅನೇಕ ಪಟ್ಟಣ ಹಾಗೂ ಗ್ರಾಮಗಳಿಗೆ ನೀರಿನ ಬವಣೆಯಿಂದ ದೂರ ಉಳಿಯುವಲ್ಲಿ ನೆಮ್ಮದಿ ಕಂಡಿದೆ.



ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ

ರೂಪಾಲಿ ನಾಯ್ಕ ನೇತೃತ್ವದಲ್ಲಿ ಸಾವಿರಾರು ಜನರು ಭಾಗಿ



• ಕಾರವಾರ: ಚಿತ್ರದುರ್ಗದಲ್ಲಿ ನಡೆದ ಯಡಿಯೂರಪ್ಪ ಅಭಿಮಾನೋತ್ಸವ ಅದ್ದೂರಿಯಾಗಿ ನಡೆದಿದ್ದು, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಅವರ ನೇತೃತ್ವದಲ್ಲಿ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರ ಹಾಗೂ ಜಿಲ್ಲೆಯಿಂದ ಸಾವಿರಾರು ಜನರು ಪಾಲ್ಗೊಂಡಿದ್ದರು.

ಕೋಟಿನಾಡು ಚಿತ್ರದುರ್ಗದಲ್ಲಿ ರೈತ ನಾಯಕ, ಹುಟ್ಟು ಹೋರಾಟಗಾರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ಜನಸೇವೆ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಜಿಲ್ಲೆಯ ಜನತೆ ಉತ್ಸಾಹದಿಂದ ಪಾಲ್ಗೊಂಡು ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಕಾರ್ಯಕ್ರಮದ ಕೇಂದ್ರವಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರ ಮಾತುಗಳನ್ನು ಕೇಳಿ ಸಂತಸಗೊಂಡರು.

ಭಾರತೀಯಜನತಾಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ ಯಡಿಯೂರಪ್ಪ ಅಭಿಮಾನೋತ್ಸವದ ಸಂಭ್ರಮ, ಸಡಗರದಲ್ಲಿ ಭಾಗವಹಿಸುವಂತಾದದ್ದು ಖುಷಿ ನೀಡಿದೆ ಎಂದು ಜಿಲ್ಲೆಯಿಂದ ತೆರಳಿದ ಕಾರ್ಯಕರ್ತರು, ಜನತೆ ಅಭಿಪ್ರಾಯಪಟ್ಟರು.

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ಎಸ್.ನಾಯ್ಕ ಜಿಲ್ಲೆಯಿಂದ ಆಗಮಿಸಿದ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಜನತೆಯನ್ನು ಸ್ವಾಗತಿಸಿದರು. ಜಿಲ್ಲೆಯಿಂದ 30ಕ್ಕೂ ಹೆಚ್ಚು ಬಸ್‌ಗಳು, ಟೆಂಪೋಗಳು, ಕಾರುಗಳು, ಖಾಸಗಿ ವಾಹನಗಳಲ್ಲಿ ಜನತೆ ಅಭಿಮಾನೋತ್ಸವದಲ್ಲಿ ಪಾಲ್ಗೊಂಡಿದ್ದರು.

> **ಯಡಿಯೂರಪ್ಪ ಅಭಿಮಾನೋತ್ಸವ ಅದ್ದೂರಿಯಾಗಿ ನಡೆಯಿತು. ನಮ್ಮ ಜಿಲ್ಲೆಯ ಸಾವಿರಾರು ಜನರು ಈ ಅಭಿಮಾನೋತ್ಸವದಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಆಗಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.**
> ■ ರೂಪಾಲಿ ಎಸ್.ನಾಯ್ಕ, ರಾಜ್ಯ ಬಿಜೆಪಿ ಉಪಾಧ್ಯಕ್ಷರು, ಮಾಜಿ ಶಾಸಕರು



ಬಾಗಲಕೋಟೆ: ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿಯಾಗಿ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಶುಭ ಹಾರೈಸಿದರು.

ಕಲಬುರಗಿ, ಯಾದಗಿರಿಯಲ್ಲಿ ಹೊಸ ಕೈಗಾರಿಕಾ ವಸಾಹತು

₹200 ಕೋಟಿ ಯೋಜನೆಗೆ ಸಚಿವ ಸಂಪುಟ ಅನುಮೋದನೆ



• ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್‌ಎಸ್ ಐಡಿಸಿ) ಸಹಯೋಗದಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ತಿಳಿಸಿದರು.

ಈ ಯೋಜನೆಯಡಿ ಎರಡು ಜಿಲ್ಲೆಗಳಲ್ಲಿ ಒಟ್ಟು 210.58 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಒಟ್ಟು ರೂ. 200.07 ಕೋಟಿ ವೆಚ್ಚದ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಕಲಬುರಗಿ ಜಿಲ್ಲೆಯ ನಂದೂರು-ಕೆ ಗ್ರಾಮದ ಬಳಿ ಸುಮಾರು 62.58 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ವಸಾಹತು ನಿರ್ಮಾಣವಾಗಲಿದೆ. ಇದರ ಅಭಿವೃದ್ಧಿಗೆ 61.26 ಕೋಟಿ ರೂ. ವೆಚ್ಚವಾಗಲಿದ್ದು, ಈ ಮೊತ್ತವನ್ನು ಕೆಕೆಆರ್‌ಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ತಲಾ ಶೇ.50ರಷ್ಟು ಭರಿಸಲಿವೆ ಎಂದರು.


ಯಾದಗಿರಿ ಜಿಲ್ಲೆಯಲ್ಲಿ ಎರಡು ಪ್ರಮುಖ ಕೈಗಾರಿಕಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಯಾದಗಿರಿ ತಾಲೂಕಿನಲ್ಲಿ 100 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಲು 96.25 ಕೋಟಿ ವೆಚ್ಚ ನಿಗದಿಯಾಗಿದೆ. ಇದೇ ವೇಳೆ ಶಹಾಪುರ ತಾಲೂಕಿನ ಹಳಿಸಾಗರ ಗ್ರಾಮದ ಬಳಿ 48 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗುತ್ತಿದ್ದು, ಇದಕ್ಕಾಗಿ 42.56 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಈ ಎಲ್ಲಾ ಯೋಜನೆಗಳಿಗೆ ಅಗತ್ಯವಿರುವ ಅಭಿವೃದ್ಧಿ ವೆಚ್ಚದಲ್ಲಿ 100 ಕೋಟಿ ಹಣವನ್ನು ಕೆಕೆಆರ್ ಡಿಬಿ ಭರಿಸಲಿದ್ದು, ಉಳಿದ 100.07 ಕೋಟಿಯನ್ನು ಕೆಎಸ್‌ಎಸ್‌ಐಡಿಸಿ ಒದಗಿಸಲಿದೆ. 2025-26ನೇ ಸಾಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಈ ಅನುದಾನ ಮೀಸಲಿಡಲಾಗಿದೆ ಎಂದರು.

ಕೈಗಾರಿಕಾ ನಿವೇಶನಗಳ ಹಂಚಿಕೆಯಲ್ಲಿ ಸರ್ಕಾರದ ನಿಯಮಾನುಸಾರ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸಲಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ ಸಿಐ 76/2019, ದಿನಾಂಕ 22-11-2023ರ ಅನ್ವಯ ಪಾರದರ್ಶಕ ನಿಯಮಗಳಡಿ ನಿವೇಶನ ಹಂಚಿಕೆ ಪ್ರಕ್ರಿಯೆ ನಡೆಯಲಿದೆ ಎಂದು ಅವರು ಹೇಳಿದರು.

> **ಈ ಯೋಜನೆಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಸಿಗಲಿದ್ದು, ಸ್ಥಳೀಯ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.**
> ■ ಡಾ.ಅಜಯ್ ಧರ್ಮಸಿಂಗ್, ಕೆಕೆಆರ್ ಡಿಬಿ ಅಧ್ಯಕ್ಷ, ಜೇವರ್ಗಿ ಶಾಸಕ

ಜಾತ್ರೆಗಳಿಂದ ಭಕ್ತಿ, ಪರಂಪರೆ, ಒಗ್ಗಟ್ಟು: ಮಾಮನಿ



• ಸವದತ್ತಿ: ಐತಿಹಾಸಿಕ ಗ್ರಾಮದೇವಿ ಜಾತ್ರಾ ಮಹೋತ್ಸವ ಸಮಾಜದಲ್ಲಿ ಭಕ್ತಿ, ಪರಂಪರೆ ಹಾಗೂ ಪರಸ್ಪರ ಒಗ್ಗಟ್ಟನ್ನು ಬೆಳೆಸುವ ಮಹತ್ವದ ಉತ್ಸವವಾಗಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷ ವಿರೂಪಾಕ್ಷ ಮಾಮನಿ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಧಾರ್ಮಿಕ ಸಭೆ ಹಾಗೂ ಸಾಂಸ್ಕೃತಿಕ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತ್ರೆಯು ಕೇವಲ ಧಾರ್ಮಿಕ ಆಚರಣೆಯಲ್ಲ, ಜನರ ಮನಸ್ಸುಗಳನ್ನು ಒಂದಾಗಿಸುವ ಶಕ್ತಿ ಹೊಂದಿದೆ. ಎಲ್ಲ ಸಮುದಾಯದ ಜನರು ಒಂದೇ ವೇದಿಕೆಯಲ್ಲಿ ಸೇರಿ ಗ್ರಾಮದೇವಿಯರ ಆಶೀರ್ವಾದ ಪಡೆಯುತ್ತಿರುವುದು ಸಮಾಜದ ಸೌಹಾರ್ದತೆಯ ಸಂಕೇತವಾಗಿದೆ ಎಂದು ಹೇಳಿದರು.

ಶಾಸಕ ಹಾಗೂ ಜಾತ್ರಾ ಕಮಿಟಿ ಗೌರವಾಧ್ಯಕ್ಷ ವಿಶ್ವಾಸ ವೈದ್ಯ ಮಾತನಾಡಿ, ಗ್ರಾಮದೇವಿ ಜಾತ್ರಾ ಮಹೋತ್ಸವ ಸವದತ್ತಿಯ ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವ ಮಹೋತ್ಸವವಾಗಿದೆ. ಲಕ್ಷಾಂತರ ಭಕ್ತರು ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಮೂಲಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಜಾತ್ರೆಯನ್ನು ಶಾಂತಿಯುತ ಹಾಗೂ ಯಶಸ್ವಿಯಾಗಿ ನಡೆಸಲು ಸಾರ್ವಜನಿಕರು, ವಿವಿಧ ಸಮಿತಿಗಳು ಹಾಗೂ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು.

ಧಾರ್ಮಿಕ ಸಭೆಗೆ ಮುರಘಾಮಠ ಧಾರವಾಡದ ಶ್ರೀ ಮ.ನಿ.ಪ್ರ ಡಾ.ಮಲ್ಲಿಕಾರ್ಜುನ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಹಿರೇಮಠ ಹೂಲಿ-ಪಂಚಗೃಹ ಹಿರೇಮಠ ಸುಳ್ಳದ ಶ್ರೀ ಷ.ಬ್ರ.ಶಿವಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಮೊರಬ ಜಡಿಮಠದ ಶ್ರೀ ಷ.ಬ್ರ.ಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಧರ್ಮ ಹಾಗೂ ಆಧ್ಯಾತ್ಮಿಕ ಬದುಕಿನ ಮಹತ್ವ ಕುರಿತು ಉಪದೇಶ ನೀಡಿದರು. ದೊಡವಾಡ ಹಿರೇಮಠದ ಶ್ರೀ ಷ.ಬ್ರ. ಜಡೆಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ನರಗುಂದ ಶಾಸಕ ಸಿ.ಸಿ.ಪಾಟೀಲ, ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ, ಪ್ರೀತಿ ದೊಡ್ಡವಾಡ, ವಿಜಯ ಮೆಟಗುಡ್ ಹಾಗೂ ಬೆಳಗಾವಿ ಗ್ರಾಮೀಣ ಬಿಜೆಪಿ ಜಿಲ್ಲಾ ಅಧ್ಯಕ್ಷ ಸುಭಾಸಗೌಡ ಪಾಟೀಲ ಭಾಗವಹಿಸಿ ಜಾತ್ರೆಯ ವೈಭವಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸುಭಾಸ ರಜಪೂತ, ಪ್ರವೀಣ ಪಟ್ಟಣಶೆಟ್ಟಿ, ಪ್ರಭು ಪ್ರಭುನವರ, ಮದನಲಾಲ ಚೋಪ್ರಾ, ಡಾ.ಎನ್.ಸಿ.ಬೆಂಡಿಗೇರಿ, ಡಾ.ವೈ. ಎಂ.ಯಾಕೊಳ್ಳಿ, ಶಿವಾನಂದ ತಾರಿಹಾಳ, ಎಂ.ಪಿ.ಪಾಟೀಲ, ಗಿರೀಶ ಮುನೋಳಿ, ಹುಸೇನಸಾಬ ನದಾಫ್ ಇದ್ದರು.

ಮಧ್ಯಾಹ್ನ ಕಾಲಕಾಲೇಶ್ವರ ಕಲಾ ಮತ್ತು ಸಾಂಸ್ಕೃತಿಕ ಸಂಸ್ಥೆ ಹೊಸ ಗಬ್ಬೂರ ಹುಬ್ಬಳ್ಳಿ ತಂಡದಿಂದ ಮೆಲೋಡಿ ಆರ್ಕೆಸ್ಟ್ರಾ ರಸಮಂಜರಿ ಜರುಗಿತು. ರಾತ್ರಿ ದಯಾನಂದ ಬೀಳಗಿ, ಹರೀಶ ಹಾಗೂ ಸಂಗಡಿಗರಿಂದ ನಾಟಕ ಪ್ರದರ್ಶನ ನಡೆದಿದ್ದು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ವಿಪತ್ತು ಯಾರನ್ನು ತಟ್ಟುವುದಿಲ್ಲ?

ಜಿತೇಂದ್ರಿಯನನ್ನು ಮತ್ತು ಜ್ಞಾನ ಮತ್ತು ವಯಸ್ಸಿನಿಂದ ಕೂಡಿದ ವೃದ್ಧರ ಮಾತನ್ನು ಕೇಳುವವನನ್ನು.

ವಿಪತ್ತು, ಆಪತ್ತು, ತೊಂದರೆ, ತಾಪತ್ರಯ, ವಿಘ್ನ ಇವುಗಳೆಲ್ಲವೂ ಪರ್ಯಾಯಪದಗಳು. ಇವು ಬರಲು ಏನು ಕಾರಣ? ಮತ್ತು ಇವು ಬರದಿರಲು ಏನು ಕಾರಣ ಎಂಬ ವಿಷಯ ಈ ಪ್ರಶ್ನೋತ್ತರದಲ್ಲಿ ಅಡಕವಾಗಿದೆ.

ಒಬ್ಬ ಜಿತೇಂದ್ರಿಯನಾದವನು ಮತ್ತು ಯಾರಲ್ಲಿ ಜ್ಞಾನವಿದೆಯೋ ಮತ್ತು ವಯಸ್ಸಿನಿಂದಲೂ ಶ್ರೇಷ್ಠನಾಗಿದ್ದಾನೋ ಅಂತವರಿಗೆ ಗೌರವವನ್ನು ಕೊಡುವವನು ವಿಪತ್ತಿಗೆ ಒಳಗಾಗುವುದಿಲ್ಲ ಎಂಬುದಾಗಿ ಇಲ್ಲಿ ಹೇಳಲಾಗಿದೆ. ಇವು ಆಪತ್ತನ್ನು ದೂರ ಮಾಡುತ್ತವೆ ಎಂಬುದಾಗಿ ಅರ್ಥ. ಅತ್ಯಂತ ಸುಲಭವಾದ ಉತ್ತರ. ಒಂದು ಮಾತು ಹೀಗಿದೆ -''ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ'' ಎಂಬುದಾಗಿ. ಇದು ಇಂದ್ರಿಯ ಜಯವನ್ನು ಸಾರುವ ಗಾದೆಮಾತಾಗಿದೆ. ಊಟವನ್ನು ಹೇಗೆ ಮಾಡಬೇಕು? ಯಾವಾಗ ಮಾಡಬೇಕು? ಯಾವುದನ್ನು ಮಾಡಬೇಕು? ಎಂಬುದರ ಬಗ್ಗೆ ಇರುವ ಪರಿಜ್ಞಾನ. ಇದು ಊಟವನ್ನು ಉಚಿತವಾಗಿಯೂ ಉತ್ತಮವಾಗಿಯೂ ಮಾಡುವ ಬಗೆಗೆ ಇರುವ ಜ್ಞಾನ. ಅಂದರೆ ಆಯುರ್ವೇದ ಊಟದ ಬಗ್ಗೆ ಹೀಗೆ ಹೇಳುತ್ತದೆ - 'ಹಸಿದಾಗ ಊಟ ಮಾಡು, ದಿನಕ್ಕೆ ಎರಡು ಹೊತ್ತು ಊಟ ಮಾಡು' ಎಂದು. ಆದರೆ ನಾವಿಂದು ನಮ್ಮ ಇಂದ್ರಿಯಚಾಪಲ್ಯದಿಂದ ಅಕಾಲದಲ್ಲಿ ಅನುಚಿತವಾಗಿ ಊಟವನ್ನು ಮಾಡುತ್ತಿದ್ದೇವೆ. ಅಂದರೆ ನಮ್ಮ ಇಂದ್ರಿಯ ಚಾಪಲ್ಯ ಮಿತಿಮೀರಿದೆ ಎಂಬುದು ಇದರ ತಾತ್ಪರ್ಯ. ಇದರಿಂದಾಗಿ ನಮಗಿಂದು ರೋಗಬಾಧೆಯು ಉಂಟಾಗಿದೆ. ಮಾತನಾಡುವಾಗ ಹೇಗೆ ಮಾತನಾಡಬೇಕು? ಎಷ್ಟು ಮಾತನಾಡಬೇಕು? ಯಾವುದನ್ನು ಮಾತನಾಡಬೇಕು? ಯಾವ ಶಬ್ದವನ್ನು ಉಪಯೋಗಿಸಿ ಮಾತನಾಡಿದರೆ ಅದು ಎಷ್ಟು ಉಚಿತವಾಗುತ್ತದೆ? ಎಂಬಿತ್ಯಾದಿ ವಿಷಯವನ್ನು ಅರಿಯುವುದೇ ಮಾತಿನ ಬಗೆಗಿನ ಜಯ ಎಂಬುದಾಗಿ ಭಾವಿಸಬೇಕು. ಹಾಗೆ ಮಾತನಾಡುವವನಿಗೆ ಜಗಳ ಅಸಾಧ್ಯ. ಹಾಗಾಗಿ ಇಲ್ಲಿ ಒಂದು ಕರ್ಮೇಂದ್ರಿಯ, ಇನ್ನೊಂದು ಜ್ಞಾನೇಂದ್ರಿಯದ ಪರಿಮಿತಿಯನ್ನು ಮತ್ತು ಅದರ ಸಾಧಕತೆಯನ್ನು ವಿವರಿಸಲಾಗಿದೆ. ಹೀಗಿದ್ದಾಗ ಅವನಿಗೆ ರೋಗ ಬರುವುದೆಂತು? ಹೀಗಿದ್ದಾಗ ಅವನಿಗೆ ಜಗಳವಾಗುವುದೆಂತು? ಜಗಳಕ್ಕೂ ರೋಗಕ್ಕೂ ಅವಕಾಶವೇ ಇಲ್ಲವಾದಂತಾಗುತ್ತದೆ. ಇದು ಆಪತ್ತಿನ ನಿವಾರಣೆ ಅಲ್ಲವೇ?

ಇನ್ನೊಂದು ಅತಿಮುಖ್ಯವಾದ ವಿಷಯ - ಜ್ಞಾನವೃದ್ಧರಿಗೂ ಮತ್ತು ವಯೋವೃದ್ಧರಿಗೂ ಕೊಡುವಂತಹ ಗೌರವ ಮತ್ತು ಅವರು ಹೇಳುವುದನ್ನು ಕೇಳುವುದಾಗಿದೆ. ಇದೂ ಕೂಡ ನಮ್ಮ ಆರೋಗ್ಯಕ್ಕೆ ಅನುಕೂಲಕರ ಎಂಬುದಾಗಿ ತಿಳಿಯಬೇಕು. ಎಲ್ಲವನ್ನೂ ನಾವೇ ಮಾಡಿ ತಿಳಿಯಲು ಅಸಾಧ್ಯ. ಹಾಗಾಗಿ ಮಾಡಿ ತಿಳಿದವರಿಂದ ಒಂದಷ್ಟನ್ನು ತಿಳಿಯಬಹುದು. ಅಥವಾ ಓದಿ ಕಲಿತವರಿಂದ ನಾವು ತಿಳಿದರೆ ಅಷ್ಟು ಸಾಧನೆಯ ಸಮಯ ನಮಗೆ ಉಳಿಯುವುದಾಗುತ್ತದೆ. ಮತ್ತು ಅವರಿಗೆ ಗೌರವವನ್ನು ಸಲ್ಲಿಸಿದಂತಾಗುತ್ತದೆ. ಅಷ್ಟೇ ಅಲ್ಲ, ಅದರಿಂದ ನಮಗೆ ಆಪ್ಯಾಯನವೊದಗುವುದೂ ಆದಂತಾಗುತ್ತದೆ. ಹಾಗಾಗಿ ಹಿರಿಯರ ಮಾತನ್ನು ಕೇಳುವುದು ಅತ್ಯಂತ ಸೌಜನ್ಯದ ಸಂಕೇತ ಎಂಬುದಾಗಿ ಎಲ್ಲ ಕಡೆ ಸಾರಲಾಗಿದೆ. ಆಯುಷ್ಯ, ವಿದ್ಯೆ, ಯಶಸ್ಸು ಮತ್ತು ಬಲ ಈ ನಾಲ್ಕೂ ಕೂಡ ವೃದ್ಧರನ್ನು ಗೌರವಿಸುವುದರಿಂದ ಬರುತ್ತದೆ ಎಂಬುದಾಗಿ ಒಂದು ಸುಭಾಷಿತವೂ ಕೂಡ ಸಾರುತ್ತದೆ. ಈ ಬಗೆಯ ವ್ಯಕ್ತಿಗೆ ಯಾವ ಬಗೆಯ ತೊಂದರೆ, ತಾಪತ್ರಯ, ವಿಘ್ನಗಳು ಇರುವುದಿಲ್ಲ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಅಪ್ಪನಿಗೆ ಉತ್ತರಕ್ರಿಯೆ-ಮಗನಿಗೆ ಪಟ್ಟಾಭಿಷೇಕ

ಕೃಷ್ಣನ ಕೃಪೆಯಿಂದಾಗಿ ಸೆರೆಯಿಂದ ಬಿಡುಗಡೆಹೊಂದಿದ ಅರಸರು ತಮ್ಮ ಕೃತಜ್ಞತೆಯ ನುಡಿಯನ್ನು ಹೀಗೆ ಮುಗಿಸಿದರು:

''ನಮ್ಮಿಷ್ಟು ಮಂದಿಗೆ ನೀ ದಯಪಾಲಿಸಿದ ಈ ಸ್ವಾತಂತ್ರ್ಯದಿಂದಾಗಿ, ದೀಪ್ತವಾದ ಯಶಸ್ಸು – ಎಂದರೆ ಬೆಳಗುವ ಕೀರ್ತಿಯು – ನಿನಗೆ ಲಬ್ಧವಾಯಿತು, ಓ ಯದುನಂದನನೇ! ಕೃತಜ್ಞರಾದ ನಮಗೆ ನಿನ್ನ ಅಪ್ಪಣೆಯಾಗಬಹುದು: ಅದೆಂತಹ ಕಷ್ಟವಾದ ಕಾರ್ಯವೇ ಆದರೂ ರಾಜರುಗಳಾದ ನಾವು ನೆರವೇರಿಸಿಕೊಡುವೆವು.

ಅವರು ಹೀಗೆ ಹೇಳಲಾಗಿ, ಮಹಾಮನಸ್ಕನಾದ ಕೃಷ್ಣನು, ಅವರಿಗೆ ಆಶ್ವಾಸನೆ ಕೊಡುತ್ತಾ ಹೀಗೆ ಹೇಳಿದನು: ರಾಜರೇ, ಯುಧಿಷ್ಠಿರನು ರಾಜಸೂಯ-ಯಜ್ಞವನ್ನು ಮಾಡಲು ಇಷ್ಟಪಟ್ಟಿದ್ದಾನೆ. ಆತನ ಪ್ರವೃತ್ತಿಯು ಧರ್ಮಮಯವಾದುದು. ಆತನು ಸಮ್ರಾಟ್ – ಎಂಬ ಪದವಿಯನ್ನು ಸಂಪಾದಿಸಿಕೊಳ್ಳಲು ಬಯಸಿದ್ದಾನೆ. ಇದನ್ನರಿತು ನೀವೆಲ್ಲರೂ ಆತನಿಗೆ ಸಾಹಾಯ್ಯವನ್ನು ಮಾಡಿರಿ. ಆಗ ಆ ರಾಜರೆಲ್ಲರೂ ತುಂಬ ಸಂತೋಷಗೊಂಡರು. ಆತನ ಮಾತನ್ನೊಪ್ಪಿ, ಹಾಗೆಯೇ ಆಗಲಿ ಎಂದು ಒಪ್ಪಿಗೆ ಸೂಚಿಸಿದರು. ಅನೇಕ ರತ್ನಗಳನ್ನು ಕೃಷ್ಣನಿಗೆ ಸಲ್ಲಿಸಿದರು. ಅವರ ಮೇಲಿನ ಕರುಣೆಯಿಂದ, ಮತ್ತು ಅವರ ಒತ್ತಾಯಕ್ಕೆ ಮಣಿದು, ಕೃಷ್ಣನು ಅವನ್ನು ಸ್ವೀಕರಿಸಿದನು. ಆ ಬಳಿಕ ಜರಾಸಂಧ-ಪುತ್ರನಾದ ಸಹದೇವನು, ತನ್ನ ಪುರೋಹಿತನನ್ನು ಮುಂದಿಟ್ಟುಕೊಂಡು, ಮಂತ್ರಿಗಳೊಂದಿಗೆ ನಗರದಾಚೆಗೆ ಹೊರಟನು. ವಾಸುದೇವನಲ್ಲಿಗೆ ಬಂದು ಅತ್ಯಂತ-ನಮ್ರತೆಯಿಂದ ನಮಸ್ಕರಿಸಿದನು. ಮತ್ತು ಹೇಳಿದನು: ನರಶ್ರೇಷ್ಠನೇ, ನನ್ನ ತಂದೆ ಮಾಡಿದುದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಳ್ಳಬೇಡ. ನಾನು ನಿನಗೆ ಶರಣನಾಗಿದ್ದೇನೆ. ನನ್ನ ವಿಷಯದಲ್ಲಿ ಪ್ರಸನ್ನನಾಗು. ನನ್ನ ತಂದೆಯ ಸಂಸ್ಕಾರವನ್ನು ನಾನು ಮಾಡಲಿಚ್ಛಿಸುತ್ತೇನೆ. ಅದಕ್ಕಾಗಿ ನಿನ್ನಿಂದಲೂ ಭೀಮಾರ್ಜುನರಿಂದಲೂ ಅನುಮತಿಯನ್ನು ಯಾಚಿಸುತ್ತೇನೆ. ಮುಂದೆ ನಾನು ಯಥೇಚ್ಛವಾಗಿ ಹಾಗೂ ಸುಖವಾಗಿ ಓಡಾಡಿಕೊಂಡಿರಲು ನಿಮ್ಮಿಂದ ಅಭಯವನ್ನು ಯಾಚಿಸುತ್ತಿದ್ದೇನೆ. ಸಹದೇವನ ಈ ಮಾತುಗಳಿಂದ ಕೃಷ್ಣನೂ ಭೀಮಾರ್ಜುನರೂ ಸಂತೋಷಗೊಂಡರು. ನಿನ್ನ ತಂದೆಗೆ ಸಂಸ್ಕಾರವನ್ನು ನೀ ಮಾಡಪ್ಪಾ – ಎಂದರು. ಆತನೂ ಅಂತೆಯೇ ಒಡನೆಯೇ ನಗರವನ್ನು ಪ್ರವೇಶಿಸಿದನು. ಮಂತ್ರಿಗಳೊಂದಿಗೆ ಸೇರಿ ಚಿತೆಯನ್ನೇರ್ಪಡಿಸಿದನು.

ಚಿತೆಗಾಗಿ ಚಂದನದ ಕಟ್ಟಿಗೆಗಳು, ದೇವದಾರು, ಕಾಲಾಗರು(ಎಂದರೆ ಕಪ್ಪುಬಣ್ಣದ ಅಗರು)ವೆಂಬ ಸುಗಂಧ, ಬಗೆಬಗೆಯ ತೈಲಗಳು, ತುಪ್ಪದ ಧಾರೆ, ಇವುಗಳನ್ನು ಬಳಸಲಾಯಿತು. ಆಮೇಲೆ ಉರಿಯುತ್ತಿದ್ದ ಆ ಜರಾಸಂಧನ ಕಾಯದ ಸುತ್ತಲೂ ಅಕ್ಷತೆಯ ಕಾಳುಗಳು ಹಾಗೂ ಹೂಗಳ ಮಳೆಯನ್ನೇ ಕರೆಯಲಾಯಿತು.

ಬಳಿಕ, ಸಹದೇವನು ತನ್ನ ತಮ್ಮಂದಿರೊಂದಿಗೆ ಜಲಾಂಜಲಿಯನ್ನಿತ್ತನು. ಹೀಗೆ ತಂದೆಗೆ ಸ್ವರ್ಗ-ಗತಿಗಾಗಿ ಮಾಡಬೇಕಾದುದನ್ನು ಮಾಡಿ, ಮತ್ತೆ ಶ್ರೀಕೃಷ್ಣನೂ ಭೀಮಾರ್ಜುನರೂ ಇರುವೆಡೆಗೆ ಬಂದನು. ಹಾಗೂ ಕೈಜೋಡಿಸಿ ನಮ್ರತೆಯಿಂದ ಕೃಷ್ಣನಲ್ಲಿ ಹೀಗೆ ವಿಜ್ಞಾಪನೆ ಮಾಡಿಕೊಂಡನು: ಇದೋ ಭೂರಿಯಾದ ರತ್ನಗಳು ಇವು. ಇದೋ ಗೋವುಗಳು, ಆಡು-ಮೇಕೆಗಳು, ಮಹಿಷಗಳು, ಆನೆಗಳು ಹಾಗೂ ಕುದುರೆಗಳು, ಹಾಗೂ ಬಗೆಬಗೆಯ ವಸ್ತ್ರಗಳು. ಇವೆಲ್ಲವನ್ನೂ ಧರ್ಮರಾಜನಿಗೆ ಕೊಡೋಣವಾಗಲಿ. ಅಥವಾ ನಿನಗೆ ಬೇರೆ ಬಗೆಯು ತೋರಿದರೆ ಹಾಗೂ ಮಾಡಬಹುದು ಎಂದನು. ಹೆದರಿಕೆಯಿಂದ ತತ್ತರಿಸಿದ್ದ ಆತನಿಗೆ ಕೃಷ್ಣನು ಅಭಯವನ್ನಿತ್ತನು. ಆ ಮಹಾರ್ಹವಾದ, ಎಂದರೆ ಬಹುಬೆಲೆಬಾಳುವ, ರತ್ನಗಳನ್ನು ಸ್ವೀಕರಿಸಿದನು. ಹಾಗೂ ಅಲ್ಲಿಯೇ ಸಹದೇವನ ಪಟ್ಟಾಭಿಷೇಕವನ್ನೂ ನೆರವೇರಿಸಿದನು. ಭೀಮಾರ್ಜುನರು ಆತನನ್ನು ಸತ್ಕರಿಸಿದರು. ಸಂತೃಪ್ತನಾದ ಜಾರಾಸಂಧಿಯು, ಎಂದರೆ ಜರಾಸಂಧ-ಪುತ್ರನು, ತನ್ನ ತಂದೆಯ ನಗರವನ್ನು ಮಹಾತ್ಮರೊಂದಿಗೆ ಪ್ರವೇಶಿಸಿದನು.

ಅಂತ್ಯೇಷ್ಟಿಯ ಅವಾಂತರಗಳು



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

ಆಪ್ತೀಯರೊಬ್ಬರು ನಿಧನರಾದ ಸುದ್ದಿ ಕೇಳಿದ ವೆಂಕಟ್ರಾಮ ಭಟ್ಟರು ಅಂತಿಮ ದರ್ಶನ ಪಡೆಯಲೆಂದು ಮೃತರ ಮನೆಯನ್ನು ತಲುಪಿದಾಗ ರಾತ್ರಿಯಾಗಿತ್ತು. ಮರುದಿನದ ಅಂತ್ಯಸಂಸ್ಕಾರದವರೆಗೆ ಮೃತರ ಮನೆಯಲ್ಲಿಯೇ ಉಳಿಯುವುದೆಂದು ತೀರ್ಮಾನಿಸಿದ ಭಟ್ಟರು ವೆರಾಂಡದಲ್ಲಿಯೇ ಚಾಪೆಯೊಂದನ್ನು ಹಾಸಿಕೊಂಡು, ಪಂಚೆಯೊಂದನ್ನು ಹೊದ್ದು ಮಲಗಿದರು. ಸರಿರಾತ್ರಿಯಲ್ಲಿ ಸೊಳ್ಳೆಕಾಟ ಹೆಚ್ಚಾದ್ದರಿಂದ ತಲೆ ಮುಚ್ಚುವವರೆಗೆ ಹೊದ್ದು ಮಲಗಿದರು.

ಬೆಳಗಿನ ಜಾವದಲ್ಲಿ ಮೃತರನ್ನು ಕಾಣಲು ಬಂದವರು ವೆರಾಂಡದಲ್ಲಿ ಅಲುಗದೆ ಮಲಗಿದ್ದ ಭಟ್ಟರಿಗೆ ಮಾಲಾರ್ಪಣೆ ಮಾಡಿ, ಊದಿನ ಕಡ್ಡಿಯನ್ನು ಹಚ್ಚಿ ಪಕ್ಕದಲ್ಲಿರಿಸುತ್ತಿದ್ದಾಗ ಭಟ್ಟರು ಕೊಂಚ ಅಲುಗಾಡಿದರು. ಭೀತಿಗೊಂಡ ಮೃತರ ಆಪ್ತರು ಕಿರುಚಿದ ಸದ್ದಿಗೆ ಮನೆಯವರು ಹೊರಗಿಣುಕಿ, ''ಓಹ್! ಸತ್ತಿರುವವರು ಅವರಲ್ಲ, ಒಳಗಿದ್ದಾರೆ ಬನ್ನಿ'' ಎಂದು ಕರೆದರು.

ವೆಂಕಟ್ರಾಮ ಭಟ್ಟರಿಗೆ ಇದ್ದಾಗಲೇ ಹೊಗೆ ಹಾಕಿಸಿಕೊಳ್ಳುವ ಯೋಗ!

ಸಾವಿನ ಮನೆಯಲ್ಲಿ ಹೀಗೆ ನಡೆದಿದ್ದರೆ ಮಸಣದಲ್ಲಿ ಕಾರ್ಯ ನಡೆಸುತ್ತಿದ್ದ ಸಮಯದಲ್ಲಿ ನಡೆದ ಪ್ರಸಂಗವೊಂದನ್ನು ಪರಾಂಬರಿಸಿ :

''ಗೋತ್ರ ಯಾವುದು?''

''ಕಾಶ್ಯಪ''

''ಪ್ರವರ?''

ನನ್ನ ಸೋದರಮಾವನು ತನ್ನ ಅಕ್ಕನ ಅಂತ್ಯಸಂಸ್ಕಾರಕ್ಕೆಂದು ಶಾಸ್ತ್ರಿಗಳ ಮುಂದೆ ಕುಳಿತಿದ್ದ. ಶಾಸ್ತ್ರಿಗಳು ಮೇಲ್ಕಂಡ ಪ್ರಶ್ನೆಗಳನ್ನು ಅವನತ್ತ ಒಗೆಯುತ್ತಿದ್ದರು. ಎಲ್ಲಕ್ಕೂ ಉತ್ತರಿಸುತ್ತಿದ್ದ ಮಾವನು ಪ್ರವರವನ್ನೂ ಒಪ್ಪಿಸಿದ.

''ಹೆಸರು?''

ಹೇಳಿದ. ಬುಲೆಟ್ ಟ್ರೈನ್ ವೇಗದಲ್ಲಿ ಮಂತ್ರಗಳನ್ನು ಮಣಮಣಿಸುತ್ತಾ ಶಾಸ್ತ್ರಿಗಳು ಅಂತ್ಯಕರ್ಮಗಳನ್ನು ಮುಗಿಸಿದರು. ಮಸಣದಿಂದ ಹೊರಡುವಾಗ ''ಏಳನೆಯ ದಿನದಿಂದ ಕಾರ್ಯಗಳನ್ನು ಆರಂಭಿಸೋಣ. ನಿಮ್ಮ ಫೋನ್ ನಂಬರ್ ಕೊಡಿ'' ಎಂದ ಶಾಸ್ತ್ರಿಗಳು ಇವನು ಹೇಳಿದ ಸಂಖ್ಯೆಗಳನ್ನು ತಮ್ಮ ಮೊಬೈಲಲ್ಲಿ ಫೀಡ್ ಮಾಡಿಕೊಂಡು, ಮತ್ತೆ ''ಹೆಸರು?'' ಎಂದರು.

''ಕಿರಣ್.''

''ತೀರಿಕೊಂಡವರ ಹೆಸರನ್ನೂ ಕಿರಣ್ ಅಂತ ಹೇಳಿದಿರಲ್ಲ!'' ಶಾಸ್ತ್ರಿಗಳಿಗೆ ಏನೋ ಅನುಮಾನ. ''ನೀವೆಲ್ಲಿ ಕೇಳಿದಿರಿ ಅವಳ ಹೆಸರನ್ನು?'' ಮಾವ ಗೊಂದಲಕ್ಕೆಬಿದ್ದ. ''ಅಷ್ಟು ಚೆನ್ನಾಗಿ ಹೆಸರು, ಗೋತ್ರ, ಪ್ರವರ ಎಲ್ಲಾ ಕೇಳಿದೆನಲ್ಲ ಸ್ವಾಮಿ!''

''ಅವೆಲ್ಲ ನನ್ನವೇ. ನನ್ನಕ್ಕನ ಹೆಸರು ನಾಗವೇಣಿ.''

ಶಾಸ್ತ್ರಿಗಳು ತಲೆಯ ಮೇಲೆ ಕೈಹೊತ್ತರು. ''ದೈವೇಚ್ಛೆ'' ಎನ್ನುತ್ತಾ ಮುಂದೆ ಸಾಗಿದರು. ಅವಸರದ ಶಾಸ್ತ್ರಿಗಳು ನನ್ನ ದೊಡ್ಡಮ್ಮನ ಅಂತ್ಯಸಂಸ್ಕಾರದ ಬದಲು ಕಲ್ಲುಗುಂಡಿನಂತೆ ಕುಳಿತಿದ್ದ ನನ್ನ ಮಾವನ ಅಂತ್ಯಸಂಸ್ಕಾರವನ್ನು ಮುಗಿಸಿದ್ದರು!

''ಹೀಗಾಗ್ಹೋಯ್ತಲ್ಲ ಶಾಸ್ತ್ರಿಗಳೆ! ಮಾವನಿಗೇನೂ ತೊಂದರೆ ಆಗುವುದಿಲ್ಲವೆ?'' ಎಂದು ಕೇಳಿದೆ.

''ಮಾವನ ವಿಷಯ ಮುಂಡಾಮೋಚ್ತು! ನನ್ನ ವಿಷಯ ಹೇಳಯ್ಯಾ! 'ನನ್ನ ಗತಿ ಏನು ಶಾಸ್ತ್ರಿಗಳೇ?' ಅಂತ ನಿನ್ನ ದೊಡ್ಡಮ್ಮನ ಆತ್ಮ ಈವತ್ತು ರಾತ್ರಿ ನನ್ನ ಕನಸಲ್ಲಿ ಬಂದು ಕಾಡಿದರೆ ಏನು ಉತ್ತರ ಹೇಳೋದಯ್ಯ!''

ಶಾಸ್ತ್ರಿಗಳದು ನಿಜಕ್ಕೂ ಒರಿಜಿನಲ್ ಟ್ರಬಲ್!

ಕಿರಣನ ಕಥೆ ಇಂತಾದರೆ ಕಿರಣನ ಸ್ನೇಹಿತ ಪರೋಪಕಾರಿ ಪಾಪಣ್ಣನದು ಮತ್ತೊಂದು ವಿಧದ ಕಥೆ. ಯಾರೇ ಸತ್ತರೂ ಹೆಗಲು ಕೊಡಲು ಮುಂದಾಗುತ್ತಿದ್ದ ಅವನು ಅಂದು ತನ್ನ ನೆರೆಮನೆಗೆ ಹೊಸದಾಗಿ ಬಂದಿದ್ದ ಹಿರಿಯರು ಕಂತೆ ಒಗೆದಾಗ ತಾನೇ ಮಸಣಕ್ಕೆ ಮುಂದಾಗಿ ಹೋಗಿ, ಹಣ ಕಟ್ಟಿ, ರಸೀದಿ ಪಡೆದುದಲ್ಲದೆ, ಕಾರ್ಪೊರೇಷನ್ನಿಗೆ ಓಡಾಡಿ ಡೆತ್ ಸರ್ಟಿಫಿಕೇಟನ್ನೂ ಪಡೆದೊಯ್ದು ನೆರೆಮನೆಯವರ ಕೈಗಿತ್ತ.

''ಏನಿದು?''

''ಡೆತ್ ಸರ್ಟಿಫಿಕೇಟು.''

''ಯಾರದು?''

''ನಿಮ್ಮ ತಂದೆಯವರದು.''

''ಯಾವಾನ್ಹೇಳಿದ್ದು?''

''ಅಂದರೆ...?''

''ನನ್ನ ತಂದೆಯವರ ಹೆಸರು ಕೃಷ್ಣಾಚಾರ್. ಅವರ ತಂದೆಯ ಹೆಸರು ಭೀಮಾಚಾರ್.''

''ಈಗ ಏನಾಗಿದೆ ಸಾರ್?'' ಪಾಪಣ್ಣನಿಗೆ ಏನೋ ವ್ಯತ್ಯಾಸವಾಗಿರುವುದರ ವಾಸನೆ ಬಡಿಯಿತು. ''ರಾಮಾಚಾರ್ ಸನ್ ಆಫ್ ಕೃಷ್ಣಾಚಾರ್ ಅಂತ ಸರ್ಟಿಫಿಕೇಟ್ ಮಾಡಿಸಿದ್ದೀರಿ.''

''ತಪ್ಪಾ ಸಾರ್?''

''ಮತ್ತೇನ್ರೀ! ರಾಮಾಚಾರ್ ನಾನೇ!''

ಮುಂದೆ ರಾಮಾಚಾರ್ ಆಡಿದ ಮಾತುಗಳು ಯಾವುದೇ ಪೀತಪತ್ರಿಕೆಯೂ ಪ್ರಿಂಟ್ ಮಾಡಲು ಆಗದಷ್ಟು ಹೊಲಸಾಗಿದ್ದವು.

ಕರ್ಮ ಮಾಡುವ ಸ್ಥಳಗಳಲ್ಲಿಯೂ ವಿಚಿತ್ರ ಸನ್ನಿವೇಶಗಳನ್ನು ಕಾಣಬಹುದು. ಚಾರ್ ಧಾಮ್ ಯಾತ್ರೆಯ ಅಂಗವಾಗಿ ಅಂದು ನಾವುಗಳು ಬದರಿನಾಥವನ್ನು ತಲುಪಿದ್ದೆವು. ನನ್ನೊಡನೆ ಬಂದಿದ್ದ ಹಿರಿಯರೊಬ್ಬರು ತಮ್ಮ ಪಿತೃಗಳಿಗಾಗಿ ಪಿಂಡಪ್ರದಾನ ಮಾಡಿಸಲೆಂದು ಅಲ್ಲಿನ ಪುರೋಹಿತರನ್ನು ನೇಮಿಸಿಕೊಂಡರು. ನದಿಯ ಬದಿಯ ಪಾವಟಿಗೆಗಳ ಮೇಲೆ ಕುಳಿತ ಹಿರಿಯರು ತಾವು ಕಟ್ಟಿದ್ದ ಪಿಂಡದುಂಡೆಗಳನ್ನು ಸಾಲಾಗಿ ಇರಿಸಿದ್ದರು. ಪುರೋಹಿತರಿಗೆ ಕೊಡಬೇಕಾದ ದಕ್ಷಿಣೆಯನ್ನು ಮರೆತಿದ್ದರಿಂದ, ಅದನ್ನು ತರಲೆಂದು ತಮ್ಮ ಬಟ್ಟೆಗಳಿದ್ದ ಸ್ಥಳಕ್ಕೆ ಹೋಗಿ ಬರುವಷ್ಟರಲ್ಲಿ ಪಕ್ಕದವನು ಇವರು ಕಟ್ಟಿದ್ದ ಪಿಂಡಗಳಲ್ಲಿ ಒಂದೆರಡನ್ನು ಹಾರಿಸಿಕೊಂಡಿದ್ದ.

''ಎಲ್ಲಿ ನನ್ನ ಪಿಂಡ?'' ಎಂದರು ಹಿರಿಯರು.

''ಅದನ್ನು ನಿಮ್ಮ ಮಕ್ಕಳು ಆಮೇಲೆ ಇಡುತ್ತಾರೆ'' ಎಂದ ಪಿಂಡಾಪಹಾರಿ.

''ಅವರ ಕೈಯಲ್ಲೇ ನಿನ್ನದನ್ನೂ ಇಡಿಸುತ್ತೀನಿ. ಈಗ ನನ್ನ ಪಿಂಡವನ್ನು ವಾಪಸ್ ಕೊಡು'' ಹಾರಿದರು ಹಿರಿಯರು.

''ಇರೋ ಪಿಂಡಗಳದೇ ಸೈಜ್ ಕಡಿಮೆ ಮಾಡಿಕೊಂಡು ನಂಬರ್ ಜಾಸ್ತಿ ಮಾಡ್ಕೊಳ್ಳಿ'' ಎಂದು ಸಲಹೆ ನೀಡಿದ ಪಿಂಡಲೂಟಿಗ.

''ಅವೆಲ್ಲ ಆಗಲ್ಲಯ್ಯ! ನನ್ನ ಪಿಂಡ ನನಗೆ ಕೊಡು ಅಷ್ಟೆ!''

ಹಾರಿಹೋಗುತ್ತಿದ್ದ ಕಾಗೆಯತ್ತ ಕೈತೋರುತ್ತಾ ''ಬೇಕಾದ್ರೆ ಅವುಗಳಿಂದ ವಾಪಸ್ ಇಸ್ಕೊಳ್ಳಿ'' ಎನ್ನುತ್ತಾ ದೂರ ಸರಿದನವ. ಹಿರಿಯರು ''ಅಯ್ಯೋ ನನ್ನ ಪಿಂಡ! ಅಯ್ಯೋ ನನ್ನ ಪಿಂಡ!'' ಎಂದು ಹಲುಬುತ್ತಾ, ಅತ್ತಿತ್ತ ನೋಡಿ, ಎತ್ತಲೋ ನೋಡುತ್ತಿದ್ದ ಮತ್ತೊಬ್ಬ ಪಿಂಡಪ್ರದಾನಿಯ ಎರಡು ಉಂಡೆಗಳನ್ನು ಕಸಿದು ತಮ್ಮ ಕಾರ್ಯ ಮುಗಿಸಿಕೊಂಡರು.

ಹೋದ ತಿಂಗಳು. ಕೆಂಗೇರಿಯ ರುದ್ರಭೂಮಿ; ಗತಿಸಿದ ಗರತಿಯೊಬ್ಬರ ಅಂತ್ಯಸಂಸ್ಕಾರ ಜರುಗುತ್ತಿತ್ತು. ಕಾರ್ಯಗಳನ್ನು ಮಾಡಿಸುತ್ತಿದ್ದ ಭಟ್ಟರು ಪದೇ ಪದೇ 'ಲಲಿತಾ ಎಂಬ ಹೆಸರಿನ ಪತ್ನಿಯ...' ಎನ್ನುತ್ತಿದ್ದರು. ಸಂದೇಹಿತರಾದ ಹೆಣ್ಣಿನ ಪತಿಯು 'ಲಲಿತಾ ಯಾರು?' ಎಂದರು.

''ಈಕೆಯೇ. ನಿಮ್ಮ ಪತ್ನಿ'' ಎಂದು ಕಳೇಬರದತ್ತ ಕೈತೋರಿದರು.

''ಅವಳ ಹೆಸರು ಲಲಿತಾ ಅಲ್ಲ, ವಿಮಲ!'' ಕ್ರುದ್ಧರಾದರು ವೃದ್ಧರು.

''ಪ್ರತಿ ದಿನ ಮಾಡ್ಸೀ ಮಾಡ್ಸೀ ಹೆಸರಿನ ಗೊಂದಲ ಆಗ್ಬಿಡತ್ತೆ ಸ್ವಾಮೀ. ಕ್ಷಮಿಸಿ. ನಿಮ್ಮಾಕೆಯ ಹೆಸರನ್ನೇ ಹೇಳ್ತೀನಿ. ಕಮಲಾ ಎಂಬ ಹೆಸರಿನ ಪತ್ನಿಯ...' ಎಂದು ಮುಂದುವರಿಸಿದರು. ವೃದ್ಧರು ''ಭಟ್ಟರೇ, ನೀವು ನಿಮ್ಮ ಎಷ್ಟು ಜನ ಹೆಂಡತಿಯರ ತಿಥಿ ಮುಗಿಸಬೇಕೋ ಮೊದಲು ಮುಗಿಸಿ. ಆಮೇಲೆ ನನ್ನ ಹೆಂಡತಿಯಾದ ವಿಮಲಳ ತಿಥಿ ಮಾಡಿ. ಲಲಿತಾ, ಕಮಲ ಅಲ್ಲದೆ ಇನ್ನೂ ಹೆಂಡತಿಯರು ಇದ್ದರೇನು ನಿಮಗೆ?'' ಎಂದು ಸಿಡುಕಿದ ನಂತರವೇ ಭಟ್ಟರ ಬಾಯಲ್ಲಿ ವಿಮಲೆ ಸರಿಯಾಗಿ ಮೂಡಿದ್ದು.

ಸಾವಿನ ಸಂದರ್ಭದಲ್ಲಿ ಇಂತಹ ಪ್ರಸಂಗಗಳು ಮೂಡಿದರೆ ಆನಂತರದ ದಿನಗಳಲ್ಲಿನ ಪಾಡೇ ಬೇರೆಯ ವಿಧದ್ದು. ನನ್ನ ತಾತನವರು ಅವರ ತಂದೆಯ ವಾರ್ಷಿಕ ಶ್ರಾದ್ಧವನ್ನು ಮಾಡಿಸಲೆಂದು ಪ್ರತಿವರ್ಷದಂತೆ ಆ ವರ್ಷವೂ ಸೋಮನಹಳ್ಳಿಯ ಸುಬ್ರಹ್ಮಣ್ಯಶಾಸ್ತ್ರಿಗಳಿಗೇ ಹೇಳಿದ್ದರು. ಅಪರಕರ್ಮವಾದ್ದರಿಂದ ಮಧ್ಯಾಹ್ನದ ಮೇಲೆಯೇ ಮಾಡುವುದು ಅವರ ಪದ್ಧತಿಯಾಗಿತ್ತು.

ತಾತನವರು ತಿಥಿಗೆ ಬೇಕಾದ ಎಲ್ಲವನ್ನೂ ಅಣಿಗೊಳಿಸಿ ಶಾಸ್ತ್ರಿಗಳಿಗಾಗಿ ಹೊರಬಾಗಿಲಲ್ಲಿ ಕಾಯುತ್ತಾ ನಿಂತರು. ಅಂದು ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಬೆಳ್ಳಂಬೆಳಗ್ಗೇ ಒಂದು ಚೌಲಕರ್ಮದ ಕೆಲಸವೂ ಸಿಕ್ಕಿದ್ದರಿಂದ 'ಹೇಗೂ ತಿಥಿ ಮಧ್ಯಾಹ್ನಕ್ಕೆ. ಚೌಲ ಮುಗಿಸಿ ತುತ್ತಿನ ಚೀಲ ತುಂಬಿಸಿಕೊಳ್ಳಕ್ಕೆ ಹೋದರಾಯ್ತು' ಎಂದೆಣಿಸಿ ಆ ಕಾರ್ಯಕ್ರಮದಲ್ಲಿ ತೊಡಗಿಕೊಂಡರು. ಆದರೆ ಚೌಲ ಮಾಡಿಸಿಕೊಳ್ಳಬೇಕಾದ ಮಗು ವಿಪರೀತ ಹಠ ಮಾಡಿದುದರ ಪರಿಣಾಮ ಬಹಳ ವಿಳಂಬವಾಯಿತು.

ತಾತನವರು ಹನ್ನೆರಡು ಒಂದಾಗಿ, ಒಂದು ಒಂದೂವರೆ ಆಗುವವರೆಗೆ ಕಾದರು. 'ಏಮಾಯ ಈ ಶಾಸ್ತ್ರಿಕು?' ಎಂದು ಚಡಪಡಿಸಿದರು. ಒಂದೂಮುಕ್ಕಾಲರ ಹೊತ್ತಿಗೆ ಪಕ್ಕದ ಬೀದಿಗೆ ಹೋಗಿ ಇಬ್ಬರು ಬ್ರಾಹ್ಮಣರನ್ನು ಬ್ರಾಹ್ಮಣಾರ್ಥಕ್ಕೆಂದು ಕರೆದು, ಮಂತ್ರಾರ್ಥಗಳನ್ನು ತಿಳಿದಿದ್ದ ತಾತನೇ ತಿಥಿಯ ಸಕಲ ವಿಧಿಗಳನ್ನು ಮುಗಿಸಿ, ಊಟವನ್ನೂ ಮಾಡಿಬಿಟ್ಟರು.

ಸುಬ್ರಹ್ಮಣ್ಯಶಾಸ್ತ್ರಿಗಳು ಮಧ್ಯಾಹ್ನ ಒಂದು ಗಂಟೆಗೆ ಸೋಮನಹಳ್ಳಿಯ ಬಸ್ ಸ್ಟ್ಯಾಂಡಿಗೆ ಬಂದು, ಎರಡು ಗಂಟೆಯ ಬಸ್ ಹಿಡಿದು, ಎರಡೂ ಮುಕ್ಕಾಲಿಗೆ ಜಯನಗರದಲ್ಲಿ ಬಸ್ ಇಳಿದು, ತಾತನವರ ಮನೆಯನ್ನು ತಲುಪಿದಾಗ ಗಂಟೆ ಮೂರೂಕಾಲು. ''ಶಾಸ್ತ್ರಿಲು ವಚ್ಚಿನ್ನಾರು(ಶಾಸ್ತ್ರಿಗಳು ಬಂದಿದ್ದಾರೆ)'' ಎಂದು ಅಜ್ಜಿ ಘೋಷಿಸಿದರು.

ತಾತನವರು ತಮ್ಮ ಬೆಳ್ಳಿಯ ಕೋಲನ್ನು ಝಳಪಿಸುತ್ತಾ ''ವಸ್ತೇ ವ್ವಿಮ್ರಾ! ರಾ! ಇಪ್ಪುಡು ತಾ ನಾ ತಂಡ್ರಿ ಪಿಂಡಮು ಪೆಟ್ಟಿನ್ನಾನು. ಇಪ್ಪುಡು ನೀ ಪಿಂಡಮು ಪೆಟ್ತಾನು. (ಬಂದೆಯಾ, ಬಾ! ಈಗಷ್ಟೇ ನನ್ನಪ್ಪನಿಗೆ ಪಿಂಡ ಇಟ್ಟೆ. ಈಗ ನಿನ್ನ ಪಿಂಡ ಇಡ್ತೀನಿ)' ಎನ್ನುತ್ತಾ ಶಾಸ್ತ್ರಿಗಳನ್ನು ಅಟ್ಟಿಸಿಕೊಂಡು ಹೋದರು. ಪಂಚೆಯ ಚುಂಗನ್ನು ಎತ್ತಿ ಹಿಡಿದು ಓಡುತ್ತಿದ್ದ ಶಾಸ್ತ್ರಿಗಳು, ಎತ್ತಿದ ಕೋಲಿನೊಡನೆ ಅವರ ಬೆನ್ನು ಹತ್ತಿದ ಎಪ್ಪತ್ತರ ಹರೆಯದ ಕಟ್ಟುಮಸ್ತಾದ ತಾತನವರ ದೃಶ್ಯವು ನನ್ನ ಸ್ಮೃತಿಪಟಲದಿಂದ ಎಂದಿಗೂ ಮರೆಯಾಗದು.

ಈಶಾನ್ಯ ಭಾರತದ ಪಾಲಿನ ಹನುಮಂತ ಈ ಹಿಮಂತ!

• ಅರ್ಜುನ್ ಶೆಣೈ



ಸ್ವಾತಂತ್ರ್ಯಾನಂತರ ಭಾರತದ ಭೌಗೋಳಿಕ ಪ್ರಾಂತ್ಯಗಳಲ್ಲಿ ಅಭಿವೃದ್ಧಿಯ ವಿಚಾರದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಪ್ರಾಂತ್ಯವಿದ್ದರೆ ಅದು ಈಶಾನ್ಯ ಭಾರತ ಎಂದು ಅನುಮಾನವಿಲ್ಲದೇ ಹೇಳಬಹುದು. ಈಶಾನ್ಯ ರಾಜ್ಯಗಳು, ಅವುಗಳ ಇತಿಹಾಸ, ಭೌಗೋಳಿಕ ವ್ಯಾಪ್ತಿ, ಜನಜೀವನ, ಸಂಸ್ಕೃತಿಯ ಬಗ್ಗೆ ನಾವು ತಿಳಿದುಕೊಂಡಿರುವುದು ಅಷ್ಟಕ್ಕಷ್ಟೇ! ಆ ಕೆಲಸದಲ್ಲಿ ನಿರತರಾಗಬೇಕಿದ್ದ ಅಲ್ಲಿನ ಜನಪ್ರತಿನಿಧಿಗಳೂ ಆ ಗೋಜಿಗೇ ಹೋಗಿಲ್ಲ. ಈಶಾನ್ಯ ರಾಜ್ಯಗಳ ಪ್ರಸಿದ್ಧ, ಜನಪ್ರಿಯ ವ್ಯಕ್ತಿಗಳ ಹೆಸರುಗಳನ್ನೂ ನಾವು ಊಹಿಸಲು ಸಾಧ್ಯವಾಗಲಿಕ್ಕಿಲ್ಲ. ನಮ್ಮ ಶಾಲಾ ಪಠ್ಯಗಳಲ್ಲಿಯೂ ಈಶಾನ್ಯಕ್ಕೆ ಪ್ರಾತಿನಿಧ್ಯತೆ ಕಡಿಮೆ. ಅಷ್ಟೇ ಏಕೆ? ಘೋರಿ, ಘಜ್ನಿಗಳ ಶೌರ್ಯವನ್ನು ಮೆಚ್ಚಿ, ಅವರನ್ನು ಹೊಗಳಿಕೆಯ ಅಟ್ಟಕ್ಕೆ ಕೂರಿಸುವ ನಮಗೆ ಇದೇ ಭರತಖಂಡದ ಈಶಾನ್ಯ ಭಾಗವನ್ನು ಆಳುತ್ತಿದ್ದ ಅಹೋಂ ಎಂಬ ಸಾಮ್ರಾಜ್ಯವೊಂದು ತಮ್ಮೆಡೆಗೆ ದಂಡೆತ್ತಿ ಬಂದ ಮೊಘಲರನ್ನು 17 ಬಾರಿ ಹಿಮ್ಮೆಟ್ಟಿಸಿತ್ತು ಎಂದು ಅರಿಯಲು ಪಠ್ಯೇತರ ಪುಸ್ತಕಗಳನ್ನು ಕೊಡವಿ ಓದುವ ಪ್ರಸಂಗ ಬಂದಿರುವುದು ಈ ಭಾಗಕ್ಕೆ ನಾವು ತೋರಿರುವ ಉದಾಸೀನಭರಿತ ವೈರಾಗ್ಯತನವೇ ಹೌದು!

ದಶಕಗಳ ಹಿಂದೆ ಈ ರಾಜ್ಯಗಳು ಸುದ್ದಿಯಾಗುತ್ತಿದ್ದುದು ಹಿಂಸಾಚಾರ, ಬಂಡಾಯ, ಚಳುವಳಿಗಳಂತಹ ಕೋಲಾಹಲಕ್ಕೆ ಮಾತ್ರ! ಪ್ರಾಕೃತಿಕ ಸೌಂದರ್ಯವನ್ನು ತನ್ನೊಳಗೆ ಅವಿತಿಟ್ಟರೂ, ದೇಶದ ಗಮನವನ್ನು ತನ್ನತ್ತ ಸೆಳೆಯಲು ವಿಫಲಗೊಂಡಿದ್ದಕ್ಕೆ ಅಲ್ಲಿನ ರಾಜಕೀಯ ಸನ್ನಿವೇಶವೂ ದೊಡ್ಡ ಕಾರಣವಲ್ಲದೇ ಇಲ್ಲ. ನಾಯಕತ್ವದ ಕೊರತೆ, ದೂರದೃಷ್ಟಿತ್ವ ಹೀನತೆಯ ಜೊತೆಗೆ ಅವ್ಯಾಹತ ಮತಾಂತರ, ದೊಂಬಿಗಳಿಗೆ ಸಿಲುಕಿ ದಿಕ್ಕಿಲ್ಲದ ಗಾಳಿಪಟದಂತಾಗಿದ್ದ ಅಲ್ಲಿಗೆ ಅಭಿವೃದ್ಧಿಯ ಸೂತ್ರ ಒದಗಿದ್ದು ಕಳೆದೊಂದು ದಶಕದಿಂದಲಷ್ಟೇ. ಸಪ್ತ ಸಹೋದರಿಯರ ರಾಜ್ಯಗಳಿಗೆ ಮುಖ್ಯದ್ವಾರವೆಂಬಂತೆ ನಿಲ್ಲುವ ಅಸ್ಸಾಂನಲ್ಲಾದ ಅಭಿವೃದ್ಧಿ ಮತ್ತು ಈಗಷ್ಟೇ ಬಂದ ಚುನಾವಣಾ ಫಲಿತಾಂಶ ಬದಲಾಗುತ್ತಿರುವ ಈಶಾನ್ಯ ಭಾರತದ ಪ್ರತೀಕವೇ ಹೌದು!

ಅಸ್ಸಾಂ ಇದೀಗ ಬಂಡುಕೋರರ ಲೂಟಿ-ಗದ್ದಲದಿಂದ ದೂರಸರಿದು, ವಿಕಾಸದೆಡೆಗೆ ದಾಪುಗಾಲಿಕ್ಕಿದೆ. ಅಷ್ಟೇ ಅಲ್ಲ, ಈ ಸಪ್ತ ಸಹೋದರಿಯರ ನಾಯಕತ್ವದ ಸ್ಥಾನದಲ್ಲಿ ಅಸ್ಸಾಂ ಗುರುತಿಸಿಕೊಳ್ಳುತ್ತಿದೆ. ಈಶಾನ್ಯ ಭಾರತದಲ್ಲಿ ಹೂಡಿಕೆಯಾಗಲಿ, ಸಮ್ಮೇಳನಗಳಾಗಲಿ ಜರುಗಬೇಕೆಂದರೆ ಮೊದಲು ಆಯೋಜಕರ ಗಮನ ಗುವಾಹಟಿಯತ್ತ ಸೆಳೆಯುತ್ತಿದೆ. ರಾಜಕೀಯ ಮತ್ತು ಪ್ರಗತಿಯ ದೃಷ್ಟಿಕೋನದಿಂದ ನೋಡಿದರೆ, ಕಳೆದ ದಶಕದಿಂದ ಅಸ್ಸಾಂ ದೇಶದ ಗಮನವನ್ನೇ ತನ್ನತ್ತ ಸೆಳೆಯುತ್ತಿದೆ. ಇಂದು ನಳನಳಿಸುತ್ತಿರುವ ಅಸ್ಸಾಮಿನ ಇತಿಹಾಸದಲ್ಲಿ ಹೋರಾಟ, ಚಳುವಳಿಗಳ ಕಾವಿದೆ. ಹಾಗೆ ನೋಡಿದರೆ, ಅಸ್ಸಾಂ ಅನ್ನು ಅತಿ ಹೆಚ್ಚು ಬಾರಿ ಆಳಿದ ಕೀರ್ತಿ ಕಾಂಗ್ರೆಸ್, ಬಿಟ್ಟರೆ ಸ್ಥಳೀಯ ಪಕ್ಷ ಅಸ್ಸಾಂ ಗಣ ಪರಿಷದ್‌ನದ್ದು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರು 1991ರಿಂದ 2019ರವರೆಗೆ ರಾಜ್ಯಸಭೆಗೆ ಆಗಮಿಸಿದ್ದು ಇದೇ ಅಸ್ಸಾಂ ರಾಜ್ಯದ ಮೂಲಕ. ಹಾಗಂತ ಕೇಂದ್ರದಲ್ಲಿ ಅದೆಷ್ಟೇ ಸರ್ಕಾರಗಳು ಬಂದು ಹೋದರೂ ಅಸ್ಸಾಂಸೇರಿ ಇತರೆ ರಾಜ್ಯಗಳಿಗೂ ಸಿಕ್ಕ ಪ್ರಾಧಾನ್ಯತೆ ಮಾತ್ರ ಅಷ್ಟಕ್ಕಷ್ಟೇ! ಬ್ರಹ್ಮಪುತ್ರ ನದಿಯನ್ನು ತನ್ನ ರಾಜಧಾನಿಯ ಭೂಪದುದ್ದಕ್ಕೂ ವಿಸ್ತರಿಸಿಕೊಂಡಿರುವ ಅಸ್ಸಾಂ ಅನೇಕ ಸವಾಲುಗಳನ್ನು ಮಡಿಲಿಗೆ ಹಾಕಿಕೊಂಡು ನವಶಕೆಗೆ ಶತಾಯಗತಾಯ ಯತ್ನಿಸುತ್ತಲಿತ್ತು. ಗುವಾಹಟಿ ನಗರದ ಸುತ್ತಲೂ ಹರಿಯುತ್ತಿದ್ದ ಬ್ರಹ್ಮಪುತ್ರ ನದಿಗೆ ಇದ್ದ ಒಂದೇ ಒಂದು ಸೇತುವೆ ನಗರದ ಎರಡು ಭಾಗಗಳಿಗೆ ಏಕೈಕ ಕೊಂಡಿಯಂತಿತ್ತು. ರಾಷ್ಟ್ರೀಯ ಹೆದ್ದಾರಿಗಳು 2-ಲೇನ್ ಮಾದರಿಯಲ್ಲಿದ್ದವು. ಗುವಾಹಟಿಯ ವಿಮಾನ ನಿಲ್ದಾಣ ಈಶಾನ್ಯ ಭಾರತಕ್ಕೆ ಪ್ರಪಂಚವನ್ನು ಜೋಡಿಸುವ ಏಕೈಕ ನಿಲ್ದಾಣ ವಾಗಿದ್ದು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂಬ ಮಾನ್ಯತೆಯಿದ್ದೂ ಮೂಲಸೌಕರ್ಯಕ್ಕೂ ಸೌಖ್ಯವಾಗಿದ್ದಿಲ್ಲ.

2014ರಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವಾಗ ಅಧಿಕಾರಕ್ಕೆ ಬಂತೋ, ಈಶಾನ್ಯ ರಾಜ್ಯಗಳ ಅದೃಷ್ಟ ಒಮ್ಮೆಲೇ ಖುಲಾಯಿಸಿತು. ಅದುವರೆಗೂ ಲೆಕ್ಕಕ್ಕಿರದ ಈಶಾನ್ಯ ರಾಜ್ಯಗಳು ಕೆಲವಾರು 'ಮೊದಲು'ಗಳಿಗೆ ಸಾಕ್ಷಿಯಾದವು. ಗದ್ದಲ, ಗೊಂದಲಗಳಲ್ಲೇ ಜೀವನ ಕಳೆದಿದ್ದ ಬಂಡುಕೋರರು ಹಂತಹಂತವಾಗಿ ಶಸ್ತ್ರ ತೊರೆದು ಸಮಾಜದ ಮುಖ್ಯವಾಹಿನಿಗೆ ಬಂದರು. ಭದ್ರತೆಯ ವಿಚಾರದಲ್ಲಿ ಅಸ್ಸಾಂ ಇದೀಗ ದಾಖಲೆಯತ್ತ ದಾಪುಗಾಲಿಕ್ಕಿದೆ. ಇತಿಹಾಸದುದ್ದಕ್ಕೂ ಹೋರಾಟದಲ್ಲೇ ಮುಳುಗಿದ್ದ ರಾಜ್ಯ, ಕಳೆದ ಕೆಲವಾರು ವರ್ಷಗಳಿಂದ ಸರ್ಕಾರದ ವಿರುದ್ಧದ ಧರಣಿಗಳಲ್ಲಾಗಲಿ, ಸಾಮಾಜಿಕ ಹಿಂಸಾಚಾರಗಳಲ್ಲಾಗಲಿ ಕಳೆದಿಲ್ಲ. ವರ್ಷಂಪ್ರತಿ ಒಂದೂವರೆ ಲಕ್ಷಕ್ಕೂ ಮಿಕ್ಕಿ ಅಪರಾಧ ಪ್ರಕರಣಗಳು ದಾಖಲಾಗುತ್ತಿದ್ದುದು ಇತ್ತೀಚಿನ ವರ್ಷಗಳಲ್ಲಿ 47 ಸಾವಿರಕ್ಕಿಳಿದಿದೆಯೆಂದು ವರದಿಗಳು ಹೇಳುತ್ತವೆ. ಕೇವಲ 2-ಲೇನ್ ಮಾದರಿಯಲ್ಲಿದ್ದ ರಾಷ್ಟ್ರೀಯ ಹೆದ್ದಾರಿಗಳು ಈಗ 6-ಲೇನ್ ಹೆದ್ದಾರಿಗಳಾಗಿ ಮಾರ್ಪಡುತ್ತಲಿವೆ. ಇಂದು ಅತೀ ಉದ್ದನೆಯ ರೈಲ್ವೇ ಮತ್ತು ರಸ್ತೆ ಸೇತುವೆ ಎಂಬ ದಾಖಲೆ ಅಸ್ಸಾಮಿನ ಬೋಗಿಬೀಲ್‌ನದ್ದು. ಧೋಲಾ-ಸದಿಯಾ ಎಂಬ ಸೇತುವೆ ಅಸ್ಸಾಂ ಅನ್ನು ಅರುಣಾಚಲ ಪ್ರದೇಶದೊಂದಿಗೆ ಜೋಡಿಸುತ್ತಿದೆ. ಬ್ರಹ್ಮಪುತ್ರ ನದಿಗೆ ಇದ್ದ ಒಂದೇ ಒಂದು ಸೇತುವೆ ಇದೀಗ ನಾಲ್ಕಕ್ಕೇರಿದೆ.

ಈಶಾನ್ಯದ ಯುವಜನತೆ ಎದುರಿಸುತ್ತಿದ್ದ ಬಹುಮುಖ್ಯ ಸಮಸ್ಯೆಯೆಂದರೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ದೇಶದ ನಾನಾ ಕಡೆಗೆ ವಲಸೆ ಹೋಗಬೇಕಿದ್ದುದು. ಇಂದು ಅಸ್ಸಾಂನಲ್ಲಿ ಅನೇಕ ಸ್ಥಳೀಯ ಅವಕಾಶಗಳು ಸೃಷ್ಟಿಯಾಗುತ್ತಿವೆ. ಆ ಮೂಲಕ ತಮ್ಮದೇ ನೆಲದಲ್ಲಿ ಸದೃಢರಾಗಿ ನೆಲೆಯೂರುವಂತೆ ಮಾಡಿದೆ. ಕೇವಲ ಮೂರು ಮೆಡಿಕಲ್ ಕಾಲೇಜುಗಳಿದ್ದ ಅಸ್ಸಾಂನಲ್ಲಿ ಈಗ 14 ಕಾಲೇಜುಗಳ ಸ್ಥಾಪನೆಯಾಗಿದೆ. 2029ರೊಳಗೆ ಅದು 29ಕ್ಕೇರಲಿದೆ. ಬಹುಶಃ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಮೆಡಿಕಲ್ ಕಾಲೇಜುಗಳಾಗುವಷ್ಟರ ಮಟ್ಟಿಗಿನ ವೇಗ ಪಡೆದಿವೆ. ಅಸ್ಸಾಂನ ಗುವಾಹಟಿ ವಿಮಾನ ನಿಲ್ದಾಣ ಇಂದು ದೇಶದ ಜನನಿಬಿಡ ವಿಮಾನ ನಿಲ್ದಾಣಗಳಲ್ಲಿ ಒಂದಾಗಿದೆ. ಅಸ್ಸಾಂ ಇಂದು ಶೇಕಡ 50ರಷ್ಟು ನೈಸರ್ಗಿಕ ಗ್ಯಾಸನ್ನು ತನ್ನಲ್ಲೇ ಉತ್ಪಾದಿಸುತ್ತಿದೆ. ಹೂಡಿಕೆಗಾಗಿ ಕೈಬೀಸಿ ಕರೆಯುತ್ತಿರುವ ಅಸ್ಸಾಂ ಟಾಟಾ ಸಂಸ್ಥೆಯ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಭಾರತದ ಮೊಟ್ಟಮೊದಲ ಸೆಮಿಕಂಡಕ್ಟರ್ ಘಟಕವನ್ನು ತೆರೆಯುವ ಮೂಲಕ ಇತಿಹಾಸ ರಚಿಸಿದೆ.

ಈ ನಿಮಿತ್ತ ಸುಮಾರು 27 ಸಾವಿರ ಕೋಟಿ ರೂಪಾಯಿ ಹೂಡಿ, ಸ್ಥಳೀಯ ಪ್ರತಿಭಾವಂತರಿಂದ ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಿದೆ. ರಕ್ಷಣಾ ಸಾಮಾಗ್ರಿಗಳಿಗೆ ಸಂಬಂಧಿಸಿದ ಹೂಡಿಕೆಗಾಗಿ ರಾಜ್ಯ ಸರ್ಕಾರ ಉದ್ದಿಮೆದಾರರನ್ನು ಕೈಬೀಸಿ ಕರೆಯುತ್ತಿದೆ. ಭೂತಾನ್, ನೇಪಾಳ ಮತ್ತು ಬಾಂಗ್ಲಾದೇಶಕ್ಕೆ ರಫ್ತುದಾರಿಕೆಯ ಕೇಂದ್ರ ತಾನಾಗಬೇಕೆಂದು ಉಮೇದುವಾರಿಕೆ ತೋರಿ ಕಾರ್ಯಸಾಧನೆಗಿಳಿದಿದೆ. ಕ್ರೀಡೆಗೆ ವಿಶೇಷ ಪ್ರಾತಿನಿಧ್ಯತೆ ನೀಡಿರುವ ಅಸ್ಸಾಂ ಇದೀಗ ಅಂತಾರಾಷ್ಟ್ರೀಯ ಮಟ್ಟದ ಮೂಲಸೌಕರ್ಯ ಕೇಂದ್ರಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿಸುತ್ತಿದೆ. ಈಶಾನ್ಯದ ನಗರ ಪ್ರದೇಶಗಳಲ್ಲಿಯೂ ಇಂಟರ್‌ನೆಟ್‌ನ ಸಂಪರ್ಕ ಅಚ್ಚುಕಟ್ಟಾಗಿರಲಿಲ್ಲ. ಇದೀಗ ಈಶಾನ್ಯ ಅಂತರ್ಜಾಲದ ದುನಿಯಾಕ್ಕೂ ಹೆಜ್ಜೆಯಿಟ್ಟಿದೆ. ಪ್ರಾಯಶಃ ಸ್ವತಂತ್ರ ಭಾರತದ ಯಾವ ಪ್ರಧಾನಿಯೂ ಈಶಾನ್ಯಕ್ಕೆ ಅಷ್ಟೊಂದು ಬಾರಿ ಭೇಟಿ ಕೊಟ್ಟಿರಲಿಕ್ಕಿಲ್ಲ. ಕಳೆದ ವರ್ಷಕ್ಕೆ ಸರಿಯಾಗಿ ಲೆಕ್ಕ ಹಾಕಿದರೆ, ಮೋದಿ ಬರೋಬ್ಬರಿ 68 ಬಾರಿ ಈಶಾನ್ಯ ರಾಜ್ಯಗಳಿಗೆ ಭೇಟಿ ಕೊಟ್ಟಿದ್ದಾರೆ.

ಆರ್‌ಬಿಐನ ಇತ್ತೀಚಿನ ಪ್ರಕಟಣೆಯ ಪ್ರಕಾರ ಅಸ್ಸಾಂ ಇದೀಗ ಶರವೇಗದಲ್ಲಿ ಬೆಳೆಯುತ್ತಿರುವ ಆರ್ಥಿಕತೆಯ ರಾಜ್ಯಗಳ ಪೈಕಿ ಅಗ್ರಸ್ಥಾನದಲ್ಲಿದೆ. ಇವೆಲ್ಲ ಕಾರಣಕ್ಕೆ ಬಿಜೆಪಿ ಅಸ್ಸಾಂನಲ್ಲಿ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ತನ್ನ ಭರ್ಜರಿ ಸಾಧನೆಯನ್ನು ತೋರಿದೆ. ಮೊಟ್ಟಮೊದಲ ಬಾರಿಗೆ ತನ್ನ ಸ್ವಂತಬಲದ ಮೇಲೆ ಅಧಿಕಾರದ ಗದ್ದುಗೆಯನ್ನೇರಿದೆ. ಇವೆಲ್ಲದರ ಹಿಂದೆ ಮುಖ್ಯಮಂತ್ರಿ ಹಿಮಂತ್ ಬಿಸ್ವಾಶರ್ಮರ ಪಾತ್ರ ಬಹುಮುಖ್ಯವಾಗಿದೆ ಎನ್ನುವುದರಲ್ಲಿ ಅತಿಶಯವಿರದು! ಮೂಲ ಕಾಂಗ್ರೆಸ್ಸಿಗರಾದರೂ, 2015ರ ಬಳಿಕ ಪಕ್ಷ ತೊರೆದು ಬಿಜೆಪಿಯ ತತ್ವ-ಸಿದ್ಧಾಂತಗಳನ್ನು ಒಪ್ಪಿ ಇಡೀ ಈಶಾನ್ಯದಲ್ಲಿ ಎನ್‌ಡಿಎ ಒಕ್ಕೂಟದ ಬಲವರ್ಧನೆಗೆ ಅವರನ್ನು 'ಈಶಾನ್ಯ ಎನ್‌ಡಿಎ' ಒಕ್ಕೂಟಕ್ಕೆ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಪಕ್ಷದ ಬಲವರ್ಧನೆಗೆ ಅವರು ಪಟ್ಟ ಶ್ರಮ ಕ್ರಮೇಣ ಫಲಿಸಿರುವುದು ಅಲ್ಲಿನ ಚುನಾವಣಾ ಫಲಿತಾಂಶಗಳಲ್ಲಿ ನಿಚ್ಚಳವಾಗಿ ಗೋಚರವಾಗಿದೆ. 2014ರಲ್ಲಿ ಈಶಾನ್ಯದ ಒಂದೇ ಒಂದು ರಾಜ್ಯದಲ್ಲಿಯೂ ಅಧಿಕಾರದಲ್ಲಿರದ ಬಿಜೆಪಿ ಇಂದು ನಾಲ್ಕು ರಾಜ್ಯಗಳಲ್ಲಿ ಸ್ವಂತಬಲದ ಮೇಲೆಯೂ ಇನ್ನುಳಿದ ನಾಲ್ಕು ರಾಜ್ಯಗಳಲ್ಲಿ ಎನ್‌ಡಿಎ ಒಕ್ಕೂಟದೊಂದಿಗೂ ಅಧಿಕಾರ ಹಂಚಿಕೊಂಡಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಈ ರಾಜ್ಯಗಳ ಒಟ್ಟು 25 ಲೋಕಸಭಾ ಕ್ಷೇತ್ರಗಳ ಪೈಕಿ 8 ಸ್ಥಾನವನ್ನಷ್ಟೇ ಪಡೆದುಕೊಂಡಿದ್ದ ಪಕ್ಷವಿಂದು, 2024ರಲ್ಲಿ 16 ಲೋಕಸಭಾ ಕ್ಷೇತ್ರವನ್ನು ತನ್ನದಾಗಿಸಿಕೊಂಡಿದ್ದು, ಈಶಾನ್ಯ ರಾಜ್ಯಗಳೂ ಬಿಜೆಪಿಯನ್ನು ಒಪ್ಪಿಕೊಂಡಿರುವುದು ಪ್ರತ್ಯಕ್ಷ ಸಾಕ್ಷಿಯೇ ಹೌದು. ತಮಗೆ ಅಧಿಕಾರ ದೊರೆತ ಕೆಲವೇ ವರ್ಷಗಳಲ್ಲಿ ಹಿಮಂತರು ತಮ್ಮ ಸಾಮರ್ಥ್ಯವನ್ನು ಪುರಾವೀಕರಿಸಿದ್ದಾರೆ. ಕೇವಲ ಅಸ್ಸಾಂನಲ್ಲಷ್ಟೇ ಅಲ್ಲದೇ, ಅವರ ಖ್ಯಾತಿ ಇಂದು ದೇಶದ ಉದ್ದಗಲಕ್ಕೂ ಹರಡಿದೆ. ಸ್ಥಳೀಯರ ಪಾಲಿಗೆ ತಮ್ಮ ಪ್ರೀತಿಪೂರ್ವಕ ನಡತೆಗೆ 'ಮಾಮಾ' ಎಂದು ಗುರುತಿಸಿಕೊಳ್ಳುವ ಅವರು, ಮುಸ್ಲಿಂ ಮೂಲಭೂತವಾದಕ್ಕೆ ಮತ್ತು ದೇಶವಿರೋಧಿಗಳಿಗೆ ಸಿಂಹಸ್ವಪ್ನರಾಗಿದ್ದು, ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಗೃಹಖಾತೆಗೆ ಅತ್ಯಂತ ಯೋಗ್ಯರು ಎಂದೂ ಬಿಂಬಿಸಲಾಗುತ್ತಿದೆ.

ಆಧುನಿಕತೆ ಮತ್ತು ಶಿಥಿಲವಾಗುತ್ತಿರುವ ತಾಯಿ-ಮಗುವಿನ ಬಂಧ

• ಡಾ. ಮೈತ್ರಿ ಭಟ್, ವಿಟ್ಲ

'ಅಮ್ಮ' ಎನ್ನಲು ಅದೇನು ಹರುಷ, ಅದೆಷ್ಟು ಸಂಭ್ರಮ. ಈ ಎರಡಕ್ಷರದ ಪದದಲ್ಲಿ ಅದೆಷ್ಟು ಚೈತನ್ಯ ತುಂಬಿದೆ. 'ಅಮ್ಮ' ಎನ್ನುವ ಪದ ಎಲ್ಲ ಭಾಷೆಯಲ್ಲಿಯೂ ಅತ್ಯಂತ ಮಧುರವಾದ ಶಬ್ದ. ನಮ್ಮ ಭಾರತೀಯ ಸಂಸ್ಕೃತಿಯಲ್ಲಂತೂ 'ಮಾತೃ ದೇವೋಭವ' ಎಂದು ತಾಯಿಗೆ ಅಗ್ರಸ್ಥಾನವನ್ನು ನೀಡಲಾಗಿದೆ. ನವಮಾಸ ಕಂದನನ್ನು ತನ್ನ ಗರ್ಭದಲ್ಲಿ ಹೊತ್ತು ನೋವು, ಯಾತನೆ ಅನುಭವಿಸಿ, ಸೃಷ್ಟಿಗೆ ಕಾರಣಳಾಗಿ ಮಡಿಲಲ್ಲಿಟ್ಟು ಸಣ್ಣ ನೋವೂ ಬರದಂತೆ ಜತನದಿಂದ ಕಾಪಾಡಿ, ತಾನು ಅರೆಹೊಟ್ಟೆ ಇದ್ದರೂ ಮಗುವಿಗೆ ಹೊಟ್ಟೆ ತುಂಬಾ ಕೈತುತ್ತು ಹಾಕಿ ಬೆಳೆಸುವ ತಾಯಿಗೆ ಇನ್ನಾರು ಸಾಟಿ?

ತಾಯಿಗಿಂತ ಮಿಗಿಲಾದ ದೇವರಿಲ್ಲ, ತಾಯಿಯೇ ಪ್ರತ್ಯಕ್ಷ ದೇವತೆ. ಮಗುವನ್ನು ಅಕ್ಕರೆಯಿಂದ ಮುದ್ದಾಡಿ, ಲಾಲಿಸಿ-ಪಾಲಿಸಿ ಮಕ್ಕಳ ಕಷ್ಟಕ್ಕೆ ತಾನೂ ಮರುಗಿ, ಯಶಸ್ಸಿಗೆ ಹಿರಿಹಿರಿ ಹಿಗ್ಗಿ ಹಾರೈಸುವ ತಾಯಿಗಿಂತ ಮಿಗಿಲಾದ ದೇವರು ಇನ್ನೆಲ್ಲಿ ತಾನೇ ಇರಲು ಸಾಧ್ಯ? ಇಂಥ ಮಮತೆಯ ಕಡಲು ವಾತ್ಸಲ್ಯದ ಒಡಲಿಗಾಗಿ ಇತ್ತೀಚೆಗೆ ಒಂದು ದಿನವನ್ನು ಮೀಸಲಾಗಿಟ್ಟು ಆಚರಿಸಲಾಗುತ್ತಿದೆ – ಅದುವೇ 'ಅಮ್ಮಂದಿರ ದಿನ'.

ಇತ್ತೀಚಿನ ಅಮ್ಮಂದಿರ ದಿನವನ್ನು ಪೂರ್ವ ವರ್ಜೀನಿಯಾದ ಅನ್ನಾ ಜಾರ್ವಿಸ್ ತನ್ನ ಮಮತೆಯ ತಾಯಿ ಶ್ರೀಮತಿ ಅನ್ನಾ ರೀಸ್ ಜಾರ್ವಿಸ್‌ಳ ಸವಿನೆನಪಿನ ದ್ಯೋತಕವಾಗಿ ಮೇ 10, 1908 ರಂದು ಆಚರಣೆಗೆ ತಂದಳು. ಮುಂದೆ ಮೇ ತಿಂಗಳ 2ನೇ ಭಾನುವಾರವನ್ನು ಅಧಿಕೃತವಾಗಿ ಅಮ್ಮಂದಿರ ದಿನವೆಂದು ಘೋಷಿಸಿ ಆಚರಿಸಲಾಯಿತು. ಭಾರತವೂ ಸೇರಿದಂತೆ ಸುಮಾರು 46 ದೇಶಗಳಲ್ಲಿ ಮೇ ತಿಂಗಳ 2ನೇ ಭಾನುವಾರವನ್ನು ಅಮ್ಮಂದಿರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇನ್ನೂ ಕೆಲವು ದೇಶಗಳು ಗ್ರೆಗೊರಿಯನ್ ಕ್ಯಾಲೆಂಡರ್‌ನ ಬೇರೆ ಬೇರೆ ತಿಂಗಳುಗಳಲ್ಲಿ ಅಮ್ಮಂದಿರ ದಿನವನ್ನು ಆಚರಿಸುತ್ತವೆ. ಉದಾ: ನಾರ್ವೆ – ಫೆಬ್ರವರಿ 2ನೇ ಭಾನುವಾರ, ಐರ್ಲೆಂಡ್, ನೈಜೀರಿಯಾ, ಯುಕೆ – ಮಾರ್ಚ್ 4ನೇ ಭಾನುವಾರ.

ಅಮ್ಮಂದಿರ ದಿನದ ಆಚರಣೆ ಭಾರತದ ಸಂಸ್ಕೃತಿಗೆ ಹೊಸತೇನಲ್ಲ. ಸಾವಿರಾರು ವರ್ಷಗಳಿಂದ ಹಿಂದೂಗಳು ದುರ್ಗಾ ಪೂಜೆಯ ಹತ್ತು ದಿನಗಳ ಆಚರಣೆಯ ಸಂದರ್ಭದಲ್ಲಿ ದುರ್ಗಾ ದೇವಿಯನ್ನು ಪೂಜಿಸುತ್ತಾರೆ. ತಂತ್ರಜ್ಞಾನ, ಆರ್ಥಿಕ ಪ್ರಗತಿ ಹಾಗೂ ಜಗತ್ತು ಕಿರಿದಾದುದರ ಪರಿಣಾಮ ಅಮ್ಮಂದಿರ ದಿನ, ಪ್ರೇಮಿಗಳ ದಿನ ಮೊದಲಾದ ಆಚರಣೆಗಳು ಭಾರತಕ್ಕೂ ಕಾಲಿಟ್ಟಿವೆ. ಇವು ಭಾರತದ ನಗರ ಪ್ರದೇಶಗಳಲ್ಲಿ ಮಾತ್ರ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಹಳ್ಳಿಗಳತ್ತಲೂ ಮೆಲ್ಲನೇ ಹೆಜ್ಜೆಯಿಡುತ್ತಿವೆ. ಇದೊಂದು ವ್ಯಾವಹಾರಿಕ ಕಾಳಜಿಯಿಂದ ಕೂಡಿದ ಆಚರಣೆಯೆಂದರೂ ತಪ್ಪಾಗಲಾರದು. ಅಮ್ಮನು ನೀಡಿದ ಪ್ರೀತಿ, ಮಮತೆ, ಕಾಳಜಿಗಳಿಗಾಗಿ ಧನ್ಯವಾದ ಹೇಳುವ ಒಂದು ಅವಕಾಶವೆಂದು ಇದನ್ನು ಬಿಂಬಿಸಲಾಗುತ್ತಿದೆ.

ಬಾಲ್ಯದಲ್ಲಿ ನಾವೆಲ್ಲರೂ ಗೋವಿನ ಹಾಡಿನ ಬಗ್ಗೆ ಕೇಳಿದ್ದೇವೆ. ಅಲ್ಲಿಯೂ ತಾಯಿಯ ಮಮತೆಯನ್ನು ಚಿತ್ರಿಸಲಾಗಿದೆ. ಜಗದಲ್ಲಿ ಹುಡುಕಿದರೆ ಹಲವು ಕೆಟ್ಟ ಮಕ್ಕಳು ಸಿಗಬಹುದು. ಆದರೆ ಕೆಟ್ಟ ತಾಯಿ ಸಿಗುವುದು ಅತಿ ವಿರಳ ಎಂಬುದು ಅನುಭಾವ. ಒಬ್ಬ ತಾಯಿ ಹತ್ತು ಮಕ್ಕಳನ್ನು ಸಾಕುತ್ತಾಳೆ. ಆದರೆ ಹತ್ತು ಮಕ್ಕಳಿದ್ದೂ ಒಬ್ಬ ತಾಯಿ ಬೀದಿಗೆ ಬೀಳುವ ಸಂದರ್ಭಗಳಿವೆ. ನಮ್ಮ ಮಧ್ಯೆ ಹೆಚ್ಚುತ್ತಿರುವ 'ವೃದ್ಧಾಶ್ರಮ'ಗಳು ಈ ಮಾತಿಗೆ ಇಂಬು ನೀಡುತ್ತಿವೆ. ದಿನಗಳು ಕಳೆದಂತೆ ನಮ್ಮಲ್ಲೂ ಆಧುನಿಕತೆಯ ಭರಾಟೆಯಲ್ಲಿ ಜಗತ್ತು ಕಿರಿದಾಗಿ ಸಂಬಂಧಗಳ ಕೊಂಡಿ ಶಿಥಿಲವಾಗಿ ಸಡಿಲಗೊಂಡು ಕಳಚಿ ಬೀಳುತ್ತಿವೆ ಎನಿಸುತ್ತಿದೆ.



'ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು ಜನನಿಯಿಂದ ಪಾಠ ಕಲಿತ ಜನರು ಧನ್ಯರು ಎಂಬ ಕಾಲವೊಂದಿತ್ತು'. ಆದರೀಗ..?

ಅಮ್ಮನಿಗಾಗಿ ಒಂದು ದಿನ ಮೀಸಲಿಡಬೇಕಾದಂತಹ ಪರಿಸ್ಥಿತಿ (ದುಃಸ್ಥಿತಿ) ನಮ್ಮದೂ ಆಗಿದೆ. ಈಗಿನ ಯಾಂತ್ರೀಕೃತ ಜಗತ್ತಿನಲ್ಲಿ ತಾಯಿ ಮಗುವಿನ ಬಾಂಧವ್ಯ ಅರ್ಥ ಕಳೆದುಕೊಂಡಿದೆಯೇನೋ ಎಂಬ ಅನುಮಾನ ಕಾಡುತ್ತಿದೆ.

ಬದುಕಿನ ಜಂಜಾಟದಲ್ಲಿ ಸದಾ ಕೆಲಸ, ಅದೂ ಇದೂ ಎಂದು ತೊಡಗಿಕೊಂಡಿರುವ ತಾಯಿಯು ತನ್ನ ಎಳೇ ಕಂದಮ್ಮನನ್ನು 'ಮಕ್ಕಳನ್ನು ನೋಡಿಕೊಳ್ಳುವ ಗೂಡಿಗೆ' ಬಿಟ್ಟು ಹೋಗುತ್ತಾಳೆ. ಸಂಜೆ ಆಯಾಸ, ಸುಸ್ತು, ಬಳಲಿಕೆಯಿಂದ ಮನೆ ಸೇರುವ ತಾಯಿಗೆ ಮಕ್ಕಳ ಬಗ್ಗೆ ವಿಚಾರಿಸುವ ಬಿಡುವು, ವ್ಯವಧಾನವಾದರೂ ಇರುತ್ತದೆಯೇ? ಈಗಿನ ಮಕ್ಕಳು ತಂದೆ, ತಾಯಿ, ಅಜ್ಜ ಅಜ್ಜಿಯರಿದ್ದೂ ಅನಾಥರಂತೆ ಎಲ್ಲೋ ಬೆಳೆದು ಸಹಜ ಪ್ರೀತಿ, ವಾತ್ಸಲ್ಯದಿಂದ ವಂಚಿತರಾಗುತ್ತಿದ್ದಾರೆ. ಒಟ್ಟಿನಲ್ಲಿ ನಮ್ಮ ಸಂಸ್ಕೃತಿಯನ್ನು ಗೌರವಿಸಿ, ಆಧುನಿಕತೆಯ ಪೊರೆ ಕಳಚಿದಲ್ಲಿ ನಮಗೆ ಈ 'ಅಮ್ಮಂದಿರ ದಿನ'ದ ಆಚರಣೆ ಅರ್ಥಹೀನ ಎಂದೆನಿಸದಿರದು.

ಆಧುನಿಕತೆಯ ಸೋಗಿನಲ್ಲಿ ನಮ್ಮ ಮಾನವ ಸಂಬಂಧಗಳು ಶಿಥಿಲಾವಸ್ಥೆಯತ್ತ ಸಾಗುತ್ತಿವೆ. ಮಗುವಿಗೂ ಹೆತ್ತವಳು ಕೇವಲ ಏಣಿಗೆ ಸಮಾನಳಾಗುತ್ತಿದ್ದಾಳೆ.

ತಾಯ್ತನ ಹೆಣ್ಣಿನ ಬದುಕಿಗೆ ಒಂದು ಅಪೂರ್ವ ಅನುಭವ, ಆನಂದ, ಸಂಭ್ರಮ, ಮುದ ನೀಡುವ ಕ್ಷಣ. ನಾವು ಅಮ್ಮನಿಗೆ ಧನ್ಯವಾದ ಹೇಳಲು ಒಂದು ದಿನ ಮೀಸಲಿಟ್ಟು ಏನೂ ವಿಶೇಷತೆ ಸಾಧಿಸಲಾಗದು. ಪ್ರೀತಿಯೆಂದರೆ ಅಮ್ಮನನ್ನು ಅವಳ ವೃದ್ಧಾಪ್ಯದಲ್ಲಿ ನಿಜವಾದ ಅನಾಥಳನ್ನಾಗಿಸದೆ ಸಂತೋಷವಾಗಿ ಇರುವಂತೆ ನೋಡಿಕೊಳ್ಳುವುದು. ನಾವು ನಮ್ಮ ಸಂಸ್ಕೃತಿಯನ್ನು ಗೌರವಿಸಿ, ಆಧುನಿಕತೆಯ ಪೊರೆ ಕಳಚಿ ಹೊರಬಂದಲ್ಲಿ ನಮಗೆ ಈ 'ಅಮ್ಮಂದಿರ ದಿನ'ದ ಆಚರಣೆ ಅರ್ಥಹೀನ ಎಂದೆನಿಸದಿರದು. ನೀವೇ ಹೇಳಿ? ತನ್ನ ಜೀವನವನ್ನೇ ಮಕ್ಕಳ ಏಳಿಗೆಗಾಗಿ ಮುಡಿಪಾಗಿಡುವ ತಾಯಿಗೆ ಒಂದು ದಿನದ ಕಾರ್ಡು, ಉಡುಗೊರೆ, ಪಾರ್ಟಿಗಳ ಮೂಲಕ ಎಂದಾದರೂ ಬೆಲೆ ಕಟ್ಟಲಾದೀತೇ?

ಜೈ ಶ್ರೀರಾಮ್, ಭಾರತ್ ಮಾತಾಗೆ ಜೈಕಾರ

ವೈಭವೋಪೇತ ಕ್ಷಣಕ್ಕೆ ಸಾಕ್ಷಿಯಾದ ಬಂಗಾಳ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಪ್ರಪ್ರಥಮ ಬಿಜೆಪಿ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಕಾಣಲು, ಕಂಡು ಸಂತಸಪಡಲು ಸಾವಿರಾರು ಅಭಿಮಾನಿಗಳು, ಕಾರ್ಯಕರ್ತರು ಪ್ರವಾಹೋಪಾದಿಯಲ್ಲಿ ನೆರೆದಿದ್ದ, ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನ ಶನಿವಾರ ಅತ್ಯಂತ ವೈಭವೋಪೇತ ಕ್ಷಣಗಳಿಗೆ ಸಾಕ್ಷಿಯಾಯಿತು. ಮೈದಾನ ಪರಿಸರವಿಡೀ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳ ನಿರಂತರ ಅನುರಣನದಿಂದ ತುಂಬು ಪುನೀತವಾಗಿತ್ತು.

ಬಿಜೆಪಿ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಕಣ್ತುಂಬಿಕೊಳ್ಳಲು ನೆರೆದಿದ್ದ ಜನಜಾತ್ರೆಯಲ್ಲಿ ಗಮನ ಸೆಳೆದವರು ದಕ್ಷಿಣ 24 ಪರಗಣ ಜಿಲ್ಲೆಯ ಕುಲ್ತಾಲಿ ಮೂಲದ 80ರ ವೃದ್ಧೆ ಭಗವತಿ ದೇವಿ. ಜನಸಂದಣಿ ಮಧ್ಯೆ ವೇದಿಕೆಯತ್ತ ಸಾಗಲು ಹೆಣಗಾಡುತ್ತಿದ್ದ ಈ ಹಿರಿಯ ಮಹಿಳೆಯ ಸಂಕಷ್ಟ ಕಂಡ ಕಾರ್ಯಕರ್ತರು, ಭದ್ರತಾ ಪಡೆ ತಮ್ಮ ರಕ್ಷಣೆಯಲ್ಲಿ ವೇದಿಕೆಯ ನೇರ ಹತ್ತಿರಕ್ಕೆ ಕರೆದೊಯ್ದು, ಆಸನ ನೀಡಿ ಕುಳ್ಳಿರಿಸಿದರು.

ಕೈಗೂಡಿತು ನಿರೀಕ್ಷೆ: ಈ ಶುಭ ದಿನಕ್ಕಾಗಿ ನಾನು ಸುದೀರ್ಘ ವರ್ಷಗಳಿಂದ ಚಾತಕಪಕ್ಷಿಯಂತೆ ಕಾದು ಕುಳಿತವಳು. ಹಲವು ವರ್ಷಗಳಿಂದ ನನ್ನ ಕುಟುಂಬ ಹಿಂದಿನ ಸರ್ಕಾರದಿಂದ ಮಿತಿಮೀರಿ ದೌರ್ಜನ್ಯ, ಚಿತ್ರಹಿಂಸೆ ಅನುಭವಿಸಿದೆ. ನನ್ನ ಮಗನಂತೂ ಪ್ರಾಣಕ್ಕೆ ಆತಂಕವಿದ್ದ ಹಿನ್ನೆಲೆ ಬಲವಂತ ಹುಟ್ಟೂರು ಬಿಡುವಂತಾಯಿತು. ಇಂದೀಗ ನನ್ನ ನಿರೀಕ್ಷೆಯ ದಿನ ಬಂದೇ ಬಿಡ್ತು. ನಿರೀಕ್ಷೆ ಕೊನೆಗೂ ಸಾಕಾರಗೊಂಡಿತು ಎಂದು ತಲೆಗೆ ಬಿಜೆಪಿಯ ಹೆಡ್‌ಬ್ಯಾಂಡ್ ಧರಿಸಿದ್ದ, ಕೈಯ್ಯಲ್ಲಿ ಬಿಜೆಪಿ ಧ್ವಜಧಾರಿ ಭಗವತಿದೇವಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ನುಡಿದರು.

ತ್ರಿಶೂಲಧಾರಿ ಸಾಧು: ಕೈಯ್ಯಲ್ಲಿ ತ್ರಿಶೂಲ ಹಿಡಿದು ಕಾರ್ಯಕರ್ತರನ್ನು ಹರಸುತ್ತಿದ್ದ ಕೇಸರಿ ವಸ್ತ್ರಧಾರಿ ಸಾಧು ಕೂಡ ಸಮಸ್ತರ ಗಮನಸೆಳೆದರು. ನಬದ್ವಿಪ್ ಪ್ರದೇಶದ ಮಠದಲ್ಲಿರುವ ಈ ಸಾಧುವರ್ಯರ ಅಭಿದಾನ ಪ್ರಗ್ಯಾನ್ ಮಹಾರಾಜ್. ಕಾರ್ಯಕ್ರಮದಲ್ಲಿ ನೆರೆದಿದ್ದ ಅಪಾರ ಜನಸ್ತೋಮವನ್ನು ಈ ಸಾಧುವರ್ಯರು ತ್ರಿಶೂಲದಿಂದ ಹರಸುತ್ತಿದ್ದುದು ಕಂಡು ಬಂತು.

ಕರಿಮೋಡಗಳು ಸರಿದಿವೆ: ಟಿಎಂಸಿ ಸರ್ಕಾರವಿದ್ದಾಗ ನಾನು ತುಟ್ಟಿಭತ್ಯೆಯಲ್ಲಿ ಸಮಾನತೆ ಆಗ್ರಹಿಸುವ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿದ್ದಕ್ಕೆ ನನಗೆ ಜೀವ ಬೆದರಿಕೆಗಳು ಬಂದಿದ್ದವು ಎಂದು ನಿವೃತ್ತ ಸರ್ಕಾರಿ ನೌಕರನೊಬ್ಬ ಟಿಎಂಸಿ ಗೂಂಡಾರಾಜ್‌ನ ಕರಾಳತೆಯನ್ನು ಸುದ್ದಿಗಾರರಲ್ಲಿ ಬಿಚ್ಚಿಟ್ಟರು. ನಾನು ಕಳೆದ ವರ್ಷ ನಿವೃತ್ತನಾದ ನಂತರವೂ ಬೆದರಿಕೆಗಳು ನಿಂತಿರಲಿಲ್ಲ, ಇಂದೀಗ ಕರಿಮೋಡಗಳು ಕೊನೆಗೂ ಸರಿದಿವೆ. ಕೇಂದ್ರ ಸರ್ಕಾರಿ ನೌಕರರ ಸಮಾನ ಡಿಎ ತನಗಿನ್ನು ಲಭಿಸಲಿದೆ ಎಂಬ ಭರವಸೆ ಮೂಡಿದೆ ಎಂದರು ಈ ನಿವೃತ್ತ ಸರಕಾರಿ ನೌಕರ. ಇಂತಹ ಕಹಿ ಅನುಭವ-ಘಟನಾವಳಿಗಳಿಗೆ ಬಲಿಪಶುಗಳಾದ ಅದೆಷ್ಟೋ ಜನ ಬಿಜೆಪಿ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ದುರ್ಗಾಮಾತೆಯ ಆಕೃತಿ: ಮೈದಾನದಾದ್ಯಂತ ಮದನ್‌ಮೋಹನ್ ದೇಗುಲ, ಜಲ್ಪೇಶ್ ಕ್ಷೇತ್ರ, ಕಾಳಿಘಾಟ್ ದೇಗುಲಗಳ ಪ್ರತಿಕೃತಿಗಳು ರಾರಾಜಿಸಿದ್ದವು. ಪ್ರಧಾನ ವೇದಿಕೆಯ ಹಿನ್ನೆಲೆಯಲ್ಲಿದ್ದ ದಕ್ಷಿಣೇಶ್ವರ ಕಾಳಿ ದೇವಾಲಯ ಮತ್ತು ದುರ್ಗಾ ಮಾತೆಯ ಆಕೃತಿಗಳು ಗಮನ ಸೆಳೆದವು. ಜೈಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳ ಜತೆ ಜತೆ ಡ್ರಮ್‌ವಾದನ, ಸಂಗೀತದ ನಿನಾದ, ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ-ಜಾನಪದ ನೃತ್ಯ ಪ್ರದರ್ಶನಗಳು ಕಾರ್ಯಕ್ರಮಕ್ಕೆ ಹಬ್ಬದ ಕಳೆ ನೀಡಿದ್ದವು.



ವೇದಿಕೆಯಿಂದಲೇ ಬಂಗಾಳ ಜನತೆಗೆ ಶಿರ ಬಾಗಿ ನಮಸ್ಕರಿಸಿದ ಪ್ರಧಾನಿ ಮೋದಿ.


ಕಾಲಿಗೆರಗಿ ಆಶೀರ್ವಾದ ಪಡೆದ ಪ್ರಧಾನಿ ಮೋದಿ

ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರದ ಪ್ರಮಾಣವಚನ ಸ್ವೀಕಾರಕ್ಕೆ ಮುನ್ನ, ಪ್ರಧಾನಿ ನರೇಂದ್ರ ಮೋದಿ ಬಿಜೆಪಿಯ ಹಿರಿಯ ನಾಯಕ, 98ರ ಇಳಿವಯಸ್ಸಿನ ಮಖನ್‌ಲಾಲ್ ಸರ್ಕಾರ್ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದರು. ಸರ್ಕಾರ್ ಅವರನ್ನು ಅಪ್ಪಿಕೊಂಡು ಪ್ರಧಾನಿ ಮೋದಿ ಸಂತಸ ಹಂಚಿಕೊಂಡರು. 1952ರಲ್ಲಿ ಕಾಶ್ಮೀರದಲ್ಲಿ ತ್ರಿವರ್ಣ ಧ್ವಜ ಅರಳಿಸಲು ನಡೆದ ಜನಾಂದೋಲನದಲ್ಲಿ ಪಾಲ್ಗೊಂಡು ಜನಸಂಘ ಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಜತೆ ತೆರಳುತ್ತಿದ್ದಾಗ ಸರ್ಕಾರ್ ಅವರನ್ನು ಬಂಧಿಸಲಾಗಿತ್ತು.





ಸುವೇಂದು ಅಧಿಕಾರಿ



ದಿಲೀಪ್ ಘೋಷ್



ನಿಸಿತ್ ಪ್ರಮಾಣಿಕ್



ಕ್ಷುದಿರಾಮ್ ತುಡು



ಅಗ್ನಿಮಿತ್ರ ಪೌಲ್

ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಸುವೇಂದು ಅಧಿಕಾರಿ ಎಂಬ ಹೋರಾಟಗಾರ

ಯಾರು ಈ ಸುವೇಂದು ಅಧಿಕಾರಿ?

ಡಿಸೆಂಬರ್ 15, 1970ರಂದು ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರದ ಕರ್ಕುಲಿಯಲ್ಲಿ ಜನಿಸಿದ ಸುವೇಂದು ಅಧಿಕಾರಿ ರಕ್ತದಲ್ಲೇ ರಾಜಕಾರಣವಿದೆ. ಇವರು ಕೇಂದ್ರ ಮಾಜಿ ಸಚಿವ ಶಿಶಿರ ಕುಮಾರ್ ಅಧಿಕಾರಿ ಪುತ್ರ. ಕಂಠಿ ಪ್ರೌಢಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಸುವೇಂದು, ವಿದ್ಯಾಸಾಗರ ವಿಶ್ವವಿದ್ಯಾಲಯದ ಪ್ರವಾತ್ ಕುಮಾರ್ ಕಾಲೇಜಿನಿಂದ ಪದವಿ ಪಡೆದರು. 2011ರಲ್ಲಿ ರವೀಂದ್ರ ಭಾರತಿ ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದ ಸುವೇಂದು, ಸದಾ ತಳಮಟ್ಟದ ಜನರೊಂದಿಗೆ ಸಂಪರ್ಕದಲ್ಲಿರುವ ನಾಯಕ. 55 ವರ್ಷದ ಸುವೇಂದು ಅವಿವಾಹಿತರಾಗಿದ್ದು, ತಮ್ಮ ಸಂಪೂರ್ಣ ಜೀವನವನ್ನು ರಾಜಕೀಯ ಸಂಘಟನೆಗೆ ಮೀಸಲಿಟ್ಟಿದ್ದಾರೆ.

ಸಂಘರ್ಷದಿಂದ ಬೆಳೆದ ನಾಯಕ

ಸುವೇಂದು ಅವರ ರಾಜಕೀಯ ಜೀವನ ಆರಂಭವಾಗಿದ್ದು ಕಾಂಗ್ರೆಸ್‌ನಿಂದ. 1995ರಲ್ಲಿ ಕೌನ್ಸಿಲರ್ ಆಗಿ ಆಯ್ಕೆಯಾದ ಇವರು, ನಂತರ 2006ರಲ್ಲಿ ಮೊದಲ ಬಾರಿಗೆ ಶಾಸಕರಾದರು. ಆದರೆ, ಇಡೀ ಭಾರತ ಸುವೇಂದು ಹೆಸರನ್ನು ಕೇಳಿದ್ದು 2007–08ರ ನಂದಿಗ್ರಾಮ ಚಳವಳಿಯ ಸಮಯದಲ್ಲಿ. ಭೂಸ್ವಾಧೀನ ವಿರೋಧಿ ಸಮಿತಿಯ ನಾಯಕತ್ವ ವಹಿಸಿದ್ದ ಇವರು, ಅಂದಿನ ಎಡರಂಗ ಸರ್ಕಾರವನ್ನು ನಡುಗಿಸಿದ್ದರು. ಮಮತಾ ಬ್ಯಾನರ್ಜಿ ಅಧಿಕಾರಕ್ಕೆ ಬರಲು ಸುವೇಂದು ಹಾಕಿಕೊಟ್ಟ ಈ ಬುನಾದಿಯೇ ಕಾರಣವಾಗಿತ್ತು. ತದನಂತರ ಅವರು ಎರಡು ಬಾರಿ ಲೋಕಸಭಾ ಸದಸ್ಯರಾಗಿ ಮತ್ತು ರಾಜ್ಯದ ಸಾರಿಗೆ, ನೀರಾವರಿ ಸಚಿವರಾಗಿ ಕೆಲಸ ಮಾಡಿದರು. 2020ರಲ್ಲಿ ತೃಣಮೂಲ ಕಾಂಗ್ರೆಸ್‌ನ ವಂಶಾಡಳಿತವನ್ನು ವಿರೋಧಿಸಿ ಬಿಜೆಪಿಗೆ ಸೇರಿದರು.

ಸರಳ ಜೀವನ, ಬಲಿಷ್ಠ ಇಚ್ಛಾಶಕ್ತಿ

ಅಧಿಕಾರಿ ಅವರ ಆಸ್ತಿ ವಿವರಗಳನ್ನು ಗಮನಿಸಿದರೆ, ಅವರು ಸರಳ ಜೀವನ ನಡೆಸುವ ನಾಯಕ ಎಂಬುದು ತಿಳಿಯುತ್ತದೆ. 2026ರ ಅಫಿಡವಿಟ್ ಪ್ರಕಾರ ಅವರ ಒಟ್ಟು ಆಸ್ತಿ 85.87 ಲಕ್ಷ ರೂ.ಗಳು ಮಾತ್ರ. ಇದರಲ್ಲಿ ಬಹುಪಾಲು ಪೂರ್ವಜರಿಂದ ಬಂದ ಜಮೀನು ಮತ್ತು ಮನೆಗಳಾಗಿವೆ. ವಾರ್ಷಿಕ ಸುಮಾರು 17.38 ಲಕ್ಷ ರೂ. ಆದಾಯ ಹೊಂದಿದ್ದು, ಯಾವುದೇ ಸಾಲ ಇಲ್ಲ.

ಭವಾನಿಪುರದ ಐತಿಹಾಸಿಕ ಜಯ: ದೀದಿ ಕೋಟೆಯಲ್ಲಿ ಕಮಲ ಅರಳಿಸಿದ ಸುವೇಂದು ಈ ಬಾರಿಯ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಮೂಲಕ ದೊಡ್ಡ ಸಾಹಸಕ್ಕೆ ಕೈಹಾಕಿ ಯಶಸ್ವಿಯಾದರು. ತಮ್ಮ ತವರು ಕ್ಷೇತ್ರ ನಂದಿಗ್ರಾಮದ ಜತೆಗೆ, ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ ಭವಾನಿಪುರದಲ್ಲೂ ಕಣಕ್ಕಿಳಿದಿದ್ದರು.

ಭೂಮಿಪುತ್ರನ ಪಟ್ಟಾಭಿಷೇಕ

ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಒಂದು ಸುದೀರ್ಘ ಕಾಲದ ನಂತರ ಹೋರಾಟದ ಹಾದಿಯಿಂದ ಬಂದ ನಾಯಕನೊಬ್ಬ ಮುಖ್ಯಮಂತ್ರಿ ಪೀಠವನ್ನೇರಿದ್ದಾರೆ. ಭೂಮಿಪುತ್ರ(ಮಣ್ಣಿನ ಮಗ) ಎಂದು ಕರೆಯಲ್ಪಡುವ ಸುವೇಂದು ಅಧಿಕಾರಿ ಶನಿವಾರ ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ.



ಸುವೇಂದು ಸಂಪುಟದ ಪಂಚರತ್ನಗಳು

ಸುವೇಂದು ಅಧಿಕಾರಿ ಅವರ ಸಚಿವ ಸಂಪುಟವು ಬಂಗಾಳದ ವಿವಿಧ ಸಮುದಾಯ ಮತ್ತು ಭೌಗೋಳಿಕ ಪ್ರದೇಶಗಳನ್ನು ಪ್ರತಿನಿಧಿಸುವಂತೆ ರಚನೆಯಾಗಿದೆ. ಐವರು ಪ್ರಮುಖ ಸಚಿವರ ವಿವರ ಇಲ್ಲಿದೆ:

1 ದಿಲೀಪ್ ಘೋಷ್

ಬಿಜೆಪಿಯ ಹಿರಿಯ ನಾಯಕ ಮತ್ತು ಮಾಜಿ ರಾಜ್ಯಾಧ್ಯಕ್ಷರಾದ ದಿಲೀಪ್ ಘೋಷ್ ಅವರು ಸಂಘ ಪರಿವಾರದ ಹಿನ್ನೆಲೆಯಿಂದ ಬಂದವರು. ಆರೆಸ್ಸೆಸ್ ಪ್ರಚಾರಕರಾಗಿ ಕೆಲಸ ಮಾಡಿದ್ದ ಇವರು, ಬಂಗಾಳದಲ್ಲಿ ಬಿಜೆಪಿಯ ನೆಲೆಯನ್ನು ಹಳ್ಳಿ ಹಳ್ಳಿಗಳಿಗೆ ತಲುಪಿಸಿದವರು. ಮೇದಿನಿಪುರದ ಸಂಸದರಾಗಿದ್ದ ಇವರು, ಸುವೇಂದು ಸಂಪುಟದ ಅತ್ಯಂತ ಅನುಭವಿ ಮುಖ. ಇವರನ್ನು ಬಂಗಾಳ ಬಿಜೆಪಿಯ ಆರ್ಕಿಟೆಕ್ಟ್ ಎಂದೇ ಕರೆಯಲಾಗುತ್ತದೆ.

2 ಅಗ್ನಿಮಿತ್ರ ಪೌಲ್

ನೂತನ ಸಂಪುಟದ ಏಕೈಕ ಮಹಿಳಾ ಸಚಿವೆ. ವೃತ್ತಿಯಲ್ಲಿ ಪ್ರಸಿದ್ಧ ಫ್ಯಾಷನ್ ಡಿಸೈನರ್ ಆಗಿದ್ದ ಅಗ್ನಿಮಿತ್ರ ಅವರು 2019ರಲ್ಲಿ ರಾಜಕೀಯಕ್ಕೆ ಬಂದರು. ಅತಿ ಕಡಿಮೆ ಅವಧಿಯಲ್ಲಿ ಪಕ್ಷದ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಇವರು, ಅಸನ್ಸೋಲ್ ದಕ್ಷಿಣ ಕ್ಷೇತ್ರದಿಂದ ಸತತ ಎರಡನೇ ಬಾರಿ ಜಯ ಸಾಧಿಸಿದ್ದಾರೆ.

3 ನಿಸಿತ್ ಪ್ರಮಾಣಿಕ್

ಉತ್ತರ ಬಂಗಾಳದ ಯುವ ಶಕ್ತಿ ಎಂದೇ ಗುರುತಿಸಲ್ಪಟ್ಟಿರುವ ನಿಸಿತ್, ಕೇವಲ 35ನೇ ವಯಸ್ಸಿಗೆ ಕೇಂದ್ರ ಸಚಿವರಾದವರು. ಉತ್ತರ ಬಂಗಾಳದ ರಾಜವಂಶಿ ಸಮುದಾಯದ ಪ್ರಭಾವಿ ನಾಯಕರಾದ ಇವರು, ಗೃಹ ಮತ್ತು ಕ್ರೀಡಾ ಇಲಾಖೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಇವರ ಸೇರ್ಪಡೆಯು ಉತ್ತರ ಬಂಗಾಳದ ಅಭಿವೃದ್ಧಿಗೆ ಹೊಸ ವೇಗ ನೀಡಲಿದೆ.

4 ಅಶೋಕ್ ಕೀರ್ತನಿಯಾ

ಉತ್ತರ 24 ಪರಗಣ ಜಿಲ್ಲೆಯ ಬಂಗಾಂವ್ ಉತ್ತರ ಕ್ಷೇತ್ರದ ಶಾಸಕರಾದ ಇವರು ಮಟುವಾ ಸಮುದಾಯದ ಪ್ರಬಲ ಧ್ವನಿ. ವ್ಯಾಪಾರ ಹಿನ್ನೆಲೆಯಿಂದ ಬಂದ ಇವರು ಪಕ್ಷದ ಸಾಂಘಿಕ ಕೆಲಸಗಳಲ್ಲಿ ಮುಂಚೂಣಿಯಲ್ಲಿದ್ದರು. ಮಟುವಾ ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಇವರ ಪಾತ್ರ ಪ್ರಮುಖವಾಗಿದೆ.

5 ಕ್ಷುದಿರಾಮ್ ತುಡು

ಬಂಕುರಾ ಜಿಲ್ಲೆಯ ರಾಣಿಬಂಧ್ ಕ್ಷೇತ್ರವನ್ನು ಪ್ರತಿನಿಧಿಸುವ ಕ್ಷುದಿರಾಮ್ ಅವರು ಪ್ರಬಲ ಬುಡಕಟ್ಟು ನಾಯಕ. ಜಂಗಲ್ ಮಹಲ್ ಪ್ರದೇಶದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಇವರಿಗೆ ಸಚಿವ ಸ್ಥಾನ ನೀಡಿರುವುದು ಬಿಜೆಪಿಯ ಸಾಮಾಜಿಕ ನ್ಯಾಯದ ಭಾಗವಾಗಿದೆ. ಬುಡಕಟ್ಟು ಸಮುದಾಯಗಳನ್ನು ಸರ್ಕಾರದ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಇವರ ಮೇಲಿದೆ.

ಈ ಐವರು ಸಚಿವರ ತಂಡವು ಸುವೇಂದು ಅಧಿಕಾರಿ ಅವರ ನೇತೃತ್ವದಲ್ಲಿ ಸೋನಾರ್ ಬಾಂಗ್ಲಾ ನಿರ್ಮಾಣದ ಗುರಿ ಹೊಂದಿದೆ. ಬಂಗಾಳದ ಕೈಗಾರಿಕೀಕರಣ ಮತ್ತು ಕೇಂದ್ರ ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವುದು ಈ ಹೊಸ ಸರ್ಕಾರದ ಮುಂದಿರುವ ದೊಡ್ಡ ಜವಾಬ್ದಾರಿಗಳಾಗಿವೆ.

ಕಿರುಸುದ್ದಿ

ಭಾರತ-ಆಫ್ರಿಕಾ ನಡುವಿನ ಸಂಬಂಧ ವೃದ್ಧಿಗೆ ಸಿದ್ಧತೆ

ಹೊಸದಿಲ್ಲಿ: ಭಾರತ ಆಫ್ರಿಕಾದೊಂದಿಗಿನ ತನ್ನ ಸಂಬಂಧ ಮತ್ತಷ್ಟು ಬಲಪಡಿಸುವ ಮಹತ್ವಾಕಾಂಕ್ಷೆ ಮಾರ್ಗಸೂಚಿಯನ್ನು ಮೇ 31ರಂದು ನಡೆಯುವ ನಿರ್ಣಾಯಕ ಶೃಂಗಸಭೆಯಲ್ಲಿ ಅನಾವರಣಗೊಳಿಸಲು ಸಜ್ಜಾಗಿದೆ. ಇದು ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಏರಿಳಿತಗಳ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಗುರಿ ಹೊಂದಿದೆ. ದಿಲ್ಲಿಯಲ್ಲಿ ನಡೆಯಲಿರುವ ಭಾರತ ಆಫ್ರಿಕಾ ಶೃಂಗಸಭೆಯಲ್ಲಿ ಗಣನೀಯ ಸಂಖ್ಯೆಯ ಆಫ್ರಿಕನ್ ರಾಷ್ಟ್ರಗಳ ಉನ್ನತ ನಾಯಕರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಶೃಂಗಸಭೆಯು ಮುಖ್ಯವಾಗಿ ಆರ್ಥಿಕತೆ ಮತ್ತು ವ್ಯಾಪಾರ, ಕೃಷಿ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವತ್ತ ಗಮನ ಹರಿಸುತ್ತದೆ.

ಅನಿಲ್ ಅಂಬಾನಿ ಒಡೆತನದ ಕಂಪನಿ ಮೇಲೆ ಸಿಬಿಐ ದಾಳಿ

ಮುಂಬೈ: ಅನಿಲ್ ಅಂಬಾನಿ ಒಡೆತನ ಹಲವು ಕಂಪನಿಗಳ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ (ಸಿಬಿಐ) ಮುಂಬೈನ 17 ಸ್ಥಳಗಳ ಮೇಲೆ ದಾಳಿ ನಡೆಸಿದೆ. ದಾಳಿ ರಿಲಯನ್ಸ್ ಎಡಿಎ ಗ್ರೂಪ್ ಕಂಪನಿಗಳಾದ ರಿಲಯನ್ಸ್ ಟೆಲಿಕಾಂ ಲಿಮಿಟೆಡ್, ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್ ಮತ್ತು ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ ಮತ್ತು ಅವುಗಳ ನಿರ್ದೇಶಕರ ವಿರುದ್ಧ ದಾಖಲಾಗಿರುವ ಪ್ರಕರಣಗಳೂ ಒಳಗೊಂಡಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಸಿಬಿಐ, ಸಾವಿರಾರು ಕೋಟಿ ರೂಪಾಯಿಗಳ ವಂಚನೆಗಳಿಗೆ ಸಂಬಂಧಿಸಿದಂತೆ ವಿವಿಧ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಎಲ್‌ಐಸಿ ಸಲ್ಲಿಸಿದ ದೂರುಗಳ ಆಧಾರದ ಮೇಲೆ ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಸಮೂಹದ ವಿರುದ್ಧ ಏಳು ಪ್ರಕರಣಗಳನ್ನು ದಾಖಲಿಸಿತ್ತು.

ದಾಳಿ ಸಾಧ್ಯತೆ: ದಿಲ್ಲಿ ಬಿಜೆಪಿ ಕಚೇರಿ ಸುತ್ತ ಭದ್ರತೆ ಹೆಚ್ಚಳ

ಹೊಸದಿಲ್ಲಿ: ದಿಲ್ಲಿಯ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಚೇರಿಯ ಮೇಲೆ ಸಂಭಾವ್ಯ ದಾಳಿಯ ಬಗ್ಗೆ ಎಚ್ಚರಿಕೆ ನೀಡಲಾಗಿದ್ದು, ಈ ಹಿನ್ನಲ್ಲೆ ಭದ್ರತೆಯನ್ನು ಹೆಚ್ಚಿಸಲಾಗಿದೆ. ದಾಳಿಕೋರರು ಡಿಡಿಯು ಮಾರ್ಗದಲ್ಲಿರುವ ದಿಲ್ಲಿ ಬಿಜೆಪಿ ಪ್ರಧಾನ ಕಚೇರಿ ಮತ್ತು ಆ ಪ್ರದೇಶದ ಇತರ ಸರ್ಕಾರಿ ಕಚೇರಿಗಳನ್ನು ಗುರಿಯಾಗಿಸುವ ಸಾಧ್ಯತೆಯಿದೆ ಎಂದು ಗುಪ್ತಚರ ವರದಿಯಿಂದ ತಿಳಿದು ಬಂದಿದೆ. ಗುಪ್ತಚರ ಮಾಹಿತಿ ಬೆನ್ನಲ್ಲೇ ತಕ್ಷಣ ಭದ್ರತಾ ಸಂಸ್ಥೆಗಳನ್ನು ಹೈ ಅಲರ್ಟ್‌ನಲ್ಲಿ ಇರಿಸಲಾಗಿದೆ.

ಪಿಎಂಎಲ್‌ಎ ಪ್ರಕರಣ: ಆಪ್ ಸಚಿವನ ಬಂಧನ

ಚಂಡೀಗಢ: ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಅವರನ್ನು ಜಾರಿ ನಿರ್ದೇಶನಾಲಯ ಶನಿವಾರ ಬಂಧಿಸಿದೆ.

ಅಧಿಕಾರಿಗಳ ಪ್ರಕಾರ, ಅರೋರಾ(62) ಅವರನ್ನು ಚಂಡೀಗಢದಲ್ಲಿರುವ ಅವರ ಅಧಿಕೃತ ನಿವಾಸದಲ್ಲಿ ಮುಂಜಾನೆ ದಾಳಿ ನಡೆಸಿದ ನಂತರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅನ್ವಯದಲ್ಲಿ ವಶಕ್ಕೆ ತೆಗೆದುಕೊಳ್ಳಲಾಗಿದೆ.



ಈ ಕಾರ್ಯಾಚರಣೆಯ ಭಾಗವಾಗಿ ಇಡಿ ಉತ್ತರ ಭಾರತದಾದ್ಯಂತ ಐದು ಸ್ಥಳಗಳಲ್ಲಿ ಶೋಧ ನಡೆಸಿದ್ದು, ಇದರಲ್ಲಿ ದಿಲ್ಲಿಯ ಎರಡು ಸ್ಥಳಗಳು ಮತ್ತು ಗುರುಗ್ರಾಮದ ಉದ್ಯೋಗ್ ವಿಹಾರದಲ್ಲಿರುವ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಎಂಬ ಕಂಪನಿ ಸೇರಿವೆ. ಇಡಿ ಪಿಎಂಎಲ್‌ಎ ಕ್ರಿಮಿನಲ್ ವಿಭಾಗಗಳಲ್ಲಿ ಹೊಸ ಪ್ರಕರಣವನ್ನು ದಾಖಲಿಸಿದ ನಂತರ ಈ ದಾಳಿಗಳು ನಡೆದಿವೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ನಾಗರಿಕ ನಿಬಂಧನೆಗಳಲ್ಲಿ ಅರೋರಾ ಅವರಿಗೆ ಸಂಬಂಧಿತ ಘಟಕಗಳ ಮೇಲೆ ಕಳೆದ ತಿಂಗಳು ದಾಳಿ ನಡೆಸಿತ್ತು.

ಈ ಕ್ರಮದ ಭಾಗವಾಗಿ, ಅಕ್ರಮ ಮಾರಾಟ ಮತ್ತು ರಫ್ತುಗಳ ಮೂಲಕ ಫೆಮಾ ಉಲ್ಲಂಘನೆಯ ಆರೋಪದ ಮೇಲೆ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್, ಅದರ ನಿರ್ದೇಶಕ ಅರೋರಾ ಮತ್ತು ಅವರೊಂದಿಗೆ ಸಂಬಂಧ ಹೊಂದಿರುವ ಘಟಕಗಳ ಚರ ಮತ್ತು ಸ್ಥಿರ ಆಸ್ತಿಗಳನ್ನು ಇಡಿ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಭ್ರಷ್ಟಾಚಾರ: ಮೂರನೆ ಸ್ಥಾನದಲ್ಲಿದೆ ಕರ್ನಾಟಕ

ಹೊಸದಿಲ್ಲಿ: ಭ್ರಷ್ಟಾಚಾರದಲ್ಲಿ ತೀರಾ ಮುಂಚೂಣಿಯಲ್ಲಿರುವ ಮೂರು ರಾಜ್ಯಗಳ ಪೈಕಿ ಕರ್ನಾಟಕ ತೃತೀಯ ಸ್ಥಾನದಲ್ಲಿದೆ. 2024ರಲ್ಲಿ ಕರ್ನಾಟಕದಲ್ಲಿ ದಾಖಲಾಗಿರುವ ಭ್ರಷ್ಟಾಚಾರ ಪ್ರಕರಣಗಳು 334 ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿರುವ ಅಮಕಿ-ಅಂಶ ಹೇಳಿದೆ.

721 ಪ್ರಕರಣಗಳೊಂದಿಗೆ ಭ್ರಷ್ಟಾಚಾರದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ, 374 ಭ್ರಷ್ಟಾಚಾರ ಪ್ರಕರಣಗಳೊಂದಿಗೆ ತಮಿಳುನಾಡು ದ್ವಿತೀಯ ಸ್ಥಾನದಲ್ಲಿದ್ದರೆ, ಕರ್ನಾಟಕ ತೃತೀಯ ಸ್ಥಾನಿಯಾಗಿದೆ. ಅನಧಿಕೃತ ಆಸ್ತಿಪಾಸ್ತಿ ಪ್ರಕರಣಗಳಲ್ಲಿ ಕರ್ನಾಟಕ 75 ಪ್ರಕರಣಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ನಂತರ 62 ಪ್ರಕರಣಗಳೊಂದಿಗೆ ಒಡಿಶಾ ದ್ವಿತೀಯ ಸ್ಥಾನದಲ್ಲಿದೆ. 44 ಪ್ರಕರಣಗಳೊಂದಿಗೆ ಅಸ್ಸಾಂ ತೃತೀಯ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ 2023ರಲ್ಲಿ ದಾಖಲಾದ ಭ್ರಷ್ಟಾಚಾರ ಪ್ರಕರಣಗಳು 362, 2022ರಲ್ಲಿ ಈ ಸಂಖ್ಯೆ 389 ಇತ್ತು. ಲೋಕಾಯುಕ್ತದ ಮರುಸ್ಥಾಪನೆ ನಂತರದಲ್ಲಿ ಒಂಬುಡ್ಸ್‌ಮನ್ ಸ್ಥಳೀಯವಾಗಿ ಹಾಗೂ ತಳಸ್ತರಗಳಲ್ಲಿ ಬೇಹುಗಾರಿಕೆ ಮುಖೇನ ಮಾಹಿತಿ ಕ್ರೋಢೀಕರಿಸಿ, ಗ್ರೌಂಡ್ ಲೆವೆಲ್ ರಿಸರ್ಚ್‌ನೊಂದಿಗೆ ಹಂಚಿಕೊಳ್ಳುವರು. ನಂತರ ಶಂಕಿತ ಭ್ರಷ್ಟ ಅಧಿಕಾರಿಗಳ ವಿರುದ್ಧ ದಾಳಿ ನಡೆಯುವುದು. ನಿಯತ ದಾಳಿ ಕಾರ್ಯಾಚರಣೆ ಪರಿಣಾಮ, ದಾಖಲಾಗುತ್ತಿರುವ ಭ್ರಷ್ಟಾಚಾರ ಪ್ರಕರಣಗಳ ಸಂಖ್ಯೆ ಹೆಚ್ಚಿದೆ. 334 ಭ್ರಷ್ಟಾಚಾರ ಪ್ರಕರಣಗಳಲ್ಲಿ 237 ಪ್ರಕರಣಗಳು ಲಂಚ ಸ್ವೀಕಾರ ಸಂದರ್ಭ ಅಧಿಕಾರಿಗಳು ಸಿಕ್ಕಿ ಬಿದ್ದ ಪ್ರಕರಣಗಳಿವೆ.

ದೇಶದ ಕಟ್ಟಕಡೆ ವ್ಯಕ್ತಿಗೂ ನ್ಯಾಯದಾನಕ್ಕೆ ನೆರವು

ನಾಂಗ್‌ಪೋಹ್(ಮೇಘಾಲಯ): ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯದಾನಕ್ಕಾಗಿ ಕಾನೂನು ನೆರವು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಸಮಗ್ರಗೊಳಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ನ್ಯಾ.ಸೂರ್ಯಕಾಂತ್ ಹೇಳಿದ್ದಾರೆ. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರೂ ಆಗಿರುವ ಸಿಜೆಐ ಸೂರ್ಯಕಾಂತ್ ಮೇಘಾಲಯದ ರಿ ಭೋಯಿ ಜಿಲ್ಲೆಯಲ್ಲಿ ಜಾಗೃತಿ ಶಿಬಿರವನ್ನು ಉದ್ದೇಶಿಸಿ ಈ ರೀತಿ ಅಭಿಪ್ರಾಯಿಸಿದರು.

ಕಲ್ಯಾಣಯೋಜನೆಗಳುತಳಸ್ತರದಜನರಿಗೂತಲುಪುವಂತಾಗಲು ಆರೋಗ್ಯ ಸೇವೆಗಳು, ಶೈಕ್ಷಣಿಕ ಬೆಂಬಲ ,ಜೀವನೋಪಾಯದ ಅವಕಾಶಗಳು, ಪುನರ್ವಸತಿ ನೆರವು ಇತ್ಯಾದಿಗಳನ್ನು ಇಂತಹ ಶಿಬಿರಗಳ ಮುಖೇನ ಸಂಯೋಜಿಸಲಾಗುತ್ತದೆ . ಸರಕಾರದ ಇಲಾಖೆಗಳು, ಸಂಘಟನೆಗಳು, ಕಾನೂನು ಸಂಸ್ಥೆಗಳು ಅನುಷ್ಠಾನಿಸಿರುವ ಪ್ರಸ್ತುತ ಎಲ್ಲಾ ಕಲ್ಯಾಣ ಯೋಜನೆಗಳು ಒಂದೇ ಸೂರಿನಡಿ ಎಲ್ಲರಿಗೂ ಲಭಿಸುವಂತಾಗಬೇಕು. ಈ ನಿಟ್ಟಿನಲ್ಲಿ ಶ್ರಮಿಸುವಂತೆ ಅಧಿಕಾರಿವರ್ಗಕ್ಕೆ ಸಿಜೆಐ ಕರೆ ನೀಡಿದರು.

ಮೇಘಾಲಯ ಉಚ್ಚ ನ್ಯಾಯಾಲಯ ಮತ್ತು ಮೇಘಾಲಯ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯ ಸರಕಾರದ ಸಹಯೋಗದೊಂದಿಗೆ, ಬ್ರಿಡ್ಜಿಂಗ್ ದ ಗ್ಯಾಪ್ ಪ್ರಧಾನ ವಿಷಯವಾಗಿರುವಂತೆ, ಎನ್‌ಎಎಲ್‌ಎಸ್‌ಎ ಸ್ಕೀಮ್‌ಗಳು ಮತ್ತು ಸರಕಾರದ ಕಲ್ಯಾಣ ಯೋಜನೆಗಳ ಕುರಿತು ರಿ ಭೋಯಿ ಜಿಲ್ಲೆಯ ಮಂಗಾರ್‌ನಲ್ಲಿ ಬೃಹತ್ ಶಿಬಿರ -ಜಾಗೃತಿ ಕಾರ್ಯಕ್ರಮ ಆಯೋಜಿಸಿತ್ತು.

ಹಾರ್ಮುಜ್ ಬಳಿ ಭಾರತೀಯ ನಾವಿಕನ ಸಾವು

ದುಬೈ: ಹಾರ್ಮುಜ್ ಜಲಸಂಧಿಯ ಬಳಿ ಶುಕ್ರವಾರ ವಾಣಿಜ್ಯ ನೌಕೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಓರ್ವ ಭಾರತೀಯ ನಾವಿಕ ಮೃತಪಟ್ಟಿದ್ದು, ಉಳಿದ 17 ಮಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ. ದುಬೈನಿಂದ ಇರಾನ್‌ನ ಬಂದರ್ ಅಬ್ಬಾಸ್‌ಗೆ ವಾಣಿಜ್ಯ ಸರಕುಗಳನ್ನು ಸಾಗಿಸುತ್ತಿದ್ದ ನೌಕೆಯಲ್ಲಿ ಈ ಬೆಂಕಿ ಕಾಣಿಸಿಕೊಂಡಿದೆ. ಒಟ್ಟು 18 ಸದಸ್ಯರಿದ್ದ ಈ ಹಡಗಿನ ಸಿಬ್ಬಂದಿಯ ರಕ್ಷಣೆಗೆ ಯುನೈಟೆಡ್ ಅರಬ್ ಎಮಿರೇಟ್ಸ್‌ನ ತುರ್ತು ರಕ್ಷಣಾ ತಂಡಗಳು ಮತ್ತು ಹತ್ತಿರದಲ್ಲಿದ್ದ ಇತರ ವಾಣಿಜ್ಯ ನೌಕೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ. ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದ್ದ 17 ನಾವಿಕರನ್ನು ಸುರಕ್ಷಿತವಾಗಿ ಹೊರತರಲಾಗಿದೆಯಾದರೂ, ಓರ್ವ ನಾವಿಕ ಗಂಭೀರ ಗಾಯಗಳಿಂದಾಗಿ ಮೃತಪಟ್ಟಿದ್ದಾರೆ. ರಕ್ಷಿಸಲಾದ ಉಳಿದ ನಾವಿಕರನ್ನು ಹೆಚ್ಚಿನ ವೈದ್ಯಕೀಯ ತಪಾಸಣೆಗಾಗಿ ಹತ್ತಿರದ ಬಂದರಿಗೆ ರವಾನಿಸಲಾಗಿದೆ.

ಎಫ್‌ಪಿವಿ ಸರಣಿಯ ವೇಗದ ಗಸ್ತು ಹಡಗು ನಿಯೋಜನೆ

ಕರಾವಳಿ ಪಡೆಗೆ ಅಚಲ ಬಲ

ಹೊಸದಿಲ್ಲಿ: ವೇಗದ ಗಸ್ತು ಹಡಗು(ಎಫ್‌ಪಿವಿ) ಅಚಲ್ ಅನ್ನು ಭಾರತೀಯ ಕರಾವಳಿ ಪಡೆಗೆ ನಿಯೋಜಿಸಲಾಗಿದ್ದು, ಇದು ಕಡಲ ಪಡೆಯ ಕಾರ್ಯಾಚರಣೆಯ ಸಾಮರ್ಥ್ಯ ಹೆಚ್ಚಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋವಾ ಶಿಪ್‌ಯಾರ್ಡ್ ಲಿಮಿಟೆಡ್(ಜಿಎಸ್‌ಎಲ್) ಕರಾವಳಿ ಕಾವಲು ಪಡೆಗಾಗಿ ನಿರ್ಮಿಸುತ್ತಿರುವ ಎಂಟು ಎಫ್‌ಪಿವಿಗಳ ಸರಣಿಯಲ್ಲಿ ಅಚಲ್ ಐದನೇಯದಾಗಿದೆ. ಹೊಸ ತಲೆಮಾರಿನ ಅದಮ್ಯಾ ವರ್ಗದ ವೇಗದ ಗಸ್ತು ಹಡಗನ್ನು ಗೋವಾ ಲಿಮಿಟೆಡ್‌ನ ಐಸಿಜಿಗೆ ನಿಯೋಜಿಸಲಾಗಿದ್ದು, ಇದು ಗಮನಾರ್ಹ ಸಾಮರ್ಥ್ಯ ವರ್ಧನೆಯನ್ನು ಸೂಚಿಸುತ್ತದೆ ಎಂದು ಪಡೆಯ ವಕ್ತಾರರು ತಿಳಿಸಿದ್ದಾರೆ.

ರಕ್ಷಣಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮಹಾನಿರ್ದೇಶಕ (ಸ್ವಾಧೀನ) ಎ. ಅನ್ಬರಸು ಅವರು ಕೋಸ್ಟ್ ಗಾರ್ಡ್ ಪ್ರದೇಶದ (ವಾಯುವ್ಯ) ಕಮಾಂಡರ್ ಇನ್ಸ್‌ಪೆಕ್ಟರ್ ಜನರಲ್ ಟೇಕೂರ್ ಶಶಿ ಕುಮಾರ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು ಮತ್ತು ಜಿಎಸ್‌ಎಲ್‌ನ ಪ್ರತಿನಿಧಿಗಳ ಸಮ್ಮುಖದಲ್ಲಿ ಈ ಹಡಗನ್ನು ಔಪಚಾರಿಕವಾಗಿ ಸೇವೆಗೆ ನಿಯೋಜಿಸಿಸಲಾಗಿದೆ. ಈ ಹಡಗು ಗುಜರಾತಿನ ವಾಡಿನಾರ್‌ನಲ್ಲಿ ನೆಲೆಗೊಳ್ಳಲಿದ್ದು, ಕೋಸ್ಟ್ ಗಾರ್ಡ್ ಪ್ರದೇಶದ (ವಾಯುವ್ಯ) ಕಮಾಂಡರ್‌ನ ಆಡಳಿತಾತ್ಮಕ ಮತ್ತು ಕಾರ್ಯಾಚರಣೆಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ವಕ್ತಾರರು ತಿಳಿಸಿದ್ದಾರೆ. ಈ ಹಡಗು ಕಣ್ಗಾವಲು, ಶೋಧ ಮತ್ತು ಪಾರುಗಾಣಿಕಾ (ಎಸ್‌ಎಆರ್), ಕಳ್ಳಸಾಗಣೆ ವಿರೋಧಿ ಕಾರ್ಯಾಚರಣೆಗಳು ಮತ್ತು ಮಾಲಿನ್ಯ ಪ್ರತಿಕ್ರಿಯೆ ಸೇರಿದಂತೆ ವ್ಯಾಪಕ ಶ್ರೇಣಿಯ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತದೆ, ಇದು ಭಾರತದ ಪೂರ್ವ ಕಡಲ ಗಡಿಯನ್ನು ರಕ್ಷಿಸುವಲ್ಲಿ ಭಾರತೀಯ ಕೋಸ್ಟ್ ಗಾರ್ಡ್‌ನ ಪಾತ್ರವನ್ನು ಬಲಪಡಿಸುತ್ತದೆ.



ನೌಕಾಪಡೆ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಸ್ವಾಮಿನಾಥನ್ ನೇಮಕ

ಲೆ। ಜ. ಸುಬ್ರಮಣಿ ನೂತನ ಸಿಡಿಎಸ್

ಹೊಸದಿಲ್ಲಿ: ಭಾರತೀಯ ಸಶಸ್ತ್ರ ಪಡೆಗಳ ಉನ್ನತ ಹುದ್ದೆಗಳಿಗೆ ಕೇಂದ್ರ ಸರ್ಕಾರ ಶನಿವಾರ ಪ್ರಮುಖ ನೇಮಕಾತಿಗಳನ್ನು ಪ್ರಕಟಿಸಿದೆ. ದೇಶದ ಮುಂದಿನ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ(ಸಿಡಿಎಸ್) ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ(ನಿವೃತ್ತ) ಮತ್ತು ನೌಕಾಪಡೆಯ ಮುಂದಿನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ನೇಮಕ ಮಾಡಲಾಗಿದೆ.

ಪ್ರಸ್ತುತ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಮೇ 30ರಂದು ನಿವೃತ್ತರಾಗಲಿದ್ದು, ಅವರ ಸ್ಥಾನವನ್ನು ಲೆ. ಜನರಲ್ ಸುಬ್ರಮಣಿ ಅಲಂಕರಿಸಲಿದ್ದಾರೆ. ಇವರು ಸೈನಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿಯೂ ಜವಾಬ್ದಾರಿ ನಿರ್ವಹಿಸಲಿದ್ದಾರೆ. ಸಶಸ್ತ್ರಪಡೆಗಳಲ್ಲಿ ಸಮಗ್ರ ಸೇನಾ ಪಡೆಗಳ ಏಕೀಕರಣ ಯೋಜನೆಯನ್ನು ಜಾರಿಗೆ ತರುವುದು ಇವರ ಪ್ರಮುಖ ಗುರಿ. ಅದೇ ರೀತಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ, ಮೇ 31ರಂದು ನಿವೃತ್ತರಾಗಲಿದ್ದು, ಅಂದೇ ವೈಸ್ ಅಡ್ಮಿರಲ್ ಸ್ವಾಮಿನಾಥನ್ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಲೆ. ಜನರಲ್ ಸುಬ್ರಮಣಿ: ಜುಲೈ 31, 2024ರಂದು ಸೇನಾಪಡೆಯ ಉಪಮುಖ್ಯಸ್ಥರಾಗಿ ನಿವೃತ್ತರಾಗಿದ್ದ ಸುಬ್ರಮಣಿ, ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿಯ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 1985 ಡಿಸೆಂಬರ್ 14ರಂದು ಗರ್ವಾಲ್ ರೈಫಲ್ಸ್‌ಗೆ ಸೇರ್ಪಡೆಗೊಳ್ಳುವ ಮೂಲಕ ಸೇನಾ ವೃತ್ತಿ ಆರಂಭಿಸಿದ್ದ ಇವರು, ಲಂಡನ್‌ನ ಕಿಂಗ್ಸ್ ಕಾಲೇಜ್‌ನಿಂದ ಎಂ.ಎ ಪದವಿ ಪಡೆದಿದ್ದಾರೆ.





ನೌಕಾಪಡೆಗೆ ನೂತನ ಸಾರಥಿ

1987 ಜುಲೈ 1ರಂದು ನೌಕಾಪಡೆಗೆ ಸೇರಿದ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಕಮ್ಯುನಿಕೇಶನ್ ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ ವಿಭಾಗದಲ್ಲಿ ತಜ್ಞರು. ಐಎನ್‌ಎಸ್ ವಿಕ್ರಮಾದಿತ್ಯ ಸೇರಿದಂತೆ ವಿವಿಧ ಯುದ್ಧ ನೌಕೆಗಳ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ. ಇವರು ಮುಂಬೈ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಹಾಗೂ ಲಂಡನ್‌ನ ಕಿಂಗ್ಸ್ ಕಾಲೇಜ್‌ನಿಂದ ರಕ್ಷಣಾ ಅಧ್ಯಯನದಲ್ಲಿ ಎಂ.ಎ ಪದವಿ ಪಡೆದಿದ್ದಾರೆ.

ಕಿರುಸುದ್ದಿ

ಡಿಜಿಟಲ್ ಅರೆಸ್ಟ್: ಜೀವ ಬೆದರಿಕೆ

ಹುಬ್ಬಳ್ಳಿ: ವ್ಯಕ್ತಿಯೊಬ್ಬನಿಗೆ ಸ್ಪೈರ್ ಡಿಜಿಟೆಕ್ ಕಂಪನಿಯಲ್ಲಿ ಹೂಡಿಕೆ ಮಾಡಿ ಲಾಭ ಬರದೇ ಇರುವುದರಿಂದ ಮೂವರು ಸೇರಿ ಡಿಜಿಟಲ್ ಅರೆಸ್ಟ್ ಮಾಡಿ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಗೋಕುಲ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ನಗರದ ಯಲ್ಲಪ್ಪ ಕೆ, ಮಲ್ಲಿಕಾರ್ಜುನ ಎಚ್, ಮಡಿವಾಳಪ್ಪ ಕೆ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಮಲ್ಲಿಕಾರ್ಜುನ ಎಂ. ಎಂಬಾತನಿಗೆ ಜೀವ ಬೆದರಿಕೆ ಹಾಕಲಾಗಿದೆ. ಮಲ್ಲಿಕಾರ್ಜುನ ಸ್ಪೈರ್ ಡಿಜಿಟೆಕ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿ ಲಾಭಗಳಿಸಿದ್ದು, ಆರೋಪಿತರಿಗೂ ಹೂಡಿಕೆ ಮಾಡಿಸಿ ಲಾಭ ಕೊಡಿಸಿದ್ದಾನೆ. ಮೊದ ಮೊದಲು ಹೂಡಿಕೆ ಮಾಡಿದ ಆರೋಪಿತರು ಲಾಭ ಪಡೆದುಕೊಂಡಿದ್ದಾರೆ. ಆದರೆ ಇತ್ತೀಚೆಗೆ ಲಾಭ ಬರದೇ ಇರುವುದರಿಂದ ಮೇ 2ರಂದು ಮಲ್ಲಿಕಾರ್ಜುನನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಮೇ 7ರವರೆಗೆ ಗೃಹಬಂಧನದಲ್ಲಿಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗೋಕುಲ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಕ್ತ ನೀಡಿ ಮಾನವೀಯತೆ ಮೆರೆದ ಮಂಜು ಪಂತೋಜಿ



ದಾಂಡೇಲಿ: ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ವ್ಯಕ್ತಿಯೊಬ್ಬರಿಗೆ ಓ ಪ್ಲಸ್ ತುರ್ತು ರಕ್ತದ ಅವಶ್ಯಕತೆ ಇದ್ದು, ರಕ್ತದಾನಿಗಳು ರಕ್ತವನ್ನು ನೀಡುವಂತೆ ಸಾಮಾಜಿಕ ಜಾಲತಾಣದಲ್ಲಿ ಮನವಿ ಮಾಡಿದ ಹಿನ್ನಲೆಯಲ್ಲಿ ಅದೇ ವರ್ಗದ ರಕ್ತವನ್ನು ಹೊಂದಿರುವ ಯುವ ಪ್ರವಾಸೋದ್ಯಮಿ ಮಂಜು ಪಂತೋಜಿ ಅವರು ಸುದ್ದಿ ತಿಳಿದು ತಕ್ಷಣವೇ ನಗರದ ಸಾರ್ವಜನಿಕ ಆಸ್ಪತ್ರೆಗೆ ಹೋಗಿ, ರಕ್ತದಾನವನ್ನು ಮಾಡಿ ಮಾನವೀಯತೆಯನ್ನು ಮೆರೆದಿದ್ದಾರೆ. ತಡವರಿಯದೆ ಸಮಸ್ಯೆಗೆ ಸ್ಪಂದಿಸಿ ಮಾನವೀಯತೆ ಮೆರೆದ ಮಂಜು ಪಂತೋಜಿಯವರ ಈ ಮಾನವೀಯ ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಬಿಸಿಲಿನ ತಾಪಕ್ಕೆ ಪತ್ರಕರ್ತ ಸಾವು



ಮುದ್ದೇಬಿಹಾಳ: ಬಿಸಿಲಿನ ತಾಪಕ್ಕೆ ಉಸಿರಾಟದ ತೊಂದರೆಯಾಗಿ ತಾಲೂಕಿನ ಹಿರೇಮುರಾಳ ಗ್ರಾಮದ ನಿವಾಸಿ ಪತ್ರಕರ್ತ ಈರಯ್ಯ ಹಿರೇಮಠ ಶುಕ್ರವಾರ ನಿಧನರಾದ ಘಟನೆ ವರದಿ ಆಗಿದೆ. ವಿಕಲಚೇತನರಾದ ಈರಯ್ಯ ಹಿರೇಮಠ ಅವರು ಹಲವಾರು ವರ್ಷದಿಂದ ಪತ್ರಿಕಾ ರಂಗದಲ್ಲಿ ವರದಿಗಾರರಾಗಿ ವಿತರಕರಾಗಿ ಮತ್ತು ವಿಕಲಚೇತನ ಕಾರ್ಯಕರ್ತ, ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರು ತಂದೆ ತಾಯಿ, ಸಹೋದರ, ಇಬ್ಬರು ಸಹೋದರಿಯರು, ಪತ್ನಿ, ಪುತ್ರ ಪುತ್ರಿಯರನ್ನು ಅಗಲಿದ್ದಾರೆ. ಮೃತರ ನಿಧಾನಕ್ಕೆ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಡಿ.ಬಿ.ವಡವಡಗಿ, ಪದಾಧಿಕಾರಿಗಳು ಹಾಗೂ ಸದಸ್ಯರು ಸಂತಾಪ ಸೂಚಿಸಿದ್ದಾರೆ.

ಬುದ್ಧಿಮಾಂಧ್ಯ ಅಪ್ರಾಪ್ತೆ ಮೇಲೆ ವೃದ್ಧರಿಂದ ಅತ್ಯಾಚಾರ: ಫೋಕ್ಸೋ ಪ್ರಕರಣ ದಾಖಲು

ವಿಜಯಪುರ: ಜಿಲ್ಲೆಯ ಗ್ರಾಮೀಣ ಭಾಗದಲ್ಲಿ 16 ವರ್ಷದ ಅಪ್ರಾಪ್ತ ಬುದ್ದಿಮಾಂಧ್ಯ ಬಾಲಕಿ ಮೇಲೆ ವೃದ್ಧರಿಬ್ಬರು ನಿರಂತರ ಅತ್ಯಾಚಾರ ನಡೆಸಿರುವ ಅಮಾನವೀಯ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಇಲ್ಲಿನ 70 ವರ್ಷ ಹಾಗೂ 60 ವರ್ಷದ ವೃದ್ಧರಿಬ್ಬರು ಬುದ್ದಿಮಾಂಧ್ಯ, ಅಪ್ರಾಪ್ತ ಬಾಲಕಿ ಮೇಲೆ ನಿರಂತರ ಅತ್ಯಾಚಾರ ನಡೆಸಿದ್ದು, ಇದರಲ್ಲಿ ಓರ್ವ ವೃದ್ಧ ಬಾಲಕಿಗೆ ಸಂಬಂಧಿಯಾಗಬೇಕಿದ್ದು, ಏನೂ ತಿಳಿಯದ ಅಮಾಯಕ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಈ ಸಂಬಂಧ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಅಡಿ ಪ್ರಕರಣ ದಾಖಲಾಗಿದೆ.

ಕಲಬುರಗಿ ರೊಟ್ಟಿ ವಿದೇಶ ರಫ್ತಿಗೆ ಚಾಲನೆ

ಸಿರಿಧಾನ್ಯಕ್ಕೆ ಜಾಗತಿಕ ಮಾನ್ಯತೆ ಹೆಮ್ಮೆಯ ವಿಷಯ

ಕಲಬುರಗಿ: ಕಲಬುರಗಿಯ ರೊಟ್ಟಿಗೆ ಜಾಗತಿಕವಾಗಿ ಬೇಡಿಕೆ ಹೆಚ್ಚುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಬುರಗಿ ರೊಟ್ಟಿ ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ದೇಶಕ್ಕೆ ರಫ್ತು ಮಾಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ಕಲಬುರಗಿ ರೊಟ್ಟಿಯನ್ನು ವಿದೇಶಕ್ಕೆ ರಫ್ತು ಮಾಡಲು ಪುಣೆಮೂಲದ ಅಸ್ತಮ್ ಟ್ರೇಡರ್ಸ್ ಕಂಪನಿಯೊಂದಿಗೆ ಇಂದಿಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಸೂಕ್ತ ಪ್ಯಾಕೇಜಿಂಗ್ ಮಾಡಿ ಕಲಬುರಗಿ ರೊಟ್ಟಿ ವಿದೇಶಕ್ಕೆ ಕಳುಹಿಸಲಾಗುತ್ತದೆ. ಇದರಿಂದ ನಮ್ಮ ಮಹಿಳೆಯರು ಆರ್ಥಿಕ ಚೇತರಿಕೆ ಕಂಡು ಸ್ವಾಭಿಮಾನದ ಬದುಕು ಸಾಗಿಸಲು ಇದು ನೆರವಾಗಲಿದೆ ಎಂದರು.

ಜಂಟಿ ನಿರ್ದೇಶಕ ಸಮದ ಪಟೇಲ್, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಜಿಪಂ ಸಿಇಓ ಭಂವರ್‌ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಡಿ.ಸಿ.ಎಫ್ ಸುಮಿತ್ ಪಾಟೀಲ, ಅಸ್ತಮ್ ಟ್ರೇಡರ್ಸ್ ಮಾಲೀಕ ರಮೇಶ ಕಡಗಂಚಿ ಇದ್ದರು.



ಕಲಬುರಗಿ ರೊಟ್ಟಿ ಬ್ರ್ಯಾಂಡ್ ಮೂಲಕ ಅಮೇಜಾನ್, ಕಲಬುರಗಿ ರೊಟ್ಟಿ ವೆಬ್‌ಸೈಟ್, ಫ್ರ್ಯಾಂಚೈಸಿ ಹಾಗೂ ಲೋಕಲ್ ಮಾರ್ಕೆಟ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಇದೀಗ ಕಲಬುರಗಿ ರೊಟ್ಟಿಯನ್ನು ಆಸ್ಟ್ರೇಲಿಯಾ, ಕೆನಡಾ ಹಾಗೂ ಯುಎಸ್‌ಎಗೆ ಮುಂದಿನ ಮೂರು ವರ್ಷಕ್ಕೆ ಪ್ರತಿ ವರ್ಷ 1 ಲಕ್ಷ ರೊಟ್ಟಿ ರಫ್ತು ಮಾಡಲು ಪುಣೆ ಮೂಲದ ಅಸ್ತಮ್ ಟ್ರೇಡರ್ಸ್ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

■ ಸಮದ್ ಪಟೇಲ್, ಜಂಟಿ ಕೃಷಿ ನಿರ್ದೇಶಕ, ಕಲಬುರಗಿ

ನಾಗರಾಜ ನಾಯಕರಿಂದ ಅನ್ನ ಸತ್ಯಾಗ್ರಹ

ಅಂಕೋಲಾ: ತಾಲೂಕಿನ ವಂದಿಗೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ತಮ್ಮ ವಕಾಲತ್ತಿನ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವರ ಆಪ್ತ ಗೋಪಾಲಕೃಷ್ಣ ನಾಯಕ ಅವರ ಕಡೆಯವರಿಂದ ದುರ್ವರ್ತನೆ ನಡೆದಿದೆ ಎಂದು ಆರೋಪಿಸಿ ವಕೀಲ ನಾಗರಾಜ ನಾಯಕ ಅವರು ನಡೆಸುತ್ತಿದ್ದ ಧರಣಿ ಮೂರನೇ ದಿನಕ್ಕೆ ತಲುಪಿದ್ದು ಗೃಹ ಸಚಿವರು ಆಗಮಿಸಿ ದೂರು ಆಲಿಸಬೇಕು ಎಂದು ಒತ್ತಾಯಿಸಿ ನಾಗರಾಜ ನಾಯಕ ಶನಿವಾರದಿಂದ ಅನ್ನಾಹಾರ ತ್ಯಜಿಸಿ ಧರಣಿ ಮುಂದುವರಿಸಿದರು.

ಧರಣಿಯಲ್ಲಿ ಬಿಜೆಪಿಯ ಹಿರಿಯ ಮುಖಂಡಜಿ.ಜಿ.ಹೆಗಡೆಪಾಲ್ಗೊಂಡು ಮಾತನಾಡಿ, ಖ್ಯಾತ ವಕೀಲರೊಬ್ಬರು ಅನ್ಯಾಯ ವಿರೋಧಿಸಿ ಧರಣಿ ನಡೆಸುವ ಪರಿಸ್ಥಿತಿ ಬಂದಿರುವುದು ಬೇಸರದ ಸಂಗತಿ ಸಂಬಂಧಿಸಿದವರು ಈ ಕುರಿತಂತೆ ನ್ಯಾಯ ಒದಗಿಸುವ ಕೆಲಸ ಮಾಡಲಿ ಉಪವಾಸ ನಿರತ ನಾಗರಾಜ ನಾಯಕರಿಗೆ ತೊಂದರೆ ಆದರೆ ಜಿಲ್ಲಾಡಳಿತವೇ ಹೊಣೆ ಎಂದರು.

ಬಿಜೆಪಿಯ ನಿಕಟಪೂರ್ವ ಜಿಲ್ಲಾಧ್ಯಕ್ಷ ವೆಂಕಟೇಶ ನಾಯಕ ಮಾತನಾಡಿ, ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೇ ಹಲವಾರು ಬಡವರ ಪರ ನ್ಯಾಯಕ್ಕೆ ಹೋರಾಟ ಮಾಡಿದ ನಾಗರಾಜ ವಕೀಲರಿಗೆ ಬೆದರಿಕೆ ಹಾಕಿರುವ ಕೃತ್ಯ ಖಂಡನೀಯ ಎಂದರು.

ಧರಣಿ ನಿರತ ನಾಗರಾಜ ನಾಯಕ ಮಾತನಾಡಿ, ಅಂಕೋಲಾ ತಾಲೂಕಿನಲ್ಲಿ ಅಕ್ರಮ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವ ಅಧಿಕಾರಿಗಳ ಮೇಲೆ ಕ್ರಮ ಆಗಬೇಕು ಗೃಹ ಸಚಿವರು ಬರುವ ವರೆಗೆ ಧರಣಿ ನಿಲ್ಲಿಸುವುದಿಲ್ಲ ಎಂದರು. ವಿವಿಧ ತಾಲೂಕುಗಳ ವಕೀಲರು ನಾಗರಾಜ ನಾಯಕ ಅವರಿಗೆ ಬೆಂಬಲ ಸೂಚಿಸಿದರು.



ಸಿವಿಲ್ ಏವಿಯೇಷನ್ ಗ್ಯಾಲರಿ ಶೀಘ್ರ ಅನಾವರಣ

ಬೆಳಗಾವಿ: ಜಿಲ್ಲೆಯು ಅಭಿವೃದ್ಧಿ ಪಥದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪನೆಯಾಗುತ್ತಿದೆ. ಶಾಸಕ ಅಭಯ ಪಾಟೀಲ ಕನಸಿನ ಕೂಸಾದ ಹೈಟೆಕ್ 'ಸಿವಿಲ್ ಏವಿಯೇಷನ್ ಗ್ಯಾಲರಿ' ಹಾಗೂ 'ವಿಲೇಜಸ್ ಆಫ್ ಇಂಡಿಯಾ' ಯೋಜನೆ ಈಗ ಲೋಕಾರ್ಪಣೆಗೆ ಸಿದ್ಧವಾಗಿದ್ದು, ಕುಂದಾನಗರಿಯ ಗರಿಮೆ ಹೆಚ್ಚಿಸಲಿದೆ.

ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ವಿಶೇಷ ಮಾರ್ಗದರ್ಶನದಲ್ಲಿ ಸುಮಾರು 25 ಕೋಟಿ ರೂ. ವೆಚ್ಚದಲ್ಲಿ ಈ ಬೃಹತ್ ಕಾಮಗಾರಿ ಆರಂಭಗೊಂಡಿದೆ. ಇದು ಕೇವಲ ಪ್ರವಾಸಿ ತಾಣವಲ್ಲದೆ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ವಿಮಾನಯಾನದ ಬಗ್ಗೆ ಜ್ಞಾನ ನೀಡುವ ಶಿಕ್ಷಣ ಕೇಂದ್ರವಾಗಿಯೂ ಕಾರ್ಯನಿರ್ವಹಿಸಲಿದೆ.

ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸುವುದು. ಸ್ಥಳೀಯ ಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಸೂಕ್ತ ವೇದಿಕೆ ಕಲ್ಪಿಸುವುದೆ ಈ ಯೋಜನೆ ಮುಖ್ಯ ಉದ್ದೇಶವಾಗಿದೆ. ಬರುವ ಜೂನ್ ತಿಂಗಳಿನಲ್ಲಿ ಈ ಅದ್ಭುತ ಲೋಕ ಜನಾರ್ಪಣೆಗೊಳ್ಳುವ ಸಾಧ್ಯತೆಗಳಿದ್ದು, ಜಿಲ್ಲೆಯ ಪ್ರವಾಸೋದ್ಯಮಕ್ಕೆ ಹೊಸ ವೇಗ ನೀಡಲಿದೆ.

ಈ ಯೋಜನೆಯ ಮತ್ತೊಂದು ವಿಶೇಷವೆಂದರೆ 'ವಿಲೇಜಸ್ ಆಫ್ ಇಂಡಿಯಾ' ಅಭಿಯಾನ. ಇದರ ಅಡಿಯಲ್ಲಿ ಗುಜರಾತ್, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಮಿಜೋರಂಹಾಗೂತಮಿಳುನಾಡು ರಾಜ್ಯಗಳ ವಿಶಿಷ್ಟ ಮನೆಗಳನ್ನು ನಿರ್ಮಿಸಲಾಗಿದೆ. ಆಯಾ ರಾಜ್ಯಗಳ ಸಂಸ್ಕೃತಿ, ಜೀವನಶೈಲಿ ಮತ್ತು ಗ್ರಾಮೀಣ ಸೊಗಡನ್ನು ಒಂದು ಸೂರಿನಡಿ ಪರಿಚಯಿಸುವ ಈ ಪ್ರಯತ್ನ ಪ್ರವಾಸಿಗರನ್ನು ಮಂತ್ರಮುಗ್ಧಗೊಳಿಸಲಿದೆ. ಈ ನೂತನ ಕೇಂದ್ರವು ಪ್ರವಾಸಿಗರ ಸಂಖ್ಯೆ ಹೆಚ್ಚಿಸುವುದಲ್ಲದೆ, ಸ್ಥಳೀಯ ವ್ಯಾಪಾರ ವಹಿವಾಟು ಮತ್ತು ಆರ್ಥಿಕತೆಗೆ ದೊಡ್ಡ ಮಟ್ಟದ ಉತ್ತೇಜನ ನೀಡಲಿದೆ ಎಂದು ಶಾಸಕ ಅಭಯ್ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಗಾಂಧಿ ಪ್ರತಿಮೆ ಹತ್ತಿರ ಹೈಡ್ರಾಮಾ । ಬಲವಂತವಾಗಿ ಎಳೆದೊಯ್ದ ಪೊಲೀಸರು

ಏಕಾಂಗಿ ಪ್ರತಿಭಟನೆ: ಕಾಂತಕುಮಾರ ಬಂಧನ

ಧಾರವಾಡ: ಕರ್ನಾಟಕ ಲೋಕಸೇವಾ ಆಯೋಗದ ಅಕ್ರಮಗಳ ತನಿಖೆ ಸಿಬಿಐಗೆ ವಹಿಸುವುದು ಮತ್ತು ರಾಜ್ಯದಲಿನ್ಲ ಸರ್ಕಾರಿ ಖಾಲಿ ಹುದ್ದೆಗಳ ಭರ್ತಿಗೆ ಒತ್ತಾಯಿಸಿ

ಗಾಂಧಿ ಪ್ರತಿಮೆ ಹತ್ತಿರ ಶನಿವಾರ ನಡೆದ ಏಕಾಂಗಿ ಪ್ರತಿಭಟನೆ ತೀವ್ರ ಹೈಡ್ರಾಮಕ್ಕೆ ಸಾಕ್ಷಿಯಾಗಿದೆ.

ಕೆಪಿಎಸ್‌ಸಿಯಲ್ಲಿ ನಡೆದ ಸಾಲು ಸಾಲು ಅಕ್ರಮಗಳ ಕುರಿತು ಸಿಬಿಐ ನಿಷ್ಪಕ್ಷಪಾತ ತನಿಖೆ ವಹಿಸಬೇಕು. ಲಕ್ಷಾಂತರ ನಿರುದ್ಯೋಗಿ ಯುವಕರ ಭವಿಷ್ಯದ ಹಿತಕ್ಕಾಗಿ ತಕ್ಷಣವೇ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಆಗ್ರಹಿಸಿ ಕಾಂತಕುಮಾರ್ ಧರಣಿ ಕೈಗೊಂಡಿದ್ದರು. ಅಖಿಲ ಕರ್ನಾಟಕ ಅಭ್ಯರ್ಥಿಗಳ ಸಂಘದ (ಎಕೆಎಸ್‌ಸಿ) ಅಧ್ಯಕ್ಷ ಕಾಂತಕುಮಾರ ಕೈಗೊಂಡಿದ್ದ ಈ ಪ್ರತಿಭಟನೆ ತಡೆಯಲು ಪೊಲೀಸರು ಮುಂದಾದಾಗ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿ ಕೊನೆಗೆ ಕಾಂತಕುಮಾರ ಬಂಧನದಿಂದ ಶಮನಗೊಂಡಿದೆ.

ಪೊಲೀಸರ ಮಧ್ಯಪ್ರವೇಶ: ಕಾಂತಕುಮಾರ್ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ಆರಂಭಿಸುತ್ತಿದ್ದಂತೆಯೇ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು, ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಯ ಕಾರಣ ನೀಡಿ ಪ್ರತಿಭಟನೆ ನಿಲ್ಲಿಸುವಂತೆ ಸೂಚಿಸಿದರು.

ಪ್ರತಿಮೆ ಬಳಿ ಹೈಡ್ರಾಮಾ: ಬಂಧಿಸುವಾಗ ತೀವ್ರ ಪ್ರತಿರೋಧ ಒಡ್ಡಿದ ಕಾಂತಕುಮಾರ್, ನಾನು ಶಾಂತಿಯುತ ಏಕಾಂಗಿ ಪ್ರತಿಭಟನೆ ನಡೆಸುತ್ತಿದ್ದು, ಇದು ನನ್ನ ಹಕ್ಕು ಎಂದು ಪೊಲೀಸರೊಂದಿಗೆ ವಾಗ್ವಾದಕ್ಕಿಳಿದರು. ಬಳಿಕ ಅವರನ್ನು ಪೊಲೀಸರು ಬಲವಂತವಾಗಿ ಎಳೆದೊಯ್ದ ಘಟನೆ ನಡೆಯಿತು.

ಸರ್ಕಾರದ ವಿರುದ್ಧ ಆಕ್ರೋಶ: ಬಂಧನದ ವೇಳೆ ಮಾತನಾಡಿದ ಕಾಂತಕುಮಾರ್, ಸರ್ಕಾರ ತನ್ನ ಭ್ರಷ್ಟಾಚಾರ ಮುಚ್ಚಿ ಹಾಕುತ್ತಿದೆ. ನ್ಯಾಯ ಕೇಳಿದರೆ, ದಮನಕಾರಿ ನೀತಿ ಅನುಸರಿಸುತ್ತಿದೆ. ಕೆಪಿಎಸ್‌ಸಿ ಅಕ್ರಮದ ಹಿಂದೆ ದೊಡ್ಡ ಜಾಲವೇ ಇದೆ, ಸಿಬಿಐ ತನಿಖೆಗೆ ಆಗ್ರಹ ಮಾಡಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಡೆದ ಈ ಹಠಾತ್ ಬೆಳವಣಿಗೆಯಿಂದಾಗಿ ಸಾರ್ವಜನಿಕರು, ಇತರ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಡಿಸಿ ಕಚೇರಿ ಸುತ್ತಮುತ್ತಲೂ ಪೊಲೀಸ್ ಬಂದೋಬಸ್ತ್ ಹೆಚ್ಚಿಸಲಾಗಿತ್ತು.

ಹುಷಾರಾಗಿ ಹೆಜ್ಜೆ ಇಡಿ

ವಿಜಯೇಂದ್ರಗೆ ಜಾರಕಿಹೊಳಿ ಸಲಹೆ

ಬೆಳಗಾವಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜಕಾರಣದಲ್ಲಿ ಹುಷಾರಾಗಿ ಹೆಜ್ಜೆ ಇಡಬೇಕು. ಆಗ ಮಾತ್ರ ಅವರು ಯಶಸ್ವಿಯಾಗಲು ಸಾಧ್ಯ ಎಂದು ಸಚಿವ ಸತೀಶ ಜಾರಕಿಹೊಳಿ ಸಲಹೆ ನೀಡಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ಹೋರಾಟಗಾರರು. ತಳ ಹಂತದಿಂದ ಪಕ್ಷ ಸಂಘಟಿಸಿ ಮುಖ್ಯಮಂತ್ರಿ ಹುದ್ದೆಗೆ ಏರಿದವರು. ಮುಖ್ಯಮಂತ್ರಿ ಹುದ್ದೆಯಿಂದ ಕೆಳಗೆ ಇಳಿಸಿದವರೇ ಅಭಿಮಾನೋತ್ಸವ ಮಾಡುತ್ತಿದ್ದಾರೆ. ಇಂತಹವರ ಬಗ್ಗೆ ಅವರು ಎಚ್ಚರಿಕೆಯಿಂದ ಇರಬೇಕು ಎಂದರು. ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿ, ಜನರು ಕಾಂಗ್ರೆಸ್ ಮೇಲೆ ಭರವಸೆ ಇಟ್ಟು ಮತ ಹಾಕಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಕೈಹಿಡಿದಿವೆ. ಕಾಂಗ್ರೆಸ್ ಪರ ಅಲೆ ಇದೆ ಎಂಬುದನ್ನು ಎರಡು ಕ್ಷೇತ್ರಗಳ ಗೆಲುವು ತೋರಿಸಿಕೊಟ್ಟಿದೆ. ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ ಬಿಜೆಪಿಗೆ ಹೋಗಿವೆ ಹಾಗೂ ಬಿಜೆಪಿ ಮತ ಕಾಂಗ್ರೆಸ್‌ಗೆ ಬಂದಿವೆ ಎಂದು ಹೇಳಿದರು.

ಕಬ್ಬು ಬೆಳೆಗಾರರ ಸಂಘದಿಂದ ಸಚಿವ ಜೋಶಿಗೆ ಮನವಿ

ಹುಬ್ಬಳ್ಳಿ: ಕೇಂದ್ರ ಸರ್ಕಾರ 1966 ಸಕ್ಕರೆ ನಿಯಂತ್ರಣ ಕಾಯ್ದೆ ಪರಿಷ್ಕಣೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರರ ಸಂಘ ಸದಸ್ಯರು ಹಾಗೂ ರೈತರು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಸಲ್ಲಿಸಿದರು.



ಶನಿವಾರ ಕೇಂದ್ರ ಸಚಿವರ ನಿವಾಸಕ್ಕೆ ಭೇಟಿ ನೀಡಿದ ರೈತರು, ಕಬ್ಬಿಣ ಎಫ್ ಆರ್‌ಪಿ ದರ ನಿಗದಿ ಮಾಡುವಾಗ ಕಬ್ಬಿನಿಂದ ಉತ್ಪತ್ತಿಯಾಗುವ ಸಿಪ್ಪೆ, ವಿದ್ಯುತ್ ಮೊಲಸಿಸ್, ಮದ್ಯಸಾರ, ಯಥನಾಲ್ ಹಾಗೂ ಬಯೋ ಕಾಂಪೋಸ್ಟ್ ಗೊಬ್ಬರಗಳ ಲಾಭವನ್ನು ಲೆಕ್ಕ ಹಾಕಿ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಕಬ್ಬಿನಿಂದ ಬರುವ ಸಕ್ಕರೆ ಇಳುವರಿ ಪ್ರಮಾಣವನ್ನು ಕನಿಷ್ಠ ಶೇ.9ರಷ್ಟಕ್ಕೆ ನಿಗದಿ ಮಾಡಬೇಕು, ಕಬ್ಬಿನ ಎಫ್ ಆರ್‌ಪಿ ದರವನ್ನು ರೈತರ ಹೊಲದಲ್ಲಿನ ದರ ಎಂದು ನಿಗದಿ ಮಾಡಬೇಕು, ಕಟಾವು, ಸಾಗಾಣಿಕೆ ಹಾಗೂ ಕಾರ್ಖಾನೆ ಉಸ್ತುವಾರಿ ಬಿಡಬೇಕು ಎಂದು ಆಗ್ರಹಿಸಿದರು.

ಕಬ್ಬಿಗೆ ಆಕಸ್ಮಿಕ ಬೆಂಕಿತಗಲಿ, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹತ್ತಿಕೊಂಡ ಕಬ್ಬಿಗೆ ಕಾರ್ಖಾನೆಯಲ್ಲಿ ಎಫ್‌ಆರ್‌ಪಿ ದರದಲ್ಲಿ ಶೇ.25ರಷ್ಟು ಹಣ ಕಡಿತ ಮಾಡುವ ಪದ್ಧತಿ ಬಿಡಬೇಕು, ಕಬ್ಬು ಕಟಾವು ಕೆಲವು ಸಾರಿ 14–15 ತಿಂಗಳು ವಿಳಂಬವಾಗಲಿದ್ದು, ರೈತರು ಸಾಲದ ಹೆಚ್ಚುವರಿ ಬಡ್ಡಿಯನ್ನು ಕಾರ್ಖಾನೆ ಪಾವತಿಸಬೇಕು ಎಂದು ಒತ್ತಾಯಿಸಿದರು.

ನೂತನ ಕಾರ್ಖಾನೆಗಳ ಆರಂಭಕ್ಕೆ ಯಾವುದೇ25ಕಿಲೋಮೀಟರ್‌ವ್ಯಾಪ್ತಿ ನಿರ್ಧಾರ ತೆಗೆದು ಹಾಕಬೇಕು. ಹೆಚ್ಚು ಕಾರ್ಖಾನೆಗಳು ಆರಂಭವಾದಾಗ ರೈತರಿಗೆ ಸ್ಪರ್ಧಾತ್ಮಕ ಬೆಲೆ ಸಿಗುತ್ತದೆ. ಇದು ರಂಗರಾಜನ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಕಬ್ಬು ಬೆಳೆಗಾರ ರೈತರಿಗೆ ಕಾರ್ಖಾನೆವ್ಯಾಪ್ತಿಗೆ ಮೀಸಲು ಪ್ರದೇಶ ನಿರ್ಧಾರ ಮಾಡಬಾರದು. ರೈತರಿಗೆ ಮುಕ್ತವಾಗಿರಬೇಕು, ರೈತ ಇಷ್ಟ ಪಟ್ಟ ಕಾರ್ಖಾನೆ ಜೊತೆ ಒಪ್ಪಂದ ಮಾಡಿಕೊಳ್ಳಬಹುದು ಎಂಬ ಪರಿಷ್ಕರಣೆ ಮಾಡಬೇಕು ಎಂದು ಆಗ್ರಹಿಸಿದರು.

ಒಂದು ಗಂಟೆಯಲ್ಲೇ ಆರೋಪಿಗಳಿಬ್ಬರ ಬಂಧನ

ಹೊನ್ನಾವರ: ತಾಲೂಕಿನ ನೆಲವಂಕಿಯಲ್ಲಿ ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯ ಚಿನ್ನದ ಸರವನ್ನು ಕಿತ್ತು ಪರಾರಿಯಾಗುತ್ತಿದ್ದ ಇಬ್ಬರು ಖದೀಮರನ್ನು ಸಿನಿಮಾ ಮಾದರಿಯ ಕಾರ್ಯಾಚರಣೆಯ ಮೂಲಕ ಅಪರಾಧ ನಡೆದು ಕೇವಲ ಒಂದು ಗಂಟೆಯಲ್ಲೇ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಶುಕ್ರವಾರ ಸಂಜೆ ಸುಮಾರು 4 ಗಂಟೆಯ ಸುಮಾರಿಗೆ ನೆಲವಂಕಿ ರಸ್ತೆ ಮಾರ್ಗದಲ್ಲಿ ಮಹಿಳೆಯೊಬ್ಬರು ನಡೆದುಕೊಂಡು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಮಹಿಳೆಯ ಕುತ್ತಿಗೆಯಲ್ಲಿದ್ದ ಬಂಗಾರದ ಸರವನ್ನು ಹರಿದು ಪರಾರಿಯಾಗಲು ಯತ್ನಿಸಿದ್ದಾರೆ. ಕಳ್ಳರು ಸರ ಹಿಡಿದು ಓಡುತ್ತಿದ್ದಂತೆ ಮಹಿಳೆ ಜೋರಾಗಿ ಕಿರುಚಿಕೊಂಡಿದ್ದಾರೆ. ಕಿರುಚಾಟ ಕೇಳಿ ತಕ್ಷಣ ಸ್ಥಳಕ್ಕೆ ಧಾವಿಸಿದ ಸಮೀಪದ ಯುವಕನೊಬ್ಬ ಕಳ್ಳರನ್ನು ಹಿಡಿಯಲು ಪ್ರಯತ್ನಿಸಿದ್ದಾನೆ. ಕಳ್ಳರು ಬೈಕ್‌ನಲ್ಲಿ ಪರಾರಿಯಾದರಾದರೂ, ಆ ಯುವಕ ಅವರ ಚಹರೆ ಮತ್ತು ಬೈಕ್‌ನ ಗುರುತುಗಳನ್ನು ಗಮನಿಸಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ಯುವಕ ನೀಡಿದ ನಿಖರ ಮಾಹಿತಿ ಹಾಗೂ ದೂರಿನ ಆಧಾರದ ಮೇಲೆ ಕಾರ್ಯಪ್ರವೃತ್ತರಾದ ಪೊಲೀಸರು ತಾಲೂಕಿನಾದ್ಯಂತ ನಾಕಾಬಂಧಿ ಮಾಡಿದರು. ಬೈಕ್‌ನಲ್ಲಿ ಪರಾರಿಯಾಗುತ್ತಿದ್ದ ಕಳ್ಳರನ್ನು ಹೊನ್ನಾವರದ ಬಳಿ ಅಡ್ಡಗಟ್ಟಿದ ಪೊಲೀಸರು, ಘಟನೆ ನಡೆದ ಕೇವಲ ಒಂದು ಗಂಟೆಯ ಅವಧಿಯಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಮಂಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿಡಿಯೋ ಹಂಚಿಕೆ: ಪ್ರಕರಣ ದಾಖಲು

ಹುಬ್ಬಳ್ಳಿ: ಅನ್ಯ ಸಮುದಾಯದ ಯುವಕನೊಬ್ಬ ಯುವತಿಯೊಂದಿಗೆ ಸಲುಗೆಯಿಂದ ವರ್ತಿಸಿ, ಲೈಂಗಿಕ ದೌರ್ಜನ್ಯ ಎಸಗಿದ ವಿಡಿಯೋಗಳನ್ನು ಮಾಡಿಕೊಂಡಿದಲ್ಲದೆ, ಬೇರೊಂದು ವಾಟ್ಸ್ಆ್ಯಪ್ ನಂಬರಿಗೆ ಅವುಗಳನ್ನು ಹಂಚಿಕೆ ಮಾಡಿದ ಆರೋಪದ ಮೇಲೆ ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನವನಗರದ ಅಬ್ದುಲ್‌ಮಲ್ಲಿಕ್ ವಿರುದ್ಧ ಯುವತಿ ದೂರು ನೀಡಿದ್ದಾರೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ 21 ವರ್ಷದ ಯುವತಿ, ಇನ್ಸುರೆನ್ಸ್ ಕಂಪನಿಯ ಸಂದರ್ಶನಕ್ಕೆ ತೆರಳಿದಾಗ ಅಬ್ದುಲ್ ಮಲ್ಲಿಕ್ ಪರಿಚಯವಾಗಿದ್ದ. ನಂತರ ಅವಳ ಇಚ್ಛೆಯ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿ, ವಿಡಿಯೋ ಮಾಡಿ ಮತ್ತೊಬ್ಬರಿಗೆ ಹಂಚಿಕೆ ಮಾಡಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	5404	5504
ಕಡಲೆಕಾಳು	801	5805
ಉದ್ದಿನಕಾಳು	1510	5559
ಒಣ ಮೆಣಸಿನಕಾಯಿ	3169	55786
ಹೆಸರುಕಾಳು	801	5129
ನೆಲಗಡಲೆ (ಶೇಂಗಾ)	4019	8270
ಹುರುಳಿ ಕಾಳು	3704	3714
ಜೋಳ	1501	3769
ಮೆಕ್ಕೆಜೋಳ	1611	1921
ಮಡಿಕೆ (ಮಟಕಿ)	5211	14025
ಸಾಸುವೆ	4720	4730
ಈರುಳ್ಳಿ	600	1600
ಆಲೂಗಡ್ಡೆ	1400	1700
ಕುಸುಬೆ	5279	5569
ಸೋಯಾಬಿನ್	4700	6720
ಸೂರ್ಯ ಕಾಂತಿ	6229	6229
ತೊಗರಿ	1010	4279
ಗೋಧಿ	1407	5056

ಕಿರುಸುದ್ದಿ

ಅನಾಮಧೇಯ ಪತ್ರದ ಬಗ್ಗೆ ಪ್ರಕರಣ ದಾಖಲು

ಗುಲ್ಬರ್ಗ ವಿವಿ ಕುಲಪತಿಗೆ ಆ್ಯಸಿಡ್ ದಾಳಿ ಬೆದರಿಕೆ

ಕಲಬುರಗಿ: ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಶಿಕಾಂತ್ ಎಸ್.ಉಡಕೇರಿ ಅವರಿಗೆ ಆ್ಯಸಿಡ್ ದಾಳಿ ನಡೆಸುವುದಾಗಿ ಬೆದರಿಕೆ ಹಾಕಿರುವ ಅನಾಮಧೇಯ ಪತ್ರ ಬೆಳಕಿಗೆ ಬಂದಿದ್ದು, ಈ ಸಂಬಂಧ ವಿಶ್ವವಿದ್ಯಾಲಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 2024ರಲ್ಲಿ ನಡೆದ ಬ್ಲೈಂಡ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದನ್ನು ಗುರುತಿಸಿದ್ದ ಕುಲಪತಿಗಳು, ಈ ವಿಷಯವನ್ನು ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ಗಮನಕ್ಕೆ ತಂದಿದ್ದರು. ಬಳಿಕ ವಿಶ್ವವಿದ್ಯಾಲಯದ ಆಂತರಿಕ ಸಮಿತಿ ನಡೆಸಿದ ಪರಿಶೀಲನೆಯಲ್ಲಿ ಅಂಕಗಳನ್ನು ಅಕ್ರಮವಾಗಿ ತಿದ್ದುಪಡಿ ಮಾಡಿರುವುದು ಪತ್ತೆಯಾಗಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಪಾಲರು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿದ್ದರು. ಸಮಿತಿಯ ನಿರ್ದೇಶನದಂತೆ ಬ್ಲೈಂಡ್ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಪ್ರಕ್ರಿಯೆ ಕೂಡ ಕೈಗೊಳ್ಳಲಾಗಿತ್ತು. ಇದರಿಂದ ಅಸಮಾಧಾನಗೊಂಡ ಕೆಲವರು ಅನಾಮಧೇಯ ಪತ್ರದ ಮೂಲಕ ಕುಲಪತಿಗೆ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಎರಡು ಲಕ್ಷ ರೂ. ನೀಡಿ ಬ್ಲೈಂಡ್ ಪ್ರವೇಶ ಪಡೆದಿದ್ದೇವೆ. ಎರಡು ವರ್ಷಗಳಿಂದ ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ. ಮರು ಮೌಲ್ಯಮಾಪನದಲ್ಲಿ ಅಂಕಗಳು ಕಡಿಮೆಯಾದರೆ ಅಥವಾ ಅನುತ್ತೀರ್ಣರಾದರೆ ನಿಮ್ಮ ಮುಖಕ್ಕೆ ಆ್ಯಸಿಡ್ ಹಾಕಿ ನರಳಿ ಬದುಕುವಂತೆ ಮಾಡುತ್ತೇವೆ ಎಂದು ಪತ್ರದಲ್ಲಿ ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ. ಬೆದರಿಕೆ ಪತ್ರದ ಹಿನ್ನೆಲೆಯಲ್ಲಿ ಕುಲಪತಿ ಪ್ರೊ.ಶಶಿಕಾಂತ್ ಎಸ್.ಉಡಿಕೇರಿ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯದ ನಿರ್ದೇಶನದಂತೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ದೋಣಿ ಮಗುಚಿ ಮೀನುಗಾರ ಸಾವು

ಹೊನ್ನಾವರ: ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದ್ದ ದೋಣಿಯೊಂದು ಅಲೆಗಳ ಅಬ್ಬರಕ್ಕೆ ಸಿಲುಕಿ ಮುಗುಚಿದ ಪರಿಣಾಮ ಮೀನುಗಾರರೊಬ್ಬರು ಮೃತಪಟ್ಟ ಘಟನೆ ಶನಿವಾರ ಅಪಪ್ಸರಕೊಂಡ ಕಡಲ ತೀರದಲ್ಲಿ ಸಂಭವಿಸಿದೆ. ಮೃತರನ್ನು ಹೊನ್ನಾವರ ತಾಲೂಕಿನ ಅಪಪ್ಸರಕೊಂಡ ನಿವಾಸಿ ಚಂದ್ರಕಾಂತ ಲಕ್ಷ್ಮಣ ಖಾರ್ವಿ (38 ವರ್ಷ) ಎಂದು ಗುರುತಿಸಲಾಗಿದೆ. ಶನಿವಾರ ಬೆಳಗ್ಗೆ ಚಂದ್ರಕಾಂತ ಮಾಲೀಕ ಕೇಶವ ರಾಮ ಖಾರ್ವಿ ಅವರ 'ಶ್ರೀರಾಮ' ಹೆಸರಿನ ದೋಣಿಯಲ್ಲಿ ಮೀನುಗಾರಿಕೆಗೆ ತೆರಳಿದ್ದರು. ಮಧ್ಯಾಹ್ನ 1:30ರ ಸುಮಾರಿಗೆ ದಡದಿಂದ ಸುಮಾರು 1.5 ಕಿ.ಮೀ ದೂರದಲ್ಲಿ ಮೀನುಗಾರಿಕೆ ಮುಗಿಸಿ ಹಿಂತಿರುಗುತ್ತಿದ್ದಾಗ, ಹಠಾತ್ ಬಂದ ಬೃಹತ್ ಅಲೆಗಳು ದೋಣಿಗೆ ಅಪ್ಪಳಿಸಿವೆ. ಇದರಿಂದಾಗಿ ದೋಣಿ ಸಮುದ್ರದಲ್ಲಿ ಮಗುಚಿದ್ದು, ದೋಣಿಯಲ್ಲಿದ್ದ ಇಬ್ಬರೂ ನೀರಿಗೆ ಬಿದ್ದಿದ್ದಾರೆ. ದೋಣಿ ಚಾಲಕ ಕೇಶವ ಅವರು ದೋಣಿಯನ್ನು ಹಿಡಿದುಕೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ಚಂದ್ರಕಾಂತ ಸಮುದ್ರದ ನೀರು ಕುಡಿದು ಅಸ್ವಸ್ಥರಾಗಿದ್ದರು. ಕೇಶವ ಹಗ್ಗದ ಸಹಾಯದಿಂದ ಚಂದ್ರಕಾಂತ ಅವರನ್ನು ದಡಕ್ಕೆ ಎಳೆತಂದು ನಂತರ ಆಟೋ ಮೂಲಕ ಹೊನ್ನಾವರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ಚಂದ್ರಕಾಂತ ಅವರ ಸ್ಥಿತಿ ಗಂಭೀರವಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಕರೆದೊಯ್ಯಲು ವೈದ್ಯರು ಸೂಚಿಸಿದ್ದು, ಆಂಬ್ಯುಲೆನ್ಸ್ ಮೂಲಕ ಮಂಗಳೂರಿಗೆ ಹೋಗುವಾಗ ಹೊನ್ನಾವರ ಸೇತುವೆಯ ಸಮೀಪ ಚಂದ್ರಕಾಂತ ಮೃತಪಟ್ಟಿದ್ದಾರೆ. ಈ ಕುರಿತು ಮೃತರ ಸಹೋದರ ಮಂಕಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮೃತ ಚಂದ್ರಕಾಂತ ತಾಯಿ, ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಕಲಬುರಗಿ ಮೃಗಾಲಯ ಲೋಗೋ ಬಿಡುಗಡೆ
ತಿಂಗಳೊಳಗೆ ಮೃಗಾಲಯಕ್ಕೆ ಸಿಂಹ ಆಗಮನ



ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಾಡಬೂಳ ಗ್ರಾಮದಲ್ಲಿ ಸುಮಾರು 43 ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಕಲಬುರಗಿ ಮೃಗಾಲಯವನ್ನು ಇದೇ ಮೇ 12ಕ್ಕೆ ಲೋಕಾರ್ಪಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಕಲಬುರಗಿ ಮೃಗಾಲಯದ ಲೋಗೊ ಬಿಡುಗಡೆ ಮಾಡಿ ಮಾತನಾಡಿದ ಅವರು, ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಸೆಕ್ಷನ್ 38(1) ಅಡಿಯಲ್ಲಿ ಮೃಗಾಲಯ ಸ್ಥಾಪನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಮತ್ತು ದೆಹಲಿಯ ಸೆಂಟ್ರಲ್ ಝೂ ಅಥಾರಿಟಿಯಿಂದ ಅನುಮತಿ ದೊರೆತಿರುವ ಹಿನ್ನೆಲೆಯಿಂದ ವಿವಿಧ ಸ್ಥಳದಿಂದ ಕಲಬುರಗಿ ಮೃಗಾಲಯಕ್ಕೆ ಪ್ರಾಣಿಗಳ ಸ್ಥಳಾಂತರ ಪ್ರಕ್ರಿಯೆ ನಡೆದಿದೆ ಎಂದರು.

ಹೊಸ ಮೃಗಾಲಯದಲ್ಲಿ ನಿಶಾಚರ ಪ್ರಾಣಿಗಳಿಗೆ 6, ಭಾರತೀಯ ಪಕ್ಷಿಗಳಿಗೆ 10, ಸಣ್ಣ ಪಕ್ಷಿಗಳಿಗೆ 6, ಫೀಸಂಟ್‌ಗಳಿಗೆ 6, ಸಸ್ತನಿಗಳಿಗೆ 10, ಪ್ರೈಮೇಟ್‌ಗಳಿಗೆ 4 ಶಾಖಾಹಾರಿ ಪ್ರಾಣಿಗಳಿಗೆ 6 ಹಾಗೂ ಉಭಯಚರ/ ಸರೀಸೃಪ ಪ್ರಾಣಿಗಳಿಗೆ 8 ಸೇರಿ ಒಟ್ಟು 56 ಜಾತಿಯ ಪ್ರಾಣಿಗಳಿಗೆ ಆವರಣಗಳು ನಿರ್ಮಾಣವಾಗಲಿದ್ದು, ಆಮೆ, ಘರಿಯಾಲ್, ಮೊಸಳೆ, ಚುಕ್ಕೆ ಜಿಂಕೆ, ಗೋಲ್ಡನ್ ಜಾಕಲ್, ಹುಲಿ, ಸಿಂಹ, ಸ್ಲೋತ್ ಕರಡಿ, ಜೀಬ್ರಾ, ಬಬೂನ್, ಲಂಗೂರು ಹಾಗೂ ವಿವಿಧ ಪಕ್ಷಿಗಳಿಗಾಗಿ ಒಟ್ಟು 23 ಆವರಣಗಳು ಈಗಾಗಲೆ ಪೂರ್ಣಗೊಂಡಿವೆ ಎಂದರು.

ಶಾಸಕರಾದ ಅಲ್ಲಮಪ್ರಭು ಪಾಟೀಲ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಡಿಸಿ ಬಿ.ಫೌಜಿಯಾ ತರನ್ನುಮ್, ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಡಿಸಿಎಫ್ ಸುಮಿತ್ ಪಾಟೀಲ ಇದ್ದರು.

> **ಮುಂದಿನ ಒಂದು ತಿಂಗಳೊಳಗೆ ಮಾಡಬೂಳ ಮೃಗಾಲಯಕ್ಕೆ ಕಾಡಿನ ರಾಜ 'ಸಿಂಹ' ಸೇರಿದಂತೆ ಸಾಂಬರ್, ರೆಡ್ ಜಂಗಲ್ ಫೌಲ್, ಪೈಥಾನ್ ಸ್ಥಳಾಂತರಿಸಲಾಗುತ್ತಿದೆ. 3 ತಿಂಗಳಲ್ಲಿ ಹುಲಿ, ಬಬೂನ್, ಸ್ಲೋತ್ ಕರಡಿ, ಕಿಂಗ್ ಕೋಬ್ರಾ, ಹಾಗೂ 6 ತಿಂಗಳಲ್ಲಿ ಜೀಬ್ರಾ, ಘರಿಯಾಲ್ ಹಾಗೂ ಇತರೆ ಪಕ್ಷಿ ಮತ್ತು ಸರೀಸೃಪ ಪ್ರಭೇಧಗಳು ಮೃಗಾಲಯಕ್ಕೆ ಸೇರಲಿವೆ.**
> ■ ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

110 ಕೆವಿ ಸ್ಟೇಶನ್ ನಿರ್ಮಾಣಕ್ಕೆ ಲಕ್ಷ್ಮೀ ಹೆಬ್ಬಾಳ್ಕರ್ ಭೂಮಿಪೂಜೆ

ಬೆಳಗಾವಿ : ಇಲ್ಲಿಯ ಸಹ್ಯಾದ್ರಿ ನಗರ ಬಡಾವಣೆಯಲ್ಲಿ 110 ಕೆವಿ ವಿದ್ಯುತ್ ಸ್ಟೇಶನ್ ನಿರ್ಮಾಣ ಕಾರ್ಯಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಶನಿವಾರ ಸಂಜೆ ಭೂಮಿ ಪೂಜೆ ನೆರವೇರಿಸಿದರು.

ನಮ್ಮ ಕ್ಷೇತ್ರ ಶೇ.90ರಷ್ಟು ಭಾಗ ಹಳ್ಳಿ ಹಾಗೂ ಶೇ.10ರಷ್ಟು ಭಾಗ ನಗರದಿಂದ ಕೂಡಿದೆ. ನಗರ ಪ್ರದೇಶ ಹಳ್ಳಿಯಂತೆ, ಹಳ್ಳಿ ಪ್ರದೇಶ ಕುಗ್ರಾಮದಂತೆ ಇತ್ತು. ಮಹಾನಗರ ಪಾಲಿಕೆ ಅಡಿಯಲ್ಲಿ ಬಂದರೂ ಯಾರೂ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ನಾನು ಶಾಸಕಿಯಾದ ನಂತರ ಜನರ ನಿರೀಕ್ಷೆಯನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡು, ಅವರು ನಿರೀಕ್ಷೆ ಮಾಡುವುದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಕೆಲಸ ಮಾಡುತ್ತಿದ್ದೇನೆ. ಸಹ್ಯಾದ್ರಿ ನಗರವೂ ಹನುಮಾನ್ ನಗರದಂತೆ ಆಗಬೇಕೆನ್ನುವ ಸಂಕಲ್ಪ ಇಟ್ಟುಕೊಂಡು, ಈಗ ಆ ಹಂತಕ್ಕೆ ಈ ಭಾಗ ಬೆಳೆಯುವಂತೆ ಮಾಡಿದ್ದೇನೆ. ಮುಂದಿನ 25 ವರ್ಷಗಳ ಆವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಈ ಭಾಗದಲ್ಲಿ 33 ಕೆವಿ ಸ್ಟೇಶನ್ ಇತ್ತು. ಆದರೂ ಮುಂದಿನ ವರ್ಷಗಳಲ್ಲಿ ಜನರಿಗೆ ಯಾವುದೇ ಸಮಸ್ಯೆ ಆಗಬಾರದೆನ್ನುವ ಉದ್ದೇಶದಿಂದ, ಜನರು ಕೇಳದಿದ್ದರೂ 110 ಕೆವಿ ವಿದ್ಯುತ್ ಸ್ಟೇಶನ್ ನಿರ್ಮಾಣ ಮಾಡಲಾಗುತ್ತಿದೆ. ಈವರೆಗಿನಂತೆ ಮುಂದೆಯೂ ನನ್ನ ಬೆನ್ನಿಗೆ ನಿಲ್ಲಬೇಕು ಎಂದು ಅವರು ವಿನಂತಿಸಿದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿದರು. ಈ ವೇಳೆ ಹೆಸ್ಕಾಂ ಸುಪರಿಂಡೆಂಟ್ ಎಂಜಿನಿಯರ್ ಕೃಷ್ಣಪ್ಪ, ಪಾಲಿಕೆ ಸದಸ್ಯ ಮುಸ್ತಾಕ್ ಮುಲ್ಲಾ, ಗುತ್ತಿಗೆದಾರ ದೇಸಾಯಿ, ರಾವ್ ಸಾಹೇಬ ಪಾಟೀಲ, ಪ್ರತಿಭಾ, ಹೊಳೆಪ್ಪ ಮಂಡೋಳಿ, ಶಿಂಧೆ, ರೊಟ್ಟಿ, ಮೋಹನ್ ಸುತಾರ, ಟೋಪಿ ಸೇರಿದಂತೆ ಇತರರು ಇದ್ದರು.



14 ಲಕ್ಷ ರೂ.ಮೌಲ್ಯದ ಅನ್ನಭಾಗ್ಯ ಅಕ್ಕಿ ವಶ



ಗದಗ: ರಾಜ್ಯ ಸರ್ಕಾರ ನೀಡುವ ಅನ್ನಭಾಗ್ಯ ಪಡಿತರ ಅಕ್ಕಿಗೆ ಪಾಲಿಶ್ ಮಾಡಿ, ವಿವಿಧ ಬ್ಯಾಂಡ್‌ಗಳ ಹೆಸರು ಬಳಸಿ, ಪ್ರೀಮಿಯಂ ಅಕ್ಕಿಯೆಂದು ಹೊರ ರಾಜ್ಯಗಳಿಗೆ ದುಬಾರಿ ಬೆಲೆಗೆ ಮಾರಾಟ ಮಾಡಲು ಸಾಗಿಸುತ್ತಿದ್ದ 14 ಲಕ್ಷ ಮೌಲ್ಯದ 34,720 ಕೆ.ಜಿ.ಅಕ್ಕಿಯನ್ನು ಗದಗ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಅಕ್ಕಿ ಜತೆಗೆ ಮಧ್ಯಪ್ರದೇಶದ ನೋಂದಣಿ ಇರುವ 29 ಲಕ್ಷ ಮೌಲ್ಯದ 10 ಚಕ್ರಗಳ ದೊಡ್ಡ ಟ್ರಕ್ ಮತ್ತು ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ.

ಪೊಲೀಸರು ಟ್ರಕ್ ಚಾಲಕನನ್ನು ವಿಚಾರಣೆಗೆ ಒಳಪಡಿಸಿದಾಗ ಮೋಸದ ಅಕ್ಕಿ ಜಾಲದ ವಿಚಾರ ಬೆಳಕಿಗೆ ಬಂದಿದೆ. ಹೊರ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಅನ್ನಭಾಗ್ಯ ಅಕ್ಕಿ ತುಂಬಿರುವ ಲಾರಿ ಗದಗ ಜಿಲ್ಲೆಯ ಮೂಲಕ ಹೊರ ರಾಜ್ಯಕ್ಕೆ ತೆರಳಲಿದೆ ಎಂಬ ಖಚಿತ ಮಾಹಿತಿ ಸಿಕ್ಕಿತ್ತು. ಅದರಂತೆ ನಗರದ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ ದಾಳಿ ನಡೆಸಿ, ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ತಿಳಿಸಿದ್ದಾರೆ.

ಅಕ್ಕಿಯ ಅಸಲಿಯತ್ತು ಪರೀಕ್ಷಿಸುವ ಸಲುವಾಗಿ ಪೊಲೀಸರು ಆಹಾರ ನಿರೀಕ್ಷಕರು ಮತ್ತು ತಜ್ಞರನ್ನು ಕರೆಯಿಸಿ ಪರೀಕ್ಷೆ ಮಾಡಿಸಿದ್ದಾರೆ. ಇದು ಅನ್ನ ಭಾಗ್ಯ ಅಕ್ಕಿಗೆ ಪಾಲಿಶ್ ಮಾಡಿ, ಪ್ರೀಮಿಯಂ ಅಕ್ಕಿ ಎಂದು ದುಬಾರಿ ಬೆಲೆಗೆ ಮಾರಾಟ ಮಾಡುವ ಜಾಲ ಎಂದು ತಜ್ಞರು ದೃಢೀಕರಿಸಿದ್ದಾರೆ.

ಟ್ರಕ್ ಮಧ್ಯಪ್ರದೇಶಕ್ಕೆ ಸೇರಿದ್ದು, ಚಾಲಕ ತಾನು ಬಾಡಿಗೆಗಾಗಿ ಗಾಡಿ ಚಲಾಯಿಸಿಕೊಂಡು ಬಂದಿರುವುದಾಗಿ ಹೇಳಿದ್ದಾರೆ. ಹರಪನಹಳ್ಳಿ ಸಮೀಪದ ಫ್ಯಾಕ್ಟರಿಯಿಂದ ಅಕ್ಕಿ ಚೀಲಗಳನ್ನು ತುಂಬಿಕೊಂಡು ಗುಜರಾತ್‌ಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ವಿಚಾರಣೆ ವೇಳೆ ತಿಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಡಿತರ ಅಕ್ಕಿಗೆ ಪಾಲಿಶ್ ಮಾಡಿ ಮಾರಾಟ ಮಾಡುವ ವಿಚಾರ ಗೊತ್ತಾಗಬಾರದೆಂದು ಖದೀಮರು ನಕಲಿ ಬಿಲ್, ದಾಖಲೆಗಳನ್ನು ಕೂಡ ಸೃಷ್ಟಿಸಿದ್ದಾರೆ. ಅಕ್ಕಿ ಸಾಗಣೆಗೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ನಕಲಿ ಮಾಡಿದ್ದಾರೆ. ಬಿಲ್, ಸ್ಟ್ಯಾಂಪ್ ಎಲ್ಲವೂ ನಕಲಿ. ಸರ್ಕಾರಕ್ಕೆ ವಂಚಿಸುತ್ತಿರುವ ಖದೀಮರನ್ನು ಗುರುತಿಸಿ, ಬಂಧಿಸಲು ವಿಶೇಷ ತಂಡ ರಚಿಸಲಾಗುವುದು ಎಂದು ಎಸ್‌ಪಿ ತಿಳಿಸಿದ್ದಾರೆ.

ವ್ಯಾಯಾಮದಿಂದ ದೈಹಿಕ ಸದೃಢತೆ



ಖಾನಾಪುರ: ತಾಲೂಕಿನ ನಂದಗಡ ಗ್ರಾಮದಲ್ಲಿ ಶುಕ್ರವಾರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ವತಿಯಿಂದ ತಾಲೂಕಿನ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರ ವಾರ್ಷಿಕ ಕ್ರೀಡಾಕೂಟ ಜರುಗಿತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಸಿಡಿಪಿಒ ವಿಕ್ರಮ ಕೆ.ಬಿ, ''ನಮ್ಮ ದೇಹವು ಸಧೃಡವಾಗಿದ್ದಲ್ಲಿ ಮನಸ್ಸು ಸಧೃಡವಾಗಿರುತ್ತದೆ. ದೈಹಿಕ ಸದೃಢತೆಗೆ ನಿಯಮಿತ ವ್ಯಾಯಾಮ ಮತ್ತು ಕ್ರೀಡೆಗಳು ಸಹಕಾರಿ. ಹೀಗಾಗಿ ತಾಲೂಕಿನ ಇತಿಹಾಸದಲ್ಲಿ ಮೊದಲ ಬಾರಿ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗಾಗಿ ಕ್ರೀಡಾಕೂಟವನ್ನು ಆಯೋಜಿಸಿದ್ದು, ಇದರಲ್ಲಿ ಎಲ್ಲ ಅಂಗನವಾಡಿಗಳ ಸಿಬ್ಬಂದಿ ಉತ್ಸಾಹದಿಂದ ಭಾಗವಹಿಸಿದ್ದಾರೆ'' ಎಂದು ವಿವರಿಸಿದರು.

ಕ್ರೀಡಾಕೂಟದ ಅಂಗವಾಗಿ ಬೀಡಿ, ಕಕ್ಕೇರಿ ಮತ್ತು ನಂದಗಡ ವಲಯಗಳ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ವಿವಿಧ ವೈಯುಕ್ತಿಕ ಮತ್ತು ಗುಂಪು ಕ್ರೀಡೆಗಳು ನಡೆದು ವಿಜೇತರಿಗೆ ಪ್ರಮಾಣಪತ್ರ ಮತ್ತು ಟ್ರೋಫಿ ವಿತರಿಸಲಾಯಿತು. ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರು ಸಿಡಿಪಿಒ ವಿಕ್ರಮ ಅವರನ್ನು ಗೌರವಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಹಾಯಕ ಸಿಡಿಪಿಒ ಶಾರದಾಬಾಯಿ ಮರಾಠೆ, ಹಿರಿಯ ಮೇಲ್ವಿಚಾರಕಿ ನಂದಾ ಲೋಕೂರ, ಪ್ರಥಮ ದರ್ಜೆ ಸಹಾಯಕ ದೀಪಕ ಪವಾರ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿ ಹಾಗೂ ದೈಹಿಕ ಶಿಕ್ಷಕರು ಇದ್ದರು.

ಎತ್ತಿನ ಬಂಡಿ ಓಟಕ್ಕೆ ಚನ್ನರಾಜ ಹಟ್ಟಿಹೊಳಿ ಚಾಲನೆ

ಬೆಳಗಾವಿ: ಗ್ರಾಮೀಣ ಕ್ಷೇತ್ರದ ಮೊದಗಾ ಗ್ರಾಮದ ತಹಶೀಲ್ದಾರ್ ಗಲ್ಲಿಯಲ್ಲಿ ಶ್ರೀ ಬಾಲ ಗಜಾನನ ಯುವಕ ಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಭವ್ಯ ಜಂಗಿ ಶರತ್ತು (ಎತ್ತಿನ ಬಂಡಿ ಓಟ) ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸ್ಪರ್ಧೆಗೆ ಚಾಲನೆ ನೀಡಿ ಸ್ಪರ್ಧಾಳುಗಳಿಗೆ ಶುಭ ಕೋರಿದರು.

ಶನಿವಾರದಂದು ಮೋದಾಗಾ ಗ್ರಾಮದಲ್ಲಿ ಗ್ರಾಮೀಣ ಸಂಸ್ಕೃತಿ, ರೈತರ ಬದುಕು ಹಾಗೂ ಸಾಹಸ ಕ್ರೀಡೆಗಳ ಪ್ರತಿಬಿಂಬವಾಗಿರುವ ಎತ್ತಿನ ಬಂಡಿ ಓಟಕ್ಕೆ ಸಾವಿರಾರು ಜನರು ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಚನ್ನರಾಜ ಹಟ್ಟಿಹೊಳಿ, ನಮ್ಮ ಗ್ರಾಮೀಣ ಭಾಗದ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಯುವ ಪೀಳಿಗೆ ಉಳಿಸಿಕೊಂಡು ಸಾಗಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಇಂತಹ ಕ್ರೀಡೆಗಳು ಗ್ರಾಮೀಣ ಬದುಕಿನ ಶಕ್ತಿ ಹಾಗೂ ರೈತರ ಆತ್ಮವಿಶ್ವಾಸವನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗಂಗಣ್ಣ ಕಲ್ಲೂರ, ಶಿವಾಜಿ ಅಷ್ಟೇಕರ್, ಸಂಜಯ ಅಷ್ಟೇಕರ್, ಮಂಜುನಾಥ ತುಕ್ಕಾರ, ತೇಜರಾಜ್ ಮಾರಿಹಾಳ, ಬಸವರಾಜ್ ಕಲ್ಲೂರ್, ಸಂಗಯ್ಯ ಹಿರೇಮಠ್, ಅಬ್ದುಲ್ ಭಾಗವಾನ, ದಿಲಾವರ್ ಪೆಂಡಾರಿ, ಬಸನಗೌಡ ಪಾಟೀಲ, ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಸೇರಿದಂತೆ ಇತರರು ಇದ್ದರು.



ಜಮೀರ್ ಅಹ್ಮದ್ ಕೊಲೆ ಪ್ರಕರಣ: ಮತ್ತೆ ನಾಲ್ವರ ಬಂಧನ



ಮುಂಡಗೋಡ: ಜಮೀರ್ ಅಹ್ಮದ್ ಕೊಲೆಗೆ ಸುಪಾರಿ ಕೊಟಿದ್ದ ಮಂಜುನಾಥ ಕಾಜಗಾರ ಜೊತೆ ತೆರಳಿ ಕಂಟ್ರಿ ಪಿಸ್ತೂಲ್ ತಂದ ಆರೋಪದ ಅಡಿಯಲ್ಲಿ ಪೊಲೀಸರು ಮತ್ತೆ ನಾಲ್ಕು ಜನ ಆರೋಪಿಗಳನ್ನು ಬಂಧಿಸಿದ್ದಾರೆ.

ಏ.24ರಂದು ರೌಡಿ ಶೀಟರ್ ಜಮೀರ್ ಅಹ್ಮದ ಪಟ್ಟಣದಲ್ಲಿ ಊಟಕ್ಕೆಂದು ಬಂದಿದ್ದ ವೇಳೆ ಭೀಕರವಾಗಿ ಕೊಲೆಗೀಡಾಗಿದ್ದ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರೌಡಿಶೀಟರ್ ಮಂಜುನಾಥ ಕಾಜಗಾರ ಸೇರಿ 7 ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಆ ವೇಳೆಯಲ್ಲಿ ಪೊಲೀಸರು ಆರೋಪಿಗಳಿಂದ ಪಿಸ್ತೂಲ್ ಹಾಗೂ ಸಜೀವ ಗುಂಡುಗಳನ್ನು ವಶಪಡಿಸಿಕೊಂಡಿದ್ದರು.

ಕಂಟ್ರಿ ಪಿಸ್ತೂಲ್ ಗಳ ಬಗ್ಗೆ ತನಿಖೆ ಕೈಗೊಂಡ ಪೊಲೀಸರು ಪಿಸ್ತೂಲ್ ನೀಡಿದ ದೆಹಲಿಯ ದಿಲ್ ರಾಜ್ ಧ್ಯಾನಿ ಎಂಬುವನನ್ನು ಬಂಧಿಸಿದ್ದರು. ಈತ ಹಾಗೂ ಕೊಲೆ ಆರೋಪಿ ಮಂಜುನಾಥ ಕಾಜಗಾರ ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದಾಗ ಕಂಟ್ರಿ ಪಿಸ್ತೂಲ್ ತರಲು ಮತ್ತೆ ನಾಲ್ಕು ಜನ ಹೋಗಿರುವುದಾಗಿ ಮಂಜುನಾಥ ಕಾಜಗಾರ ಪೊಲೀಸ್ ತನಿಖೆ ವೇಳೆಯಲ್ಲಿ ಬಾಯಿಬಿಟ್ಟಿದ್ದನು. ಅದರಂತೆ ಪೊಲೀಸರು ಶನಿವಾರ ನಾಲ್ಕು ಜನರನ್ನು ಬಂಧಿಸಿ ವಿಚಾರಣೆ ನಡೆಸಿದಾಗ ತಾವು ಹೋಗಿರುವುದಾಗಿ ಪೊಲೀಸರ ಮುಂದೆ ಅವರು ಬಾಯಿ ಬಿಟ್ಟಿದ್ದಾರೆ ಎನ್ನಲಾಗಿದೆ.

ಬಂಧಿತ ಆರೋಪಿಗಳು: ಪಟ್ಟಣದ ಕಿಲ್ಲೆ ಓಣಿಯ ಮಲ್ಲಿಕ್ ಜಹಾನ್ ಯಾನೆ ಜಹೀರ ಶಬ್ಬೀರ್ ಶೇಖ್, ಮಹಮ್ಮದ್ ಸಾದೀಕ್ ಅಬ್ದುಲ್ ರಜಾಕ ದರ್ಗಾವಾಲೆ, ಮಾರಿಕಾಂಬಾ ನಗರದ ಅಸ್ಕರಅಲಿ ಮಕ್ತುಮಅಲಿ ದೊಡ್ಡಮನಿ ಮತ್ತು ಸಾಹಿಲ್ ಬಾಬಾಬುಡನ್ ನಂದಿಗಟ್ಟಿ ಬಂಧಿತ ಆರೋಪಿಗಳಾಗಿದ್ದಾರೆ.

ಕಳೆದ ಎರಡು ವರ್ಷಗಳ ಹಿಂದೆ ಉತ್ತರ ಪ್ರದೇಶದ ಗೋರಖಪುರಕ್ಕೆ ಮಂಜುನಾಥ ಕಾಜಗಾರ ಜೊತೆಗೆ ಹೋಗಿದ್ದ ಈ ಬಂಧಿತ ಆರೋಪಿಗಳು ಕಂಟ್ರಿ ಪಿಸ್ತೂಲ್ ತಂದಿದ್ದರು ಎಂದು ತಿಳಿದುಬಂದಿದೆ. ಅದೇ ಪಿಸ್ತೂಲ್ ನಿಂದ ಜಮೀರ್ ಕೊಲೆ ಮಾಡುವ ಸಂದರ್ಭದಲ್ಲಿ ಗುಂಡು ನೆಲಕ್ಕೆ ಬಡಿದಿತ್ತು ಎಂದು ತನಿಖೆ ವೇಳೆಯಲ್ಲಿ ತಿಳಿದಿತ್ತು.

ಈವರೆಗೆ ಮೂರು ಕಂಟ್ರಿ ಪಿಸ್ತೂಲ್ ವಶ: ಜಮೀರ್ ಕೊಲೆಯ ತನಿಖೆಯನ್ನು ಮುಂದುವರಿಸಿದ ಪೊಲೀಸರು ತನಿಖೆ ನಡೆಸಿದಾಗ ಈವರೆಗೆ ಮೂರು ಕಂಟ್ರಿ ಪಿಸ್ತೂಲ್ ವಶಕ್ಕೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ.

ನ್ಯಾಯಾಲಯಕ್ಕೆ ಹಾಜರು: ಕಂಟ್ರಿ ಪಿಸ್ತೂಲ್ ಪ್ರಕರಣದಲ್ಲಿ ಬಂಧಿತರಾದ ಮಲ್ಲಿಕ್ ಜಹಾನ್ ಯಾನೆ ಜಹೀರ ಶಬ್ಬೀರ್ ಶೇಖ್, ಮಹಮ್ಮದ್ ಸಾದೀಕ್ ಅಬ್ದುಲ್ ರಜಾಕ ದರ್ಗಾವಾಲೆ, ಅಸ್ಕರಅಲಿ ಮಕ್ತುಮಅಲಿ ದೊಡ್ಡಮನಿ ಮತ್ತು ಸಾಹಿಲ್ ಬಾಬಾಬುಡನ್ ನಂದಿಗಟ್ಟಿ ಈ ನಾಲ್ಕು ಆರೋಪಿಗಳನ್ನು ಪೊಲೀಸರು ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದಾರೆ.

ಲೋಡ್ ಶೆಡ್ಡಿಂಗ್: ಬಿಸಿಲಿನ ತಾಪದಿಂದ ಜನತೆ ತತ್ತರ

ರಾಯಚೂರು: ರಣ ಬಿಸಿಲಿನ ತಾಪದಿಂದ ತತ್ತರಿಸುತ್ತಿರುವ ಜನತೆಗೆ ಜೆಸ್ಕಾಂ ದಿನದಲ್ಲಿ ಮೇಲಿಂದ ಮೇಲೆ ಕರೆಂಟ್ ಕಟ್ ಮಾಡುತ್ತಿರುವುದರಿಂದ ವಾತಾವರಣದಲ್ಲಿನ ಬಿಸಿಯಾದ ತಾಪವನ್ನು ತಾಳಲಾರದೇ ಬಸವಳಿದು ಹೋಗುತ್ತಿದ್ದಾರೆ.

ಒಂದು ವಾರದಿಂದ ಸಮಯ ಹತ್ತು ಗಂಟೆ ಆತೆಂದರೆ ಜೆಸ್ಕಾಂ ಕರೆಂಟ್ ಕಟ್ ಮಾಡಲು ಆರಂಭಿಸುತ್ತದೆ. ಆರಂಭದಲ್ಲಿ ಅರ್ಧ ಗಂಟೆ, ಒಂದು ಗಂಟೆ ಸಮಯ ಮಾತ್ರ ವಿದ್ಯುತ್ ತಗೆಯುತ್ತಾರೆ. ಹನ್ನೆರಡು ಗಂಟೆಯ ನಂತರ ವಿದ್ಯುತ್ ಕಟ್ ಮಾಡಿದರೆ 2-3 ಗಂಟೆಯವರೆಗೂ ವಿದ್ಯುತ್ತನ್ನು ತಗೆಯುತ್ತಿದ್ದಾರೆ.

ನಗರ, ಪಟ್ಟಣ ಹಾಗೂ ಗ್ರಾಮೀಣ ಭಾಗಗಳೆಂಬ ಬೇಧ ಭಾವವಿಲ್ಲದೆ ವಿದ್ಯುತ್‌ನ್ನು ತಗೆಯುತ್ತಿದ್ದಾರೆ. ನಗರ ಹಾಗೂ ಪಟ್ಟಣ ಪ್ರದೇಶಗಳಿಗಿಂತ ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಕಟ್ ಮಾಡುತ್ತಿದ್ದಾರೆ ಎನ್ನುತ್ತಾರೆ ಜನತೆ.

ನಗರದ ಮತ್ತು ಗ್ರಾಮೀಣ ಭಾಗಗಳಲ್ಲಿ ಪ್ರತಿಯೊಂದು ಮನೆಯಲ್ಲಿ ಫ್ಯಾನ್ ಸತತವಾಗಿ ತಿರುಗುತ್ತಲೇ ಇರುತ್ತವೆ. ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಇಲ್ಲ ಎಂದರೆ ಜನತೆ ಮನೆಯಿಂದ ಹೊರ ಬಂದು ಬೇವಿನ ಇಲ್ಲವೆ ಇದ್ದ ಗಿಡಗಳ ನೆರಳನ್ನು ಅರಸಿ ಹೋಗುತ್ತಾರೆ. ಆದರೆ, ಕಾಂಕ್ರೀಟ್ ಮಯವಾಗಿರುವ ಪಟ್ಟಣ ಮತ್ತು ನಗರದ ಜನತೆ ಏನು ಮಾಡಬೇಕುನ್ನುವುದೇ ತಿಳಿಯದೇ ಮನೆಯಲ್ಲಿನೇ ಕುಳಿತುಕೊಂಡು ಇಲ್ಲವೆ ವರಾಂಡದಲ್ಲಿ ಅತ್ತಿಂದ ಇತ್ತ ಇತ್ತಿಂದ ಅತ್ತ ತಿರುಗಾಡಿ ಶೆಖೆಯಿಂದಾಗುವ ತೊಂದರೆಯನ್ನು ತಡೆದುಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು. ಕರೆಂಟ್ ಕಟ್ ಆತೆಂದರೆ ವೃದ್ಧರು ಹಾಗೂ ತಗರ್ಭವತಿ ಮಹಿಳೆಯರು ಬಹಳ ತೊಂದರೆಯನ್ನು ಅನುಭವಿಸುವಂತಾಗುತ್ತದೆ. ನವಜಾತ ಶಿಶುಗಳು ಹಾಗೂ ಬಾಣಂತಿಯರಿದ್ದರೆ ಇನ್ನಿಲ್ಲದ ಸಂಕಷ್ಟವನ್ನು ಅನುಭವಿಸುವಂತಾಗುತ್ತದೆ ಎನ್ನುತ್ತಾರೆ ವೈದ್ಯ ಡಾ.ಬಸವರಾಜ ಪಾಟೀಲ.

ಆ್ಯಸಿಡ್ ದಾಳಿ: ಐವರಿಗೆ ಗಾಯ

ಹುಬ್ಬಳ್ಳಿ: ಕ್ಷುಲ್ಲಕ ಕಾರಣಕ್ಕೆ ಪತಿ, ಪತ್ನಿ ಮಧ್ಯೆ ನಡೆದ ಜಗಳದಲ್ಲಿ ಕೋಪಗೊಂಡ ಪತಿಯು ಕುಟುಂಬದವರ ಮೇಲೆ ಆ್ಯಸಿಡ್ (ಹೈಡ್ರೋಕ್ಲೋರಿಕ್ ಆ್ಯಸಿಡ್) ದಾಳಿ ನಡೆಸಿದ್ದು, ನಾಲ್ಕು ತಿಂಗಳ ಹಸುಗೂಸು ಸೇರಿ ಐವರು ಗಾಯಗೊಂಡಿರುವ ಘಟನೆ ಇಲ್ಲಿನ ತಾರಿಹಾಳದ ವಾಜಪೇಯಿ ನಗರದಲ್ಲಿ ಶನಿವಾರ ನಡೆದಿದೆ. ಸುರೇಶ ಪತ್ತಾರ, ಇವರ ಪತ್ನಿ ರಾಜೇಶ್ವರಿ, ಪತ್ನಿಯ ಸಹೋದರಿಯರಾದ ಶ್ರುತಿ ಹಾಗೂ ರೇಷ್ಮಾ ಮತ್ತು ನಾಲ್ಕು ತಿಂಗಳ ಹಸುಗೂಸಿನ ಮೇಲೆ ಆ್ಯಸಿಡ್ ಬಿದ್ದು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಕೆಎಂಸಿಆರ್‌ಐ ಆಸ್ಪತ್ರೆಗೆ ದಾಖಲಿಸಿದ್ದು, ರಾಜೇಶ್ವರಿ ಪತ್ತಾರ ಅವರ ಸ್ಥಿತಿ ಗಂಭೀರವಾಗಿದೆ. ಪತ್ನಿ ರಾಜೇಶ್ವರಿ ಅವರು ವಾಟ್ಸ್ಆ್ಯಪ್ ಮೊಬೈಲ್ ನಂಬರ್‌ಗೆ ಸಹೋದರಿಯರ ಫೋಟೋವನ್ನು ಡಿಪಿ ಇಟ್ಟಿದ್ದರು. ಅದನ್ನು ತೆಗೆಯದಂತೆ ಪತಿ ಸುರೇಶ ಅವರಿಗೆ ತಾಕೀತು ಮಾಡಿದ್ದರು. ಹೀಗಿದ್ದಾಗಲೂ ಸುರೇಶ ಡಿಪಿ ಬದಲಿಸಿದ್ದರು. ಇದರಿಂದ ಅವರ ನಡುವೆ ಜಗಳ ನಡೆದು ವಿಕೋಪಕ್ಕೆ ತಲುಪಿತ್ತು. ಕೋಪಗೊಂಡ ಸುರೇಶ ತಾಮ್ರ, ಹಿತ್ತಾಳೆ ತೊಳೆಯಲು ಬಳಸುವ ಕೆಮಿಕಲ್‌ನಿಂದ ದಾಳಿ ನಡೆಸಿದ್ದಾರೆ. ಈ ವೇಳೆ ಅವರ ಮೇಲೂ ಕೆಮಿಕಲ್ ಬಿದ್ದು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಡಿಯುವ ನೀರಿನ ಸಮಸ್ಯೆಯಾಗದಿರಲಿ: ಜಿಪಂ ಸಿಇಒ



ವಿಜಯನಗರ: ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಾರ್ವಜನಿಕರಿಗೆ ನಿರಂತರ ನೀರು ಪೂರೈಸಬೇಕು ಎಂದು ಜಿಪಂ ಸಿಇಒ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ ತಿಳಿಸಿದರು.

ಹರಪನಹಳ್ಳಿ ತಾಲೂಕಿನ ವಿವಿಧ ಬಾಧಿತ ಗ್ರಾಮಗಳಿಗೆ ಜಿಪಂ ಸಿಇಒ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅಧಿಕಾರಿಗಳೊಂದಿಗೆ ಮಾತನಾಡಿ, ಜಿಲ್ಲೆಯ 740 ಗ್ರಾಮಗಳ ಪೈಕಿ 153 ಗ್ರಾಮಗಳಲ್ಲಿ ನೀರಿನ ಅಭಾವ ಉಂಟಾಗಬಹುದೆಂದು ಗುರುತಿಸಲಾಗಿದೆ. ಅದರಂತೆ ಈಗಾಗಲೇ ಜಿಲ್ಲೆಯ ಹರಪನಹಳ್ಳಿ ತಾಲೂಕಿನ 24 ಗ್ರಾಮ, ಹಗರಿಬೊಮ್ಮನಹಳ್ಳಿ 5 ಮತ್ತು ಹಡಗಲಿ ತಾಲೂಕಿನ 3 ಗ್ರಾಮಗಳು ಸೇರಿದಂತೆ ಒಟ್ಟು 32 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಿದೆ. ಈ ನೀರಿನ ಸಮಸ್ಯೆ ಉಂಟಾದ ಗ್ರಾಮಗಳಿಗೆ 41 ಖಾಸಗಿ ಕೊಳವೆ ಬಾವಿ ಬಾಡಿಗೆಗೆ ಪಡೆದು ನೀರು ಸರಬರಾಜು ಮಾಡುತ್ತಿದೆ. ಅಲ್ಲದೆ, ಅಗತ್ಯವಿದ್ದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ 4 ನೀರಿನ ಟ್ಯಾಂಕರ್ ಬಳಸಿಕೊಳ್ಳಬೇಕು ಪ್ರತಿಯೊಂದು ಗ್ರಾಮದಲ್ಲಿರುವ ನೀರಿನ ಮೂಲ ಸ್ವಚ್ಛಗೊಳಿಸಬೇಕು ಎಂದರು.

ಶುದ್ಧ ನೀರಿನ ಘಟಕಗಳ ದುರಸ್ತಿಗೊಳಿಸಿ: ಜಿಲ್ಲೆಯ 666 ಶುದ್ಧ ಕುಡಿಯುವ ನೀರಿನ ಘಟಕಗಳು ಸದಾ ಸುಸ್ಥಿತಿಯಲ್ಲಿರಬೇಕು. ತಾಂತ್ರಿಕ ದೋಷ ಕಂಡು ಬಂದ ತಕ್ಷಣವೇ ದುರಸ್ತಿ ಕೈಗೊಳ್ಳಬೇಕು. ನೀರಿನ ಸಮಸ್ಯೆಗಳ ಕುರಿತು ದೂರು ನೀಡಲು ಮತ್ತು ತಕ್ಷಣದ ಪರಿಹಾರಕ್ಕಾಗಿ ಜಿಲ್ಲಾ, ತಾಲೂಕು ಮಟ್ಟದಲ್ಲಿ 24★7 ಕಂಟ್ರೋಲ್ ರೂಮ್ ಸಹಾಯವಾಣಿ ತೆರೆಯಲಾಗಿದೆ ಎಂದರು.

ಈ ವೇಳೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು, ತಾಪಂ ಇಒ, ಗ್ರಾಪಂ ಪಿಡಿಒಗಳು ಇದ್ದರು.

ಲಕ್ಷಾಂತರ ಮೌಲ್ಯದ ಮದ್ಯ ಜಪ್ತಿ

ಬೆಳಗಾವಿ : ಜಿಲ್ಲೆಯ ಖಾನಾಪೂರ ತಾಲೂಕಿನ ಕಣಕುಂಬಿ ಗಡಿ ಭಾಗದಲ್ಲಿ ಅಬಕಾರಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ಕೈಗೊಂಡಿದ್ದಾರೆ. ಗೋವಾದಿಂದ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ಕಾರನ್ನು ತಡೆದ ಅಧಿಕಾರಿಗಳು, ಲಕ್ಷಾಂತರ ರೂಪಾಯಿ ಮೌಲ್ಯದ ಮದ್ಯದ ಜೊತೆಗೆ ಆರೋಪಿಯನ್ನು ವಶಕ್ಕೆ ಪಡೆಸಿಕೊಂಡಿದ್ದಾರೆ.

ಕಣಕುಂಬಿಯ ಚೆಕ್ ಪೋಸ್ಟ್ ಬಳಿ ತನಿಖಾ ಠಾಣೆಯ ಅಬಕಾರಿ ಅಧಿಕಾರಿಗಳು ನಡೆಸಿದ ವಾಹನ ತಪಾಸಣೆ ವೇಳೆ ಬೃಹತ್ ಪ್ರಮಾಣದ ಅಕ್ರಮ ಮದ್ಯ ಪತ್ತೆಯಾಗಿದೆ. ಖಚಿತ ಮಾಹಿತಿಯ ಮೇರೆಗೆ ಕಾರನ್ನು ತಡೆದ ಅಧಿಕಾರಿಗಳು, ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕೆ ಅನುಮತಿಯಿದ್ದ ಸುಮಾರು 51.840 ಲೀಟರ್ ವಿಸ್ಕಿ ಮತ್ತು ರಮ್ ಹಾಗೂ 36 ಲೀಟರ್ ಬಿಯರ್ ಅನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಹಲಗಾ ಗ್ರಾಮದ ಪ್ರಸಾದ್ ಶಂಕರ ಪುನಾಜಿ ಎಂಬಾತನನ್ನು ದಸ್ತಗಿರಿ ಮಾಡಲಾಗಿದ್ದು, ಕೃತ್ಯಕ್ಕೆ ಬಳಸಿದ ವಾಹನ ಹಾಗೂ ಮದ್ಯ ಸೇರಿ ಒಟ್ಟು 3,73,440 ರೂಪಾಯಿ ಮೌಲ್ಯದ ಸೊತ್ತನ್ನು ಜಪ್ತಿ ಮಾಡಲಾಗಿದೆ. ಅಬಕಾರಿ ಕಾಯ್ದೆಯ ವಿವಿಧ ಕಲಂ ಅಡಿ ಪ್ರಕರಣ ದಾಖಲಾಗಿದ್ದು, ವಾಹನ ಮಾಲೀಕನಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಸಿಡಿಲು ಬಡಿದು 36 ಕುರಿಗಳು ಸಾವು

ಹಗರಿಬೊಮ್ಮನಹಳ್ಳಿ: ತಾಲೂಕಿನ ಉಪ್ಪಾರಗಟ್ಟೆ ಗ್ರಾಮದಲ್ಲಿ ಶುಕ್ರವಾರ ಸಂಜೆ ಸಿಡಿಲಿನ ಹೊಡೆತಕ್ಕೆ 36 ಕುರಿಗಳು ಸಾವನ್ನಪ್ಪಿದ ಘಟನೆ ನಡೆದಿದೆ. ಶುಕ್ರವಾರ ಸಂಜೆ ಕುರಿ ಮೇಯಿಸುವ ಸಂದರ್ಭದಲ್ಲಿ ಏಕಾಏಕಿ ಬಂದ ಮಳೆ ಗುಡುಗು ಸಿಡಿಲಿಗೆ ಉಪ್ಪಾರಗಟ್ಟೆ ಗ್ರಾಮದ ಯು.ಬಿ.ಅಜ್ಜಪ್ಪ ತಂದೆ ಹನುಮಂತಪ್ಪ ಅವರಿಗೆ ಸೇರಿದ್ದ 30 ಕುರಿಗಳು ಮತ್ತು ಪೂಜಾರ್ ಸುರೇಶ ತಂದೆ ನಿಂಗಪ್ಪ ಅವರಿಗೆ ಸೇರಿದ 6 ಕುರಿಗಳಿಗೆ ಸಿಡಿಲು ಬಡಿದು ಸ್ಥಳದಲ್ಲೇ ಮರಣ ಹೊಂದಿರುತ್ತವೆ ಘಟನಾ ಸ್ಥಳಕ್ಕೆ ತಹಶೀಲ್ದಾರ್ ಆರ್.ಕವಿತಾ ಹಾಗೂ ಪಶುಸಂಗೋಪನೆ ಅಧಿಕಾರಿ ಡಾ.ಸೂರಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕುರಿಗಳ ಮಾಲೀಕರು ಹಾಗೂ ಉಪ್ಪಾರಗಟ್ಟೆ ಗ್ರಾಮಸ್ಥರು ಇದ್ದರು.

ಸಮರ್ಪಕವಾಗಿ ಬಿತ್ತನೆ ಬೀಜ ವಿತರಿಸಿ: ಶಿವರಾಜ



ಹೂವಿನಹಡಗಲಿ: ಮುಂಗಾರು ಹಂಗಾಮಿನ ವಿವಿಧ ಬೆಳೆಯ ಬಿತ್ತನೆ ಬೀಜಗಳು ಪ್ರಮುಖವಾಗಿ ಜೋಳ ಮೇ 20ರಿಂದ ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ ಯಾವುದೇ ಕೊರತೆಯಾಗದಂತೆ ರೈತರಿಗೆ ವಿತರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎಂ.ಶಿವರಾಜ ಹೊಳಗುಂದಿ ಹೇಳಿದರು.

ಪಟ್ಟಣದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘಟನೆ ವತಿಯಿಂದ ಮನವಿ ಸಲ್ಲಿಸಿ ಮಾತನಾಡಿ, ಅಕ್ರಮವಾಗಿ ಕಳಪೆ ಬೀಜ ಮಾರಾಟ ಮಾಡುವ ಕಂಪನಿಗಳ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳಬೇಕು. ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ತಾಲೂಕಿನ ರೈತರ ಪರವಾಗಿ ಪ್ರಸಕ್ತ ವರ್ಷದಲ್ಲಿ ಮುಂಗಾರು ಸಮಯಕ್ಕೆ ಸರಿಯಾಗಿ ರೈತರಿಗೆ ನಮ್ಮ ತಾಲೂಕಿನ ರೈತರಿಗೆ ಮುಂಗಾರು ವಿವಿಧ ಬೆಳೆಗಳ ಬಿತ್ತನೆ ಬೀಜಗಳು ಹಾಗೂ ಪ್ರಮುಖವಾಗಿ ಜೋಳ ದಿನಾಂಕ ಮೇ 20ರಿಂದ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಿಸಬೇಕು ಎಂದು ಒತ್ತಾಯಿಸಿದರು.

ತಾಲೂಕಾಧ್ಯಕ್ಷ ಸಿದ್ದಪ್ಪ ಹೊಸಮನಿ, ಜಿಲ್ಲಾ ಮಹಿಳಾ ಅಧ್ಯಕ್ಷ ವಿಜಯಲಕ್ಷ್ಮಿ, ಜಿಲ್ಲಾ ಉಪಾಧ್ಯಕ್ಷ ಕೆ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ದುರುಗಪ್ಪ, ಗನಿಸಾಹೇಬ್ರ, ತಾಲೂಕು ಗೌರವ ಅಧ್ಯಕ್ಷರು ಪಕ್ಕೀರಪ್ಪ ಬಾವಿಹಳ್ಳಿ, ಉಪಾಧ್ಯಕ್ಷ ವಿ.ಬಿ.ಚನ್ನಬಸಪ್ಪ, ಸಂಘಟನಾ ಕಾರ್ಯದರ್ಶಿ ಗಿರೀಶ, ಯುವಘಟಕದ ಅಧ್ಯಕ್ಷರು ರೈತ ಬಣ ವೆಂಕಟೇಶ್ ನಾಯ್ಕ್, ಮುಜ್ಜು ರಹೇಮನ್, ಗ್ರಾಮ ಘಟಕದ ಗೌರವ ಅಧ್ಯಕ್ಷರು ದರಗ್ಯ ನಾಯ್ಕ್, ಚಂದ್ರನಾಯ್ಕ್, ಗುರುಬಸವರಾಜ, ಕೊಟ್ರೇಶ್ ನಾಯ್ಕ್ ಇತರರಿದ್ದರು.



ಕಲಬುರಗಿ: ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ, ಶಾಸಕ ಬಸವರಾಜ ಮತ್ತಿಮಡು, ಕಲಬುರಗಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಮಹಾನಗರ ಘಟಕದ ಅಧ್ಯಕ್ಷ ಚಂದು ಪಾಟೀಲ್ ಸೇರಿದಂತೆ ಇತರರು ಭೋಜನ ಸವೆದರು.





ಸಿಂಧೂ ಜಲ ಒಪ್ಪಂದ ರದ್ದತಿಗೆ ಒಂದು ವರ್ಷ

ನೀರಿನ ಹರಿವಿನ ತಡೆಗೆ ಭಾರತ ತೆಗೆದುಕೊಂಡ ಕ್ರಮಗಳೇನು?

ಪಾಕಿಸ್ತಾನ ಕಳೆದುಕೊಂಡಿದ್ದು ಏನು? ಎಷ್ಟು?

▸ ಅಜಿತ್ ಶೆಟ್ಟಿ ಹೆರಂಜೆ

ಸಿಂಧೂ ಜಲ ಒಪ್ಪಂದವು (ಇಂಡಸ್ ವಾಟರ್ ಟ್ರೀಟಿ–ಐಡಬ್ಲ್ಯುಟಿ) 1960ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ವಿಶ್ವ ಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಸ್ಥಾಪಿತವಾದ ಜಲ ಹಂಚಿಕೆ ಒಪ್ಪಂದ. ಸಿಂಧೂ ನದಿ ಮತ್ತು ಅದರ ಉಪನದಿಗಳಾದ ಝೇಲಂ, ಚೆನಾಬ್, ರವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನೀರನ್ನು ಎರಡೂ ದೇಶಗಳ ನಡುವೆ ಹೇಗೆ ಹಂಚಿಕೊಳ್ಳಬೇಕು ಎಂಬ ನಿಯಮಗಳನ್ನು ಈ ಒಪ್ಪಂದ ನಿಗದಿಪಡಿಸಿತ್ತು. ಒಪ್ಪಂದದ ಪ್ರಕಾರ ಮೂರು ಪೂರ್ವ ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನೀರು ಭಾರತಕ್ಕೆ ಸೇರಿದ್ದರೆ, ಝೇಲಂ, ಚೆನಾಬ್ ಮತ್ತು ಸಿಂಧೂ ಎಂಬ ಮೂರು ಪಶ್ಚಿಮ ನದಿಗಳ ನೀರು ಮುಖ್ಯವಾಗಿ ಪಾಕಿಸ್ತಾನಕ್ಕೆ ಸೇರಬೇಕಿತ್ತು.

ಒಪ್ಪಂದದ ಅಡಿಯಲ್ಲಿ ಭಾರತವು ನಿಯಮಿತವಾಗಿ ನದಿ ನೀರಿನ ಹರಿವಿನ ದತ್ತಾಂಶಗಳನ್ನು ಪಾಕಿಸ್ತಾನದೊಂದಿಗೆ ಹಂಚಿಕೊಳ್ಳಬೇಕಾಗಿತ್ತು.

ಸಿಂಧೂ ಜಲ ಒಪ್ಪಂದವು ಕೇವಲ ನದಿ ನೀರು ಹಂಚಿಕೆಯ ಒಪ್ಪಂದವಾಗಿರದೆ ಪಾಕಿಸ್ತಾನದಂತಹ ಕೃಷಿ ಪ್ರಧಾನ ದೇಶಕ್ಕೆ ಅದು ಬದುಕಿನ ಜೀವನಾಡಿಯಾಗಿದೆ. ಪಾಕಿಸ್ತಾನದ ಕೃಷಿ ವಲಯವು ಸಂಪೂರ್ಣವಾಗಿ ಸಿಂಧೂ ಜಲಾನಯನ ನೀರಾವರಿ ವ್ಯವಸ್ಥೆಯ(ಐಬಿಐಎಸ್) ಮೇಲೆ ಅವಲಂಬಿತವಾಗಿದ್ದು, ಈ ವ್ಯವಸ್ಥೆ ಪಾಕಿಸ್ತಾನದ ಸುಮಾರು 16.7 ಮಿಲಿಯನ್ ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. ಪಾಕಿಸ್ತಾನದ ಒಟ್ಟು ಆಹಾರ ಉತ್ಪಾದನೆಯ ಶೇ.90 ಭಾಗ ಈ ನೀರಾವರಿ ಆಧಾರಿತ ಕೃಷಿಯಿಂದಲೇ ಬರುತ್ತದೆ (ಆಧಾರ: ಪಾಕಿಸ್ತಾನ ಕೃಷಿ ಸಂಶೋಧನಾ ಪರಿಷತ್ತು).

ರದ್ದತಿ ಎಂದರೇನು?

ಈ ಒಪ್ಪಂದದಲ್ಲಿ ಎರಡು ಮಹತ್ವದ ಬಿಂದುಗಳಿವೆ. 2025ರ ಏಪ್ರಿಲ್‌ನಲ್ಲಿ ಭಾರತ ಸರ್ಕಾರ ಸಿಂಧೂ ಜಲ ಒಪ್ಪಂದದ ನಿಯಮಗಳ ಮರುಪರಿಶೀಲನೆಗೆ ನೋಟಿಸ್ ನೀಡಿ ಅದನ್ನು ಅಮಾನತುಗೊಳಿಸಿದೆ. ರಕ್ತ ಮತ್ತು ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಎಂಬ ಭಾರತ ಸರ್ಕಾರದ ನಿಲುವು ಈ ಅಮಾನತಿಗೆ ಆಧಾರವಾಗಿದ್ದು, ಈ ಅಮಾನತು ಎರಡು ಬಹಳ ಮಹತ್ವದ ಆಯಾಮಗಳನ್ನು ಹೊಂದಿದೆ. ಮೊದಲನೆಯದಾಗಿ, ಭಾರತ ಕಿಶನ್ ಗಂಗಾ ಮತ್ತು ರಾಟಲ್ ಜಲವಿದ್ಯುತ್ ಯೋಜನೆಗಳ ನಿರ್ಮಾಣದ ವೇಗ ಹೆಚ್ಚಿಸಿದ ಪರಿಣಾಮವಾಗಿ ಪಾಕಿಸ್ತಾನಕ್ಕೆ ಹರಿಯುವ ನೀರಿನ ಪ್ರಮಾಣದಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹೋಗುತ್ತಿದ್ದ ನೀರನ್ನು ತಡೆಹಿಡಿಯಲು ಶಹಪುರ್ ಕಿಂಡಿ ಅಣೆಕಟ್ಟು ಮುಕ್ತಾಯದ ಹಂತದಲ್ಲಿದ್ದು, ಇದರ ಪರಿಣಾಮವಾಗಿ ಪ್ರಾಯೋಗಿಕವಾಗಿ ಪಾಕಿಸ್ತಾನಕ್ಕೆ ಈ ನದಿಯ ನೀರಿನ ಹರಿವು ಶೂನ್ಯ ಮಟ್ಟಕ್ಕೆ ಬಂದಿದೆ. ಪಾಕಿಸ್ತಾನದ ನೀರಾವರಿ ಇಲಾಖೆಯ ವರದಿಯ ಪ್ರಕಾರ ದೇಶದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಳೆದ ದಶಕದ ಸರಾಸರಿಗಿಂತ ಶೇ.30ರಷ್ಟು ಕಡಿಮೆಯಾಗಿದೆ.



ಇದರ ಎರಡನೇ ಪ್ರಮುಖ ಅಂಶವೆಂದರೆ ಹರಿವಿನ ದತ್ತಾಂಶ ಹಂಚಿಕೆ ನಿಲ್ಲಿಸುವುದು – ಇದರಿಂದ ಉಂಟಾಗುವ ಅನಿಶ್ಚಿತೆ ನೀರಿನ ಹರಿವು ನಿಲ್ಲಿಸುವುದಕ್ಕಿಂತಲೂ ಹೆಚ್ಚಿನ ಅಪಾಯಕಾರಿಯಾಗಿದೆ. ಒಪ್ಪಂದದ ಅಮಾನತು ಕೇವಲ ನೀರಿನ ಹರಿವನ್ನು ತಡೆಯುವುದಕ್ಕೆ ಸೀಮಿತವಾಗಿಲ್ಲ ಎಂಬ ವಿಷಯ ಬಹಳ ಮಹತ್ವದ್ದಾಗಿದೆ. ಒಪ್ಪಂದದ ನಿಯಮಗಳ ಅಡಿಯಲ್ಲಿ ಭಾರತ ಪ್ರತಿ ವರ್ಷ ನದಿ ನೀರಿನ ಹರಿವಿನ ಮಾಹಿತಿ, ಮಳೆಯ ಪ್ರಮಾಣ ಮತ್ತು ಅಣೆಕಟ್ಟುಗಳ ನೀರಿನ ಮಟ್ಟದ ದತ್ತಾಂಶಗಳನ್ನು ನಿಯಮಿತವಾಗಿ ಪಾಕಿಸ್ತಾನಕ್ಕೆ ನೀಡಬೇಕಾಗಿತ್ತು. ಈ ಪೂರ್ವ ಮಾಹಿತಿ ರೈತರು ಬಿತ್ತನೆ ಮತ್ತು ನೀರಾವರಿ ಯೋಜನೆ ರೂಪಿಸಲು ಮತ್ತು ಅಚಾನಕ್ ಪ್ರವಾಹ ಅಥವಾ ಬರ ಪರಿಸ್ಥಿತಿ ನಿಭಾಯಿಸಲು ಅತ್ಯಂತ ಅವಶ್ಯಕವಾಗಿತ್ತು. ಈ ದತ್ತಾಂಶ ಹಂಚಿಕೆ ನಿಂತ ನಂತರ ಪಾಕಿಸ್ತಾನದ ಕೃಷಿ ಮತ್ತು ನೀರಾವರಿ ಯೋಜನೆಗಳು ಸಂಪೂರ್ಣ ಅನಿಶ್ಚಿತತೆಯಲ್ಲಿ ನಡೆಯಬೇಕಾದ ಸ್ಥಿತಿ ಬಂದಿದೆ.

ದತ್ತಾಂಶ ಹಂಚಿಕೆ ನಿಂತ ಪರಿಣಾಮ ಎಷ್ಟು ತೀವ್ರವಾಗಿದೆ ಎಂದರೆ ಅದು ಅಂಕಿಅಂಶಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇಂಡಸ್ ರಿವರ್ ಸಿಸ್ಟಮ್



ಅಥಾರಿಟಿ (ಐಆರ್‌ಎಸ್‌ಎ) ವರದಿಯ ಪ್ರಕಾರ ಕಳೆದ ಒಂದು ವರ್ಷದಲ್ಲಿ ಸಿಂಧ್ ಪ್ರಾಂತ್ಯಕ್ಕೆ ಸಿಗಬೇಕಾಗಿದ್ದ ನೀರಿನ ಪ್ರಮಾಣದಲ್ಲಿ ಶೇ.35ರಿಂದ 40ರಷ್ಟು ಕೊರತೆ ಉಂಟಾಗಿದೆ. ನದಿ ನೀರಿನ ಮಟ್ಟ ಮೊದಲೇ ತಿಳಿಯದ ಕಾರಣ ಖಾರಿಫ್ ಮತ್ತು ರಬಿ ಹಂಗಾಮಿನ ಬಿತ್ತನೆ ವೇಳಾಪಟ್ಟಿ ಅಸ್ತವ್ಯಸ್ತವಾಗಿ ಬೆಳೆ ನಷ್ಟ ಭಾರಿ ಪ್ರಮಾಣದಲ್ಲಿ ಸಂಭವಿಸಿದೆ. ಮಾರ್ಚ್ 2026ರ ವಿಶ್ವಸಂಸ್ಥೆ ಸಭೆಯಲ್ಲಿ ಭಾರತ, ಭಯೋತ್ಪಾದನೆ ನಿಲ್ಲದ ಹೊರತು ಈ ವಿಚಾರದಲ್ಲಿ ಭವಿಷ್ಯದಲ್ಲಿ ಯಾವ ಚರ್ಚೆಯೂ ಸಾಧ್ಯವಿಲ್ಲ ಎಂಬ ನಿಲುವನ್ನು ಸ್ಪಷ್ಟಪಡಿಸಿ ಪಾಕ್‌ಗೆ ರಾಜತಾಂತ್ರಿಕ ಸೆಡ್ಡು ಹೊಡೆದಿದೆ.

ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳು

ಸಿಂಧೂ ನದಿ ನೀರಿನ ಹರಿವು ನಿಂತ ನೇರ ಪರಿಣಾಮ ಪಾಕಿಸ್ತಾನದ ಆಹಾರ ಧಾನ್ಯ ಉತ್ಪಾದನೆಯ ಮೇಲೆ ಆಗಿದೆ. ಪಾಕಿಸ್ತಾನದ ಪ್ರಮುಖ ಪತ್ರಿಕೆ ದಿ ಡಾನ್ ಮತ್ತು ಕೃಷಿ ತಜ್ಞರ ವರದಿಯ ಪ್ರಕಾರ, ಪಾಕಿಸ್ತಾನದ ನೀರಾವರಿ ವ್ಯವಸ್ಥೆಯಲ್ಲಿ ನೀರಿನ ಹರಿವು ಕಳೆದ ಒಂದು ವರ್ಷದಲ್ಲಿ ಶೇ.30ರಿಂದ 40 ಕುಂಠಿತವಾಗಿದೆ. ಪ್ರಮುಖ ಆಹಾರ ಬೆಳೆ ಗೋಧಿ ಉತ್ಪಾದನೆಯು 2023–24ರಲ್ಲಿ ದಾಖಲೆಯ 31.8 ಮಿಲಿಯನ್ ಟನ್ ಇದ್ದದ್ದು, 2025–26ರಲ್ಲಿ 28.1 ಮಿಲಿಯನ್ ಟನ್‌ಗೆ ಅಂದರೆ 3.7 ಮಿಲಿಯನ್ ಟನ್ ಕೊರತೆಯಾಗಿದೆ (**ಆಧಾರ: ಯುಎಸ್‌ಡಿಎ ಗ್ರೈನ್ ರಿಪೋರ್ಟ್ ಏಪ್ರಿಲ್ 2026**). ಇದರ ಪರಿಣಾಮವಾಗಿ, ಪಾಕಿಸ್ತಾನ ಗೋಧಿ ರಫ್ತು ಮಾಡುವ ದೇಶದ ಸ್ಥಾನದಿಂದ ಆಮದು ಮಾಡಿಕೊಳ್ಳುವ ದೇಶವಾಗಿ ಪರಿವರ್ತನೆಗೊಂಡಿದೆ. ಈ ಬಿಕ್ಕಟ್ಟಿನಿಂದಾಗಿ ಪಾಕಿಸ್ತಾನದಲ್ಲಿ ಗೋಧಿ ಹಿಟ್ಟಿನ ಬೆಲೆ ಕೆಜಿಗೆ 160 ರೂ. ದಾಟಿದೆ, ಸಬ್ಸಿಡಿ ಹಿಟ್ಟಿಗಾಗಿ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಸಂಕಷ್ಟಕ್ಕೆ ಕೃಷಿ ಉತ್ಪಾದಕತೆಯ ಕುಸಿತ ನೇರ ಕಾರಣ? ಪ್ರತಿ ಎಕರೆ ಗೋಧಿ ಇಳುವರಿ ಶೇ.15ರಿಂದ 20 ಕಡಿಮೆಯಾಗಿದ್ದು, ಭತ್ತ ಮತ್ತು ಹತ್ತಿ ಬೆಳೆಗಳ ವ್ಯಾಪ್ತಿ ಸುಮಾರು ಶೇ.20 ಕಡಿಮೆಯಾಗಿದ್ದು, ಸಿಂಧ್ ಪ್ರಾಂತ್ಯದ ಶೇ.33 ನೀರಾವರಿ ಭೂಮಿ ವಿಷಕಾರಿ ಲವಣಾಂಶಗಳ ಪ್ರಮಾಣದಲ್ಲಿ ಹೆಚ್ಚಳ ಕಂಡಿದ್ದು, ಇದು ಕೃಷಿ ಭೂಮಿಯನ್ನು ಬಂಜರು ಮಾಡುತ್ತಿದೆ (**ಆಧಾರ: ಎಂಡಿಪಿಐ ಸಂಶೋಧನಾ ಸಂಸ್ಥೆ**).



ನೀರಿನ ಕೊರತೆಯಿಂದ ಹತ್ತಿ ಬೆಳೆ ನಾಶವಾಗಿ ಜವಳಿಉದ್ಯಮ ತೀವ್ರ ಹೊಡೆತ ಅನುಭವಿಸಿದ್ದು, ಇದು ದೇಶದ ರಫ್ತು ಆದಾಯದ ಶೇ.60 ಭಾಗವನ್ನು ಹೊಂದಿರುವ ಪ್ರಮುಖ ಕ್ಷೇತ್ರವಾಗಿದೆ. ಒಂದೇ ವರ್ಷದಲ್ಲಿ 1.5 ಮಿಲಿಯನ್ ಕಾರ್ಮಿಕರು ಉದ್ಯೋಗ ಕಳೆದುಕೊಂಡು 400ಕ್ಕೂ ಹೆಚ್ಚು ಕೈಗಾರಿಕೆಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ಸಿಂಧೂ ನದಿಯ ಡೆಲ್ಟಾ ಪ್ರದೇಶದಲ್ಲಿ ಸಮುದ್ರದ ಉಪ್ಪುನೀರು 40 ಕಿಲೋಮೀಟರ್ ಒಳಗೆ ನುಗ್ಗಿ ಅಂತರ್ಜಲ ಉಪ್ಪಾಗಿ ಭೂಮಿಯ ಫಲವತ್ತತೆ ನಾಶವಾಗುತ್ತಿದ್ದು, ಲಕ್ಷಾಂತರ ಜನ ವಲಸೆ ಹೋಗುತ್ತಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವಾಗಿ 2026ರ ಜಿಆರ್‌ಎಫ್‌ಸಿ ವರದಿ ಪಾಕಿಸ್ತಾನವನ್ನು ವಿಶ್ವದ ಅಗ್ರ 10 ಆಹಾರ ಬಿಕ್ಕಟ್ಟಿನ ದೇಶಗಳ ಪಟ್ಟಿಯಲ್ಲಿ ಸೇರಿಸುವಂತಾಗಿದ್ದು, 11 ಮಿಲಿಯನ್ ಜನರು ತೀವ್ರ ಆಹಾರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ ಮತ್ತು ಶೇ.40 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ (**ಆಧಾರ: ಐಪಿಸಿ ವಿಶ್ಲೇಷಣೆ, ಫೆಬ್ರವರಿ 2026; ವಿಶ್ವಸಂಸ್ಥೆ**). ಒಟ್ಟಾರೆ ಸಿಂಧೂ ಜಲ ಒಪ್ಪಂದ ರದ್ದತಿಯಿಂದ ಪಾಕಿಸ್ತಾನದ ಆರ್ಥಿಕತೆಗೆ 27.3 ಬಿಲಿಯನ್ ಡಾಲರ್ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಪಾಕಿಸ್ತಾನದಲ್ಲಿ ಗೋಧಿ ಹಿಟ್ಟಿನ ಬೆಲೆ ಕೆಜಿಗೆ 160 ರೂ. ದಾಟಿದೆ


ಪೆಟ್ರೋಲಿಯಂ ಮೇಲೆ ಅಧಿಕ ಅವಲಂಬನೆ ಆರ್ಥಿಕ ಪತನದ ಭಯ



ಜಲವಿದ್ಯುತ್ ಉತ್ಪಾದನೆ ಶೇ.25 ಕುಸಿದ ನಂತರ, ಪಾಕಿಸ್ತಾನವು ವಿದ್ಯುತ್ ಕೊರತೆಯನ್ನು ತುಂಬಲು ಪೆಟ್ರೋಲಿಯಂ ಮತ್ತು ಎಲ್‌ಎನ್‌ಜಿ ಆಮದಿನ ಮೇಲೆ ತೀವ್ರವಾಗಿ ಅವಲಂಬಿತವಾಯಿತು. ಇದರ ಪರಿಣಾಮವಾಗಿ, 2025–26ರಲ್ಲಿ ಇಂಧನ ಆಮದಿಗಾಗಿ ಮಾತ್ರ ಹೆಚ್ಚುವರಿ 1.5 ಬಿಲಿಯನ್ ಡಾಲರ್ ವ್ಯಯವಾಗಿ, ವಿದೇಶಿ ವಿನಿಮಯ ತೀವ್ರ ಒತ್ತಡಕ್ಕೆ ಸಿಲುಕಿ, 4.8 ಬಿಲಿಯನ್ ಸಾಲ ಮರುಪಾವತಿ ಮತ್ತು ಇಂಧನ ಆಮದು ಒತ್ತಡದಿಂದ ಸೌದಿ ಅರೇಬಿಯಾದಿಂದ ತುರ್ತು ನೆರವು ಕೇಳಬೇಕಾದ ಸ್ಥಿತಿ ಬಂದಿದೆ (**ಆಧಾರ: ಐಎಂಎಫ್ ಇಎಫ್‌ಎಫ್ ಪರಾಮರ್ಶೆ 2026**). ಈ ಸಂಕಷ್ಟದ ನಡುವೆ, 2025–26ರಲ್ಲಿ ಕೊಲ್ಲಿ ಪ್ರದೇಶದಲ್ಲಿ ಉಂಟಾದ ಯುದ್ಧ ಪರಿಸ್ಥಿತಿಯು ಅಂತರಾಷ್ಟ್ರೀಯ ತೈಲ ಬೆಲೆಯನ್ನು ಬ್ಯಾರೆಲ್‌ಗೆ 110–120 ಅಮೆರಿಕನ್ ಡಾಲರ್ ಏರಿತು, ಈಗಾಗಲೇ ದುಬಾರಿಯಾಗಿದ್ದ ಎಲ್‌ಎನ್‌ಜಿ ಆಮದು ವೆಚ್ಚವು ಮತ್ತಷ್ಟು ಹೆಚ್ಚಾಯಿತು. ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 380 ರೂ. ಮೀರಿ ಕೃಷಿ ಮತ್ತು ಸಾರಿಗೆ ವೆಚ್ಚ ಗಗನಕ್ಕೇರಿದ್ದು, ವಿದ್ಯುತ್ ಬೆಲೆ ಯೂನಿಟ್‌ಗೆ 60–70 ರೂ. ತಲುಪಿ ಸಾರಿಗೆ ಹಣದುಬ್ಬರ ಶೇ.12.5 ದಾಟಿದೆ. ಇಂಧನ ಸಾಲ 2.53 ಟ್ರಿಲಿಯನ್ ರೂ. ತಲುಪಿ ದೇಶವು ಐಎಂಎಫ್‌ನ ಕಠಿಣ ಷರತ್ತುಗಳಿಗೆ ಅಡಿಯಾಳಾದ ಸ್ಥಿತಿಯಲ್ಲಿ, ಕೊಲ್ಲಿ ಯುದ್ಧವು ಪಾಕಿಸ್ತಾನದ ಇಂಧನ ಅಭದ್ರತೆಯನ್ನು ಮತ್ತಷ್ಟು ಗಂಭೀರ ಮಟ್ಟಕ್ಕೆ ತಳ್ಳಿದೆ (**ಆಧಾರ: ಎನ್‌ಇಪಿಆರ್‌ಎ ಟ್ಯಾರಿಫ್ ಆರ್ಡರ್ 2026; ಐಎಂಎಫ್ ಕಂಟ್ರಿ ರಿಪೋರ್ಟ್ 2026**). ಇಂಧನ ಬಿಕ್ಕಟ್ಟು ಎಷ್ಟು ತೀವ್ರವಾಗಿದೆಯೆಂದರೆ, ಪಾಕಿಸ್ತಾನದಲ್ಲಿ ಅಧಿಕೃತ ಘೋಷಣೆ ಇಲ್ಲದೆಯೇ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಆಸ್ಪತ್ರೆ, ಶಾಲೆ ಮತ್ತು ಸರ್ಕಾರಿ ಕಚೇರಿಗಳಲ್ಲಿ ದಿನಕ್ಕೆ 12–16 ಗಂಟೆ ವಿದ್ಯುತ್ ಇಲ್ಲದ ಸ್ಥಿತಿ ಇದ್ದು, ಕೈಗಾರಿಕೆಗಳು ಸ್ಥಗಿತಗೊಂಡು ಲಕ್ಷಾಂತರ ಜನ ರಸ್ತೆಗಿಳಿಯುತ್ತಿದ್ದಾರೆ.



ಪಾಕ್‌ನಲ್ಲಿ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 380 ರೂ. ದಾಟಿದೆ



ಜಲವಿದ್ಯುತ್ ಉತ್ಪಾದನೆ 25% ಕುಸಿತ

ಹೆಚ್ಚುತ್ತಿರುವ ಹಣದುಬ್ಬರ



ದುಬಾರಿ ಜೀವನಕ್ಕೆ ಕಂಗಾಲಾದ ಪಾಕ್

ಜಲ ಮತ್ತು ಇಂಧನ ಬಿಕ್ಕಟ್ಟಿನ ನೇರ ಪರಿಣಾಮ ಪಾಕಿಸ್ತಾನದ ಹಣದುಬ್ಬರದ ಮೇಲೆ ಬಿದ್ದಿದ್ದು, 2026ರ ಆರಂಭದಲ್ಲಿ ದೇಶದ ಒಟ್ಟು ಹಣದುಬ್ಬರ ದರ ಶೇ.6.4 ಇದ್ದರೂ, ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಕಳೆದ 1 ವರ್ಷದಲ್ಲಿ ಶೇ.34–36 ಏರಿಕೆಯಾಗಿ ಸಾರಿಗೆ ಹಣದುಬ್ಬರ ಶೇ.12.5 ತಲುಪಿ ರೈತರು ಮತ್ತು ಕಾರ್ಮಿಕರ ನೈಜ ಜೀವನ ವೆಚ್ಚವು ಭಾರೀ ಒತ್ತಡಕ್ಕೆ ಸಿಲುಕಿದೆ (**ಆಧಾರ: ಎಡಿಬಿ ಎಡಿಒ ಏಪ್ರಿಲ್ 2026; ಒಜಿಆರ್‌ಎ ಏಪ್ರಿಲ್ 2026**) ಗೋಧಿ ಹಿಟ್ಟು ಕೆಜಿಗೆ 160 ರೂ., ಅಡುಗೆ ಎಣ್ಣೆ ಲೀಟರಿಗೆ 800 ರೂ. ದಾಟಿ ಸಾಮಾನ್ಯ ಜನರ ಕೊಳ್ಳುವ ಶಕ್ತಿ ನಾಶವಾಗಿದ್ದು, ಕಳೆದ 3 ವರ್ಷಗಳಲ್ಲಿ ಪಾಕಿಸ್ತಾನಿ ರೂಪಾಯಿ, ಡಾಲರ್ ಎದುರು ಶೇ.60ರಷ್ಟು ಮೌಲ್ಯವನ್ನು ಕಳೆದುಕೊಂಡಿದೆ (**ಆಧಾರ: ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ್**). ಈ ಆರ್ಥಿಕ ಸಂಕಷ್ಟವು ದೇಶಾದ್ಯಂತ ತೀವ್ರ ಪ್ರತಿಭಟನೆಗಳಿಗೆ ನಾಂದಿ ಹಾಡಿದೆ. ಕರಾಚಿಯಲ್ಲಿ ವ್ಯಾಪಾರಿಗಳು ಮತ್ತು ಕೈಗಾರಿಕಾ ಕಾರ್ಮಿಕರು ವಿದ್ಯುತ್ ಬೆಲೆ ಏರಿಕೆ ವಿರುದ್ಧ ಬೃಹತ್ ಮುಷ್ಕರ ನಡೆಸಿದ್ದರೆ, ಲಾಹೋರ್ ಮತ್ತು ರಾವಲ್ಪಿಂಡಿಯಲ್ಲಿ ಮಧ್ಯಮ ವರ್ಗದ ಜನರು ಆಹಾರ ಬೆಲೆ ಏರಿಕೆ ವಿರುದ್ಧ ಬೀದಿಗಿಳಿದಿದ್ದಾರೆ. ಖೈಬರ್ ಪಖ್ತುನ್ಖ್ವಾ ಮತ್ತು ಬಲೂಚಿಸ್ತಾನದಲ್ಲಿ ಸರ್ಕಾರಿ ನೌಕರರಿಗೆ ತಿಂಗಳುಗಟ್ಟಲೆ ವೇತನ ಪಾವತಿಸಲು ಸಾಧ್ಯವಾಗದ ಸ್ಥಿತಿ ಎದುರಾಗಿದ್ದು, ಶಿಕ್ಷಕರು ಮತ್ತು ಆರೋಗ್ಯ ಕಾರ್ಯಕರ್ತರು ಕೆಲಸ ಬಿಟ್ಟು ಪ್ರತಿಭಟನೆಗೆ ಇಳಿದಿದ್ದಾರೆ (**ಆಧಾರ: ದ ಡಾನ್, ಫೆಬ್ರವರಿ 2026**).

ಕಳೆದ 3 ವರ್ಷಗಳಲ್ಲಿ ಪಾಕಿಸ್ತಾನಿ ರೂಪಾಯಿ, ಡಾಲರ್ ಎದುರು 60% ಮೌಲ್ಯ ಕಳೆದುಕೊಂಡಿದೆ



ಸಾರಿಗೆ ಹಣದುಬ್ಬರ 12.5%

ಅಡುಗೆ ಎಣ್ಣೆ ಲೀಟರಿಗೆ 800 ರೂ.

ಮಧ್ಯಮ ವರ್ಗದ ಜನರು ಆಹಾರ ಬೆಲೆ ಏರಿಕೆ ವಿರುದ್ಧ ಬೀದಿಗಿಳಿದಿದ್ದಾರೆ



ಪ್ರಾದೇಶಿಕ ಹಿಂಸಾಚಾರ ಬಿಕ್ಕಟ್ಟಿಗೆ ಕಾರಣವಾದ ಜಲದಿಗ್ಬಂಧನ


ಸಿಂಧೂ ನದಿಯ ನೀರನ್ನು ಪಾಕಿಸ್ತಾನದ ಪಂಜಾಬಿನ ಕೃಷಿ ಚಟುವಟಿಗೆ ಹೆಚ್ಚಾಗಿ ಬಳಕೆಯಾಗುತ್ತೆ, ರಾಜಕೀಯವಾಗಿ ಪಾಕಿಸ್ತಾನದ ಈ ರಾಜ್ಯವೇ ಇಡೀ ದೇಶದ ಹಿಡಿತ ಇಟ್ಟಿರುವುದು, ಸಿಂಧೂ ನದಿ ನೀರಿನ ಹರಿವು ಕಡಿಮೆಯಾದ ನಂತರ ಇತರ ಜಲಮೂಲಗಳ ಮೇಲಿನ ಅವಲಂಬನೆ ಹೆಚ್ಚಾಗಿ ಪಾಕಿಸ್ತಾನದಲ್ಲಿ ಉತ್ಪಾದನೆಯಾಗುವ ಬಹುತೇಕ ವಿದ್ಯುತ್ ಪಂಜಾಬ್ ಕೃಷಿ ಕ್ಷೇತ್ರಕ್ಕೆ ಆದ್ಯತೆಯ ಮೇಲೆ ಹರಿದು ಪ್ರಾಂತ್ಯಗಳ ನಡುವೆ ವಿದ್ಯುತ್ ಹಂಚಿಕೆಯ ತೀವ್ರ ಸಂಘರ್ಷ ಉಂಟಾಗಿದೆ.



ಹಾಗಾಗಿ ತಮ್ಮ ವಿದ್ಯುತ್ತಿಗೆ ದುಬಾರಿ ಬೆಲೆ ಕೂಡ ಕೊಡುತ್ತಿದ್ದಾರೆ. ಜನಸಂಖ್ಯೆಯ ಶೇ.60ರಷ್ಟು ಜನರಿಗೆ ಕುಡಿಯುವ ನೀರೂ ಲಭ್ಯವಿಲ್ಲ (**ಆಧಾರ: ಎಎನ್‌ಐ, ಮಾರ್ಚ್ 2026**). ವಿದ್ಯುತ್ ಬಿಲ್ ದ್ವಿಗುಣವಾದ ನಂತರ 6 ತಿಂಗಳಲ್ಲಿ 200ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದು ನಮ್ಮ ನೀರು ಪಂಜಾಬ್‌ಗೆ, ನಮಗೆ ಕತ್ತಲು ಎಂಬ ಘೋಷಣೆ ಮೊಳಗಿದ್ದು, 2024ರ ಪಿಒಕೆ ಅವಾಮಿ ಆ್ಯಕ್ಷನ್ ಕಮಿಟಿ ಚಳವಳಿ ಮತ್ತಷ್ಟು ತೀವ್ರ ಸ್ವರೂಪ ಪಡೆದಿದೆ. ಇದೇ ಸಮಯದಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಐಆರ್‌ಎಸ್‌ಎ ದತ್ತಾಂಶದ ಪ್ರಕಾರ ಶೇ.35–40 ನೀರಿನ ಕೊರತೆ ಉಂಟಾಗಿದ್ದು, 1991ರ ಜಲ ಹಂಚಿಕೆ ಒಪ್ಪಂದ ಉಲ್ಲಂಘಿಸಿ ಸಿಂಧ್ ನದಿಯ ಶೇ.70 ನೀರನ್ನು ಪಂಜಾಬ್ ಕೃಷಿ ಮತ್ತು ಸೇನಾ ಒಡೆತನದ ಫಾರ್ಮ್‌ಗಳಿಗೆ ಮೀಸಲಿಡಲಾಗಿದೆ ಎಂದು ದ ಡಾನ್ ವರದಿ ಮಾಡಿದೆ. ಪಾಕಿಸ್ತಾನ ಸೇನೆಯ ವಾಣಿಜ್ಯ ವಿಭಾಗವಾದ ಫೌಜಿ ಫೌಂಡೇಶನ್ ಮತ್ತು ರಕ್ಷಣಾ ಗೃಹ ಪ್ರಾಧಿಕಾರ (ಡಿಎಚ್‌ಎ) ನೀರಾವರಿ ಕಾಲುವೆಗಳ ನಿಯಂತ್ರಣ ಕೈಗೆತ್ತಿಕೊಂಡು ತಮ್ಮ ವಾಣಿಜ್ಯ ಕೃಷಿ ಯೋಜನೆಗಳಿಗೆ ಆದ್ಯತೆಯ ಮೇಲೆ ನೀರು ಪಡೆಯುತ್ತಿದ್ದು, ಸಾಮಾನ್ಯ ರೈತರ ಜಮೀನುಗಳು ಬರಡಾಗುತ್ತಿವೆ. ದೇಶದ ಒಟ್ಟು ಕೃಷಿ ಭೂಮಿಯ ಶೇ.12ರಷ್ಟನ್ನು ಸೇನಾ ಸಂಸ್ಥೆಗಳು ನಿಯಂತ್ರಿಸುತ್ತಿವೆ ಎಂಬ ಅಂದಾಜು ಇದ್ದು (**ಆಧಾರ: ದ ಎಕ್ಸ್‌ಪ್ರೆಸ್ ಟ್ರಿಬ್ಯೂನ್**), ನಮ್ಮ ಹೊಲಗಳು ಬತ್ತಿಹೋಗುತ್ತಿರುವಾಗ ಸೇನಾ ಫಾರ್ಮ್‌ಗಳು ಹಸಿರಾಗಿರುವುದು ಹೇಗೆ? ಎಂಬ ಪ್ರಶ್ನೆ ಪ್ರತ್ಯೇಕತಾವಾದಿ ಧ್ವನಿಗಳಿಗೆ ಹೊಸ ಚೈತನ್ಯ ನೀಡಿದೆ.

ಪಾಕ್‌ನ ಕಂಠನಾಳ ಕಾಶ್ಮೀರದಲ್ಲಿ ಸಿಂಧೂ ನದಿ

ಭಾರತ ಸಿಂಧೂ ಜಲ ಒಪ್ಪಂದ ಅಮಾನತುಗೊಳಿಸಿದ ತಕ್ಷಣ ಪಾಕಿಸ್ತಾನದ ಮಾಜಿ ವಿದೇಶಾಂಗ ಮಂತ್ರಿ ಬಿಲಾವಲ್ ಭುಟ್ಟೋ ಸಿಂಧೂ ನದಿಯಲ್ಲಿ ನಮ್ಮ ನೀರು ಹರಿಯಬೇಕು, ಇಲ್ಲದಿದ್ದರೆ ಅವರ ರಕ್ತ ಹರಿಯುತ್ತದೆಎಂದು ಗುಡುಗಿದರೆ, ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಭಾರತ ಅಣೆಕಟ್ಟು ಕಟ್ಟಿದರೆ 10 ಕ್ಷಿಪಣಿಗಳಿಂದ ನಾಶ ಮಾಡುತ್ತೇವೆ, ನಾವು ಮುಳುಗುತ್ತೇವೆ ಎನಿಸಿದರೆ ಅರ್ಧ ಜಗತ್ತನ್ನು ಮುಳುಗಿಸುತ್ತೇವೆ ಎಂದು ಅಣ್ವಸ್ತ್ರ ಬೆದರಿಕೆ ಒಡ್ಡಿದರು. ಭಾರತ ಈ ಯಾವ ಬೆದರಿಕೆಗೂ ಒಂದೇ ಒಂದು ಪ್ರತಿಕ್ರಿಯೆ ನೀಡದೆ ಮೌನವಾಗಿ ಅಣೆಕಟ್ಟುಗಳ ದ್ವಾರ ಮುಚ್ಚಿತು. ಪಾಕಿಸ್ತಾನ ಸೇನೆ ದಶಕಗಳಿಂದ ಕಾಶ್ಮೀರವನ್ನು ತನ್ನ ಕಂಠನಾಳ (ಜಗುಲಾರ್ ವೇನ್) ಎಂದು ಕರೆಯುತ್ತಿತ್ತು, ಆದರೆ ಆ ದೇಶದ ನಿಜವಾದ ಕಂಠನಾಳ ಕಾಶ್ಮೀರವಲ್ಲ ಸಿಂಧೂ ನದಿ ಎಂಬ ಸತ್ಯವನ್ನು ಮೋದಿ ಸರ್ಕಾರ ಕಳೆದ ಒಂದೇ ವರ್ಷದಲ್ಲಿ ಇಡೀ ವಿಶ್ವಕ್ಕೆ ಸಾಬೀತುಪಡಿಸಿದೆ. ಕೇವಲ ಒಂದು ನದಿಯ ನೀರು ತಡೆದ ಪರಿಣಾಮ ಕೃಷಿ, ಇಂಧನ, ಉದ್ಯಮ, ಹಣದುಬ್ಬರ ಮತ್ತು ಪ್ರಾಂತ್ಯಗಳ ನಡುವಿನ ಸಂಘರ್ಷ ಎಲ್ಲವೂ ಏಕಕಾಲದಲ್ಲಿ ಕುಸಿಯುವ ಸರಣಿ ಕ್ರಿಯೆ ಆರಂಭಗೊಂಡು ದೇಶ ಹಳಿ ತಪ್ಪುವ ಅಂಚಿಗೆ ಬಂದು ನಿಂತಿದೆ. ಈ ಸಂಕಷ್ಟದ ನಡುವೆ ಇರಾನ್–ಅಮೆರಿಕ ಯುದ್ಧ ಎಂಬ ಕೊಲ್ಲಿ ಬಿಕ್ಕಟ್ಟು ಪಾಕಿಸ್ತಾನದ ಮುಸ್ಲಿಂ ಜಗತ್ತಿನಲ್ಲಿನ ಸಮತೋಲನದ ಆಟವನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿ ಗಾಯದ ಮೇಲೆ ಉಪ್ಪು ಸವರಿದಂತಾಯಿತು. ಒಂದು ಕಾಲದಲ್ಲಿ ಅಣ್ವಸ್ತ್ರ ಕೋಟೆ ಎಂದು ಬೀಗುತ್ತಿದ್ದ ಪಾಕಿಸ್ತಾನ 2025ರ ಸೆಪ್ಟೆಂಬರ್‌ನಲ್ಲಿ ಸೌದಿ ಅರೇಬಿಯಾದೊಂದಿಗೆ ರಕ್ಷಣಾ ಒಪ್ಪಂದ ಮಾಡಿಕೊಂಡು 2,600 ಸೈನಿಕರನ್ನು ಡಾಲರ್‌ಗಾಗಿ ನಿಯೋಜಿಸುವ ಅವಮಾನಕ್ಕೆ ತಲೆ ಬಾಗಿದೆ (**ಆಧಾರ: ಎಸ್‌ಎಂಡಿಎ, ಸೆ.17, 2025**). ಇದು ನಿಜವಾದ ಚಾಣಕ್ಯ ನೀತಿ. ನಮ್ಮ ಒಬ್ಬ ಸೈನಿಕನ ಬೆವರನ್ನೂ ಹರಿಸದೆ, ಒಂದೇ ಒಂದು ಗುಂಡು ಹಾರಿಸದೆ, ಕೇವಲ ನೀರಿನ ದ್ವಾರ ಮುಚ್ಚುವ ಮೂಲಕ ಶತ್ರು ರಾಷ್ಟ್ರವನ್ನು ಮಂಡಿಯೂರುವಂತೆ ಮಾಡಿರುವ ಮೋದಿ ಸರ್ಕಾರದ ಜಲ ದಿಗ್ಬಂದನ ಭಾರತದ ಇತಿಹಾಸದಲ್ಲೇ ಅತ್ಯಂತ ಪ್ರಭಾವಶಾಲಿ ಕಾರ್ಯತಂತ್ರ ವಿಜಯಗಳಲ್ಲಿ ಒಂದಾಗಿ ದಾಖಲಾಗಲಿದೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಹೈದರಾಬಾದ್	11	7	4	0	14	+0.737
ಪಂಜಾಬ್	10	6	3	1	13	+0.571
ಆರ್‌ಸಿಬಿ	10	6	4	0	12	+1.234
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	10	3	7	0	6	-0.649
ಲಖನೌ	10	3	7	0	6	-0.934

ಕಿರುಸುದ್ದಿ

ವಿನೇಶ್ ಫೋಗಾಟ್ ಕುಸ್ತಿ ಕಂಬ್ಯಾಕ್ ಇನ್ನಷ್ಟು ತಡ

- ಶಿಸ್ತು ಮತ್ತು ಡೋಪಿಂಗ್ ವಿರೋಧಿ ನಿಯಮಗಳ ಉಲ್ಲಂಘನೆ
- ಫೋಗಾಟ್‌ಗೆ ಕುಸ್ತಿ ಫೆಡರೇಷನ್‌ನ 15 ಪುಟಗಳ ಶೋಕಾಸ್



ಹೊಸದಿಲ್ಲಿ: ನಿವೃತ್ತಿ ಹಿಂಪಡೆದು ವೃತ್ತಿಪರ ಕುಸ್ತಿಗೆ ಮರಳುವುದಾಗಿ ಘೋಷಿಸಿದ್ದ ಮಹಿಳಾ ಕುಸ್ತಿಪಟು ವಿನೇಶ್ ಫೋಗಾಟ್ ತಮ್ಮ ಕಂಬ್ಯಾಕ್ ಮಾಡುವುದಕ್ಕೆ ಜೂ.26ರವರೆಗೆ ಕಾಯುವ ಸ್ಥಿತಿ ಎದುರಾಗಿದೆ. ಶನಿವಾರ ಭಾರತೀಯ ಕುಸ್ತಿ ಫೆಡರೇಷನ್, ಶಿಸ್ತು ಉಲ್ಲಂಘನೆ ಮತ್ತು ಡೋಪಿಂಗ್ ವಿರೋಧಿ ನಿಯಮಗಳನ್ನು ವಿನೇಶ್ ಉಲ್ಲಂಘಿಸಿದ್ದಾರೆಂದು 15 ಪುಟಗಳ ಶೋಕಾಸ್ ನೋಟಿಸ್ ಕಳುಹಿಸಿದ್ದು, ಜೂ.26ರವರೆಗೆ ದೇಶೀಯ ಕುಸ್ತಿಯಲ್ಲಿ ಸ್ಪರ್ಧಿಸಲು ಅನರ್ಹವೆಂದು ಸ್ಪಷ್ಟವಾಗಿ ಘೋಷಿಸಿದೆ. ನಿವೃತ್ತಿಯಿಂದ ಮರಳುವ ಕ್ರೀಡಾಪಟುಗಳಿಗೆ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಸಂಸ್ಥೆಯು ಡೋಪಿಂಗ್ ವಿರೋಧಿ ನಿಯಮಗಳ ಪ್ರಕಾರ, ಕಡ್ಡಾಯವಾದ 6 ತಿಂಗಳ ನೋಟಿಸ್ ಅವಧಿಯಿದ್ದು, ಇದನ್ನು ವಿನೇಶ್ ಫೋಗಾಟ್ ಪೂರ್ಣಗೊಳಿಸಿಲ್ಲ ಎಂಬ ಆರೋಪವಿದೆ. ಶಿಸ್ತು ಉಲ್ಲಂಘನೆ ಮತ್ತು ಡೋಪಿಂಗ್ ವಿರೋಧಿ ನಿಯಮಗಳನ್ನು ಫೋಗಟ್ ಉಲ್ಲಂಘಿಸಿರುವ ಹಿನ್ನೆಲೆಯಿಂದ ವಿನೇಶ್ ಮರಳುವುದನ್ನು ಭಾರತೀಯ ಕುಸ್ತಿ ಫೆಡರೇಷನ್ ತಡೆಹಿಡಿದಿದೆ.ರಾಷ್ಟ್ರೀಯ ಫೆಡರೇಷನ್‌ನ ಈ ನಿರ್ಧಾರದಿಂದ, 2024ರ ಪ್ಯಾರಿಸ್ ಒಲಿಂಪಿಕ್ ಗೇಮ್ಸ್‌ನಲ್ಲಿ ಅನರ್ಹತೆ ಎದುರಿಸಿದ್ದ ಬಳಿಕ ಕುಸ್ತಿ ತೊರೆದಿದ್ದ ವಿನೇಶ್ ಫೋಗಟ್ ಮರಳುವುದು ಇನ್ನಷ್ಟು ಮುಂದೂಡಲ್ಪಟ್ಟಿದೆ. ಭಾನುವಾರ ನಡೆಯುವ ರಾಷ್ಟ್ರೀಯ ಓಪನ್ ರ್‍ಯಾಂಕಿಂಗ್ ಪಂದ್ಯಾವಳಿಯಲ್ಲಿ ಕುಸ್ತಿ ಕಣಕ್ಕಿಳಿಯಲು ವಿನೇಶ್ ಯೋಜನೆ ಹಾಕಿಕೊಂಡಿದ್ದರು. ಆದರೆ ಪ್ಯಾರಿಸ್‌ನಲ್ಲಿ ವಿನೇಶ್ ವರ್ತನೆ ಭಾರತೀಯ ಕುಸ್ತಿಯ ಪ್ರತಿಷ್ಠೆಗೆ ದೀರ್ಘಕಾಲೀನ ಹಾನಿಯನ್ನು ಉಂಟುಮಾಡಿದೆ ಎಂದು ಭಾರತೀಯ ಕುಸ್ತಿ ಫೆಡರೇಷನ್ ಆರೋಪಿಸಿದೆ.

ಆರ್ಚರಿ ವಿಶ್ವಕಪ್: ಸಾಹಿಲ್ ಜಾಧವ್‌ಗೆ ಕಂಚಿನ ಪದಕ

ಶಾಂಘೈ: ಚೀನಾದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ದ್ವಿತೀಯ ಹಂತದಲ್ಲಿ ಭಾರತದ ಆರ್ಚರಿಪಟು ಸಾಹಿಲ್ ಜಾಧವ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಶನಿವಾರ ಡೆನ್ಮಾರ್ಕ್‌ನ ಮಾರ್ಟಿನ್ ಡಮ್ಸ್‌ಬೋ ಅವರನ್ನು 147-144 ಅಂಕಗಳ ಅಂತರದಿಂದ ಸೋಲಿಸಿ ಸಾಹಿಲ್ ಕಂಚಿನ ಪದಕ ಗೆದ್ದಿದ್ದಾರೆ.

ಡೋಪಿಂಗ್ ಟೆಸ್ಟ್‌ಗೆ ಗೈರು: ಯಶಸ್ವಿ, ಶೆಫಾಲಿಗೆ ನೋಟಿಸ್

ಹೊಸದಿಲ್ಲಿ: ಕಳೆದ ವರ್ಷ ಡೋಪಿಂಗ್ ಪರೀಕ್ಷೆಗೆ ಯಾವುದೇ ಸ್ಪಷ್ಟವಾದ ಕಾರಣಗಳನ್ನು ನೀಡದೆ ಗೈರಾಗಿದ್ದ ಭಾರತೀಯ ಕ್ರಿಕೆಟಿಗರಾದ ಯಶಸ್ವಿ ಜೈಸ್ವಾಲ್ ಮತ್ತು ಶೆಫಾಲಿ ವರ್ಮಾ ಅವರಿಗೆ ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ (ನಾಡಾ) ನೋಟಿಸ್ ಜಾರಿಗೊಳಿಸಿದೆ. 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಗೇಮ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಯಾಗಿರುವ ಹಿನ್ನೆಲೆ ನಾವು ಎಲ್ಲಾ ಪ್ರಕ್ರಿಯೆಗಳನ್ನು ಕಡ್ಡಾಯ ಅನುಸರಿಸಬೇಕು ಎಂದು ಬಿಸಿಸಿಐ ಹೇಳಿದೆ. ಮೂರು ಬಾರಿ ಡೋಪಿಂಗ್ ಪರೀಕ್ಷೆಗೆ ಗೈರಾದರೆ ಅಮಾನತು ಶಿಕ್ಷೆಯನ್ನು ವಿಧಿಸಲಾಗುತ್ತದೆ.

ಎಂಐಗೆ ಮಾಡು ಇಲ್ಲವೇ ಮಡಿ ಪಂದ್ಯ | ಗೆಲುವಿನ ಹಾದಿಗೆ ಮರಳಬೇಕಿದೆ ಆರ್‌ಸಿಬಿ

ಮುಂಬೈಗಿಂದು ರಾಯಲ್ ಚಾಲೆಂಜ್

ರಾಯ್ಪುರ: ತನ್ನ ಕಳೆದೆರಡು ಪಂದ್ಯಗಳನ್ನು ಸೋತಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಗೆಲುವಿನ ಲಯ ಕಂಡುಕೊಳ್ಳಬೇಕಿದೆ. ಮುಂದಿನ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕಾದ ಪರಿಸ್ಥಿತಿಯಲ್ಲಿರುವ ಮುಂಬೈ ಇಂಡಿಯನ್ಸ್‌ಗೆ ಭಾನುವಾರ ರಾತ್ರಿ ರಾಯಲ್ ಚಾಲೆಂಜ್ ಎದುರಾಗಿದೆ.

ಮೊದಲ 5 ಪಂದ್ಯಗಳಲ್ಲಿ ನಾಲ್ಕು ಗೆಲುವು ಸಾಧಿಸಿದ್ದ ರಜತ್ ಪಾಟಿದಾರ್ ನಾಯಕತ್ವದ ಆರ್‌ಸಿಬಿ ತನ್ನ ಹಾಲಿ ಚಾಂಪಿಯನ್ ಗತ್ತು ತೋರಿಸಿತ್ತು. ಮುಂದಿನ ಐದು ಪಂದ್ಯಗಳಲ್ಲಿ ಆರ್‌ಸಿಬಿ ಗೆದ್ದಿರುವುದು ಎರಡೇ ಪಂದ್ಯ. ಈ ಬಾರಿ ಪಂಜಾಬ್ ಕಿಂಗ್ಸ್ ಮತ್ತು ಆರ್‌ಸಿಬಿ ತಂಡಗಳೆರಡೇ ಶ್ರೇಷ್ಠ ಪ್ರದರ್ಶನ ನೀಡುತ್ತಿವೆ. ಉಳಿದೆಲ್ಲಾ ತಂಡಗಳ ಸಾಧನೆ ನೀರಸವೆಂದು ಎಲ್ಲರೂ ಲೆಕ್ಕಾಚಾರ ಹಾಕಿಕೊಂಡಿದ್ದರು.

ಆದರೆ ದ್ವಿತೀಯಾರ್ಧ ಬಹಳ ರೋಚಕತೆಯಿಂದ ತುಂಬಿದ್ದು, ಎಲ್ಲಾ ತಂಡಗಳು ಅದ್ಭುತ ಪ್ರದರ್ಶನ ನೀಡುತ್ತ ಅಂಕಪಟ್ಟಿಯಲ್ಲಿ ಮೇಲೇರುವ ಪ್ರಯತ್ನ ಮಾಡುತ್ತಿವೆ. ಈ ವೇಳೆ ಆರ್‌ಸಿಬಿ ಸ್ವಲ್ಪ ಮಂಕಾದಂತೆ ಕಾಣಿಸುತ್ತಿದ್ದು, ಕಳೆದೆರಡು ಪಂದ್ಯಗಳನ್ನು ಸೋತಿದೆ. ಅದರಲ್ಲೂ ಲಖನೌ ವಿರುದ್ಧ ಮಳೆ ಬಾಧಿತ 19 ಓವರ್‌ಗಳ ರೋಚಕ ಪಂದ್ಯದಲ್ಲಿ ಕೊನೆಯ ಓವರ್‌ನಲ್ಲಿ ಆರ್‌ಸಿಬಿ ಗೆಲುವಿಗೆ 19 ರನ್ ಬೇಕಾಗಿತ್ತು. ಆದರೆ ಆರ್‌ಸಿಬಿ 9 ರನ್‌ಗಳಿಂದ ಸೋಲುಂಡಿತು. ಟೈಟಾನ್ಸ್ ಎದುರು ಆರ್‌ಸಿಬಿ ಬ್ಯಾಟರ್ಸ್ 155 ರನ್ ಕಲೆಹಾಕಿದ್ದೇ ಸೋಲಿಗೆ ಕಾರಣವಾಗಿತ್ತು.

ಅಂಕಪಟ್ಟಿಯಲ್ಲಿ ತೀವ್ರ ಪೈಪೋಟಿ: ಆರ್‌ಸಿಬಿ 10 ಪಂದ್ಯಗಳಿಂದ 12 ಅಂಕಗಳನ್ನು ಸಂಪಾದಿಸಿದೆ. ದ್ವಿತೀಯಾರ್ಧ ಸ್ವಲ್ಪ ತಮ್ಮ ಲಯ ಕಳೆದುಕೊಂಡರೂ ಆರ್‌ಸಿಬಿಗೆ ಇನ್ನೂ ಅವಕಾಶಗಳಿವೆ. ಆದರೆ ಸದ್ಯ ಪೈಪೋಟಿ ಹೆಚ್ಚಾಗಿದೆ. ರಾಜಸ್ಥಾನ್ ಮತ್ತು ಗುಜರಾತ್ ತಂಡಗಳೂ 12 ಅಂಕಗಳನ್ನು ಸಂಪಾದಿಸಿವೆ. ಆರ್‌ಸಿಬಿ ನೆಟ್ ರನ್‌ರೇಟ್ ಬಹಳ ಧನಾತ್ಮಕ ಆಗಿರುವುದರಿಂದ ಅಂಕಪಟ್ಟಿಯಲ್ಲಿ ಆರ್‌ಆರ್, ಜಿಟಿಗಿಂತ ಮೇಲಿದೆ. ಶನಿವಾರ ರಾಜಸ್ಥಾನ-ಗುಜರಾತ್ ಸೆಣಸಾಡಲಿದ್ದು, ಪಂದ್ಯ ಗೆದ್ದು 2 ಅಂಕ ಸಂಪಾದಿಸಿದ ತಂಡ ಅಂಕಪಟ್ಟಿಯಲ್ಲಿ ನಮ್ಮ ಬೆಂಗಳೂರು ತಂಡವನ್ನು ಹಿಂದಿಕ್ಕಲಿದೆ.

ಬ್ಯಾಟರ್‌ಗಳು ಮಿಂಚಲಿ: ಆರ್‌ಸಿಬಿ ತನ್ನ ಬ್ಯಾಟಿಂಗ್ ಕ್ರಮಾಂಕದಲ್ಲಿ ಇನ್ನಷ್ಟು ಆಕ್ರಮಣಕಾರಿ ಆಟ ಪ್ರದರ್ಶಿಸುವ ಅಗತ್ಯವಿದೆ. ಬ್ಯಾಟಿಂಗ್ ವಿಭಾಗದಲ್ಲಿ ತನ್ನ ಕಾಂಬಿನೇಶನ್‌ಗಳ ಮೇಲೆ ಪರಿಶೀಲಿಸುವ ಅಗತ್ಯವಿದೆ. ಈ ಬಾರಿ ಸ್ಫೋಟಕ ಬ್ಯಾಟರ್ ರೊಮಾರಿಯೋ ಶೆಫರ್ಡ್ ಯಾವುದೇ ಮ್ಯಾಚ್ ವಿನ್ನಿಂಗ್ ಪ್ರದರ್ಶನ ನೀಡಿಲ್ಲ. ಬೌಲಿಂಗ್‌ನಲ್ಲಂತೂ ರೊಮಾರಿಯೋ ರನ್ ಬಿಟ್ಟುಕೊಡುವುದು ಹೊಸ ವಿಷಯವಲ್ಲ. ಆದರೂ ಸಾಕಷ್ಟು ಅವಕಾಶಗಳನ್ನು ಟೀಮ್ ಮ್ಯಾನೇಜ್‌ಮೆಂಟ್ ನೀಡುತ್ತಿದೆ.

ಗಾಯಾಳು ಫಿಲ್ ಸಾಲ್ಟ್ ಜಾಗಕ್ಕೆ ಬಂದ ಆರಂಭಿಕ ಜೇಕಬ್ ಬೆಥೆಲ್ ಮತ್ತು ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಸಹ ತಂಡಕ್ಕಾಗಿ ದೊಡ್ಡ ಕೊಡುಗೆ ನೀಡಬೇಕಿದೆ. ಕಳೆದ ನಾಲ್ಕು ಇನ್ನಿಂಗ್ಸ್‌ಗಳಲ್ಲಿ ಬೆಥೆಲ್ 14, 20, 5 ಮತ್ತು 4 ರನ್ ಗಳಿಸಿದ್ದಾರೆ. ಇದು ಅನುಭವಿ ವಿರಾಟ್ ಕೊಹ್ಲಿ ಮೇಲೆ ಒತ್ತಡ ಹೆಚ್ಚಿಸುತ್ತಿದೆ. ಕಳೆದ ಪಂದ್ಯದಲ್ಲಿ ವಿರಾಟ್ ಖಾತೆ ತೆರೆಯದೆ ಔಟಾಗಿದ್ದರು. ಕಳೆದ ಆವೃತ್ತಿಯ ಹೀರೋ ಜಿತೇಶ್ ಈ ಆವೃತ್ತಿಯ ಅತ್ಯಧಿಕ ಸ್ಕೋರ್ 23 ರನ್. ಇನ್ನು ನಾಲ್ಕು ಪಂದ್ಯಗಳಷ್ಟೇ ಉಳಿದಿದ್ದು, ಇವರಿಬ್ಬರು ತಮ್ಮ ಶ್ರೇಷ್ಠ ಪ್ರದರ್ಶನ ನೀಡಲೇಬೇಕು.

ಆರ್‌ಸಿಬಿ-ಮುಂಬೈ,
ರಾತ್ರಿ 7.30ರಿಂದ, ರಾಯ್ಪುರ.





ಲಯದಲ್ಲಿ ಹಿಟ್‌ಮ್ಯಾನ್!

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಮುಂಬೈ 228 ರನ್ ಸವಾಲನ್ನು ಯಶಸ್ವಿಯಾಗಿ ಬೆನ್ನತ್ತಿದೆ. ಗಾಯದಿಂದ ಗುಣಮುಖರಾಗಿ ಮೈದಾನಕ್ಕಿಳಿದ ಹಿಟ್‌ಮ್ಯಾನ್ ರೋಹಿತ್ ಶರ್ಮಾ 44 ಎಸೆತಗಳಿಂದ 84 ರನ್ ಸಿಡಿಸಿದ್ದರು. ಹಲವು ಸೋಲುಗಳ ಬಳಿಕ ಈ ಗೆಲುವು ಮುಂಬೈಗೆ ಗ್ಲುಕೋಸ್ ಸಿಕ್ಕಂತಾಗಿದೆ. ರೋಹಿತ್-ರಿಕೆಲ್ಟನ್ ಅವರ ಜೋಡಿ ಆರ್‌ಸಿಬಿ ವೇಗಿಗಳಾದ ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹ್ಯಾಜೆಲ್‌ವುಡ್ ಅವರನ್ನು ಎದುರಿಸಲಿದ್ದಾರೆ. ವೇಗಿ ಬೂಮ್ರಾ, ಕಾರ್ಬಿನ್ ಬಾಶ್, ಘಝನ್ಫಾರ್ ಮತ್ತು ಜ್ಯಾಕ್ಸ್‌ರನ್ನು ಒಳಗೊಂಡ ಮುಂಬೈ ಬೌಲಿಂಗ್ ವಿಭಾಗವನ್ನು ಆರ್‌ಸಿಬಿ ಬ್ಯಾಟರ್‌ಗಳು ಭಾನುವಾರ ಎದುರಿಸಲಿದ್ದಾರೆ.

ಸೂರ್ಯ ಲಭ್ಯ?

ಬೆನ್ನು ನೋವಿನ ಕಾರಣದಿಂದ ಲಖನೌ ಪಂದ್ಯದಿಂದ ನಾಯಕ ಹಾರ್ದಿಕ್ ಪಾಂಡ್ಯ ಹೊರಗುಳಿದಿದ್ದು, ಸೂರ್ಯಕುಮಾರ್ ಯಾದವ್ ಹಂಗಾಮಿ ನಾಯಕರಾಗಿದ್ದರು. ಸದ್ಯ ರಾಯ್ಪುರ ತಲುಪಿರುವ ಪಾಂಡ್ಯ ಫಿಟ್‌ನೆಸ್ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಮೇ 7ರಂದು ಹೆಣ್ಣು ಮಗುವಿಗೆ ತಂದೆಯಾದ ಸಂಭ್ರಮದಲ್ಲಿರುವ ಸೂರ್ಯಕುಮಾರ್ ಆರ್‌ಸಿಬಿ ಪಂದ್ಯದಿಂದ ಹೊರಗುಳಿಯುವುದಾಗಿ ವರದಿಯಾಗಿತ್ತು. ಆದರೆ ಸೂರ್ಯ ಆರ್‌ಸಿಬಿ ಪಂದ್ಯಕ್ಕೆ ಲಭ್ಯವಿರುವುದಾಗಿ ಟೀಮ್ ಮ್ಯಾನೇಜ್‌ಮೆಂಟ್‌ಗೆ ಶನಿವಾರ ಸೂರ್ಯ ತಿಳಿಸಿದ್ದಾರೆ ಎನ್ನಲಾಗಿದೆ.

ಚೆನ್ನೈ ಪ್ಲೇಆಫ್ ಓಟಕ್ಕೆ ಲಖನೌ ಹಾಕುತ್ತಾ ಬ್ರೇಕ್?

ಪ್ಲೇಆಫ್ ಕನಸು ಕಾಣುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಲಖನೌ ಸೂಪರ್ ಜೈಂಟ್ಸ್ ತಂಡಗಳು ಭಾನುವಾರದ ಮೊದಲ ಪಂದ್ಯದಲ್ಲಿ ಚೆನ್ನೈನ ಚೆಪಾಕ್ ಸ್ಟೇಡಿಯಂನಲ್ಲಿ ಮುಖಾಮುಖಿ ಆಗಲಿವೆ. 6ನೇ ಸ್ಥಾನದಲ್ಲಿರುವ ಸಿಎಸ್‌ಕೆ 10 ಅಂಕಗಳನ್ನು ಸಂಪಾದಿಸಿದ್ದು ಪ್ಲೇಆಫ್ ಆಸೆಯನ್ನು ಜೀವಂತವಾಗಿರಿಸಿದೆ. ನಿಧಾನವಾಗಿ ಲಯಕ್ಕೆ ಮರಳುತ್ತಿರುವ 5 ಬಾರಿಯ ಐಪಿಎಲ್ ಚಾಂಪಿಯನ್‌ಗೇನಾದರೂ ರಿಷಭ್ ಪಂತ್ ನೇತೃತ್ವದ ಲಖನೌ ಆಘಾತ ನೀಡುತ್ತಾ ನೋಡಬೇಕಿದೆ. ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರೇ ಸಿಎಸ್‌ಕೆ ಬ್ಯಾಟಿಂಗ್ ಕ್ರಮಾಂಕದ ಆಧಾರ ಸ್ತಂಭವಾಗಿದ್ದು, ನಾಯಕ ಋತುರಾಜ್ ಕಳೆದೆರಡು ಪಂದ್ಯಗಳಲ್ಲಿ ಲಯ ಕಂಡುಕೊಂಡಿದ್ದಾರೆ.



ಎಂ.ಎಸ್. ಧೋನಿ ಆಡುವುದರ ಬಗ್ಗೆ ಸಿಎಸ್‌ಕೆ ರಹಸ್ಯ ಕಾಪಾಡಿಕೊಂಡಿದೆ. ಕಳೆದ ಕೆಲವು ಪಂದ್ಯಗಳಿಗೂ ಮುನ್ನ ನೆಟ್ಸ್ ಅಭ್ಯಾಸದಲ್ಲಿ ಧೋನಿ ಕಾಣಿಸಿದ್ದು, ಆಡುವ ಬಳಗದಲ್ಲಿ ಕಾಣಿಸುತ್ತಿರಲಿಲ್ಲ.

ಆರ್‌ಸಿಬಿ ವಿರುದ್ಧ ಲಖನೌ ಪರ ಶತಕ ದಾಖಲಿಸಿ ಮಿಚೆಲ್ ಮಾರ್ಷ್ ಮಿಂಚಿದ್ದರು. ಸ್ಥಿರತೆಯಿಲ್ಲದೆ ಲಖನೌ ಈ ಬಾರಿ ವೈಫಲ್ಯ ಕಂಡಿದೆ. ದಾಖಲೆಯ 27 ಕೋಟಿ ರೂ. ಬೆಲೆಗೆ ಖರೀದಿಯಾದ ನಾಯಕ ರಿಷಭ್ ಪಂತ್‌ರಿಗೂ ಇದು ಸಹ ಸವಾಲಿನ ಆವೃತ್ತಿಯಾಗಿದೆ. ಗುರುವಾರ ಆರ್‌ಸಿಬಿ ವಿರುದ್ಧ ಪಂತ್ 10 ಎಸೆತಗಳಲ್ಲಿ 32 ರನ್ ಚಚ್ಚಿದ್ದರು. ಕೊನೆಯ ಸ್ಥಾನದಲ್ಲಿರುವ ಲಖನೌ, ಚೆನ್ನೈಗೆ ಆಘಾತ ನೀಡುವ ಅವಕಾಶ ಹೊಂದಿದೆ.

ಸಿಎಸ್‌ಕೆ-ಲಖನೌ
ಮಧ್ಯಾಹ್ನ 3.30ರಿಂದ, ಚೆನ್ನೈ.

ಅಲೆನ್ 47 ಎಸೆತಗಳ ಶತಕ | ಐಪಿಎಲ್ 2026ರ 11ನೇ ಶತಕ

ಕೆಕೆಆರ್ ಪ್ಲೇಆಫ್ ಆಸೆ ಜೀವಂತ

ಹೊಸದಿಲ್ಲಿ: ಫಿನ್ ಅಲೆನ್ 47 ಎಸೆತಗಳಲ್ಲಿ ಚೊಚ್ಚಲ ಐಪಿಎಲ್ ಶತಕ ದಾಖಲಿಸುವ ಮೂಲಕ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸುಮಾರು 6 ಓವರ್‌ಗಳು ಉಳಿದಿರುವಂತೆಯೇ ಕೆಕೆಆರ್ ತಂಡಕ್ಕೆ 8 ವಿಕೆಟ್‌ಗಳ ಗೆಲುವು ಸಾಧಿಸುವಲ್ಲಿ ನೆರವಾದರು.

ಐಪಿಎಲ್ 2026ರಲ್ಲಿ ಸ್ಫೋಟಕ ಬ್ಯಾಟರ್‌ಗಳು ಒಬ್ಬರ ಮೇಲೊಬ್ಬರಂತೆ ಶತಕ ದಾಖಲಿಸುತ್ತಿದ್ದು, ಬ್ಯಾಟಿಂಗ್ ಪಿಚ್‌ಗಳಲ್ಲಿ ಶತಕ ಚಚ್ಚುವುದು ಸರ್ವೇ ಸಾಮಾನ್ಯ ಎಂಬಂತಾಗಿದೆ. ಇದು ಈ ಆವೃತ್ತಿಯಲ್ಲಿನ 11ನೇ ಶತಕವಾಗಿದ್ದು, ಶತಕ ದಾಖಲಿಸಿದ ಫಿನ್ 3ನೇ ವಿದೇಶಿ ಬ್ಯಾಟರ್ ಆಗಿದ್ದಾರೆ.

ಆಧುನಿಕ ಕ್ರಿಕೆಟ್‌ನಲ್ಲಿ 140+ ರನ್ ಅನ್ನು ಸುಲಭ ಗುರಿಯೆಂದೇ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇಂತಹದ್ದರಲ್ಲಿ ದಿಲ್ಲಿ ಕ್ಯಾಪಿಟಲ್ಸ್ ನೀಡಿದ 143 ರನ್ ಸುಲಭ ಗುರಿಯನ್ನು ಅಲೆನ್ ಸ್ಫೋಟಕ ಶತಕದ ನೆರವಿನಿಂದ ಕೋಲ್ಕತ ನೈಟ್‌ರೈಡರ್ಸ್ 14.2 ಓವರ್‌ಗಳಲ್ಲೇ ಚಚ್ಚಿ ಬಿಸಾಕಿ 8 ವಿಕೆಟ್ ಗೆಲುವು ಸಾಧಿಸಿದೆ.

ಕೆಕೆಆರ್ ಪ್ಲೇಆಫ್ ಆಸೆ ಜೀವಂತ: ಇದರೊಂದಿಗೆ ಕೆಕೆಆರ್ 4ನೇ ಗೆಲುವು ಕಂಡಿದ್ದು, 9 ಅಂಕಗಳೊಂದಿಗೆ 7ನೇ ಸ್ಥಾನ ಸಂಪಾದಿಸಿದೆ. ಈ ಗೆಲುವಿನೊಂದಿಗೆ ಕೆಕೆಆರ್ ತನ್ನ ಪ್ಲೇಆಫ್ ಆಸೆಯನ್ನು ಜೀವಂತವಾಗಿ ಇರಿಸಿಕೊಂಡಿದೆ. ಕೆಕೆಆರ್ ಸ್ಪಿನ್ನರ್‌ಗಳು 12 ಓವರ್‌ಗಳನ್ನು ಎಸೆದಿದ್ದು 76 ರನ್‌ಗಳಿಗೆ 3 ವಿಕೆಟ್ ಕಿತ್ತು ಕ್ಯಾಪಿಟಲ್ಸ್ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ದಿಲ್ಲಿ ಸ್ಪಿನ್ನರ್‌ಗಳು 9 ಓವರ್‌ಗಳಲ್ಲಿ 102 ರನ್ ಬಿಟ್ಟುಕೊಟ್ಟಿದ್ದು, 1 ವಿಕೆಟ್ ಅಷ್ಟೇ ಪಡೆದಿದ್ದರು. ಕೆಕೆಆರ್ ಇನ್ನಿಂಗ್ಸ್ ವೇಳೆ ಅಲೆನ್ ಸ್ಫೋಟಕ ಆಟದಿಂದ ಸಂಪೂರ್ಣ ಪ್ರಾಬಲ್ಯ ಸಾಧಿಸಿದ್ದರು.

ಪವರ್‌ಪ್ಲೇನಲ್ಲಿ ಅಲೆನ್ ಸ್ಫೋಟ!: ಐಪಿಎಲ್‌ನಲ್ಲಿ 8ನೇ ಇನ್ನಿಂಗ್ಸ್ ಆಡಿದ ಅಲೆನ್ ಇದೇ ಮೊದಲ ಬಾರಿಗೆ ಸಂಪೂರ್ಣ ಪವರ್‌ಪ್ಲೇ ಓವರ್‌ಗಳಲ್ಲಿ ಬ್ಯಾಟ್ ಬೀಸಿದರು. ಫಿನ್ ಸ್ಟ್ರೈಟ್ ಡ್ರೈವ್ ಆಡಿದಾಗ ಚೆಂಡು ವೇಗಿ ಮಿಚೆಲ್ ಸ್ಟಾರ್ಕ್ ಕೈಗೆ ತಾಗಿ ಸ್ಟಂಪ್‌ಗೆ ತಗುಲಿದ್ದು, ದುರದೃಷ್ಟವಶಾತ್ ನಾಯಕ ಅಜಿಂಕ್ಯಾ ರಹಾನೆ ರನೌಟ್ ಆಗಿದ್ದರು. ಅಲೆನ್ ಸಿಡಿದಿದ್ದರಿಂದ ಕೆಕೆಆರ್ ತಂಡಕ್ಕೇನು ನಷ್ಟವಾಗಲಿಲ್ಲ. ಆರಂಭಿಕ ಹಂತದಲ್ಲಿ 17 ಎಸೆತಗಳಲ್ಲಿ 20 ರನ್ ಗಳಿಸಿದ್ದ ಫಿನ್ ತಾವು ಎದುರಿಸಿದ ಮುಂದಿನ 30 ಎಸೆತಗಳಲ್ಲಿ 80 ರನ್ ಚಚ್ಚಿದ್ದಾರೆ. ಕೆಕೆಆರ್ ಗೆಲುವಿಗೆ 2 ರನ್ ಬೇಕಿದ್ದಾಗ ಸಿಕ್ಸರ್‌ಗೆತ್ತಿ ಚೊಚ್ಚಲ ಐಪಿಎಲ್ ಶತಕ ಪೂರೈಸಿದರು. 47 ಎಸೆತಗಳಲ್ಲಿ 5 ಬೌಂಡರಿ ಮತ್ತು 10 ಸಿಕ್ಸರ್‌ಗಳೊಂದಿಗೆ 100 ರನ್ ಗಳಿಸಿ ಅಜೇಯರಾಗುಳಿದಿದ್ದ ಅಲೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಐಪಿಎಲ್ 2026ರಲ್ಲಿ ಶತಕವೀರರು

ಆಟಗಾರ	ಶತಕಗಳು
ಸಂಜು ಸ್ಯಾಮ್ಸನ್ (ಸಿಎಸ್‌ಕೆ)	2
ಅಭಿಷೇಕ್ ಶರ್ಮಾ (ಸನ್‌ರೈಸರ್ಸ್)	1
ತಿಲಕ್ ವರ್ಮಾ (ಮುಂಬೈ)	1
ಸಾಯಿ ಸುದರ್ಶನ್ (ಗುಜರಾತ್)	1
ಕೆಎಲ್ ರಾಹುಲ್ (ದಿಲ್ಲಿ)	1
ವೈಭವ್ ಸೂರ್ಯವಂಶಿ (ರಾಜಸ್ಥಾನ್)	2
ಕ್ವಿಂಟನ್ ಡಿ ಕಾಕ್ (ಮುಂಬೈ)	1
ಕೂಪರ್ ಕೊನೊಲಿ (ಪಂಜಾಬ್)	1
ಫಿನ್ ಅಲೆನ್ (ಕೆಕೆಆರ್)	1

(ಈ ಆವೃತ್ತಿಯಲ್ಲಿ ಇಲ್ಲಿಯವರೆಗೆ ಶತಕವೀರರಿಲ್ಲದ ಏಕೈಕ ತಂಡ ಆರ್‌ಸಿಬಿ)

ಸಂಕ್ಷಿಪ್ತ ಸ್ಕೋರ್

ದಿಲ್ಲಿ 142/8(20): ನಿಸ್ಸಾಂಕ 50, ಅಷುತೋಷ್ 39 (ತ್ಯಾಗಿ 25ಕ್ಕೆ 2 ರಾಯ್ 31ಕ್ಕೆ 2)
ಕೆಕೆಆರ್ 147/2(14.2): ಅಲೆನ್ 100★, ಗ್ರೀನ್ 33★ (ಅಕ್ಷರ್ 27ಕ್ಕೆ 1).

ರಾಜಸ್ಥಾನದಲ್ಲಿ ಪ್ರಿನ್ಸ್ ಗಿಲ್ ಆರ್ಭಟ

ಜೈಪುರ: ನಾಯಕ ಶುಭ್ಮನ್ ಮತ್ತು ಸುದರ್ಶನ್ ಆರ್ಭಟದ ಪರಿಣಾಮ ಶನಿವಾರದ ಪಂದ್ಯದಲ್ಲಿ ರಾಜಸ್ಥಾನ್ ವಿರುದ್ಧ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 229 ರನ್‌ಗಳ ಬೃಹತ್ ಮೊತ್ತವನ್ನು ಕಲೆಹಾಕಿದೆ. ಇದರಿಂದ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದ ರಾಜಸ್ಥಾನ್ ತಂಡದ ಗೆಲುವಿಗೆ 230 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಬೇಕಿದೆ.



ನಾಯಕ ಶುಭ್ಮನ್ ಗಿಲ್ (84) ಮತ್ತು ಸಾಯಿ ಸುದರ್ಶನ್ (55) ಭರ್ಜರಿ ಅರ್ಧ ಶತಕಗಳ ನೆರವಿನಿಂದ ಗುಜರಾತ್ ಟೈಟಾನ್ಸ್ ತಂಡ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 229 ರನ್ ಕಲೆಹಾಕಿತು. ಶುಭ್ಮನ್-ಸುದರ್ಶನ್‌ರ ಆರಂಭಿಕ ಜೋಡಿ ಮೊದಲ ವಿಕೆಟ್‌ಗೆ 118 ರನ್ ಕಲೆಹಾಕಿತು. ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ರಾಹುಲ್ ತೆವಾಟಿಯಾ ಇನ್ನಷ್ಟು ಆಕ್ರಮಣ ಮಾಡಿದ್ದರಿಂದ ಸ್ಕೋರ್ 220ರ ಗಡಿ ದಾಟಿತು.

ಪೂಂಜಾ ಗೂಗ್ಲಿಗೆ ಸುದರ್ಶನ್ ಔಟ್: ಆರ್‌ಆರ್ ತಂಡದಲ್ಲಿ ಅನುಭವಿ ಲೆಗ್ ಸ್ಪಿನ್ನರ್ ರವೀಂದ್ರ ಜಡೇಜಾರಿಗೆ ಸ್ಪಿನ್ ವಿಭಾಗದಲ್ಲಿ ಸಾಥ್ ನೀಡುತ್ತಿರುವ ಕನ್ನಡಿಗ ಆಫ್‌ಸ್ಪಿನ್ನರ್ ಯಶ್ ಪೂಂಜಾ ಗೂಗ್ಲಿ ಎಸೆಯುವ ಮೂಲಕ ತಂಡಕ್ಕೆ ಬ್ರೇಕ್‌ಥ್ರೂ ನೀಡಿದರು. ಪೂಂಜಾ ಗೂಗ್ಲಿಗೆ ಸ್ಫೋಟಕ ಬ್ಯಾಟರ್ ಸುದರ್ಶನ್ ಹೊಡೆಯುವ ಯತ್ನದಲ್ಲಿ ಆರ್ಚರ್‌ಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರ್

ಗುಜರಾತ್ 229/4 (20)
ಗಿಲ್ 84(44), ಸಾಯಿ 55(36), ಸುಂದರ್ 37(20)*, ತೆವಾಟಿಯಾ 14(4)* (ಪೂಂಜಾ 37ಕ್ಕೆ 1, ಜಡೇಜಾ 34ಕ್ಕೆ 1, ಬ್ರಿಜೇಶ್ 47ಕ್ಕೆ 2).

ತುಮಕೂರು ಓಪನ್: ಸೆಮಿನಲ್ಲಿ ಸೋತ ವೈದೇಹಿ, ಝೀಲ್

ಅಗ್ರ ಶ್ರೇಯಾಂಕಿತೆಯರ ಫೈನಲ್

ತುಮಕೂರು: ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೂರ್ನಿಯಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಜಸ್ಟಿನಾ ಮಿಕುಲ್‌ಸ್ಕೈಟ್ ಮತ್ತು ದ್ವಿತೀಯ ಶ್ರೇಯಾಂಕಿತ ಆಟಗಾರ್ತಿ ಜುರ್ಝೂನ್ನಾ ಪಾವ್ಲಿಕೊವ್‌ಸ್ಕಾ ಶನಿವಾರ ತುಮಕೂರು ಜಿಲ್ಲಾ ಟೆನಿಸ್ ಕೋರ್ಟ್‌ನಲ್ಲಿ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಗೆದ್ದು ಬ್ಲಾಕ್‌ಬಸ್ಟರ್ ಫೈನಲ್ ಪಂದ್ಯಕ್ಕೆ ಸಜ್ಜಾಗಿದ್ದಾರೆ. ಭಾನುವಾರ ನಡೆಯಲಿರುವ ಸಿಂಗಲ್ಸ್ ಫೈನಲ್‌ನಲ್ಲಿ, ಪಂದ್ಯಾವಳಿಯ ಅಗ್ರ ಎರಡು ಶ್ರೇಯಾಂಕಿತ ಆಟಗಾರ್ತಿಗಳಾದ ಜಸ್ಟಿನಾ ಮಿಕುಲ್‌ಸ್ಕೈಟ್ ಮತ್ತು ಜುರ್ಝೂನ್ನಾ ಪಾವ್ಲಿಕೊವ್‌ಸ್ಕಾ ನಡುವಿನ ರೋಮಾಂಚಕಾರಿ ಮುಖಾಮುಖಿಗೆ ಸಾಕ್ಷಿಯಾಗಲಿದೆ.

ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಲಿಥುವೇನಿಯಾದ ಜಸ್ಟಿನಾ 6-3, 2-6, 6-2 ಸೆಟ್‌ಗಳಿಂದ ಭಾರತದ ವೈದೇಹಿ ಚೌಧರಿ ಅವರನ್ನು ಮಣಿಸಿದರು. ಎರಡನೇ ಸೆಮಿಫೈನಲ್‌ನಲ್ಲಿ ಭಾರತದ ಝೀಲ್ ದೇಸಾಯಿ ಹೃದಯ ವಿದ್ರಾವಕ ದೃಶ್ಯಗಳನ್ನು ಸೃಷ್ಟಿಸಿದರು. ಅವರು ಪೋಲೆಂಡ್‌ನ ಜುರ್ಝೂನ್ನಾ ಪಾವ್ಲಿಕೊವ್‌ಸ್ಕಾ ವಿರುದ್ಧ ಮುನ್ನಡೆ ಸಾಧಿಸಿದರೂ ನಿವೃತ್ತಿ ಹೊಂದಬೇಕಾಯಿತು. ಉದ್ವಿಗ್ನ ಟೈಬ್ರೇಕ್‌ನಲ್ಲಿ 11-9ರಿಂದ ಜಯ ಸಾಧಿಸಿದ ಝೀಲ್ ಎರಡನೇ ಸೆಟ್‌ನಲ್ಲಿ 2-1 ಮುನ್ನಡೆ ಸಾಧಿಸಿದ್ದರು. ಪಂದ್ಯಾವಳಿಯ ಆರಂಭದಲ್ಲಿ ಅನೇಕ ಮ್ಯಾರಥಾನ್ ಪಂದ್ಯಗಳ ಮೂಲಕ ಹೋರಾಡಿದ ಭಾರತೀಯ ಆಟಗಾರ್ತಿ, ವೈದ್ಯಕೀಯ ಟೈಮ್ ಔಟ್ ತೆಗೆದುಕೊಂಡರು. ಆದರೆ ದೈಹಿಕ ಸಮಸ್ಯೆಗಳು ಅಂತಿಮವಾಗಿ ಅವರನ್ನು ಹಿಡಿದುಕೊಂಡಿದ್ದರಿಂದ ಕೋರ್ಟ್‌ನಲ್ಲಿ ನಿಲ್ಲಲು ಸಹ ಹೆಣಗಾಡಿದರು. ವಿಪರ್ಯಾಸವೆಂದರೆ, ಪಾವ್ಲಿಕೊವ್‌ಸ್ಕಾ ಸ್ವತಃ ಪಂದ್ಯದ ಸಮಯದಲ್ಲಿ ಭುಜದ ಗಾಯದಿಂದ ಬಳಲುತ್ತಿದ್ದರು. ಈ ಪಂದ್ಯ, ದೈಹಿಕವಾಗಿ ಹೆಣಗಾಡುತ್ತಿರುವ ಇಬ್ಬರು ಆಟಗಾರ್ತಿಯರ ನಡುವಿನ ಹೋರಾಟಕ್ಕೆ ಸಾಕ್ಷಿಯಾಗಿತ್ತು.






ಇಟಾಲಿಯನ್ ಓಪನ್: ಗಾಯದಿಂದ ಮರಳಿದ್ದ ಜೊಕೋಗೆ ಸೋಲು

ಆರು ಬಾರಿಯ ಚಾಂಪಿಯನ್‌ಗೆ ಆಘಾತ!

ರೋಮ್: ಇಟಾಲಿಯನ್ ಓಪನ್ ಟೆನಿಸ್ ಪಂದ್ಯಾವಳಿಯಲ್ಲಿ ಆರು ಬಾರಿಯ ಚಾಂಪಿಯನ್ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಚ್ ಅವರು ಮೊದಲ ಸುತ್ತಿನ ಪಂದ್ಯದಲ್ಲೇ ಸೋಲುಂಡು ಹೊರಬಿದ್ದು ಆಘಾತವನ್ನು ಅನುಭವಿಸಿದ್ದಾರೆ.

ಕಳೆದ ಎರಡು ತಿಂಗಳುಗಳಿಂದ ಭುಜದ ನೋವಿನಿಂದ ಬಳಲುತ್ತಿದ್ದ ಜೊಕೊ ವೃತ್ತಿಪರ ಟೆನಿಸ್‌ಗೆ ಮರಳಿದ್ದು, ಕಳೆದ 11 ತಿಂಗಳಲ್ಲಿ ಆವೆಮಣ್ಣಿನ ಅಂಗಣದಲ್ಲಿ ಜೊಕೊವಿಚ್ ಆಡಿರಲಿಲ್ಲ. ಶುಕ್ರವಾರ ರಾತ್ರಿ ನಡೆದ ಇಟಾಲಿಯನ್ ಓಪನ್ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 79ನೇ ಶ್ರೇಯಾಂಕದ ಡಿನೋ ಪ್ರಿಜ್ಮಿಕ್ ವಿರುದ್ಧ 6-2, 2-6, 4-6 ಸೆಟ್‌ಗಳ ಅಂತರದಿಂದ ಜೊಕೊವಿಚ್ ಸೋಲುಂಡಿದ್ದಾರೆ. ಪೂರ್ಣ ಲಯದಲ್ಲಿಲ್ಲದ ದಂತಕತೆಯನ್ನು ಸೋಲಿಸಿದ ಕಡಿಮೆ ಶ್ರೇಯಾಂಕಿತ ಕ್ರೊವೇಶಿಯಾ ಟೆನಿಸಿಗ ತಮ್ಮ ಕನಸಿನ ಗೆಲುವು ಸಾಧಿಸಿದ್ದಾರೆ. ಅಚ್ಚರಿಯೆಂದರೆ, ಡಿನೋ ಇದೇ ಮೊದಲ ಬಾರಿಗೆ ಇಟಾಲಿಯನ್ ಓಪನ್ ಅರ್ಹತೆ ಪಡೆದುಕೊಂಡಿದ್ದು, ತಮ್ಮ ಚೊಚ್ಚಲ ಇಟಾಲಿಯನ್ ಓಪನ್ ಪಂದ್ಯದಲ್ಲೇ ಜೊಕೊವಿಚ್ ಅವರನ್ನು ಮಣಿಸಿದ ಸಾಧನೆ ಮಾಡಿದ್ದಾರೆ. 24 ಬಾರಿಯ ಗ್ರ್ಯಾಂಡ್ ಸ್ಲಾಮ್ ಹಾಗೂ 6 ಬಾರಿಯ ಇಟಾಲಿಯನ್ ಓಪನ್ ಚಾಂಪಿಯನ್ ಜೊಕೊವಿಚ್ ಈ ಬಾರಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದಾರೆ. ಪ್ರಿಜ್ಮಿಕ್ ಈವರೆಗೆ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯಲ್ಲ, ಸಿಂಗಲ್ಸ್ ಪಂದ್ಯವನ್ನೂ ಗೆದ್ದಿರಲಿಲ್ಲ. ಈ ಪಂದ್ಯಕ್ಕೂ ಮುನ್ನ ಆತ 16 ಟೂರ್ ಲೆವೆಲ್ ಪಂದ್ಯಗಳನ್ನು ಗೆದ್ದುಕೊಂಡಿದ್ದರು. ಪ್ರಿಜ್ಮಿಕ್ ತಮ್ಮ ಟೆನಿಸ್ ವೃತ್ತಿಜೀವನದ ಅತಿ ದೊಡ್ಡ ಗೆಲುವಿನ ಕ್ಷಣ ಅನುಭವಿಸಿದರು.



ಫ್ರೆಂಚ್ ಓಪನ್‌ನಲ್ಲಿ ಸಿನ್ನರ್, ಜೊಕೊ ಫೇವರಿಟ್

ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಕೈ ನೋವಿನ ಕಾರಣದಿಂದ ಮುಂಬರುವ ಫ್ರೆಂಚ್ ಓಪನ್‌ನಿಂದ ಹೊರಗುಳಿದಿದ್ದು, ಇಟಲಿಯ ಯಾನಿಕ್ ಸಿನ್ನರ್ ಮತ್ತು ಮೇ 22ರಂದು 39 ವರ್ಷದವರಾಗುವ ಜೊಕೊವಿಚ್ ಅವರೇ ಪ್ರಶಸ್ತಿ ಗೆಲ್ಲುವ ಫೇವರಿಟ್ ಆಗಿರಲಿದ್ದಾರೆ. ಫ್ರೆಂಚ್ ಓಪನ್ 2026 ಗ್ರ್ಯಾಂಡ್ ಸ್ಲಾಮ್ ಮೇ 18ರಿಂದ ಜೂ.7ರವರೆಗೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5979

ಎಡದಿಂದ ಬಲಕ್ಕೆ
1.ಸಂಪತ್ತು ಗಳಿಕೆಯ ವಿರುದ್ಧ ಮಾಡಿದ ಮುಷ್ಕರ (2)
2.ಸೂರ್ಯದೇವನಿಲ್ಲಿ ತಿರುಗಿದ್ದಾನೆ (3)
4.ಬಿಂಕದಿಂದ ತಂದ ಉಕ್ಕಿನ ಕೋಲು (2)
6.ಇದು ಧನುಸ್ಸಿನ ಹದೆ (4)
7.ಬಡವರಿಗೆ ಸಹಾಯ ಮಾಡುತ್ತಿರುವ ಭಟ (4)
8.ಮೂರು ಭುಜಗಳುಳ್ಳ ಆಕಾರವಿದು (3)
10.ಕೆಚ್ಚದೆಯ-ಧೈರ್ಯಶಾಲಿಯೀತ (2)
11.ಹಾನಿಕಾರಕವಾದ ಚಟ (3)
13.ತಂದೆಯ ಅಥವಾ ತಾಯಿಯ ತಂದೆ (2)
15.ಅರಸನಿಗೆ ಪರ್ವತದಲ್ಲಿ ಕಂಡ ಸೊಪ್ಪು (4)
16.ಅನುಭವ ಪಡೆ ಎಂಬರ್ಥದ ನುಡಿಗಟ್ಟು (4)

ಮೇಲಿನಿಂದ ಕೆಳಕ್ಕೆ
1.ವಿಜ್ಞಾನಿ ಮಾಡುವ ಅನ್ವೇಷಣೆ (4)
2.ಕಲೆಗಳಲ್ಲಿ ಪಡೆದ ಹೆಚ್ಚಿನ ಜ್ಞಾನ (4)
3.ಕಠಿಣ ಪರೀಕ್ಷೆಗೆ ಒಳಗಾಗು ಎಂಬರ್ಥದ ಶಬ್ದ (4)
5.ವಿಮೋಚನೆ-ಬಂಧಮುಕ್ತಿ (4)
9.ಪೂಜೆಗೆ ಬಳಸುವ ಪವಿತ್ರ ಪಾತ್ರೆ (3)
10.ಹಗಲು-ಇರುಳು ಕೂಡಿ ಕಾಣುತ್ತಿವೆ (4)
11.ವ್ಯಕ್ತ ಪಡಿಸಿದ ಅಭಿಪ್ರಾಯ ಹೀಗೆ ಭಿನ್ನವಾಗಿದೆ (4)
12.ಇರುಳಿನ ಮಧ್ಯ ಭಾಗವಿದು (4)
14.ಬವಳಿ ಬರುವಿಕೆಯನ್ನು ಹೀಗೆನ್ನಬಹುದು (4)

5978 ಉತ್ತರ

ಎಡದಿಂದ ಬಲಕ್ಕೆ:
1.ನಿಗಾ 2.ಗಳಿಸು
3.ಪಾಪ 6.ಜಲಪಾತ
7.ವಯೋಗುಣ 8.ಕುಡಿ
9.ಪತಿ 13.ದಕ್ಷ 14.ದ್ವೀಪ
15.ಸಂಬಂಧ 16.ಕಾತರ
17.ಗಂಧರ್ವಗಿರಿ

ಮೇಲಿನಿಂದ ಕೆಳಕ್ಕೆ :
1.ನಿರಂಜನ 2.ಗಣಿತಹಾಕು
3.ಪುಳ್ಳುವದಂತಿ
5.ಪರಿಣಯ
8.ಗಂಧದಗುಡಿ
10.ಪರೋಪಕಾರಿ
11.ಕಾಳಸಂತೆ 12.ಹಗರಣ


ಪ್ರಧಾನಿ ಮೋದಿ ಸಂದೇಶ ವಾಚಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ಸರ್ವರ ಏಳಿಗೆಗೆ ಶ್ರಮಿಸಿದ ಬಿಎಸ್‌ವೈ

ಚಿತ್ರದುರ್ಗ: ಸರಳತೆ, ಕಠಿಣ ಪರಿಶ್ರಮ, ಜನರ ಕಡೆ ಅವರ ಪ್ರೀತಿ, ರಾಜ್ಯದ ಏಳಿಗೆಗಾಗಿ ಯಡಿಯೂರಪ್ಪ ಅವರ ಶ್ರಮ ಅಪಾರವಾದುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಪ್ರಧಾನಿಯವರು ಕಳುಹಿಸಿದ ಸಂದೇಶವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಚಿಸಿದರು. ಬಳಿಕ ಪ್ರಧಾನಿಯವರ ಸಂದೇಶವುಳ್ಳ ಸಂದೇಶ ಫಲಕವನ್ನು ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.

ಕರ್ನಾಟಕದಲ್ಲಿ ಬಿಜೆಪಿ ಬೆಳವಣಿಗೆಗೆ ಅವರ ತ್ಯಾಗ, ಬೆವರಿನ ದುಡಿಮೆಯ ಕುರಿತು ಸಂದೇಶದಲ್ಲಿ ಮಾಹಿತಿ ನೀಡಿದ್ದನ್ನು ವಿವರಿಸಿದರು. ಕರ್ನಾಟಕದಲ್ಲಿ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾದುದು, ಪ್ರತ್ಯೇಕ ಕೃಷಿ ಬಜೆಟ್ ನೀಡಿದ್ದಾರೆ. ಕಾರ್ಯಕರ್ತರಿಗೆ ಮತ್ತು ಜನಪ್ರತಿನಿಧಿಗಳಿಗೆ ಅವರ ಮಾರ್ಗದರ್ಶನ ಇರಲಿ ಎಂದು ತಿಳಿಸಿದ್ದನ್ನು ಗಮನಕ್ಕೆ ತಂದರು. ಮೋದಿ ಅವರು ಅತ್ಯಂತ ವಿಶ್ವಾಸಾರ್ಹ ಜಗತ್ತಿನ ನಾಯಕ. ಅವರು ಯಡಿಯೂರಪ್ಪ ಅವರ ಬಗ್ಗೆ ಅತ್ಯಂತ ಉತ್ತಮ ಸಂದೇಶ ನೀಡಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಅಧಿಕಾರ ಪಡೆದಿದೆ. ಎನ್‌ಡಿಎ 21 ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆ. ಕರ್ನಾಟಕದಲ್ಲೂ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಮತ್ತೆ ಬಿಜೆಪಿ ಅಧಿಕಾರ ಪಡೆಯಲಿದೆ ಎಂದು ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.



> ಹಿಂದು ಧರ್ಮ ಮತ್ತು ಸನಾತನ ಧರ್ಮದ ಉಳಿವಿಗಾಗಿ ಸಂಘಟನೆಯ ಅಶ್ವಮೇಧವನ್ನು ಬಿಟ್ಟಿದ್ದೇವೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ. ಯಡಿಯೂರಪ್ಪ ಅವರ ಹೋರಾಟದ ರಾಜಕಾರಣವೆಂದರೆ ಹೌದಪ್ಪಗಳ ಚಾವಡಿಯಲ್ಲ, ಬಡವರ ಪರವಾಗಿ ಹೋರಾಟ ಮಾಡುವಂತಹ ಹೋರಾಟದ ಅಂಗಳ.
>
> ■ ಕೋಟ ಶ್ರೀನಿವಾಸ ಪೂಜಾರಿ, ಸಂಸದ

> ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ, ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ಮುಂದಿನವರ ಹಡಗು ಮುಳುಗುತ್ತಿದೆ. ನಮ್ಮ ಹಡಗು ದಡ ಸೇರುತ್ತಿದೆ. ಮುಂಬರುವ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ, ಒಂದಾಗಿ ಯಡಿಯೂರಪ್ಪ ಅವರ ಆಡಳಿತ ಮತ್ತು ಅವರ ಕಾರ್ಯಕ್ರಮಗಳು ಮತ್ತೆ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕು.
>
> ■ ಬಸವರಾಜ ಬೊಮ್ಮಾಯಿ, ಸಂಸದ

ಯಡಿಯೂರಪ್ಪ ಅವರಿಗೆ ಆರೋಗ್ಯ, ಆಯಸ್ಸು ಹೆಚ್ಚಾಗಲಿ: ಡಿಸಿಎಂ ಡಿ.ಕೆ.ಶಿವಕುಮಾರ್

ಯಡಿಯೂರಪ್ಪ ಅವರು ರಾಜ್ಯದ ಸೇವೆ ಮಾಡಿದ್ದಾರೆ. ಅವರ ಜನ್ಮದಿನವಿದ್ದರೆ ಅವರಿಗೆ ಒಳ್ಳೆಯದಾಗಲಿ. ಅವರ ಪಕ್ಷದವರು ಪಕ್ಷ ಸಂಘಟನೆ ಹಾಗೂ ಅವರಿಗೆ ಗೌರವ ನೀಡುತ್ತಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಅವರಿಗೆ ಉತ್ತಮ ಆರೋಗ್ಯ ಸಿಗಲಿ ಎಂದು ಆಶಿಸುತ್ತೇನೆ. ಭಗವಂತ ಅವರಿಗೆ ಹೆಚ್ಚಿನ ಆಯಸ್ಸು ನೀಡಲಿ. ರಾಜಕೀಯವಾಗಿ ಅವರ ವಿಚಾರಧಾರೆ ಬೇರೆ, ನಮ್ಮ ವಿಚಾರಧಾರೆ ಬೇರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ಮಾದಾರ ಚೆನ್ನಯ್ಯ ಗುರು ಪೀಠದ ಮೈದಾನದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವದ ವೇದಿಕೆ ಮುಂಭಾಗದಲ್ಲಿ ನೆರದಿದ್ದ ಲಕ್ಷಾಂತರ ಅಭಿಮಾನಿಗಳ ಬಳಗ...

ರಾಜ್ಯದಲ್ಲೂ ಬಿಜೆಪಿ ಹವಾ!

▸ ವಾದಿರಾಜ ಕಮರೂರು

ಶಿವಮೊಗ್ಗ: ಪಂಚ ರಾಜ್ಯ ಚುನಾವಣೆ ಫಲಿತಾಂಶದ ಬಳಿಕ ಅತೀವ ಉತ್ಸಾಹದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಇದೀಗ ಕರ್ನಾಟಕದಲ್ಲೂ ತನ್ನ ಹವಾ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳು ಪೂರೈಸಿರುವ ನಿಮಿತ್ತ ಆಯೋಜಿಸಿದ್ದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ಪರೋಕ್ಷವಾಗಿ ಪಕ್ಷದ ಶಕ್ತಿಪ್ರದರ್ಶನದ ಕಾರ್ಯಕ್ರಮವಾಗಿದ್ದು ಸುಳ್ಳಲ್ಲ. ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಎರಡು ವರ್ಷಗಳು ಬಾಕಿ ಇರುವಾಗಲೇ ಬಿಜೆಪಿ ಒಂದರ್ಥದಲ್ಲಿ ಈಗಲೇ ತಾನು ಚುನಾವಣೆಗೆ ಸಿದ್ಧ ಇರುವುದಾಗಿ ರಣಕಹಳೆಯನ್ನು ಕೋಟೆ ನಾಡು ಚಿತ್ರದುರ್ಗದಲ್ಲಿ ಮೊಳಗಿಸಿದೆ.

ದಿಗಂತ ವಿಶ್ಲೇಷಣೆ

ಎಲ್ಲರ ಬಾಯಲ್ಲೂ ಬಂಗಾಳ: ಶನಿವಾರವೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಪ್ರಮಾಣವಚನ ಸ್ವೀಕರಿಸಿದ್ದರಿಂದ ಯಡಿಯೂರಪ್ಪ ಅಭಿಮಾನೋತ್ಸವದ ಇಡೀ ಕಾರ್ಯಕ್ರಮದಲ್ಲಿ ಬಂಗಾಳದ ವಿಜಯೋತ್ಸವವೂ ಮೊಳಗಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಹಿಡಿದು ಮಾತನಾಡಿದ ಎಲ್ಲರೂ ಪಶ್ಚಿಮ ಬಂಗಾಳದ ಬಿಜೆಪಿಯ ವಿಜಯವನ್ನು ಉಲ್ಲೇಖಿಸಿದರು. ಅದೇ ರೀತಿ ಕರ್ನಾಟಕದಲ್ಲೂ ಬಿಜೆಪಿಗೆ ಅಧಿಕಾರ ಬರಬೇಕೆಂಬುದು ಎಲ್ಲರ ಧ್ವನಿಯೂ ಆಗಿತ್ತು.

ದಕ್ಷಿಣ ಭಾರತದಲ್ಲಿ ಮೊದಲು ಕಮಲ ಅರಳಿಸಿದ್ದು ಯಡಿಯೂರಪ್ಪನವರು ಎಂದ ಅಮಿತ್ ಶಾ, ಮತ್ತೆ ಪಕ್ಷಕ್ಕೆ ಅವರ ಮಾರ್ಗದರ್ಶನ ಅವಶ್ಯವೆಂದು ಬಹಿರಂಗವಾಗಿ ಹೇಳಿದರು. ಸುದೀರ್ಘ ಕಾಲ ಬಿಜೆಪಿಗೆ ಮಾರ್ಗದರ್ಶನ ಮಾಡಿದ ಯಡಿಯೂರಪ್ಪರಿಗೆ ಕೃತಜ್ಞತೆಯನ್ನೂ ಸಲ್ಲಿಸಿದರು.

ಎಲ್ಲೂ ಸರ್ಕಾರದ ಪ್ರಸ್ತಾಪವಿಲ್ಲ: ಕಾರ್ಯಕ್ರಮ ಪೂರ್ತಿ ಯಡಿಯೂರಪ್ಪನವರ ರಾಜಕೀಯ ಹಾದಿ, ಅವರ ಸಾಧನೆ, ಅವರ ಅವಧಿಯಲ್ಲಿ ಕೈಗೊಳ್ಳಲಾದ ಯೋಜನೆಗಳ ಕುರಿತಾಗಿಯೇ ಸೀಮಿತವಾಗಿತ್ತು. ಅಮಿತ್ ಶಾ ಕೂಡ ಒಂದರ್ಥದಲ್ಲಿ ಅಭಿನಂದನಾ ಭಾಷಣದಂತೆಯೇ ಮಾತನಾಡಿದರು. ಎಲ್ಲಿಯೂ ಕೂಡ ರಾಜ್ಯದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರದ ಬಗ್ಗೆಯಾಗಲೀ, ಯೋಜನೆಗಳ ಬಗ್ಗೆಯಾಗಲೀ ಚರ್ಚೆಯನ್ನೇ ಮಾಡಲಿಲ್ಲ. ಬದಲಾಗಿ ಬಿಜೆಪಿ ಅಧಿಕಾರಕ್ಕೆ ಬಂದರೆ ರೈತರಿಗೆ, ಸಾಮಾನ್ಯ ಜನರಿಗೆ ಆಗುವ ಲಾಭ ಮತ್ತು ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿದ ಜನೋಪಯೋಗಿ ಕಾರ್ಯಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡಲಾಯಿತು.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೂ ಒಂದು ವರ್ಷ ಮುನ್ನ ಅಂದರೆ 2022ರ ಆಗಸ್ಟ್ ತಿಂಗಳಲ್ಲಿ ಸಿದ್ದರಾಮಯ್ಯ ಅವರಿಗೆ 75 ವರ್ಷಗಳಾದ ನಿಮಿತ್ತ ದಾವಣಗೆರೆಯಲ್ಲಿ ಬೃಹತ್ ಕಾರ್ಯಕ್ರಮ ಸಿದ್ದರಾಮೋತ್ಸವ ಆಯೋಜಿಸಲಾಗಿತ್ತು. ಆ ಮೂಲಕ ಕಾಂಗ್ರೆಸ್ ಚುನಾವಣೆಗೆ ತಯಾರಾಗುವಂತೆ ತನ್ನ ಕಾರ್ಯಕರ್ತರನ್ನು ಹುರಿದುಂಬಿಸಿ ನಂತರ ನಡೆದ ಚುನಾವಣೆಯಲ್ಲಿ ಯಶಸ್ವಿಯಾಗಿತ್ತು. ಇದೀಗ ಅಲ್ಲೇ ಪಕ್ಕದ ಚಿತ್ರದುರ್ಗದಲ್ಲಿ ಬಿಜೆಪಿ ಯಡಿಯೂರಪ್ಪನವರ ಅಭಿಮಾನೋತ್ಸವದ ಹೆಸರಲ್ಲಿ ಸಿದ್ದರಾಮೋತ್ಸವಕ್ಕೆ ಕಮ್ಮಿ ಇಲ್ಲದಂತೆಯೇ ಶಕ್ತಿಪ್ರದರ್ಶನ ಮಾಡಿದೆ.



2028ರ ಚುನಾವಣಾ ಪೂರ್ವ ರಂಗಸಜ್ಜಿಕೆಯನ್ನಂತೂ ಬಿಜೆಪಿ ಚೆನ್ನಾಗಿಯೇ ಮಾಡಿಕೊಂಡಿದೆ. ಇನ್ನು ಚುನಾವಣಾ ಕಾಲದಲ್ಲಿ ಮತದಾರನ ಹೇಗೆ ತಲುಪಲಿದೆ? ಯಾವ ವಿಷಯ ಪ್ರಸ್ತಾಪವಾಗಲಿದೆ ಎಂಬುದು ಕೂಡ ಮುಖ್ಯವಾಗುತ್ತದೆ. ಕೇವಲ ಒಳ್ಳೆಯ ರಂಗಸಜ್ಜಿಕೆಯನ್ನು ಮಾತ್ರ ನೆಚ್ಚಿಕೊಂಡರೆ ಪ್ರದರ್ಶನದ ಯಶಸ್ಸಿಗೆ ಅದೊಂದೇ ಕಾರಣ ಆಗಲಾರದು. ಸಾಮೂಹಿಕ ಪ್ರಯತ್ನ, ಅದಕ್ಕೆ ಬೇಕಾದ ಇಚ್ಛಾಶಕ್ತಿ, ಸಾಂಘಿಕ ದೃಷ್ಟಿಕೋನ ಅವಶ್ಯವಾಗುತ್ತದೆ. ಇದಾದರೆ ಮತ್ತೆ ದಕ್ಷಿಣದಲ್ಲಿ ಕಮಲ ಅರಳುವುದು ಕಷ್ಟವೇನಲ್ಲ.

ತಂದೆಯಂತೆ ನನಗೂ ಸಹಕಾರ ಕೊಡಿ



ರಾಜ್ಯ ಬಿಜೆಪಿ ಬೆಳವಣಿಗೆಯಲ್ಲಿ ನಮ್ಮ ತಂದೆಯವರ ಪಾತ್ರ ಎಲ್ಲರಿಗೂ ತಿಳಿದಿದೆ. ಅವರ ಮಾರ್ಗದರ್ಶನದಲ್ಲಿ ನಾನು ಮುನ್ನಡೆಯುತ್ತಿದ್ದೇನೆ. ಎಲ್ಲರೂ ಅವರಿಗೆ ಸಹಕಾರ ನೀಡಿದಂತೆ ನನಗೂ ಹೆಗಲು ಕೊಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಬಿ.ವೈ. ವಿಜಯೇಂದ್ರ ಮನವಿ ಮಾಡಿದರು. ಮತ್ತೊಂದೆಡೆ ಅಮಿತ್ ಶಾ ಅವರೆದುರು ಭಾರೀ ಜನಸಾಗರವನ್ನು ವಿಜಯೇಂದ್ರ ಪ್ರದರ್ಶಿಸಿದ್ದು ರಾಜ್ಯದಲ್ಲಿ ತಮಗಿರುವ ಜನಬೆಂಬಲವನ್ನು ವ್ಯಕ್ತಪಡಿಸಿದರು.

ಬಿಎಸ್‌ವೈ ಆಡಳಿತದಲ್ಲಿ ರಾಜ್ಯ ಸಮೃದ್ಧಿ

ಚಿತ್ರದುರ್ಗ: ರೈತ ನಾಯಕ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಆಡಳಿತ ನಡೆಸುವಾಗ ರಾಜ್ಯ ಸಮೃದ್ಧಿಯಾಗಿತ್ತು. ಅಂತಹ ದಿನಗಳು ಮತ್ತೆ ರಾಜ್ಯದಲ್ಲಿ ಬರಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಯ ವ್ಯಕ್ತಪಡಿಸಿದರು.

ಶನಿವಾರ ನಡೆದ ಬಿಎಸ್‌ವೈ ಅಭಿಮಾ ನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ಪಕ್ಷದ ಹಡಗು ಮುಳುಗುತ್ತಿದೆ. ಹಾಗಾಗಿ ಜನರು ಮನಸ್ಸು ಮಾಡಿ ಮುಂದೆ ಬಿಜೆಪಿ ಅಧಿಕಾರಕ್ಕೆ ತರಬೇಕು. ಯಡಿಯೂರಪ್ಪ ಅವರ ಯೋಜನೆಗಳು ಮತ್ತೆ ಜಾರಿಗೆ ಬರುವಂತಾಗಬೇಕು ಎಂದರು.

ಯಡಿಯೂರಪ್ಪ ಎಂಬ ಹೆಸರಿನಲ್ಲಿ ದೊಡ್ಡ ಶಕ್ತಿಯಿದೆ. ಬಡವರ, ದೀನದಲಿತರ ಮನಗಳಲ್ಲಿ, ಮನೆಯಲ್ಲಿ ಮಿಡಿಯುತಿರುವ ಹೆಸರು ಬಿಎಸ್‌ವೈ. ಚಿತ್ರದುರ್ಗ ಜಿಲ್ಲೆಯ ಮಹತ್ವದ ಭದ್ರಾ ಮೇಲ್ದಂಡೆ ಯೋಜನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ರಾಜ್ಯದಲ್ಲಿ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಯೋಜನೆಗೆ ಯಡಿಯೂರಪ್ಪನವರು ಭೂಮಿಪೂಜೆ ನೆರವೇರಿಸಿದರು. ಅದರಂತೆ ವಾಣಿವಿಲಾಸ ಸಾಗರಕ್ಕೆ ನೀರು ಕೊಟ್ಟರು. ಹಾಗಾಗಿ ಬಿಎಸ್‌ವೈ ಬರದ ನಾಡಿಗೆ ನೀರು ತಂದ ಭಗೀರಥ ಎಂದು ಬಣ್ಣಿಸಿದರು.

ವಿರೋಧ ಪಕ್ಷದಲ್ಲಿದ್ದಾಗ ವಿವಿಧ ವಿಷಯಗಳ ಕುರಿತು ನಿರಂತರ ಹೋರಾಟ ನಡೆಸಿದರು. ಬಳಿಕ ತನಗೇ ಅಧಿಕಾರಕ್ಕೆ ಬಂದಾಗ ಅವನ್ನು ಸಾಕಾರಗೊಳಿಸಿದರು. ನಾಡಿನ ವಿವಿಧ ಕೆರೆಗಳಿಗೆ ನೀರು ತುಂಬಿಸುವ ಅನೇಕ ಯೋಜನೆಗಳನ್ನು ಜಾರಿ ಮಾಡಿದರು. ರಾಜ್ಯದ ಉದ್ದಗಲಕ್ಕೂ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಇದರಿಂದ ಅನೇಕ ರೈತರ ಕೃಷಿ ಜಮೀನುಗಳಿಗೆ ಅನುಕೂಲವಾಯಿತು. ರಾಜ್ಯದ ಜನ ಇದನ್ನು ಸ್ಮರಿಸಬೇಕು ಎಂದು ನೆನಪು ಮಾಡಿದರು.

ಯಡಿಯೂರಪ್ಪನವರು ಅನೇಕ ಹಿಂದುಳಿದ ಮಠಮಾನ್ಯಗಳು, ಹಿಂದುಳಿದವರಿಗೆ ಅಭಿವೃದ್ಧಿ ನಿಗಮ ಮಾಡಿ ಅನುಕೂಲ ಮಾಡಿಕೊಟ್ಟಿದ್ದಾರೆ. 2009ರಲ್ಲಿ ಭೀಕರ ಪ್ರವಾಹವಾದಾಗ 22 ದಿನ ಮನೆ ಸೇರದೆ ರಾಜ್ಯ ಪ್ರವಾಸ ಮಾಡಿ ನೊಂದವರ ಕಣ್ಣೀರು ಒರೆಸಿದರು. ಹಳ್ಳಿ ಹಳ್ಳಿಗೆ ತೆರಳಿ ಜನರ ಅಳಲು ಆಲಿಸಿ 63 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟರು ಎಂದು ಹೇಳಿದರು. ಕೋವಿಡ್ ಸಂದರ್ಭದಲ್ಲಿ ಸಮರ್ಪಕ ಆಕ್ಸಿಜನ್ ಪೂರೈಸಿ ಜನರ ಜೀವ ಉಳಿಸಿದರು. ಇವರ ಸಾಧನೆಗಳ ಬಗ್ಗೆ ಮಾತನಾಡಲು ವಾರಗಟ್ಟಲೆ ಸಮಯ ಸಾಕಾಗುವುದಿಲ್ಲ. ಇದೆ. ನನ್ನ ಮಾರ್ಗದರ್ಶಕರಾದ ಯಡಿಯೂರಪ್ಪನವರಿಗೆ ದೇವರು ನೂರು ವರ್ಷ ಆಯಸ್ಸು ನೀಡಲಿ ಎಂದು ಹೇಳಿದರು.



ನಾಡಿಗಾಗಿ ದುಡಿದ ನಾಯಕ

ಅಧಿಕಾರಕ್ಕೋಸ್ಕರ ಸುಳ್ಳು ಹೇಳಿ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುವ ರಾಜಕೀಯ ನಾಯಕರಿರುವ ಇಂದಿನ ದಿನಗಳಲ್ಲಿ ಬಿ.ಎಸ್. ಯಡಿಯೂರಪ್ಪನವರು ಜನಪರ ಕೆಲಸ ಮಾಡಿದ್ದಾರೆ. ಇದಕ್ಕೆ ನಾಡಿನಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳೇ ಸಾಕ್ಷಿ. ಯಡಿಯೂರಪ್ಪನವರು ಅಧಿಕಾರ ಬಿಟ್ಟು ಅನೇಕ ವರ್ಷಗಳು ಕಳೆದಿವೆ. ಆದಾಗ್ಯೂ ಅವರು ಮಾಡಿರುವ ಕೆಲಸ ಜನಮಾನಸದಲ್ಲಿ ಉಳಿದಿವೆ. ಬಿಎಸ್‌ವೈ ನಾಡಿನ ಏಕೈಕ ಮಾಸ್ ಲೀಡರ್ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿಕೆ


ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ

ಚಿತ್ರದುರ್ಗ: ರೈತನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹುಟ್ಟು ಹೋರಾಟಗಾರ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡಿ ವಿಧಾನಸೌಧದ ಗದ್ದುಗೆ ಏರಿದರು ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ನಗರದ ಹೊರವಲಯದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಕನಕ ಜಯಂತಿ ಆಚರಣೆ ಬಿ.ಎಸ್. ಯಡಿಯೂರಪ್ಪನವರ ಕೊಡುಗೆ. ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ ನೀಡಿ ರಾಷ್ಟ್ರೀಯ ಪ್ರವಾಸಿ ತಾಣ ಮಾಡಿದರು. ಕೊಟ್ಟ ಮಾತಿನಂತೆ ನಡೆದವರು ಯಡಿಯೂರಪ್ಪ. ಮೈಲಾರದಲ್ಲಿ ಶಾಲೆ ಆರಂಭಿಸಲು ಅಗತ್ಯ ಅನುದಾನಕ್ಕೆ 10 ಕೋಟಿ ಹಣ ನೀಡಿದರು. ಇವರ ಬಗ್ಗೆ ಮಾತನಾಡಲು ಸಮಯ ಸಾಕಾಗುವುದಿಲ್ಲ. ದೇವರು ಇವರಿಗೆ ನೂರಾರು ವರ್ಷ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ. ಇವರಿಂದ ರಾಜ್ಯಕ್ಕೆ ಇನ್ನೂ ಉತ್ತಮ ಸೇವೆ ದೊರೆಯುವಂತಾಗಲಿ ಎಂದು ಆಶಿಸಿದರು.

> ಧಾರ್ಮಿಕ ಕೇಂದ್ರಗಳಿಗೆ ಅನುದಾನ ನೀಡಿದ ಪ್ರಥಮ ಮುಖ್ಯಮಂತ್ರಿ. ಅವರ ಮೇಲಿನ ಅಭಿಮಾನಕ್ಕೆ ಎಲ್ಲ ಮಠಾಧೀಶರು ಇಲ್ಲಿಗೆ ಆಗಮಿಸಿದ್ದಾರೆ. ಇದೊಂದು ಸಾರ್ಥಕ ಸಮಾರಂಭ. ಮುಂದೊಂದು ದಿನ ಅಮೃತ ಮಹೋತ್ಸವ, ಶತಮಾನೋತ್ಸವ ಆಚರಿಸುವಂತಾಗಲಿ.
>
> ■ ಶ್ರೀ ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ರಂಭಾಪುರೀ ಪೀಠ



ಇತಿಹಾಸ ಪುಟ ಸೇರುವ ಕಾರ್ಯಕ್ರಮ: ಶ್ರೀ ಫಕೀರ ದಿಂಗಾಲೇಶ್ವರಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಇದೊಂದು ಇತಿಹಾಸ ಪುಟ ಸೇರುವ ಕಾರ್ಯಕ್ರಮ. ಬಿಎಸ್‌ವೈ ಅಭಿಮಾನಿಗಳ ಜನಸಾಗರವೇ ಇಲ್ಲಿ ಸೇರಿದೆ. ಹಾಗಾಗಿ ಅಭಿಮಾನೋತ್ಸವವನ್ನು 8ನೇ ಅದ್ಭುತ ಎಂದು ಹೇಳಬಹುದು. ಶ್ರೀರಾಮನ ಪಟ್ಟಾಭಿಷೇಕದ ನಂತರ ಈ ದೇಶದಲ್ಲಿ ನಡೆದ ಅತಿದೊಡ್ಡ ಕಾರ್ಯಕ್ರಮ ಈ ಅಭಿಮಾನೋತ್ಸವ. ಅಭಿಮಾನಿಗಳು ಸ್ವಯಂಪ್ರೇರಣೆಯಿಂದ ಬಂದು ಇಲ್ಲಿ ಸೇರಿದ್ದಾರೆ. ರೈತಪರ ಹೋರಾಟಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟವರು ಬಿಎಸ್‌ವೈ. ಎಷ್ಟೋ ಜನ ಅವರನ್ನು ಮುಗಿಸಲು ನೋಡಿದರು. ಆದರೆ ಜನರ ಪ್ರೀತಿಯಿಂದ ಅದು ಸಾಧ್ಯವಾಗಿಲ್ಲ ಎಂದರು. ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದ ಸ್ವಾಮೀಜಿ, ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿದರು.

ವಾರಣಾಸಿ ಕಾಶೀ ಪೀಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಬೆಕ್ಕಿನಕಲ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಬಸವಕುಮಾರ ಸ್ವಾಮೀಜಿ, ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಸಿರಿಗೆರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಉಡುಪಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಶಾಂತವೀರ ಸ್ವಾಮೀಜಿ, ಶ್ರೀ ಸೋಮಶೇಖರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಶ್ರೀ ಬಸವ ಗುಂಡಯ್ಯ ಸ್ವಾಮೀಜಿ, ಭಗೀರಥ ಗುರುಪೀಠದ ಶ್ರೀಪುರುಷೋತ್ತಮಾನಂದ ಸ್ವಾಮೀಜಿ, ಡಾ. ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ನಾಡಿನ ನೂರಾರು ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

224 ವಿಧಾನ ಸಭಾ ಕ್ಷೇತ್ರಗಳಿಂದ ಅಭಿಮಾನಿಗಳ ಆಗಮನ.

3,000 ಪ್ರಬಂಧಕರಿಂದ ಹದಿನೈದು ದಿನಗಳಿಂದ ಹಗಲು ರಾತ್ರಿ ಕೆಲಸ.

10 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳಿಗೆ ಶುಚಿ-ರುಚಿ ಊಟ

40 ಕಿ.ಮೀ. ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ.

ಅಭಿಮಾನದ ಹೊಳೆಯಲ್ಲಿ ಮಿಂದ ಅಭಿಮಾನಿ ಬಳಗ

▸ ಎನ್.ಜೆ. ತಿಪ್ಪೇಸ್ವಾಮಿ

ಚಿತ್ರದುರ್ಗ: ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನ 50 ವರ್ಷ ಪೂರೈಸಿರುವ ಅಂಗವಾಗಿ ನಗರದ ಹೊರವಲಯದ ಮದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಸಚಿವರು, ನಾಡಿನ ಅನೇಕ ಮಠಾಧೀಶರು ಆಗಮಿಸಿದ್ದರು.

ಇದಲ್ಲದೇ ನಾಡಿನ ಮೂಲೆಮೂಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳ ದಂಡು ಚಿತ್ರದುರ್ಗಕ್ಕೆ ಹರಿದುಬಂದಿತ್ತು. ಎತ್ತ ನೋಡಿದರೂ ಜನವೋ ಜನ. ನಗರ ಸೇರಿದಂತೆ ನಗರದ ಹೊರವಲಯದ ಹೆದ್ದಾರಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ನಗರದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಸುಮಾರು 40 ಕಿಮೀ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಪೊಲೀಸರು ಅಭಿಮಾನಿಗಳನ್ನು ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಲ್ಲಿ ಸಾಕು ಸಾಕಾಗಿ ಹೋದರು.



ರಾಜ್ಯದ 224 ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ಪ್ರತಿ ಕ್ಷೇತ್ರಗಳಿಂದ ಸಾವಿರ ಸಾವಿರ ಸಂಖ್ಯೆಯ ಅಭಿಮಾನಿಗಳು ಕಾರ್ಯಕ್ರಮಕ್ಕೆ ನಾಡಿನ ವಿವಿಧೆಡೆಗಳಿಂದ ಜನಸಾಗರವೇ ಹರಿದುಬಂದಿತ್ತು. ಶನಿವಾರ ಮುಂಜಾನೆಯಿಂದಲೇ ಅಭಿಮಾನಿಗಳು ಕಾರ್ಯಕ್ರಮ ನಡೆಯುವ ಮೈದಾನಕ್ಕೆ ದಾಂಗುಡಿ ಇಟ್ಟಿದ್ದರು. ಇವರ ನಿರ್ವಹಣೆಗೆ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ನಾಡಿನ ವಿವಿಧ ಜಿಲ್ಲೆಗಳಿಂದ ಬಂದ ಅಭಿಮಾನಿಗಳಿಗೆ ಅಚ್ಚುಕಟ್ಟಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಅನೇಕ ಪ್ರಬಂಧಕರು ಸ್ವಯಂಪ್ರೇರಿತರಾಗಿ ಅಭಿಮಾನಿಗಳಿಗೆ ಅಗತ್ಯ ಸೇವೆ ಒದಗಿಸಿದರು. ಊಟದ ನಿರ್ವಹಣೆಗೆ ಕಾರ್ಯಕ್ರಮ ವೇದಿಕೆಯ ಒಂದೆರಡು ಕಡೆ ವ್ಯವಸ್ಥೆ ಮಾಡಲಾಗಿತ್ತು. ಊಟ ತಯಾರಿಸಲು ಐದಾರು ಕಡೆ ದೊಡ್ಡ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಪ್ರತಿಯೊಂದು ಕಡೆ ನೂರಾರು ಕೌಂಟರ್‌ಗಳನ್ನು ತೆರೆದು ಜನರಿಗೆ ಊಟ, ತಿಂಡಿ ನೀಡಲಾಯಿತು. ಬೆಳಗ್ಗೆ ತಿಂಡಿಗೆ ಉಪ್ಪಿಟ್ಟು, ಕೇಸರಿಬಾತ್, ಇಡ್ಲಿ, ವಡೆ, ಸಾಂಬಾರ್ ನೀಡಲಾಯಿತು. ಬಳಿಕ 11 ಗಂಟೆಯ ನಂತರ ಟೊಮೋಟೋ ಬಾತ್, ಪೊಲಾವ್, ಮೊಸರನ್ನ, ಮೈಸೂರುಪಾಕ್ ನೀಡಲಾಯಿತು. ಅಭಿಮಾನಿಗಳು ಹೊಟ್ಟೆತುಂಬ ಊಟ ಮಾಡಿ ಸಂತೃಪ್ತರಾದರು.

ಸಾಗರೋಪಾದಿಯಲ್ಲಿ ಅಭಿಮಾನಿಗಳು ನೆರೆದಿದ್ದ ಪರಿಣಾಮ, ಅವರಿಗೆ ನೀಡಲು ತಂದಿದ್ದ ಪರಿಕರಗಳನ್ನು ಪೆಂಡಾಲ್‌ನಲ್ಲಿ ಅಲ್ಲಲ್ಲಿ ರಾಶಿ ಹಾಕಲಾಗಿತ್ತು. ನೆರೆದಿದ್ದ ಜನರಿಗೆ ಅಲ್ಲಲ್ಲಿ ಕುಡಿಯುವ ನೀರು, ಮಜ್ಜಿಗೆ ಪ್ಯಾಕೇಟ್‌ಗಳನ್ನು ವಿತರಿಸಲಾಗುತ್ತಿತ್ತು. ಬಿಸಿಲಿನ ಝಳ ತಪ್ಪಿಸಲು ಅಲ್ಲಲ್ಲಿ ಏರ್ ಕೂಲರ್‌ಗಳು, ಬೃಹತ್ ಗಾತ್ರದ ಫ್ಯಾನ್‌ಗಳನ್ನು ಅಳವಡಿಸಲಾಗಿತ್ತು.

ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ನಿಮಿತ್ತ ಹೊಸ ದಿಗಂತ ಹೊರತಂದಿರುವ ವಿಶೇಷ ಸಂಚಿಕೆಯನ್ನು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ನೀಡಲಾಯಿತು. ದಾವಣಗೆರೆ ಜಿಲ್ಲಾ ಪ್ರಸರಣ ಪ್ರತಿನಿಧಿ ನಿಂಗಪ್ಪ, ಚಿತ್ರದುರ್ಗ ಜಿಲ್ಲಾ ಜಾಹೀರಾತು ಪ್ರತಿನಿಧಿ ಅನಿಲ್ ಇದ್ದರು.





ಕೋಟೆ ನಾಡಲ್ಲಿ ನಡೆದ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಶನಿವಾರ ಹರಿದು ಬಂದ ಅಪಾರ ಜನಸಾಗರ.

ಚಿತ್ರಗಳು: ಮೋಹನ್ ಕುಮಾರ್ ಬಿ.ಎನ್.

ಕಿರುಸುದ್ದಿ

ಸಮಾಲೋಚನೆ ಸಭೆ

◆**ಗದಗ:** ರಾಜ್ಯ ಅಮೆಚೂರ ಯೋಗ ಕ್ರೀಡಾ ಸಂಸ್ಥೆ ಸಂಯೋಜನೆ ಹೊಂದಿದ ಜಿಲ್ಲಾ ಅಮೆಚೂರ ಯೋಗಾಸನ ಕ್ರೀಡಾ ಸಂಸ್ಥೆ ಯೋಗಾಸನ ಕ್ರೀಡೆಯ ಪ್ರಸಾರ/ಪ್ರಚಾರ ಕಾರ್ಯ ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ಮೇ 10ರಂದು ಬೆಳಗ್ಗೆ 10.30ಕ್ಕೆ ತೋಂಟದಾರ್ಯ ಮಠದ ಆವರಣದಲ್ಲಿರುವ ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿ ಅನುಭವ ಮಂಟಪದಲ್ಲಿ ಜಿಲ್ಲೆಯ ಯೋಗಾಸನ ಕ್ರೀಡಾಸಕ್ತರ ಸಮಾಲೋಚನೆ ಸಭೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಮೆಚೂರ್ ಯೋಗಾಸನ ಕ್ರೀಡಾ ಸಂಸ್ಥೆ ಅಧ್ಯಕ್ಷ ಕೆ. ಎಸ್. ಪಲ್ಲೇದ, ಕಾರ್ಯದರ್ಶಿ ಚೇತನ ಬುಚಾ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

◆**ಗದಗ:** ಎಸ್.ಎಸ್.ಎಲ್.ಸಿ ರಾಜ್ಯ ಮತ್ತು ಸಿಬಿಎಸ್‌ಇ, ಪಿಯುಸಿ ಆರ್ಟ್, ಸೈನ್ಸ್, ಕಾಮರ್ಸ್‌ನಲ್ಲಿ ಶೇ. 95 ರಷ್ಟು ಅಂಕಗಳನ್ನು ಪಡೆದುಕೊಂಡ ಗದಗಿನ ವಿವೇಕಾನಂದ ನಗರದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲು ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯು ಅರ್ಜಿ ಆಹ್ವಾನಿಸಿದೆ. ಶೇ. 95 ಅಂಕಗಳನ್ನು ಪಡೆದುಕೊಂಡ ವಿವೇಕಾನಂದ ನಗರದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಂಕಪಟ್ಟಿಯ ಝರಾಕ್ಸ್ ಪ್ರತಿಯೊಂದಿಗೆ ಹೆಸರು, ಸಂಪರ್ಕ ವಿಳಾಸ, ಮೊಬೈಲ್ ನಂಬರ್‌ದೊಂದಿಗೆ ಅರ್ಜಿಯನ್ನು ಗದಗ ವಿವೇಕಾನಂದ ನಗರದ, ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಕಾರ್ಯಾಲಯಕ್ಕೆ ಮೇ 12 ರೊಳಗೆ ನೀಡಬೇಕು. ಅರ್ಜಿ ಸಲ್ಲಿಕೆಗೆ ಬಿ.ಬಿ. ಗರಡಿಮನಿ ಮೊ : 9448059273, ವ್ಹಿ.ಆರ್.ಕುಲಕರ್ಣಿ ಮೊ. 9449925045 ಅವರನ್ನು ಸಂಪರ್ಕಿಸಬಹುದು. ಮೇ. 16 ರಂದು ಸಂಜೆ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಸಮಿತಿಯಿಂದ ಜರುಗುವ ಜೀವನ ದರ್ಶನ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ತಿಳಿಸಿದ್ದಾರೆ.

ಪ್ರವೇಶಾತಿ ಪ್ರಾರಂಭ

◆**ಗದಗ:** ನರಗುಂದ ಅಂಗನವಾಡಿ ರಸ್ತೆಯಲ್ಲಿರುವ ಜಿಟಿಟಿಸಿ ಕೇಂದ್ರವು ಹತ್ತನೇ ಯುವಕರಿಂದ ಟೂಲರೂಮ್ ಮತಿನಿಸ್ಟ್, ಮೆಕಲ್ ಅಸೆಂಬ್ಲಿ ಫಿಟ್ಟರ್ ಮತ್ತು ಆಟೋಮೊಬೈಲ್ ವೆಲ್ಡರ್ ವೃತ್ತಿ ತರಬೇತಿಗಳಿಗೆ ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿಯಲ್ಲಿ ಉತ್ತೀರ್ಣರಾದ ಮತ್ತು ಅನುತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಒಂದು ವರ್ಷ ಅವಧಿಯ ಟೂಲರೂಮ್ ಮತಿನಿಸ್ಟ್ ತರಬೇತಿಯಲ್ಲಿ ಟರ್ನರ್, ಮಿಲ್ಲರ್, ಗ್ರೈಂಡರ್, ಸಿ.ಎನ್.ಸಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ಮೆಕಲ್ ಅಸೆಂಬ್ಲಿ ಫಿಟ್ಟರ್ ಮತ್ತು ಆಟೋಮೊಬೈಲ್ ವೆಲ್ಡರ್ ವೃತ್ತಿಪರ ತರಬೇತಿಯಲ್ಲಿ ಫಿಟ್ಟರ್, ಕಾರು ಬಿಡಿಭಾಗಗಳ ಜೋಡಣೆ ಮತ್ತು ವೆಲ್ಡಿಂಗ್ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ಜೊತೆಗೆ ಆಟೋಕ್ಯಾಡ, ಕನ್ನಡ ಮತ್ತು ಇಂಗ್ಲಿಷ್ ಭಾಷಾ ಕೌಶಲ್ಯಗಳನ್ನು ಹಾಗೂ ಉದ್ಯೋಗ ಕೌಶಲ್ಯಗಳನ್ನು ಕಲಿಸಲಾಗುತ್ತದೆ. ಒಂದು ವರ್ಷದ ತರಬೇತಿಯ ನಂತರ ಪ್ರತಿಷ್ಠಿತ ಟೂಲಿಂಗ್ ಮತ್ತು ವಿಮಾನ ತಯಾರಿಕೆ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸಿ ಕೊಡಲಾಗುವುದು. ವಿದ್ಯಾರ್ಥಿಗಳು ಜಿಟಿಟಿಸಿ ಕೇಂದ್ರಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲಿಸಲು ಕೊನೆಯ ಮೇ 15. ತರಬೇತಿಗಳು ಜೂ.1ರಿಂದ ಪ್ರಾರಂಭವಾಗುತ್ತವೆ ಎಂದು ಜಿಟಿಟಿಸಿ, ನರಗುಂದ ಪ್ರಾಂಶುಪಾಲರು ತಿಳಿಸಿದ್ದಾರೆ.

ನಿಧನ ಸುದ್ದಿ

ಸೀತಾಬಾಯಿ ಅಕ್ಕಸಾಲಿಗರ



◆**ನರೇಗಲ್ಲ:** ಸಮೀಪದ ಜಕ್ಕಲಿ ಗ್ರಾಮದ ವಿಶ್ವಕರ್ಮ ಸಮಾಜದ ಶತಾಯುಷಿ ಸೀತಾಬಾಯಿ ಶಂಕರಪ್ಪ ಅಕ್ಕಸಾಲಿಗರ (104) ಅವರು ಶುಕ್ರವಾರ ನಿಧನರಾದರು.

ಮೃತರಿಗೆ ಪುತ್ರ, ಇಬ್ಬರು ಪುತ್ರಿಯರು ಹಾಗೂ ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗದವರು ಇದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2277-5806
ಹರಳು ಬೀಜ	1151-1151
ಒಣಮೆಣಸಿನಕಾಯಿ	1786-48009
ಹೆಸರುಕಾಳು	1619-7919
ಶೇಂಗಾ	3310-6998
ಹುರಳಿಕಾಳು	3161-4194
ಜೋಳ	1739-4562
ಮೆಕ್ಕೆಜೋಳ	1419-2079
ಸಾಸುವೆ	3011-5079
ಕುಸುಬೆ	3800-5406
ಎಳ್ಳು	8379-8379
ಸೋಯಾಬಿನ್	4412-4412
ಸೂರ್ಯಕಾಂತಿ	6382-6882
ತೊಗರಿ	2617-5412
ಗೋಧಿ	1019-5125



ಲಕ್ಷ್ಮೇಶ್ವರ: ಪಟ್ಟಣದ ಕರೆವಾಡಿಮಠಕ್ಕೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಭೇಟಿ ನೀಡಿದರು. ಕರೆವಾಡಿಮಠದ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯರು, ಸಿದ್ದರಬೆಟ್ಟ ಶ್ರೀಗಳು ಇದ್ದರು. ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿ ಮಂಜುನಾಥಯ್ಯ ದೇವರು ಇತ್ತೀಚೆಗೆ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೆಳದಿ ಕೃತಿವಿಶ್ಲೇಷಣೆ ಮತ್ತು ಹೊನ್ನಾಳಿ ಹಿರೇಕಲ್ಮಠ ಎಂಬ ಸಂಶೋಧನಾ ಮಹಾಪ್ರಬಂಧ ಮಂಡಿಸಿದ್ದಕ್ಕಾಗಿ ಪಿಎಚ್‌ಡಿ ಲಭಿಸಿದ್ದಕ್ಕೆ ಶ್ರೀಗಳು ಹರ್ಷವ್ಯಕ್ತಪಡಿಸಿದರು.

ರೆಡ್‌ಕ್ರಾಸ್ ಮಾನವೀಯ ಸೇವಾ ಸಂಸ್ಥೆ

◆**ನರಗುಂದ:** ರೆಡ್ ಕ್ರಾಸ್ ಸಂಸ್ಥೆಯು ಅಂತಾರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದೆ. ಯುದ್ಧ, ಪ್ರಕೃತಿ ವಿಕೋಪ, ಅಪಘಾತಗಳು ಹಾಗೂ ಆರೋಗ್ಯ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಸಂಸ್ಥೆ ಕಾರ್ಯನಿರ್ವಹಿಸುತ್ತದೆ ಎಂದು ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮ ಅಧಿಕಾರಿ ಡಾ.ರಾಮು ಎಂ.ಎಸ್. ಹೇಳಿದರು.

ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಆಚರಿಸಲಾಗಿದ್ದ ವಿಶ್ವ ರೆಡ್ ಕ್ರಾಸ್ ದಿನಾಚರಣೆಯಲ್ಲಿ ರೆಡ್ ಕ್ರಾಸ್ ಸಂಸ್ಥಾಪಕ ಹೆನ್ರಿ ಡೂನಾಂಟ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವುದರೊಂದಿಗೆ ಗೌರವ ಸಲ್ಲಿಸುತ್ತಾ ಮಾತನಾಡಿದರು.

ಪ್ರಾಂಶುಪಾಲ ಡಾ.ಆನಂದ ಕುಮಾರ ಎಸ್.ಲಾಲಸಂಗಿ ಮಾತನಾಡಿ, ವಿಶ್ವದಲ್ಲಿ ಶಾಂತಿ ಸ್ಥಾಪನೆಯಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಪಾತ್ರ ಮಹತ್ವದ್ದಾಗಿದೆ. ನೊಬೆಲ್ ಪುರಸ್ಕೃತ ಹೆನ್ರಿ ಡುನಾಂಟ್ ಅವರ ಪರಿಶ್ರಮದಿಂದ ಪ್ರಪಂಚದಾದ್ಯಂತ ರೆಡ್ ಕ್ರಾಸ್ ಸಂಸ್ಥೆಯು ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ನಿಸ್ವಾರ್ಥ ಸೇವೆಯೊಂದಿಗೆ ಜನ ಮನ್ನಣೆಯನ್ನು ಗಳಿಸಿದೆ ಎಂದರಲ್ಲದೇ ಆಯೋಜಿಸಲಾದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಹಿರಿಯ ಪ್ರಾಧ್ಯಾಪಕ ಡಾ.ಲಿಂಗರಾಜು ಎಂ. ಅಂಗಡಿ, ಐಕ್ಯೂಎಸಿ ಸಂಚಾಲಕಿ ಯಶೋಧ ಅಂಗಡಿ ಮತ್ತು ಯುವ ರೆಡ್ ಕ್ರಾಸ್ ಘಟಕದ ಸ್ವಯಂಸೇವಕರು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.



ನರಗುಂದ: ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಆಚರಿಸಲಾಗಿದ್ದ ವಿಶ್ವ ರೆಡ್ ಕ್ರಾಸ್ ದಿನಾಚರಣೆಯಲ್ಲಿ ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮ ಅಧಿಕಾರಿ ಡಾ. ರಾಮು ಎಂ.ಎಸ್. ಅವರು ರೆಡ್ ಕ್ರಾಸ್ ಸಂಸ್ಥಾಪಕ ಹೆನ್ರಿ ಡೂನಾಂಟ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವುದರೊಂದಿಗೆ ಗೌರವ ಸಲ್ಲಿಸಿದರು.

ಮಾರುಕಟ್ಟೆಗೆ ಲಗ್ಗೆಯಿಟ್ಟ ನೇರಳೆ ಹಣ್ಣು

▶ಸೀತಲ ಓಲೇಕಾರ

ದಿಗಂತ ವಿಶೇಷ

◆**ಗಜೇಂದ್ರಗಡ:** ಬೇಸಿಗೆಯ ಬಿಸಿಲಿನ ನಡುವೆ ಮಾರುಕಟ್ಟೆಗೆ ಲಗ್ಗೆ ಇಡುವ ನೇರಳೆ ಹಣ್ಣು ಕೇವಲ ರುಚಿಗಷ್ಟೇ ಸೀಮಿತವಲ್ಲ, ತನ್ನ ವಿಶಿಷ್ಟ ಬಣ್ಣ ಮತ್ತು ಔಷಧೀಯ ಗುಣಗಳಿಂದಾಗಿ ಈ ಹಣ್ಣು ದೇವರ ಹಣ್ಣು ಎಂದೇ ಪ್ರಸಿದ್ಧಿಯಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ನೇರಳೆ ಹಣ್ಣಿಗೆ ಭಾರೀ ಬೇಡಿಕೆ ಬಂದಿದ್ದು, ಜನರ ಆರೋಗ್ಯದ ದೃಷ್ಟಿಯಿಂದ ಇದು ಪ್ರಮುಖ ಸ್ಥಾನ ಪಡೆದಿದೆ. ಗಜೇಂದ್ರಗಡದ ಮಾರುಕಟ್ಟೆಗೆ ಮಳೆಗಾಲದ ಆರಂಭದ ಮುನ್ಸೂಚನೆಯಂತೆ ನೇರಳೆ ಹಣ್ಣುಗಳು ಲಗ್ಗೆ ಇಟ್ಟಿವೆ.

ಪ್ರತಿ ವರ್ಷವೂ ಜೂನ್ ಮತ್ತು ಜುಲೈ ತಿಂಗಳಲ್ಲಿ ಮಾರುಕಟ್ಟೆಗೆ ಬರುವ ನೇರಳೆ ಹಣ್ಣು ಈ ಬಾರಿ ಅಲ್ಪ ತಡವಾಗಿ ಬಂದಿದ್ದರೂ ಗ್ರಾಹಕರಲ್ಲಿ ಕ್ರೇಜ್ ಕಡಿಮೆಯಾಗಿಲ್ಲ, ಗುಣಮಟ್ಟಕ್ಕೆ ಅನುಗುಣವಾಗಿ ಕೆ.ಜಿ.ಗೆ 150 ರಿಂದ 250 ರೂಪಾಯಿ ವರೆಗೆ ಮಾರಾಟವಾಗುತ್ತಿದೆ. ಗಜೇಂದ್ರಗಡದ ಸುತ್ತಮುತ್ತಲಿನ ಗ್ರಾಮೀಣ ಭಾಗಗಳಿಂದ ಹಾಗೂ ಕಾಲಕಾಲೇಶ್ವರದ ಸುತ್ತಮುತ್ತಲಿನ ಗುಡ್ಡಗಾಡು ಪ್ರದೇಶಗಳಿಂದ ಹಣ್ಣುಗಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿವೆ. ಪ್ರತಿಯೊಬ್ಬರ ಆರೋಗ್ಯಕ್ಕೆ ನೇರಳೆ ಹಣ್ಣುಗಳು ಹೆಚ್ಚು ಪ್ರಯೋಜನಕಾರಿ. ಮಳೆಗಾಲದಲ್ಲಿ ಎಲ್ಲಾ ಕಡೆ ಹೇರಳವಾಗಿ ಸಿಗುವ ನೇರಳೆಹಣ್ಣು ತನ್ನಲ್ಲಿ ಅಪಾರವಾದ ಪೌಷ್ಟಿಕ ಸತ್ವಗಳನ್ನು ಒಳಗೊಂಡಿದೆ. ನೇರಳೆ ಹಣ್ಣುಗಳಲ್ಲಿ ನಾರಿನ ಅಂಶ, ಮಗ್ನೆಸಿಯಂ, ಕ್ಯಾರೋಟಿನ್, ಕಬ್ಬಿಣದ ಅಂಶ, ವಿಟಮಿನ್ ಎ, ವಿಟಮಿನ್ ಬಿ, ವಿಟಮಿನ್ ಸಿ ಅಂಶಗಳು ಹೆಚ್ಚು ಸಿಗುತ್ತವೆ. ನೇರಳೆ ಹಣ್ಣಿನ ಬೀಜಗಳು ಸಹ ಆರೋಗ್ಯಕ್ಕೆ ಹೆಚ್ಚು ಲಾಭಗಳನ್ನು ಕೊಡುತ್ತವೆ ಎನ್ನುತ್ತಾರೆ ನೇರಳೆಹಣ್ಣು ಪ್ರಿಯರು.



- ಕಡಿಮೆ ನೀರಿನಲ್ಲಿಯೂ ಉತ್ತಮ ಇಳುವರಿ ನೀಡುವ ಇದು ರೈತರಿಗೆ ಹೆಚ್ಚಿನ ಲಾಭ ತಂದುಕೊಡುತ್ತಿದೆ
- ವಿಶೇಷವಾಗಿ ಜಂಬೂ ನೇರಳೆ ತಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ
- ಮಾರುಕಟ್ಟೆಯಲ್ಲಿನ ನೇರಳೆ ಹಣ್ಣನ್ನು ಖರೀದಿಸಿದ ನಂತರ ಉಪ್ಪು ನೀರಿನಲ್ಲಿ ಚೆನ್ನಾಗಿ ತೊಳೆದು ಸೇವಿಸುವುದು ಉತ್ತಮ

ಕಿತ್ತ ಒಂದೆರಡು ದಿನದಲ್ಲೇ ಮಾರಾಟ ಅವಶ್ಯ

ಬೇರೆ ಹಣ್ಣುಗಳಿಗೆ ಹೋಲಿಸಿದರೆ ನೇರಳೆ ಹಣ್ಣಿಗೆ ಗ್ರಾಹಕರು ಚೌಕಾಶಿ ಮಾಡುವುದು ಕಡಿಮೆ. ಯಾಕೆಂದರೆ ಇದು ವರ್ಷಕ್ಕೆ ಒಮ್ಮೆ ಮಾತ್ರ ಸಿಗುವ ಹಣ್ಣು. ಇದು ತುಂಬಾ ಮೃದುವಾಗಿರುವುದರಿಂದ ಅದನ್ನು ಜಾಸ್ತಿ ದಿನ ಇಟ್ಟುಕೊಳ್ಳಲು ಬರುವುದಿಲ್ಲ. ಕಿತ್ತ ಒಂದೆರಡು ದಿನದಲ್ಲೇ ಮಾರಾಟವಾಗಬೇಕು, ಇಲ್ಲದಿದ್ದರೆ ಹಣ್ಣು ಕೊಳೆಯಲು ಶುರುವಾಗುತ್ತದೆ. ಈ ಬಾರಿ ಸ್ಥಳೀಯವಾಗಿ ಮಳೆ ಕೊರತೆಯಿಂದಾಗಿ ಗುಡ್ಡಗಳಲ್ಲಿ ನೇರಳೆ ಇಳುವರಿ ಸ್ವಲ್ಪ ಕಡಿಮೆಯಾಗಿದೆ. ಆದಕ್ಕೆ ಬೇರೆಡೆಯಿಂದ ಹಣ್ಣನ್ನು ತರಿಸಿ ಮಾರಾಟ ಮಾಡುತ್ತೇವೆ ಎನ್ನುತ್ತಾರೆ ನೇರಳೆ ಹಣ್ಣಿನ ವ್ಯಾಪಾರಿ ಮರಿಯವ್ವ.

ಆರೋಗ್ಯಕ್ಕೆ ಪೂರಕ

ನೇರಳೆ ಹಣ್ಣಿನಲ್ಲಿರುವ ಜಂಬೋಲಿನ್ ಮತ್ತು ಜಂಬೋಸಿನ್ ಅಂಶಗಳು ಸ್ಟಾರ್ಚ್ ಅನ್ನು ಸಕ್ಕರೆಯಾಗಿ ಬದಲಾಗದಂತೆ ತಡೆಯುತ್ತವೆ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನೈಸರ್ಗಿಕವಾಗಿ ಇಳಿಸಲು ಸಹಾಯ ಮಾಡುತ್ತದೆ. ಬೀಜದ ಪುಡಿಯೂ ಮಧುಮೇಹಿಗಳಿಗೆ ಅತ್ಯುತ್ತಮ ಪೂರಕ ಆಹಾರ . ಇದರಲ್ಲಿ ಅಧಿಕ ಪ್ರಮಾಣದ ವಿಟಮಿನ್ ಸಿ ಮತ್ತು ಕಬ್ಬಿಣಾಂಶವಿದೆ. ಇದು ಹಿಮೋಗ್ಲೋಬಿನ್ ಹೆಚ್ಚಿಸಲು ಮತ್ತು ರಕ್ತ ಶುದ್ಧೀಕರಿಸಲು ನೆರವಾಗುತ್ತದೆ. ಹೊಟ್ಟೆ ಉಬ್ಬರ ಮತ್ತು ಅಜೀರ್ಣ ಸಮಸ್ಯೆಯಿಂದ ಬಳಲುವವರಿಗೆ ಈ ಹಣ್ಣು ರಾಮಬಾಣ. ಕಿಡ್ನಿ ಕಲ್ಲು ಸಮಸ್ಯೆಯನ್ನು ತಡೆಯುವ ಶಕ್ತಿಯೂ ಈ ಹಣ್ಣಿಗಿದೆ ಎಂದು ಆಯುರ್ವೇದ ತಜ್ಞ ಡಾ. ಪ್ರವೀಣ ಚವಡಿಮನಿ ತಿಳಿಸಿದ್ದಾರೆ.

> ಮಕ್ಕಳ ರೋಗನಿರೋಧಕ ಶಕ್ತಿ ಹೆಚ್ಚಿಸಲು ನೇರಳೆ ಹಣ್ಣು ಬಹಳ ಒಳ್ಳೆಯದು. ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ಡಾಕ್ಟರ್ ಕೂಡ ಹೇಳುತ್ತಾರೆ. ಆರೋಗ್ಯದ ದೃಷ್ಟಿಯಿಂದ ಇದು ನಮಗೆ ಅನಿವಾರ್ಯ.
> ■ ವಿರೂಪಾಕ್ಷ ಅಳವಂಡಿ, ಗಜೇಂದ್ರಗಡ ನಿವಾಸಿ

ಸಮರ್ಪಕ ನೀರು ಪೂರೈಕೆಗೆ ಆಗ್ರಹ

◆**ಲಕ್ಷ್ಮೇಶ್ವರ:** ಪಟ್ಟಣದ ವಾರ್ಡ್ ನಂ-4 ಮತ್ತು 5 ರ ನಿವಾಸಿಗಳು ಶುಕ್ರವಾರ ಸಮರ್ಪಕ ನೀರು ಪೂರೈಕೆಗಾಗಿ ಪುರಸಭೆಗೆ ದೌಡಾಯಿಸಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿಗಳಿಗೆ ನಿತ್ಯ ತಾವು ಅನುಭವಿಸುತ್ತಿರುವ ನೀರಿನ ಸಮಸ್ಯೆಯನ್ನು ತೋಡಿಕೊಂಡರು. ನಮ್ಮ ವಾರ್ಡ್‌ಗಳಿಗೆ ತಿಂಗಳಿಗೊಮ್ಮೆ ಕುಡಿಯುವ ನೀರು ಪೂರೈಕೆಯಾಗುತ್ತದೆ. ನಿತ್ಯ ಬಳಕೆಗಾಗಿ ವಾರ್ಡ್‌ನ ಕೆಲ ಕಡೆ ಅಳವಡಿಸಿರುವ ಸಾರ್ವಜನಿಕ ನಳಗಳು ನೀರಿನ ಪೂರೈಕೆಯೂ ಕಳೆದ 2 ತಿಂಗಳಿಂದ ಸ್ಥಗಿತಗೊಂಡಿದೆ. ನಿತ್ಯವೂ ನೀರಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ನೀರು ಸರಬರಾಜು ಸಿಬ್ಬಂದಿಗೆ ಕೇಳಿದರೆ ಸಾರ್ವಜನಿಕ ನೀರು ಪೂರೈಕೆ ಬೋರ್‌ವೆಲ್ ದುರಸ್ಥಿಗೊಳಗಾಗಿದೆ. ಇನ್ನು ನದಿ ನೀರಿನ ಪೂರೈಕೆಯಲ್ಲಿ ವಿದ್ಯುತ್ ಸಮಸ್ಯೆ, ಪೈಪ್‌ಲೈನ್ ದುರಸ್ತಿ ಕಾರಣ ಹೇಳುತ್ತಾ ದಿನ ದೂಡುತ್ತಿದ್ದಾರೆ. ನೀರಿಗಾಗಿ ಎಲ್ಲೆಂದರಲ್ಲಿಗೆ ಅಲೆದಾಡುವಂತಾಗಿದೆ ಪರಿಸ್ಥಿತಿಯಿದೆ. ಇನ್ನು ವಾರ್ಡ್‌ನ ಪುರಸಭೆಯ ಸದಸ್ಯರ ಅವಧಿಯೂ ಪೂರ್ಣಗೊಂಡಿದ್ದರಿಂದ ಯಾರಿಗೆ ಹೇಳೋಣ ಎನ್ನುತ್ತಿರುವ ವಾರ್ಡಿನ ಬಹುತೇಕ ನಿವಾಸಿಗಳು ಬಡವರು, ಕೂಲಿಕಾರರು, ಬೀದಿಬದಿ ವ್ಯಾಪಾರಸ್ಥರೇ ಆಗಿದ್ದು ದುಡ್ಡುಕೊಟ್ಟು ಟ್ಯಾಂಕರ್ ನೀರು ಹಾಕಿಸಿಕೊಳ್ಳುವ ಶಕ್ತಿ ನಮಗಿಲ್ಲ ದಯವಿಟ್ಟು ನೀರು ಎಂದು ಮುಖ್ಯಾಧಿಕಾರಿ ಪರಶುರಾಮ ಗುಡದಾರಿ ಅವರನ್ನು ಒತ್ತಾಯಿಸಿದರು.

ಈ ವೇಳೆ ವಸೀಮ ಖವಾಸ್, ಮುಕ್ತಿಯಾರಮ್ಮದ ಸಿದ್ದಿ, ಹಜರೇಸಾಬ ಸೂರಣಗಿ, ಜೈಲಾನಿ ಚೌರಿ, ಇಬ್ರಾಹಿಂ ರೋಶನಖಾನವರ, ಅಬ್ದುಲ್ ಸಿದ್ದಿ, ದುದ್ದು ಹುಲಗೂರ, ಮುಜಮಿಲ್ ಬಾರಿಗಿಡದ, ಹಜರತಲಿ ಸೂರಣಗಿ, ಐ.ಡಿ ಕಡಕೋಳ, ಹುಸೇನಸಾಬ ಮುಳಗುಂದ ಸೇರಿ ಮಹಿಳೆಯರು, ಯುವಕರು ಇದ್ದರು.

> ನೀರು ಪೂರೈಕೆಯಲ್ಲಿ ಉಂಟಾಗಿರುವ ಸಮಸ್ಯೆಯನ್ನು ಕೂಡಲೇ ಬಗೆಹರಿಸಿ ನೀರು ಪೂರೈಕೆಯಲ್ಲಿ ವ್ಯತ್ಯಯವವಾಗದಂತೆ ಕ್ರಮ ಕೈಗೊಳ್ಳಲಾಗುವುದು.
> ■ ಪರಶುರಾಮ ಗುಡದಾರಿ, ಮುಖ್ಯಾಧಿಕಾರಿ



ಕನ್ನಡ, ಕನ್ನಡಿಗ, ಕರ್ನಾಟಕದ ಏಳ್ಗೆ ಗುರಿ


◆**ಗದಗ:** ಕನ್ನಡ, ಕನ್ನಡಿಗ, ಕರ್ನಾಟಕ ವಿಷಯಕ್ಕೆ ಸಂಬಂಧಿಸಿದಂತೆ ಪೂರಕ ಕಾರ್ಯಕ್ರಮಗಳನ್ನು ಹಾಗೂ ಹೋರಾಟಗಳನ್ನು ರೂಪಿಸಿಕೊಂಡು ಬಂದು ಕನ್ನಡಿಗರಲ್ಲಿ ಕನ್ನಡದ ಪ್ರಜ್ಞೆಯನ್ನು ಸದಾ ಜೀವಂತವಾಗಿರುವ ಕಾರ್ಯವನ್ನು ಪರಿಷತ್ತು ಶತಮಾನದಿಂದ ಮಾಡುತ್ತಾ ಬಂದಿದೆ. ಕನ್ನಡಿಗರು ಅಭಿಮಾನ ಶೂನ್ಯರಾಗದೇ ಭಾಷೆಯ ಅಭಿವೃದ್ಧಿಗೆ ಕೈಜೋಡಿಸಬೇಕು. ಈ ದಿಸೆಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳ್ಗೆಯೇ ಕಾರ್ಯ ಮಾಡುತ್ತಿರುವ ಪರಿಷತ್ತಿನ ನಡೆ ಮಾದರಿಯಾದುದು ಎಂದು ನ್ಯಾಯವಾದಿ, ಸಾಹಿತಿ ಬಸವರಾಜ ಬಾಳೇಶ್ವರಮಠ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಿ.ಜಿ.ಮೇಲ್ಮಾಳಗಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಹಿತ್ಯ, ಸಂಸ್ಕೃತಿ ಸಂವರ್ಧನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ ಕುರಿತು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಡಿಜಿಎಂ ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಸಂತೋಷ ಬೆಳವಡಿ ಮಾತನಾಡಿ, ಕನ್ನಡಿಗರು ಸ್ವಾಭಿಮಾನವನ್ನು ಹೊಂದಿ ಕನ್ನಡದ ಬೆಳವಣಿಗೆಗೆ ಶ್ರಮಿಸಬೇಕು. ಉನ್ನತ ಶಿಕ್ಷಣದ ಪಠ್ಯಗಳು ಕನ್ನಡದಲ್ಲಿ ದೊರೆಯುವಂತೆ ಮಾಡುವ ಮೂಲಕ ಬೇರೆ ಭಾಷೆಗಳ ಅನಿವಾರ್ಯತೆ ಕಡಿಮೆಗೊಳಿಸಬಹುದು ಎಂದರು.

ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಮ್ಮೇಳನ, ಪುಸ್ತಕ ಪ್ರಕಟಣೆ, ಕಾರ್ಯಾಗಾರಗಳ ಮೂಲಕ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿದೆ. ಕನ್ನಡ ನಾಡುನುಡಿ, ನೆಲ ಜಲದ ಪ್ರಶ್ನೆ ಬಂದಾಗ ಪರಿಷತ್ತು ಮುಂಚೂಣಿಯಲ್ಲಿ ನಿಂತು ಕನ್ನಡಿಗರಿಗೆ ನ್ಯಾಯ ಒದಗಿಸುವ ಕಾರ್ಯ ಮಾಡುತ್ತಿದೆ. ಕನ್ನಡಿಗರೆಲ್ಲ ಪರಿಷತ್ತಿನ ಸದಸ್ಯರಾಗುವ ಮೂಲಕ ಶಕ್ತಿಯನ್ನು ಇಮ್ಮಡಿಗೊಳಿಸುವ ಕಾರ್ಯ ಮಾಡಬೇಕಿದೆ. ಕನ್ನಡ ಶಾಲೆಗಳ ಸಬಲೀಕರಣ ಪ್ರಥಮ ಆದ್ಯತೆಯಾಗಬೇಕು ಎಂದರು.

ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್.ಪಟ್ಟಣಶೆಟ್ಟರ ಹಾಗೂ ಶಿಕ್ಷಣ ತಜ್ಞ ಡಾ.ಬಸವರಾಜ ಧಾರವಾಡ ಮಾತನಾಡಿದರು. ಶಿಕ್ಷಣದ ಉನ್ನತಿಗೆ ಶ್ರಮಿಸಿದ ಎಸ್.ಎಸ್.ಪಟ್ಟಣಶೆಟ್ಟರ ಹಾಗೂ ಡಾ. ಬಸವರಾಜ ಧಾರವಾಡ ಅವರನ್ನು ಸನ್ಮಾನಿಸಲಾಯಿತು. ಸಿ.ಕೆ.ಎಚ್. ಶಾಸ್ತ್ರಿ, ಅನ್ನದಾನಿ ಹಿರೇಮಠ, ಡಿ.ಎಸ್.ಬಾಪುರಿ, ಅಮರೇಶ ರಾಂಪೂರ, ಸಿ.ಎಂ. ಮಾರನಬಸರಿ, ಪ್ರ.ತೋ.ನಾರಾಯಣಪೂರ, ಬಸವರಾಜ ವಾರಿ, ಸತೀಶ ಚನ್ನಪ್ಪಗೌಡ್ರ, ಬೂದಪ್ಪ ಅಂಗಡಿ ಇತರರಿದ್ದರು.



ಅಕ್ರಮ ಗಣಿಗಾರಿಕೆ ಆರೋಪ: ಪ್ರತಿಭಟನೆ



◆**ಲಕ್ಷ್ಮೇಶ್ವರ:** ತಾಲೂಕಿನ ಆದರಹಳ್ಳಿ ಗ್ರಾಮದಲ್ಲಿ ಹಲವು ವರ್ಷಗಳಿಂದ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂದು ಆರೋಪಿಸಿ ತಾಂಡಾದ ನಾಯಕ, ಕಾರಭಾರಿ ಮತ್ತು ಸ್ಥಳೀಯ ಸಾರ್ವಜನಿಕ ಒಗ್ಗೂಡಿ ಪ್ರತಿಭಟನೆ ನಡೆಸಿದ ಘಟನೆ ಶನಿವಾರ ಆದರಹಳ್ಳಿಯಲ್ಲಿ ನಡೆದಿದೆ.

ಅಕ್ರಮ ಗಣಿಗಾರಿಕೆಯಿಂದಾಗಿ ಸುತ್ತಮುತ್ತಲಿನ ಗುಡ್ಡಗಾಡು ಪ್ರದೇಶ ಮತ್ತು ಹಸಿರು ನಾಶವಾಗುತ್ತಿದೆ. ಗಣಿಗಾರಿಕೆಯಲ್ಲಿ ಬಳಸುವ ಸ್ಫೋಟಕಗಳಿಂದಾಗಿ ತಾಂಡಾದ ಮನೆಗಳ ಗೋಡೆಗಳು ಬಿರುಕು ಬೀಳುತ್ತಿವೆ. ಗ್ರಾಮದಲ್ಲಿ ನಿರಂತರವಾಗಿ ಓಡಾಡುವ ಟಿಪ್ಪರ್‌ಗಳಿಂದಾಗಿ ಧೂಳು ಜನರ ಆರೋಗ್ಯದ ಮೇಲೆ (ವಿಶೇಷವಾಗಿ ಉಸಿರಾಟದ ತೊಂದರೆ) ಕೆಟ್ಟ ಪರಿಣಾಮ ಬೀರುತ್ತಿದೆ ಗಣಿಗಾರಿಕೆಯಿಂದಾಗಿ ಭೂಮಿಯ ಆಳದ ಪದರಗಳಿಗೆ ಹಾನಿಯಾಗಿ ಕುಡಿಯುವ ನೀರಿನ ಮೂಲಗಳು ಬತ್ತಿ ಹೋಗುತ್ತಿವೆ ಎಂದು ಆರೋಪಿಸಿದ ಗ್ರಾಮಸ್ಥರು, ತಕ್ಷಣ ಅಕ್ರಮ ಗಣಿಗಾರಿಕೆ ಬಂದ್ ಮಾಡಿಸಿ ಸರ್ಕಾರ ಮತ್ತು ಗಣಿ ಇಲಾಖೆ ಕೂಡಲೇ ಮಧ್ಯಪ್ರವೇಶಿಸಿ ಈ ಅಕ್ರಮ ಚಟುವಟಿಕೆಯನ್ನು ನಿಲ್ಲಿಸಬೇಕು. ಗಣಿಗಾರಿಕೆಗೆ ಅನುಮತಿ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಜಿಲ್ಲಾಧಿಕಾರಿಗಳು ಖುದ್ದಾಗಿ ಪರಿಶೀಲಿಸಬೇಕು. ಸ್ಫೋಟಕಗಳಿಂದ ಮನೆಗಳಿಗೆ ಹಾನಿಯಾಗಿದ್ದರೆ ಅಂತಹ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಉಮೇಶ ನಾಯಕ, ನರಸಪ್ಪ ಲಮಾಣಿ (ಡಾವ್), ಕೃಷ್ಣನಾಯಕ್, ರಮೇಶ ಲಂಬಾಣಿ, ಆನಂದ ಲಮಾಣಿ, ಶೇಖಪ್ಪ ಲಮಾಣಿ, ಮಾಂತೇಶ್ ಲಮಾಣಿ, ರವಿ ಲಮಾಣಿ, ದುಂಡಪ್ಪ ಲಮಾಣಿ, ಅಪ್ಪಣ್ಣ ಲಮಾಣಿ, ಕಿರಣ ಲಮಾಣಿ, ಬದ್ದೇಪ್ಪ ಲಮಾಣಿ, ದೇವಪ್ಪ ಲಮಣಿ, ಪ್ರಕಾಶ್ ಲಮಣಿ, ಸಕ್ರಪ ಲಮಾಣಿ, ಭೀಮಸಿ ಲಮಾಣಿ ಸೇರಿದಂತೆ ಇತರರಿದ್ದರು.


ಇಷ್ಟಲಿಂಗ ಪೂಜೆಗೆ ಶ್ರೇಷ್ಠ ಸ್ಥಾನ

◆**ಲಕ್ಷ್ಮೇಶ್ವರ:** ವೀರಶೈವ ಧರ್ಮ ಪರಂಪರೆಯಲ್ಲಿ ಇಷ್ಟಲಿಂಗ ಪೂಜೆಗೆ ಅತ್ಯಂತ ಶ್ರೇಷ್ಠವಾದ ಸ್ಥಾನವಿದೆ. ಇಷ್ಟಲಿಂಗ ಪೂಜೆಯಿಂದ ಕಷ್ಟ-ನಷ್ಟ-ಅನಿಷ್ಟಗಳು ದೂರವಾಗಿ ಮನುಷ್ಯನ ಆತ್ಮಬಲ, ಮನೋಬಲ ಹೆಚ್ಚಿ ಶಾಂತಿ, ನೆಮ್ಮದಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಅವರು ಪಟ್ಟಣದ ಲಕ್ಷಾಪತಿ ಹಾಲೇವಾಡಿಮಠದಲ್ಲಿನ ಜಗದ್ಗುರು ರೇಣುಕಾಚಾರ್ಯ ಮಂದಿರದ ರಜತ ಮಹೋತ್ಸವ, ರೇಣುಕಾಚಾರ್ಯರ ಯುಗಮಾನೋತ್ಸವ, ಮಠದ ವಂಶಜರ ಸ್ಮರಣೆ, ಗದ್ದುಗೆಗಳ ಅನಾವರಣ ಹಿನ್ನೆಲೆ ಶ್ರೀಮಠದ ಆವರಣದಲ್ಲಿ ಇಷ್ಟಲಿಂಗ ಮಹಾಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ಮನುಷ್ಯ ಜೀವನದಲ್ಲಿ ಪೂಜೆ, ಧ್ಯಾನ, ಪ್ರಾರ್ಥನೆ ಎಲ್ಲರಿಗೂ ಅವಶ್ಯವಿದ್ದು ವೀರಶೈವ ಲಿಂಗಾಯತರಿಗೆ ಮುಖ್ಯವಾದ ಇಷ್ಟಲಿಂಗ ಪೂಜೆಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ಧರ್ಮ ಪರಂಪರೆಯನ್ನು ಕಾಯ್ದುಕೊಳ್ಳಬೇಕು. ಧರ್ಮ ಪಾಲನೆ, ಆಚರಣೆ, ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಕೊಂಡು ಮಾನವೀಯ ನೆಲೆಗಟ್ಟಿನ ಮೇಲೆ ಬದುಕು ಸಾಗಿಸಿದಾಗ ನೆಮ್ಮದಿ ಲಭಿಸುತ್ತದೆ. ಈ ನಿಟ್ಟಿನಲ್ಲಿ ವೀರಶೈವ ಧರ್ಮದವರು ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು. ವೀರಶೈವ ಧರ್ಮದ ಪವಿತ್ರ ಗ್ರಂಥವಾದ ಸಿದ್ಧಾಂತ ಶಿಖಾಮಣಿಯನ್ನು ಪ್ರತಿಯೊಬ್ಬರೂ ಅರಿತು ಇಷ್ಟಲಿಂಗ ಪೂಜೆ ಹಾಗೂ ಆಚಾರಗಳನ್ನು ರೂಢಿಸಿಕೊಂಡು ನಮ್ಮ ಧರ್ಮ ಪರಂಪರೆಗಳನ್ನು ಕಾಪಾಡಿಕೊಂಡು ಎಲ್ಲರೂ ಅಖಂಡತೆಯಿಂದ ಕೂಡಿ ಬಾಳಬೇಕೆಂದರು. ಧರ್ಮ ಜಾಗೃತಿ, ಸಮಾಜದ ಕಲ್ಯಾಣಕ್ಕಾಗಿ ಹೆಸರಾದ ಹಾಲೇವಾಡಿಮಠದ ಪರಂಪರೆ ಶ್ರೇಷ್ಠವಾಗಿದ್ದು ಶ್ರೀಮಠದ ಸೇವಾ ಕಾರ್ಯ ಶ್ಲಾಘನೀಯ. ಈ ಧರ್ಮಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಶಿವಲಿಂಗಯ್ಯ ಹಾಲೇವಾಡಿಮಠ ಅವರಿಗೆ ರಂಭಾಪುರಿ ಪೀಠದಿಂದ ಗೌರವ ಪುರಸ್ಕಾರ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಗಂಜಿಗಟ್ಟಿ ಶ್ರೀಗಳು, ಬನ್ನಿಕೊಪ್ಪ ಶ್ರೀಗಳು, ಸಿದ್ದರಬೆಟ್ಟ ಶ್ರೀಗಳು, ಮಳೇಮಲ್ಲಿಕಾರ್ಜುನ ಶ್ರೀಗಳು ಮತ್ತು ಲಕ್ಷಾಪತಿ ಹಾಲೇವಾಡಿಮಠದ ವಂಶಜರು, ಕಾರ್ಯಕ್ರಮದ ಸಂಘಟಕರು, ಭಕ್ತರು ಉಪಸ್ಥಿತರಿದ್ದರು.



ನಿಸ್ವಾರ್ಥ ಸೇವೆ ಸಲ್ಲಿಸುವ ಸಂಸ್ಥೆ ಅವಶ್ಯ



◆**ಶಿರಹಟ್ಟಿ :** ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕವಾಗಿ ನಿಸ್ವಾರ್ಥ ಸೇವೆ ಸಲ್ಲಿಸುವ ಸಂಸ್ಥೆಗಳು ಸಮಾಜಕ್ಕೆ ಅವಶ್ಯವಿದೆ ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಎ ಬಳಿಗಾರ ಹೇಳಿದರು.

ಪಟ್ಟಣದಲ್ಲಿ ನೀಲುಬಾಯಿ ವಿವಿದ್ದೋದ್ದೇಶಗಳ ಸೇವಾ ಸಂಸ್ಥೆಯಿಂದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಸನ್ಮಾನಿಸಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಎಂ.ಕೆ ಲಮಾಣಿ ಮಾತನಾಡಿ. ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸುವುದು ಮತ್ತು ಕಲೆ, ಸಾಹಿತ್ಯ ಕ್ಷೇತ್ರ ಸೇರಿ ವಿವಿಧ ರಂಗಗಳಲ್ಲಿ ಸಾಧನೆಗೈದ ಗಣ್ಯಮಾನ್ಯರಿಗೆ ಗೌರವಿಸುವ ಕಾರ್ಯ ಆದಷ್ಟು ಬೇಗ ಮಾಡುತ್ತೇನೆ ಎಂದರು.

ಪ್ರಾ.ಶಾ.ಶಿ. ಸಂಘದ ನೂತನ ಅಧ್ಯಕ್ಷ ಶರಣಬಸವ ಪಾಟೀಲ, ಕೋಶಾಧ್ಯಕ್ಷ ಮೋಹನ ಮಾಂಡ್ರೆ, ಎಂ.ಎ. ಮಕಂದರ, ಗಂಗಾಧರ ಡಾಂಬರ, ಶ್ರೀಕೃಷ್ಣ, ಶಂಕರ ರಾಥೋಡ, ಎಂ.ಎ ಬುಕೀಟ್ಗಾರ, ತಿರಕಪ್ಪ ಪೂಜಾರ, ಬಿ.ಎಸ್ ಮುಗಳಿ, ವೈ.ಎ ಶಿರಹಟ್ಟಿ, ಪರಪ್ಪ ಕರಿಗಾರ, ಎಸ್.ಟಿ. ಕಬ್ಬಿಣ ಇದ್ದರು.

ಮಕ್ಕಳ ಉಜ್ವಲ ಭವಿಷ್ಯ ರೂಪಿಸಲು ಕಂಕಣಬದ್ಧರಾಗಿ

◆**ಮುಂಡರಗಿ:** ಒಬ್ಬ ಸೃಜನಶೀಲ ಶಿಕ್ಷಕ ಮಕ್ಕಳ ಪ್ರತಿಭೆಯನ್ನು ಅರಿಯುತ್ತಾನೆ. ಕೇವಲ ಸಂಬಳಕ್ಕಾಗಿ ದುಡಿಯದೆ ಮಕ್ಕಳ ಉಜ್ವಲ ಭವಿಷ್ಯ ರೂಪಿಸಿ ಕಂಕಣಬದ್ಧವಾಗಿ ನಿಂತಾಗ ಮಾತ್ರ ಕನ್ನಡ ಶಾಲೆಗಳು ಉಳಿಯುತ್ತವೆ ಮತ್ತು ಎಲ್ಲರೂ ಸರ್ಕಾರಿ ಶಾಲೆಗಳ ಕಡೆ ಮುಖ ಮಾಡುತ್ತಾರೆ. ಮಕ್ಕಳಲ್ಲಿ ವಿವಿಧ ರೀತಿಯಲ್ಲಿ ಸೃಜನಶೀಲ ವ್ಯಕ್ತಿತ್ವ ಪ್ರತಿಭೆಯನ್ನು ರೂಪಿಸುವ ಇಂತಹ ಶಿಬಿರಗಳು ಬಹಳ ಮಹತ್ವವಾಗಿವೆ. ಇಂತಹ ಶಿಬಿರಗಳ ಮೂಲಕ ಮಕ್ಕಳು ಸಂಪೂರ್ಣ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಎಚ್.ಎಸ್.ಪಾಟೀಲ ಪ್ರತಿಷ್ಠಾನದ ಅಧ್ಯಕ್ಷ ಆನಂದಗೌಡ ಪಾಟೀಲ ಹೇಳಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತು ಮುಂಡರಗಿ ಹಾಗೂ ಎಚ್.ಎಸ್. ಪಾಟೀಲ ಪ್ರತಿಷ್ಠಾನ ಮುಂಡರಗಿ ಇವುಗಳ ಆಶ್ರಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮೇನಹಳ್ಳಿಯಲ್ಲಿ ನಡೆದ ಮಕ್ಕಳ ಕವಿತೆಗಳ ವಾಚನ-ಗೀತಗಾಯನ ಮಕ್ಕಳ ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಬಿಇಒ ಗಂಗಾಧರ ಅಣ್ಣಿಗೇರಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮಕ್ಕಳಿಗೆ ಬಹಳ ಉಪಯುಕ್ತವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕವಿತೆಗಳ ವಾಚನ, ಗೀತಗಾಯನ ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ ಎಂದರು.



ಕಸಾಪ ಅಧ್ಯಕ್ಷ ಎಂ.ಜಿ. ಗಚ್ಚಣ್ಣವರ ಮಾತನಾಡಿ, ಪ್ರತಿವರ್ಷ ಮಕ್ಕಳ ವ್ಯಕ್ತಿತ್ವ ಸೃಜನಶೀಲತೆ ಮೂಡಿಸುವಲ್ಲಿ ಕಸಾಪ ತನ್ನ ಕಾರ್ಯ ಮಾಡುತ್ತಿದೆ. ಕನ್ನಡ ಸಾಹಿತ್ಯ ಭವನಕ್ಕೆ ಆನಂದಗೌಡ ಪಾಟೀಲ ಅವರು 1 ಲಕ್ಷ ರೂ. ದೇಣಿಗೆ ನೀಡಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮುಖಂಡ ಆನಂದಗೌಡ ಪಾಟೀಲರನ್ನು ಸನ್ಮಾನಿಸಲಾಯಿತು. ಬಸವರಾಜ ತಿಗರಿ ಮಾತನಾಡಿದರು. ಶಿಬಿರದ ನಿರ್ದೇಶಕ ಡಾ.ನಿಂಗು ಸೊಲಗಿ, ಎಸ್‌ಡಿಎಂಸಿ ಅಧ್ಯಕ್ಷ ಉಮೇಶ ದಂಡಿನ, ಸಹದೇವಪ್ಪ ಡಂಬಳ, ಬಸವರಾಜ ತಿಗರಿ, ಚಿತ್ರಕಲಾ ಸಂಘದ ರಾಜ್ಯ ಉಪಾಧ್ಯಕ್ಷ ದ್ವಾರಕೇಶ್ ರೆಡ್ಡಿ, ಸಾಹಿತಿ ಗುರುಬಸವರಾಜ ಆರ್.ಬಿ., ಜಯಶ್ರೀ ಅಳವಂಡಿ, ಶಿವು ವಾಲಿಕಾರ, ಶಂಕರ ಕೂಕನೂರ, ಎನ್.ಎನ್. ಕಲಕೇರಿ, ಬಿ.ಎಚ್. ಹಲವಾಗಲಿ, ಪಿ.ಆರ್. ಗಾಡದ, ಪಿ.ಎಂ. ಲಾಂಡೆ, ಎಂ.ಐ. ಮುಲ್ಲಾ, ರಮೇಶ ದಂಡಿನ, ವಿಠಲ ಜಂಬಗಿ, ಮಹೇಶ ಬಾಗಳಿ, ಶರಣಪ್ಪ ದಂಡಿನ, ಮಕ್ಕಳು ಮುಂತಾದವರಿದ್ದರು. ಕಸಾಪ ಗೌರವ ಕಾರ್ಯದರ್ಶಿ ಮಂಜುನಾಥ ಮುಧೋಳ ಸ್ವಾಗತಿಸಿ, ಪ್ರಾಸ್ತಾವಿಸಿದರು. ರಮೇಶಗೌಡ ಪಾಟೀಲ ನಿರೂಪಿಸಿದರು. ಎನ್.ಎನ್. ಕಲಕೇರಿ ವಂದಿಸಿದರು.

ಯುಗಮಾನೋತ್ಸವ: ಮಠದ ವಂಶಜರ ಸ್ಮರಣೆ

◆**ಲಕ್ಷ್ಮೇಶ್ವರ:** ಪಟ್ಟಣದ ಲಕ್ಷಾಪತಿ ಹಾಲೇವಾಡಿಮಠದಲ್ಲಿನ ಜಗದ್ಗುರು ರೇಣುಕಾಚಾರ್ಯ ಮಂದಿರದ ರಜತ ಮಹೋತ್ಸವ, ರೇಣುಕಾಚಾರ್ಯರ ಯುಗಮಾನೋತ್ಸವ, ಮಠದ ವಂಶಜರ ಸ್ಮರಣೆ, ಗದ್ದುಗೆಗಳ ಅನಾವರಣ ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮುಂಜಾನೆಯಿಂದ ಸಂಪ್ರದಾಯದಂತೆ ಜರುಗಿತು. ಗುರುವಾರ ಮುಂಜಾನೆ ಶ್ರೀಮಠದ ಆವರಣದಲ್ಲಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು. ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ಡಾ.ವೀರಸೋಮೇಶ್ವರ ಭಗವತ್ಪಾದಂಗಳ ಇಷ್ಟಲಿಂಗ ಮಹಾಪೂಜೆಯನ್ನು ಕಣ್ತುಂಬಿಕೊಳ್ಳಲು ಭಕ್ತ ಸಮೂಹ ಶ್ರೀಮಠದ ಆವರಣದಲ್ಲಿ ತುಂಬಿಕೊಂಡಿದ್ದರು. ಇಷ್ಟಲಿಂಗ ಮಹಾಪೂಜೆಯ ನೇರವೇರಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ಇಂದು ಧರ್ಮ ಹಾಗೂ ಧರ್ಮಾಚರಣೆಗೆ ಆಗತ್ಯವಿದ್ದು, ವೀರಶೈವ ಧರ್ಮದ ಆಚರಣೆಗಳು ವೈಜ್ಞಾನಿಕವಾಗಿಯೂ ಪ್ರಸ್ತುತವಾಗಿದೆ. ಲಿಂಗಪೂಜೆ, ಮಹಾಮಂತ್ರ ಪಠಣದಿಂದ, ಜೀವನದಲ್ಲಿ ಆರೋಗ್ಯ, ಉತ್ಸಾಹ, ಸ್ಫೂರ್ತಿ ಹಾಗೂ ಸಾಮಾಜಿಕ ಕಾರ್ಯದಲ್ಲಿ ಆಸಕ್ತಿಯನ್ನು ಹೊಂದಬಹುದಾಗಿದೆ. ವಿಭೂತಿ ಧಾರಣೆಯಿಂದ ಸಂಪತ್ತು ಪ್ರಾಪ್ತಿಯೊಂದಿಗೆ ಪಾಪ ತಾಪಗಳು ದೂರವಾಗುತ್ತದೆ. ನಿತ್ಯ ಇಷ್ಟಲಿಂಗ ಪೂಜೆ ಮಾಡುವುದರಿಂದ ಮನುಷ್ಯನಿಂದ ಅನಿಷ್ಟಗಳು ದೂರವಾಗುತ್ತವೆ, ಜೀವನದಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ. ವೀರಶೈವ ಲಿಂಗಾಯತರು ಲಿಂಗಭೇದ ಇಲ್ಲದೆ ನಿತ್ಯ ಇಷ್ಟಲಿಂಗ ಪೂಜೆ ಮಾಡಬೇಕು ಎಂದರು. ಮುಕ್ತಿಮಂದಿರ ಶ್ರೀಗಳು, ಗಂಜಿಗಟ್ಟಿ ಶ್ರೀಗಳು ಬನ್ನಿಕೊಪ್ಪ ಶ್ರೀಗಳು, ಸಿದ್ದರಬೆಟ್ಟ ಶ್ರೀಗಳು, ಮಳೆಮಲ್ಲಿಕಾರ್ಜುನ ಶ್ರೀಗಳು ಮತ್ತು ಲಕ್ಷಾಪತಿ ಹಾಲೇವಾಡಿಮಠದ ವಂಶಜರು, ಕಾರ್ಯಕ್ರಮದ ಸಂಘಟಕರು ಉಪಸ್ಥಿತರಿದ್ದರು.



ಬೇಸಿಗೆ ಹಿನ್ನೆಲೆ ನೀರಿನ ಕೊರತೆ | ಬಳ್ಳಾರಿಯಲ್ಲಿ 36 ಜೀನ್ಸ್ ಘಟಕ ಸ್ಥಗಿತ

ಜೀನ್ಸ್ ಉದ್ಯಮಕ್ಕೆ ಭಾರೀ ಹೊಡೆತ

▸ **ವೆಂಕಟೇಶ ದೇಸಾಯಿ**



ಬಳ್ಳಾರಿ: ಬೇಸಿಗೆ ರಣಬಿಸಿಲಿಗೆ ಗಣಿ ಜಿಲ್ಲೆಯ ಜನರು ತತ್ತರಿಸಿದ್ದು, ನೀರಿನ ಅಭಾವವು ತಲೆದೋರಿದೆ. ಇದರ ಎಫೆಕ್ಟ್ ಜೀನ್ಸ್ ಉದ್ಯಮಕ್ಕೂ ತಗುಲಿದ್ದು, ಸುಮಾರು 36ಕ್ಕೂ ಹೆಚ್ಚು ಜೀನ್ಸ್ ಘಟಕಗಳು ಸ್ಥಗಿತಗೊಂಡಿವೆ.

ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲೂ ನೀರಿನ ಅಭಾವ ಸೃಷ್ಟಿಯಾಗಿದೆ. ಬಳ್ಳಾರಿ ಗಣಿಗಾರಿಕೆಗೆ ಮಾತ್ರ ಹೆಸರಾಗಿಲ್ಲ, ಜೀನ್ಸ್ ಉದ್ಯಮಕ್ಕೂ ದೇಶ ವಿದೇಶಗಳು ಹೆಸರು ಪಡೆದಿದೆ. ನೀರಿನ ಸಮಸ್ಯೆ ಬಿಗಡಾಯಿಸಿದ ಹಿನ್ನೆಲೆ ಜೀನ್ಸ್ ವಾಷಿಂಗ್ ಮತ್ತು ಪ್ರೊಸೆಸಿಂಗ್ ಕೈಗಾರಿಕೆ ಸಂಕಷ್ಟಕ್ಕೆ ಸಿಲುಕಿದ್ದು, ಬಳ್ಳಾರಿಯ ಹಲವು ಘಟಕಗಳು ತಾತ್ಕಾಲಿಕವಾಗಿ ಉತ್ಪಾದನೆಯನ್ನು ಸ್ಥಗಿತಗೊಳಿಸಿವೆ.

ದಿಗಂತ ವಿಶೇಷ

55ಕ್ಕೂಹೆಚ್ಚುಜೀನ್ಸ್‌ಘಟಕ: ಬಳ್ಳಾರಿ ನಗರದಲ್ಲಿ ಸುಮಾರು 55ಕ್ಕೂ ಹೆಚ್ಚು ಜೀನ್ಸ್ ವಾಷಿಂಗ್ ಘಟಕಗಳಿದ್ದು, ನೀರಿನ ಕೊರತೆಯಿಂದ ಕಳೆದ ಎರಡು ವಾರಗಳಿಂದ ತೀವ್ರ ತೊಂದರೆ ಅನುಭವಿಸುತ್ತಿವೆ. ಪರ್ಯಾಯ ವ್ಯವಸ್ಥೆ ಮಾಡಿಕೊಂಡ ಹಿನ್ನೆಲೆ ಕೆಲವೇ ಘಟಕಗಳು ಸೀಮಿತ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ ಘಟಕಗಳ ಮಾಲೀಕರು ನೀರಿನ ಟ್ಯಾಂಕರ್ ಲಭ್ಯತೆ ಆಧರಿಸಿ ಕಾರ್ಯಾಚರಣೆಗೆ ಮುಂದಾಗಿವೆ. ಆದರೂ, ನಡೆಸುವುದು ಕಷ್ಟ ಎಂದು ಮಾಲೀಕರು ಅಳಲು ತೋಡಿಕೊಂಡಿದ್ದಾರೆ.

ಜೀನ್ಸ್ ತೊಳೆಯುವಿಕೆ, ಡೈಯಿಂಗ್ ಹಾಗೂ ಫಿನಿಶಿಂಗ್ ಪ್ರಕ್ರಿಯೆಗಳಿಗೆ ಹೆಚ್ಚಿನ ಪ್ರಮಾಣದ ನೀರು ಅತ್ಯಗತ್ಯವಾಗಿದೆ. ಈ ಸಂಕಷ್ಟ ಸ್ಥಳೀಯ ಉಡುಪು ಕೈಗಾರಿಕೆ ಮತ್ತು ಉದ್ಯೋಗ ಕ್ಷೇತ್ರದ ಮೇಲೂ ದೊಡ್ಡ ಪರಿಣಾಮ ಬೀರಿದೆ. ನಿತ್ಯ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿತ್ತು. ಸದ್ಯ ನೀರಿನ ಸಮಸ್ಯೆ ಹಿನ್ನೆಲೆ ಉತ್ಪಾದನೆ ಪ್ರಮಾಣ ಗಣನೀಯವಾಗಿ ಕುಸಿದಿದೆ. ದೇಶ, ವಿದೇಶಗಳಲ್ಲಿ ಮುಂಚಿತವಾಗಿಯೇ ಬುಕ್ ಮಾಡಿಕೊಂಡ ವ್ಯಾಪಾರಸ್ಥರಿಗೆ ನಿಗದಿತ ಅವಧಿಯಲ್ಲಿ ಸರಬರಾಜು ಮಾಡಲು ಮಾಲೀಕರು ಇನ್ನಿಲ್ಲದ ಕಸರತ್ತು ನಡೆಸಿದ್ದಾರೆ. ಇದರಿಂದ ಆರ್ಥಿಕ ನಷ್ಟವೂ ಹೆಚ್ಚು, ಘಟಕ ನಿರ್ವಹಿಸುವುದು ಸಂಕಷ್ಟ ಎನ್ನುವುದು ಮಾಲೀಕರು ಅಳಲು.

ಮಾಲೀಕರ ಸಂಕಷ್ಟ ಕೇಳುವವರ್‍ಯಾರು?: ಬಳ್ಳಾರಿಯ ಜೀನ್ಸ್ ಘಟಕ ಮಾಲೀಕರಾದ ಪೊಲಕ್ಸ್ ಮಲ್ಲಿಕಾರ್ಜುನ್ ಅವರು ಈ ಕುರಿತು ಮಾತನಾಡಿ, ನೀರಿನ ಸಮಸ್ಯೆಯಿಂದ ಘಟಕಗಳನ್ನು ನಿರ್ವಹಿಸುವುದು ಕಷ್ಟವಾಗಿದೆ. ಒಂದು ದಿನ ನಡೆಸುವುದೂ ಸರ್ಕಸ್ ಮಾಡಿದಂತಾಗಿದೆ. ಪ್ರತಿ ವರ್ಷ ಜಿಲ್ಲಾಡಳಿತಕ್ಕೆ ಶಾಶ್ವತ ಪರ್ಯಾಯಕ್ಕಾಗಿ ಮನವಿ ಮಾಡಿದರೂ ಕ್ರಮವಿಲ್ಲದಂತಾಗಿದೆ.

ಪರ್ಯಾಯ ವ್ಯವಸ್ಥೆ ಇಲ್ಲದ ಹಿನ್ನೆಲೆ ಅನಿವಾರ್ಯವಾಗಿ ಖಾಸಗಿ ಟ್ಯಾಂಕರ್‌ಗಳನ್ನೇ ಅವಲಂಬಿಸಬೇಕಾಗಿದೆ. ಕೈಗಾರಿಕೆಯಲ್ಲಿ ಕಾರ್ಮಿಕರ ಸಮಸ್ಯೆ ಹೆಚ್ಚಾಗಿದೆ. ಕೆಲಸ ಮಾಡುವ ಕಾರ್ಮಿಕರುಕೂಡಕೆಲಸದಅವಧಿಕಡಿಮೆಯಾಗಿದೆ. ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ಕೈಗಾರಿಕಾ ಪ್ರದೇಶಗಳಿಗೆ ಸಮರ್ಪಕ ನೀರು ಸರಬರಾಜು ಮಾಡಬೇಕು ಎಂದು ಜೀನ್ಸ್ ತಯಾರಿಕಾ ಘಟಕಗಳ ಮಾಲೀಕರು ಮನವಿ ಮಾಡಿದ್ದಾರೆ.

ಬಳ್ಳಾರಿಯ ಈ ಕೈಗಾರಿಕೆ ಮೇಲಿನ ಎಫೆಕ್ಟ್ ನೇರ ಹಾಗೂ ಪರೋಕ್ಷವಾಗಿ ನೂರಾರು ಕಾರ್ಮಿಕರ ಜೀವನೋಪಾಯಕ್ಕೆ ತಗುಲಿದ್ದು, ನೀರಿನ ಸಮಸ್ಯೆ ಮುಂದುವರಿದರೆ ಸ್ಥಳೀಯ ಆರ್ಥಿಕತೆ ಮತ್ತು ಸಣ್ಣ ವ್ಯಾಪಾರಗಳ ಮೇಲೂ ದುಷ್ಪರಿಣಾಮ ಬೀರಲಿದೆ. ನಿರ್ಲಕ್ಷ್ಯ ವಹಿಸಿದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ. ಇದಕ್ಕೂ ಮುನ್ನವೇ ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಆದ್ಯತೆ ಮೇರೆಗೆ ಎದುರಾದ ಬಿಕ್ಕಟ್ಟನ್ನು ಪರಿಹರಿಸಬೇಕು ಎಂದು ಮನವಿ ಮಾಡಿದ್ದಾರೆ.

> **ಸಮರ್ಪಕ ನೀರಿನ ಸಮಸ್ಯೆ ಎದುರಾದ ಹಿನ್ನೆಲೆ ಜೀನ್ಸ್ ಘಟಕಗಳು ನಲುಗಿವೆ. ಉತ್ಪಾದನೆಯು ಆಮೆಗತಿಯಲ್ಲಿ ನಡೆದಿದ್ದು, ಪೂರ್ವ ನಿಗದಿಯಂತೆ ರಾಜ್ಯ, ದೇಶ, ವಿದೇಶಗಳಲ್ಲಿ ಮಾಡಿಕೊಂಡ ಒಪ್ಪದದಂತೆ ಜೀನ್ಸ್ ಉತ್ಪನ್ನಗಳನ್ನು ಸರಬರಾಜು ಮಾಡಲು ಆಗುತ್ತಿಲ್ಲ. ಇದು ಆರ್ಥಿಕವಾಗಿ ಮಾಲೀಕರಿಗೆ ದೊಡ್ಡ ಹೊಡೆತ ಬಿದ್ದಿದೆ. ಇದಕ್ಕೆ ಜಿಲ್ಲಾಡಳಿತ ಪರ್ಯವಾಗಿ ಏನಾದ್ರೂ ವ್ಯವಸ್ಥೆ ಮಾಡಬೇಕು. ಶಾಶ್ವತ ಪರಿಹಾರಕ್ಕೂ ಮುಂದಾಗಬೇಕು.**
>
> ■ **ಮಲ್ಲಿಕಾರ್ಜುನ, ಪೋಲಾಕ್ ಘಟಕದ ಮಾಲೀಕರು ಬಳ್ಳಾರಿ**

ಪಿಎಸ್‌ಐ ದೊಡ್ಡಮನಿ ಲೋಕಾ ಬಲೆಗೆ

ಯಾದಗಿರಿ: ಪ್ರಕರಣವೊಂದನ್ನು ಇತ್ಯರ್ಥಪಡಿಸಲು ಲಂಚ ಪಡೆಯುವ ವೇಳೆ ಜಿಲ್ಲೆಯ ಗುರುಮಠಕಲ್ ಪಿಎಸ್‌ಐ ಲೋಕಾಯುಕ್ತರ ಬಲೆಗೆ ಬಿದ್ದ ಘಟನೆ ಶನಿವಾರ ನಡೆದಿದೆ.ಗುರುಮಠಕಲ್ ಪೊಲೀಸ್ ಠಾಣೆ ಪಿಐ ವೀರಣ್ಣ ದೊಡ್ಡಮನಿ, ಪ್ರಕರಣ ದಾಖಲಾದ ಕೇಸ್‌ನಲ್ಲಿ ಬಚಾವ್ ಮಾಡುವ ವಿಚಾರವಾಗಿ ಆನಂದ ಭಜಂತ್ರಿ ಅವರಿಂದ 2 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದರು. ಗುರುಮಠಕಲ್ ಪೊಲೀಸ್ ವಸತಿ ಗೃಹದಲ್ಲಿ ದೂರುದಾರ ಆನಂದ ಅವರಿಂದ 1 ಲಕ್ಷ ರೂ. ಪಡೆಯುವಾಗ ದೊಡ್ಡಮನಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.ಲೋಕಾಯುಕ್ತ ಡಿವೈಎಸ್ಪಿ ಜೆ.ಎಚ್.ಇನಾಂದಾರ್, ಪಿಐ ಸಿದ್ದರಾಯ ನೇತೃತ್ವದಲ್ಲಿ ದಾಳಿ ನಡೆದಿದ್ದು, ಪಿಐ ವೀರಣ್ಣ ದೊಡ್ಡಮನಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಐಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ ಬಸವರಾಜ್ ಪ್ರಥಮ: ಸಂತಸ



ಬೆಳಗಾವಿ: ಅಥಣಿ ತಾಲೂಕಿನ ಸವದಿ ಗ್ರಾಮದ ಸಾಮಾನ್ಯ ಕೃಷಿಕ ಕುಟುಂಬದ ಬಸವರಾಜ್ ದರೇಪ್ಪ ಕೆಂಪವಾಡ ಅವರು 2025ರ ಐಎಫ್‌ಎಸ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ, ಕೇವಲ ಎರಡನೇ ಪ್ರಯತ್ನದಲ್ಲಿ ಸಾಧನೆಗೈದ ಬಸವರಾಜ್ ಅವರನ್ನು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಶ್ಲಾಘಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಸಾಧಾರಣ ರೈತ ಕುಟುಂಬದ ಯುವಕ ದೇಶಕ್ಕೇ ಪ್ರಥಮ ರ್‍ಯಾಂಕ್ ಬಂದಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯ. ಬಸವರಾಜ್ ಅವರ ಈ ಯಶಸ್ಸು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಗ್ರಾಮೀಣ ಭಾಗದ ಸಾವಿರಾರು ಯುವಕರಿಗೆ ದೊಡ್ಡ ಪ್ರೇರಣೆಯಾಗಿದೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಯುವಕರು ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್‌ನಂತಹ ಕ್ಷೇತ್ರಗಳಲ್ಲಿ ಮಿಂಚಲು ಈ ಸಾಧನೆ ಮುನ್ನುಡಿ ಬರೆದಿದೆ. ಕಷ್ಟಪಟ್ಟು ಓದುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಬಸವರಾಜ್ ಕೆಂಪವಾಡ ಈಗ ''ರೋಲ್ ಮಾಡೆಲ್'' ಆಗಿ ಹೊರಹೊಮ್ಮಿದ್ದಾರೆ ಎಂದು ಬಸವರಾಜ ಸಾಧನೆಗೆ ಸಚಿವ ಸತೀಶ ಜಾರಕಿಹೊಳಿ ಹರ್ಷ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿಮಾನ ಹಾರಾಟಕ್ಕೆ ಆತಂಕ ಬೇಡ

ಕಾರವಾರ: ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ, ಬೆಂಗಳೂರು ರವರು National Aero geophysical Mapping Programme (NAGMP)ಭಾಗವಾಗಿ NAGMP Block-7 ಸರ್ವೇಕ್ಷಣಾ ಕಾರ್ಯವನ್ನು ಮಹಾರಾಷ್ಟ್ರ, ಗೋವಾ ಹಾಗೂ ಕರ್ನಾಟಕ ರಾಜ್ಯದಲ್ಲಿ ಕೈಗೊಳ್ಳುತ್ತಿದ್ದು, ಉತ್ತರ ಕನ್ನಡ ಜಿಲ್ಲೆಯಾದ್ಯಂತ ಸದರಿ ಸರ್ವೇ ಕಾರ್ಯಕ್ಕೆ ವೈಜ್ಞಾನಿಕ ಉಪಕರಣಗಳನ್ನು ಅಳವಡಿಸಿಕೊಂಡ ವಿಮಾನಗಳು ಕೆಳಹಂತದಲ್ಲಿ ಹಾರಾಟ ನಡೆಸುತ್ತಿದ್ದು, ಸದರಿ ಸರ್ವೆಯಿಂದ ಪಡೆದ ಮಾಹಿತಿಯನ್ನು ಖನಿಜಾನ್ವೇಷಣೆಯಲ್ಲಿ ತೊಡಗಿರುವ ಸರ್ಕಾರಿ, ಖಾಸಗಿ ಸಂಸ್ಥೆಗಳು ಹಾಗೂ ಸಾರ್ವಜನಿಕರಿಗೆ ಲಭ್ಯವಾಗುವಂತೆ National Geoscience Data Repository (NGDR)ಅಳವಡಿಸಿಕೊಳ್ಳುತ್ತಾರೆ. ಆದ್ದರಿಂದ, ಸದರಿ ವೈಜ್ಞಾನಿಕ ಸರ್ವೇ ಕಾರ್ಯದಲ್ಲಿ ನಿರಂತವಾಗಿರುವ ಕೆಳ ಹಂತದ ವಿಮಾನ ಹಾರಾಟದ ಕುರಿತು ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗಬಾರದೆಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

ಸಹನಾ ಶೇಟ್‌ಗೆ 5 ಚಿನ್ನದ ಪದಕ



ಕುಮಟಾ: ತಾಲೂಕಿನ ಬಗ್ಗೋಣದ ಹೆಮ್ಮೆಯ ಪುತ್ರಿ ಕುಮಾರಿ ಸಹನಾ ಗಣೇಶ್ ಶೇಟ್ ಅವರು ಕುವೆಂಪು ವಿಶ್ವವಿದ್ಯಾನಿಲಯದ ಎಂ.ಬಿ.ಎ ವಿಭಾಗದಲ್ಲಿ ಅಭೂತಪೂರ್ವ ಸಾಧನೆ ಮಾಡುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.ಶಿವಮೊಗ್ಗದ ಪ್ರತಿಷ್ಠಿತ ಸಹ್ಯಾದ್ರಿ ವಾಣಿಜ್ಯ ಮತ್ತು ವ್ಯವಸ್ಥಾಪನಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದ ಸಹನಾ ಅವರು, ಇತ್ತೀಚೆಗೆ ಪ್ರಕಟವಾದ ಫಲಿತಾಂಶದಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಇಡೀ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.ಇವರ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ವಿಶ್ವವಿದ್ಯಾನಿಲಯವು 5 ಚಿನ್ನದ ಪದಕಗಳನ್ನು ನೀಡಿ ಗೌರವಿಸಿದೆ.ಸಹನಾ ಅವರು ಕುಮಟಾದ ಬಗ್ಗೋಣ ನಿವಾಸಿಗಳಾದ ಗೀತಾ ಮತ್ತು ಗಣೇಶ ಶಾಂತಾರಾಮ ಶೇಟ್ ದಂಪತಿಗಳ ಪುತ್ರಿ ಹಾಗೂ ಶಾಂತಾಬಾಯಿ ಮತ್ತು ದಿ. ಶಾಂತಾರಾಮ ನಾಗಪ್ಪ ಶೇಟ್ ಅವರ ಮೊಮ್ಮಗಳಾಗಿದ್ದಾರೆ. ಗ್ರಾಮೀಣ ಭಾಗದ ಪ್ರತಿಭೆಯೊಂದು ರಾಜ್ಯ ಮಟ್ಟದ ವಿಶ್ವವಿದ್ಯಾನಿಲಯದಲ್ಲಿ ಐದು ಚಿನ್ನದ ಪದಕಗಳನ್ನು ಬಾಚಿಕೊಳ್ಳುವ ಮೂಲಕ ಕುಮಟಾ ತಾಲೂಕಿನ ಹೆಸರನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಮಿನುಗಿಸಿದ್ದಾರೆ. ಇವರ ಈ ಅಸಾಧಾರಣ ಸಾಧನೆಗೆ ಸಾರ್ವಜನಿಕರು ಅಭಿನಂದನೆ ಸಲ್ಲಿಸಿದ್ದಾರೆ.

ಗಾಯತ್ರಿ ದರ್ಶನ ತಾಳಮದ್ದಲೆ ಯಶಸ್ವಿ



ಯಲ್ಲಾಪುರ: ತಾಲೂಕಿನ ವಾಗಳ್ಳಿಯಲ್ಲಿ ಅಥರ್ವಶರ್ಮಾ ಬ್ರಹ್ಮೋಪದೇಶದ ಪ್ರಯುಕ್ತ ಪ್ರಸಿದ್ಧ ಕಲಾವಿದರಿಂದ ಪ್ರಸ್ತುತಗೊಂಡ ಗಾಯತ್ರಿ ದರ್ಶನ ತಾಳಮದ್ದಲೆ ಕಲಾಸಕ್ತರ ಮೆಚ್ಚುಗೆಗೆ ಪಾತ್ರವಾಯಿತು. ಬ್ರಹ್ಮೋಪದೇಶದ ಸಂದರ್ಭದಲ್ಲಿ ಗಾಯತ್ರಿ ಉಪಾಸನೆಯ ಮಹತ್ವ, ಗಾಯತ್ರಿ ಮಂತ್ರದ ಮಹಿಮೆಯನ್ನು ಈಆಖ್ಯಾನಸಾದರಪಡಿಸಿತು. ಹಿಮ್ಮೇಳದಲ್ಲಿ ಭಾಗವತರಾಗಿ ಪ್ರಸಂಗದ ಕವಿ ಅನಂತ ಹೆಗಡೆ ದಂತಳಿಗೆ, ಮದ್ದಲೆವಾದಕರಾಗಿ ನರಸಿಂಹಭಟ್ಟ ಹಂಡ್ರಮನೆ, ಚಂಡೆವಾದಕರಾಗಿ ರಾಕೇಶ ಹೆಗಡೆ ಭಾಗವಹಿಸಿದ್ದರು. ವಿದ್ವಾನ್ ನಾಯಕಭಟ್ಟ ಶೇಡಿಮನೆ, ಡಾ.ಮಹೇಶಭಟ್ಟ ಇಡಗುಂದಿ, ಡಾ.ಶಿವರಾಮ ಭಾಗ್ವತ ಮಣ್ಕುಳಿ, ವಿದ್ವಾನ್ ಸನ್ನಭಟ್ಟ ಮಾಗೋಡ, ಮಂಜುನಾಥ ಹೆಗಡೆ ಹಿಲ್ಲೂರು ಪಾತ್ರ ಚಿತ್ರಣ ನೀಡಿದರು. ಸಂಘಟಕರಾದ ಮಂಜುನಾಥ ಗಾಂವ್ಕರ, ಪಾರ್ವತಿ ಗಾಂವ್ಕರ ಕಲಾವಿದರನ್ನುಗೌರವಿಸಿದರು.

ತಿಪ್ಪೇಸ್ವಾಮಿಗೆ ಪಿಎಚ್‌ಡಿ

ಕಾರವಾರ: ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಕೈಗಾರಿಕ ರಸಾಯನಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕ ತಿಪ್ಪೇಸ್ವಾಮಿ.ಎ ಸಲ್ಲಿಸಿರುವ Synthesis, Structural magnetic and electrochemical properties of doped ferrites nanoparticles" ಎಂಬ ಸಂಶೋಧನಾ ಮಹಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯ 35ನೇ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದೆ.ಶಿವಮೊಗ್ಗ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರೋ.ಜಿ.ಕೃಷ್ಣಮೂರ್ತಿ, ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.



ಮುಂಡಗೋಡ: ಸುಡು ಬಿಸಿಲನ್ನು ಲೆಕ್ಕಿಸದೆ ಜೀವನೋಪಾಯಕ್ಕಾಗಿ ಪಟ್ಟಣದ ಶಿವಾಜಿ ಸರ್ಕಲ್‌ನ ಬಳಿ ಕೊಡೆಗಳನ್ನು ಬಳಸಿ ಬಿಸಿಲಿನ ಧಗೆಯಿಂದ ರಕ್ಷಣೆ ಮಾಡಿಕೊಂಡು ವಿಶೇಷವಾಗಿ ಮಹಿಳೆಯರು ಮಾವಿನಹಣ್ಣು ಮಾರಾಟ ಮಾಡುತ್ತಿರುವ ದೃಶ್ಯ

ಬೀದಿಬದಿ ವ್ಯಾಪಾರಸ್ಥರಿಗೆ ಪ್ರೋತ್ಸಾಹ ನೀಡಿ

ಮುಂಡಗೋಡ: ಸುಡು ಬಿಸಿಲನ್ನು ಲೆಕ್ಕಿಸದೆ ಜೀವನೋಪಾಯಕ್ಕಾಗಿ ಪಟ್ಟಣದ ಶಿವಾಜಿ ಸರ್ಕಲ್‌ನ ಬಳಿ ಕೊಡೆಗಳನ್ನು ಬಳಸಿ ಬಿಸಿಲಿನ ಧಗೆಯಿಂದ ರಕ್ಷಣೆ ಮಾಡಿಕೊಂಡು ವಿಶೇಷವಾಗಿ ಮಹಿಳೆಯರು ಮಾವಿನಹಣ್ಣು ಮಾರಾಟ ಮಾಡುತ್ತಿರುವ ದೃಶ್ಯ ಕಂಡು ಬಂತು.ಬೇಸಿಗೆಗಾಲ ಬಂತೆಂದರೆ ಸಾಕು ರಸ್ತೆಯ ಇಕ್ಕೆಲಗಳಲ್ಲಿ, ಮರದ ನೆರಳಿನಲ್ಲಿ ಮಾವಿನಹಣ್ಣಿನ ಮಾರಾಟ ಕಂಡು ಬರುತ್ತದೆ. ಇಲ್ಲಿನ ಪಟ್ಟಣ ಪಂಚಾಯತಿಯವರು ಗೂಡಂಗಡಿಗಳನ್ನು ತೆರವುಗೊಳಿಸಿದ ನಂತರ ಬೀದಿಬದಿ ವ್ಯಾಪಾರಸ್ಥರು ಬಿಸಿಲು, ಮಳೆ ಎನ್ನದೇ ರಸ್ತೆಗಳ ಬದಿಯಲ್ಲಿಯೇ ವ್ಯಾಪಾರ ಮಾಡುವುದು ಅನಿವಾರ್ಯವಾಗಿದ್ದು ವ್ಯಾಪಾರಿಗಳ ಬದುಕು ದುಸ್ತರ ಆದರೆ ಗ್ರಾಹಕರಿಗೆ ಹಣ್ಣುಗಳನ್ನು ಖರೀದಿಸುವ ಸಂಭ್ರಮ. ಏಪ್ರಿಲ್-ಮೇ ತಿಂಗಳಲ್ಲಿ ಸೂರ್ಯನ ಸುಡುವ ಶಾಖ ಮತ್ತು ಹಾರಿಬರುವ ಧೂಳು ಇವುಗಳನ್ನು ಸಹಿಸಿಕೊಂಡು ವ್ಯಾಪಾರಸ್ಥರು ಮಾವಿನಹಣ್ಣುಗಳ ವ್ಯಾಪಾರ ಮಾಡುವ ಪರಿಸ್ಥಿತಿ ಇರುವುದು ವಾಸ್ತವದ ಸಂಗತಿ. ಇದಲ್ಲದೆ ಕೆಲವು ಗ್ರಾಹಕರು ಹಣ್ಣುಗಳ ದರದಲ್ಲಿ ಚೌಕಾಸಿ ಮಾಡುವುದು ವ್ಯಾಪಾರಸ್ಥರಿಗೆ ಕಿರಿಕಿರಿ ಉಂಟಾಗಿ ಲಾಭ ಕಡಿಮೆ ಆಗುವ ಸಂಭವವಿದೆ. ಒಟ್ಟಾರೆಯಾಗಿ ಬೇಸಿಗೆಯ ರಸ್ತೆ ಬದಿಯ ಮಾವಿನಹಣ್ಣುಗಳ ವ್ಯಾಪಾರಸ್ಥರ ಬದುಕು ಬಿಸಿಲು ಮತ್ತು ನೆರಳಿನಿಂದ ಕೂಡಿದ್ದು ಬೀದಿಬದಿ ವ್ಯಾಪಾರಸ್ಥರಿಗೆ ಪ್ರೋತ್ಸಾಹ ನೀಡುವುದು ಅತ್ಯಂತ ಮುಖ್ಯ ಅಂಶವಾಗಿದೆ.



ಭಟ್ಕಳ : ಶ್ರೀ ಗುರು ಸುಧೀಂದ್ರ ಪದವಿ ಮಹಾವಿದ್ಯಾಲಯದ ರೋಟರಾಕ್ಟ್ ಕ್ಲಬ್ ವತಿಯಿಂದ ಸಮುದಾಯ ಸೇವಾ ಕಾರ್ಯಕ್ರಮದ ಅಡಿಯಲ್ಲಿ ಪಟ್ಟಣದ ಸ್ನೇಹ ವಿಶೇಷ ಶಾಲೆ ಮತ್ತು ತರಬೇತಿ ಕೇಂದ್ರಕ್ಕೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ರೋಟರಾಕ್ಟ್ ಸದಸ್ಯರು ಶಾಲೆಯ ಮುಖ್ಯಸ್ಥೆ ಮಾಲತಿ ಉದ್ಯಾವರ ಅವರೊಂದಿಗೆ ಸಂವಾದ ನಡೆಸಿದರು. ರೋಟರಾಕ್ಟ್ ಕ್ಲಬ್ ಪದಾಧಿಕಾರಿಗಳು, ಸ್ವಯಂ ಸೇವಕರು ಉಪಸ್ಥಿತರಿದ್ದರು.

ಮಾರುಕಟ್ಟೆಗೆ ಲಗ್ಗೆ ಇಟ್ಟ ಕರಿಇಶಾಡ ಮಾವು: ಖರೀದಿಗೆ ಮುಗ್ಗಿಬಿದ್ದ ಜನತೆ

▶ ನಾಗರಾಜ ಶೆಟ್ಟಿ

ದಿಗಂತ ವಿಶೇಷ

ಅಂಕೋಲಾ: ತಾಲೂಕಿನಾದ್ಯಂತ ಇದೀಗ ಕೃಷ್ಣ ಸುಂದರಿಯ ಕಾರುಬಾರು ಆರಂಭವಾಗಿದ್ದು, ಪಟ್ಟಣದ ಮಾರುಕಟ್ಟೆ, ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕಗಳಲ್ಲಿ ಸುಪ್ರಸಿದ್ಧ ಕರಿ ಇಶಾಡ ಮಾವಿನ ಹಣ್ಣಿನ ಪರಿಮಳ ಮಾವು ಪ್ರಿಯರನ್ನು ಸೆಳೆಯುತ್ತಿದೆ ಪರಿಪಕ್ವವಾದ ಗುಣಮಟ್ಟದ ಕರಿಇಶಾಡ ಮಾವು ಇದೀಗ ಬರಪೂರವಾಗಿ ಬರತೊಡಗಿದ್ದು ಬರುವ 15ರಿಂದ20 ದಿನಗಳ ಕಾಲ ಅಂಕೋಲಾ ಸುತ್ತ ಮುತ್ತ ಕರಿಇಶಾಡ ಮಾವಿನ ಹಣ್ಣಿನದ್ದೇ ಹವಾ ಇರಲಿದೆ.

ಮಾವು ಮತ್ತು ಮಣ್ಣಿಗೆ ಅನ್ಯೋನ್ಯವಾದ ಸಂಬಂಧವಿದೆ ಎನ್ನುವಂತೆ ಅಂಕೋಲಾ ತಾಲೂಕು ವ್ಯಾಪ್ತಿಯಲ್ಲಿ ಬೆಳೆಯುವ ಕರಿಇಶಾಡ ಮಾವು ತನ್ನ ವಿಶೇಷ ಸ್ವಾದ ಮತ್ತು ಗುಣಮಟ್ಟದ ಮೂಲಕ ಗುರುತಿಸಿಕೊಂಡಿದ್ದು ನೂರಾರು ವರ್ಷಗಳ ಹಿಂದೆಯೇ ಇಲ್ಲಿನ ಮಾವು ವಿದೇಶಗಳಿಗೆ ಸಾಗಿಸಲ್ಪಟ್ಟ ದಾಖಲೆಗಳಿವೆ.

ವಿಶಿಷ್ಟ ಗುಣಮಟ್ಟದ ಕೃಷಿ ಉತ್ಪನ್ನಗಳಿಗೆ ನೀಡುವ ಜಿ.ಐ ಟ್ಯಾಗ್ ಮಾನ್ಯತೆ ಅಂಕೋಲೆಯ ಕರಿಇಶಾಡ ಮಾವಿನ ಹಣ್ಣಿಗೆ ದೊರಕಿದ್ದು ಮಾವು ಬೆಳೆಗಾರರು ತಮ್ಮ ಬೆಳೆಯ ಮಾರಾಟವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ.

ಇದೀಗ ಅಂಕೋಲಾ ಸುತ್ತ ಮುತ್ತಲಿನ ಎಲ್ಲಡೆ ಕರಿಇಶಾಡ ಮಾವು ಮರಗಳಲ್ಲಿ ಬಲಿತು ನಿಂತಿದ್ದು ನಿರಂತರವಾಗಿ ಕೊಯ್ಲು ಆರಂಭವಾಗಿದೆ ಅಂಕೋಲಾ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ದೊಡ್ಡ ಗಾತ್ರದ ಹಣ್ಣುಗಳು ಡಜನಿಗೆ(12ಹಣ್ಣುಗಳಿಗೆ) 500 ರಿಂದ 600ಯಂತೆ ಮಾರಾಟವಾಗುತ್ತಿದ್ದು ಸಾಮಾನ್ಯ ಗಾತ್ರದ ಹಣ್ಣುಗಳು 300 ರಿಂದ 400 ರೂಪಾಯಿಗಳಿಗೆ ಮಾರಾಟ ಮಾಡಲಾಗುತ್ತಿದೆ ಕೆಲವಡೆ ದರದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವೂ ಇದೆ.

ಬೆಳಸೆ, ಶಿರೂರು ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಮಾವಿನ ಹಣ್ಣು ಮಾರಾಟ ಮಾಡುವ ಗ್ರಾಮೀಣ ಭಾಗದ ರೈತ ಮಹಿಳೆಯರನ್ನು ಕಾಣಬಹುದಾಗಿದ್ದು ಪ್ರವಾಸಿಗರು ತಮ್ಮ ವಾಹನಗಳನ್ನು ನಿಲ್ಲಿಸಿ ಅಂಕೋಲೆಯ ಸ್ವಾದಿಷ್ಟ ಮಾವಿನ ಹಣ್ಣಿನ ಖರೀದಿಗೆ ಮುಗಿಬೀಳುತ್ತಿದ್ದಾರೆ.



> ಇದೀಗ ಅಂಕೋಲಾ ತಾಲೂಕಿನ ಬಹುತೇಕ ಕಡೆಗಳಲ್ಲಿ ಕರಿ ಇಶಾಡ ಮಾವು ಕೊಯ್ಲು ನಡೆಯುತ್ತಿದ್ದು ಉತ್ತಮ ಗುಣಮಟ್ಟದ ಹಣ್ಣುಗಳುಮಾರುಕಟ್ಟೆಗೆ ಬರುತ್ತಿವೆ ಇನ್ನೂ ಎರಡು ವಾರಗಳ ಕಾಲ ಸಾಕಷ್ಟುಪ್ರಮಾಣದಲ್ಲಿ ಮಾವಿನಹಣ್ಣು ಮಾರುಕಟ್ಟೆಗೆ ಬರಲಿದೆ.
> ■ ಸುಬ್ರಹ್ಮಣ್ಯ ಗೌಡ ಮಾವು ಬೆಳೆಗಾರ

ಹೆಚ್ಚಿದ ಬೇಡಿಕೆ

ಹಾಲಕ್ಕಿ ಸಮಾಜದ ರೈತರು, ಕೆಲವು ಮಹಿಳೆಯರು ಪ್ರತಿದಿನ ಬೆಳಗ್ಗೆಅಂಕೋಲಾದಿಂದ ಕಾರವಾರ, ಕುಮಟಾ,ಹೊನ್ನಾವರ ತಾಲೂಕುಗಳಿಗೆ ಬುಟ್ಟಿಗಳಲ್ಲಿ ಮಾವಿನಹಣ್ಣು ಸಾಗಿಸಿ ಅಲ್ಲಿ ಮಾರಾಟ ಮಾಡಿ ಸಂಜೆಯ ನಂತರ ಮರಳುತ್ತಾರೆ.

ಅಂಕೋಲಿಗರು ದೇಶದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿರುವ ಬಂಧು ಮಿತ್ರರಿಗೆ ರಟ್ಟಿನ ಬಾಕ್ಸ್ ಗಳಲ್ಲಿ ಮಾವಿನ ಹಣ್ಣು ತುಂಬಿ ಕಳುಹಿಸಿಕೊಡುವ ಮೂಲಕ ಕರಿ ಇಶಾಡ ದೇಶದ ವಿವಿಧ ಭಾಗಗಳಿಗೆ ತಲುಪುತ್ತಿದ್ದು, ಲಾರಿಗಳಲ್ಲಿ ಗೋವಾ,ಹುಬ್ಬಳ್ಳಿ ಕಡೆ ಮಾವಿನ ಹಣ್ಣಿನ ಸಾಗಾಟದ ವ್ಯವಹಾರವೂ ಜೋರಾಗಿಯೇ ನಡೆಯುತ್ತಿದೆ.

ಕರಿಇಶಾಡ ಮಾವು ಹಣ್ಣಾದ ನಂತರ ಬಹುಕಾಲ ಇಟ್ಟು ಮಾರಾಟ ಮಾಡಲು ಸಾಧ್ಯವಿಲ್ಲವಾಗಿದ್ದು ಹಣ್ಣುಗಳು ಕೆಡುವುದರಿಂದ ನಿಗದಿತ ಸಮಯದೊಳಗೆ ಉಪಯೋಗಿಸಲೇ ಬೇಕಿದ್ದು ಮಾವಿನ ಹಣ್ಣಿಗೆ ಪ್ರಸಿದ್ದಿ ಪಡೆದ ಅಂಕೋಲೆಯಲ್ಲಿ ಹಣ್ಣು ಮಾರಾಟ ಮಾಡಲು ಯೋಗ್ಯಮಾರುಕಟ್ಟೆಯ ವ್ಯವಸ್ಥೆ ಇಲ್ಲದಿರುವುದು ಬೆಳೆಗಾರರ ಬೇಸರಕ್ಕೆ ಕಾರಣವಾಗಿದೆ.

ಮಳೆಗಾಲ ಆರಂಭವಾದ ನಂತರ ಸ್ಥಳೀಯವಾಗಿ ಬೇಡಿಕೆ ಕುಸಿಯುವ ಕರಿಇಶಾಡ ಮಾವಿನ ಹಣ್ಣಿನ ಪಲ್ಪ್ ತಯಾರಿಸುವಕಾರ್ಯ ಕೆಲವು ಸಂಸ್ಥೆಗಳಿಂದ ನಡೆಯುತ್ತಿದ್ದು ಮಾವಿನ ಹಣ್ಣಿನ ಪಲ್ಪಿಗೆ ಉತ್ತಮ ಬೇಡಿಕೆಯಿದೆ, ಆದರ ಜೊತೆಗೆ ಕರಿಇಶಾಡ ಹಣ್ಣಿನ ದೀರ್ಘ ಕಾಲ ಬಳಕೆಯ ಉತ್ಪನ್ನಗಳ ತಯಾರಿಸುವ ಸಾಧ್ಯತೆಗಳ ಕುರಿತಂತೆ ಸ್ಥಳೀಯರಿಗೆ ತರಬೇತಿ ನೀಡುವ ಆಗತ್ಯತೆ ಇದೆ.

ರಾಷ್ಟ್ರ ನಿರ್ಮಾಣಕ್ಕೆ ಶಿಸ್ತು ಬದ್ಧ ಮಾರ್ಗದರ್ಶನ ಅವಶ್ಯ

ಯಲ್ಲಾಪುರ: ನಮ್ಮೆಲ್ಲರಲ್ಲೂ ಶಕ್ತಿ ಇದೆ ಆದಕ್ಕೆ ಪರಿಪೂರ್ಣ ರೂಪ ನೀಡಬೇಕಾಗಿದೆ. ನಾವೆಲ್ಲ ರಾಷ್ಟ್ರದ ಕೆಲಸ ಮಾಡಬೇಕಿದೆ ಅದಕ್ಕೆ ಸಾಕಷ್ಟು ಸವಾಲುಗಳಿವೆ. ಅದನ್ನು ಮೀರಿಸಿ ರಾಷ್ಟ್ರ ಕಟ್ಟಲು ಶಿಸ್ತು ಬದ್ಧ ಮಾರ್ಗದರ್ಶನದ ಆಗತ್ಯವಿದೆ. ಅಂತಹ ಮಾರ್ಗದರ್ಶನ ಈ ಶಿಬಿರದಲ್ಲಿ ಲಭಿಸಲಿದೆ ಎಂದು ವಿಶ್ವ ಹಿಂದೂ ಪರಿಷತ್ ಕರ್ನಾಟಕ ಉತ್ತರ ಪ್ರಾಂತದ ಉಪಾಧ್ಯಕ್ಷ ಗಂಗಾಧರ ಹೆಗಡೆ ಹೇಳಿದರು.

ಪಟ್ಟಣದ ವಿಶ್ವದರ್ಶನ ಸಮೂಹ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಮೇ 9 ರಿಂದ 16 ರವರೆಗೆ ನಡೆಯಲಿರುವ ವಿಶ್ವ ಹಿಂದೂ ಪರಿಷತ್ ಭಜರಂಗದಳದ ಕರ್ನಾಟಕ ಪ್ರಾಂತ ಶೌರ್ಯ ಪ್ರಶಿಕ್ಷಣ ಶಿಬಿರವನ್ನು ಶನಿವಾರ ಸಂಜೆ ಉದ್ಘಾಟಿಸಿ ಅವರು ಮಾತನಾಡಿ, ಒಂದು ತಂಡವಾಗಿ ಶಕ್ತಿ ಬಲ ಶಿಬಿರ ತುಂಬಲಿದೆ. ಗುಣವಂತರಾಗಬೇಕು, ಶೀಲವಂತರಾಗಬೇಕು ಈ ಮೂಲಕ ಸಂಘಟನೆಗೆ ಬಲ ತುಂಬಬೇಕು ಎನ್ನುವುದು ಶಿಬಿರದ ಉದ್ದೇಶವಾಗಿದೆ ಎಂದರು.

ಶಿಬಿರದ ಉದ್ದೇಶವನ್ನು ವಿವರಿಸಿ ಕ್ಷೇತ್ರೀಯ ಧರ್ಮ ಪ್ರಸಾರ ಪ್ರಮುಖ ಸೂರ್ಯನಾರಾಯಣಜಿ ಮಾತನಾಡಿ, ಈ ದೇಶದ ಯುವ ಶಕ್ತಿಯೇ ದೇಶದ ಭವಿಷ್ಯ. ಇತಿಹಾಸವನ್ನು ಮುಂದಿನ ಸಮಾಜಕ್ಕೆ ದಾಟಿಸಲು ಸಮಾಜ ಸಂಘಟನೆ ಬಲಗೊಳ್ಳಬೇಕಿದೆ. ಸಂಸ್ಕಾರಭರಿತ ದೇಶಭಕ್ತ ಯುವಕರ ಸಂಘಟನೆಗಾಗಿ ಇಂತಹ ಶಿಬಿರಗಳು ಆಯೋಜಿಸಲಾಗುತ್ತಿದೆ. ಸಾವಿರಾರು ಸಮಸ್ಯೆಗಳು ಮುಂದಿವೆ. ಆದನ್ನು ಮೆಟ್ಟಿ ನಿಂತು ಸಮಾಜ ಬಲಪಡಿಸಲು ಜಾಗೃತ ಹಿಂದೂ ಸಮಾಜದ ಆಗತ್ಯತೆ ಇದೆ. ನಮ್ಮ ಹಿಂದೂ ಸಮಾಜ ಸಂಘಟಿತರಾಗಿ ನಾವೆಲ್ಲ ಒಂದು ಎಂಬ ಭಾವನೆ ಬರಬೇಕಾದರೆ ಸಮಾಜದಲ್ಲಿರುವ ಜಾತಿಯತೆ ದೂರವಾಗಬೇಕು ಎಂದರು.

ಶಿರಸಿ ಜಿಲ್ಲಾ ಪ್ರಚಾರಕ ಗಣೇಶಜಿ ಮಾತನಾಡಿ, ನಮ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಮೂಲಕ ಶಿಬಿರದ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು. ಶರೀರ ಮನಸ್ಸನ್ನು ಸಮಾಜಮುಖಿಯಾಗಿ ಸದೃಢಗೊಳಿಸಿಕೊಳ್ಳಬೇಕು ಎಂದರು. ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಎಸ್.ಎನ್.ಭಟ್ಟ ಏಕಾನ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ಪ್ರಧಾನ ಕಾರ್ಯದರ್ಶಿ, ಶಿವಕುಮಾರ ಬೋಳಶೆಟ್ಟಿ ಸೂರ್ಯ, ಭಜರಂಗದಳದ ಪ್ರಾಂತ ಸಂಯೋಜಕ ಬಸವರಾಜ ಸೂಗೂರ ಪ್ರಾಂತ ಸಹಕಾರ್ಯದರ್ಶಿ ಮಂಡಲೀಕ ದಳವಾಯಿ, ಪ್ರಮುಖರಾದ ಶಿವಾನಂದ ಸತ್ತಿಗೇರಿ, ಮಲ್ಲಿಕಾರ್ಜುನ ಸತ್ತಿಗೇರಿ ಮತ್ತಿತರರಿದ್ದರು. ಚಿದಾನಂದ ವೈಯಕ್ತಿಕ ಗೀತೆ ಹಾಡಿದರು. ಮಲ್ಲಿಕಾರ್ಜುನ್ ಎಚ್. ನಿರೂಪಿಸಿದರು.ಕರ್ನಾಟಕ ಉತ್ತರ ಪ್ರಾಂತದ 18 ಜಿಲ್ಲೆಗಳಿಂದ ಆಗಮಿಸಿದ 150 ಕ್ಕೂ ಅಧಿಕ ಪ್ರಶಿಕ್ಷಣಾರ್ಥಿಗಳು ಒಂದು ವಾರ ನಡೆಯುವ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.



ಮೇ 12ಕ್ಕೆ ವಜ್ರ ಮಹೋತ್ಸವ, ಕಟ್ಟಡ ಲೋಕಾರ್ಪಣೆ

ಯಲ್ಲಾಪುರ: ಪಟ್ಟಣದ ಯಲ್ಲಾಪುರ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘದ (ಎಲ್‌ಎಸ್‌ಎಂಪಿ) ವಜ್ರ ಮಹೋತ್ಸವ ಮತ್ತು ನೂತನ ಕಟ್ಟಡ ಲೋಕಾರ್ಪಣೆ ಮೇ 12ರಂದು ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದ್ದು, ಸೋಂದಾ ಸ್ವರ್ಣವಲ್ಲಿಯ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಉದ್ಘಾಟಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ನಾಗರಾಜ ಕವಡಿಕೇರಿ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಆಮಂತ್ರಣ ಬಿಡುಗಡೆಗೊಳಿಸಿ ಮಾತನಾಡಿ , ನಮ್ಮ ಸಂಸ್ಥೆಯು 3500 ಸದಸ್ಯರನ್ನು ಹೊಂದಿರುವ ಸಹಕಾರಿ ಸಂಸ್ಥೆಯಾಗಿದೆ. 1950 ರಲ್ಲಿ ಆರಂಭವಾದ ನಮ್ಮ ಸಂಘಕ್ಕೆ ಆರಂಭದಲ್ಲೇ ನಮ್ಮ ಹಿರಿಯರು 20 ಗುಂಟೆ ಜಾಗವನ್ನು ಮಂಜೂರು ಮಾಡಿಸಿದ್ದರು. ಆದರಲ್ಲಿ ಈಗಾಗಲೇ ಸಹಕಾರಿ ಸಂಕಿರಣ ನಿರ್ಮಿಸಲಾಗಿದೆ. ಇದೀಗ 1.90 ಕೋಟಿ ರೂ. ವೆಚ್ಚದಲ್ಲಿ ಕಚೇರಿ, ಸಭಾಭವನ ಸೇರಿದಂತೆ ಈ ನೂತನ ಕಟ್ಟಡ ನಿರ್ಮಿಸಲಾಗಿದೆ. ಸಂಘವು ಯಲ್ಲಾಪುರ ಸೇರಿದಂತೆ ಮೂರು ಶಾಖೆ ಗಳನ್ನು ಹೊಂದಿದೆ. ಸಂಘದ ಸದಸ್ಯರ ಹಾಗೂ ರೈತರಿಗೆ ಅನುಕೂಲವಾಗುವಂತೆ ಯೋಜನೆಗಳನ್ನು ಕಲ್ಪಿಸಲಾಗಿದೆ.

ಕಾರ್ಯಕ್ರಮದಲ್ಲಿ ಭದ್ರತಾ ಕೊಠಡಿಯನ್ನು ಶಾಸಕ ಶಿವರಾಮ ಹೆಬ್ಬಾರ್, ಸಭಾ ಭವನವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮೀಟಿಂಗ್ ಹಾಲ್‌ನ್ನು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದಾರೆ.

ಸಂಕಲ್ಪ ಸೇವಾ ಸಂಸ್ಥೆ ಅಧ್ಯಕ್ಷ ಪ್ರಮೋದ ಹೆಗಡೆ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

ಸಂಘದ ಅಧ್ಯಕ್ಷರಿಗೆ ಉಪಾಧ್ಯಕ್ಷರು ಸೇರಿದಂತೆ ಸಹಕಾರ ನೀಡಿದವರಿಗೆ ಗೌರವ ಸನ್ಮಾನ ಮಾಡಲಾಗುವದು. ಸಂಜೆ ಸಮಾರೋಪ ಕಾರ್ಯಕ್ರಮದ ನಂತರ ಚಂದ್ರಹಾಸ ಚರಿತ್ರೆ ಮತ್ತು ಮಾಯಾ ಮೃಗಾವತಿ ಯಕ್ಷಗಾನ ಪ್ರದರ್ಶನವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಟಿ.ಆರ್. ಹೆಗಡೆ ತೊಂಡಕರ, ನಿರ್ದೇಶಕರಾದ ಮಹಾಬಲೇಶ್ವರ ಭಟ್ ಮಾಲದ ಮನೆ, ಸುಬ್ರಾಯ ಭಟ್ಟ, ಅಪ್ಪು ಆಚಾರಿ, ಗ್ಯಾಬ್ರಿಯಲ ಫರ್ನಾಂಡಿಸ್, ಮುಖ್ಯ ಕಾರ್ಯನಿರ್ವಾಹಕ ಎಂ.ಎಸ್. ಹೆಗಡೆ ಮತ್ತಿತರರಿದ್ದರು.



ಅನ್ಯ ಚಟುವಟಿಕೆಗಳಿಗೆ ಮೈದಾನ ಬಳಕೆಯಾಗದಿರಲಿ

ಭಟ್ಕಳ : ಪಟ್ಟಣದ ಹನುಮಾನ ನಗರದ ಶಾಲಾ ಕ್ರೀಡಾಂಗಣವನ್ನು ಕ್ರಿಕೆಟ್ ಮತ್ತಿತರ ಚಟುವಟಿಕೆಗಳಿಗೆ ಬಳಸಿಕೊಳ್ಳುವುದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಆಸರಕೇರಿಯ ವೆಂಕಟೇಶ್ವರ ಅಭಿವೃದ್ಧಿ ಸಂಘದಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಅವರಿಗೆ ಮನವಿ ಸಲ್ಲಿಸಲಾಗಿದೆ.

ಮನವಿಯಲ್ಲಿ ಹನುಮಾನ ನಗರದ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಂಗಣವನ್ನು ಕೆಲವರು ಕ್ರಿಕೆಟ್ ಮೈದಾನವನ್ನಾಗಿ ಮಾಡಿಕೊಂಡು ಅಕ್ಕಪಕ್ಕದ ಊರಿನವರಿಂದ ಹಣ ವಸೂಲಿ ಮಾಡಿ ಅವರಿಗೆ ಕ್ರಿಕೆಟ್ ಆಡಲು ಅವಕಾಶ ಮಾಡಿಕೊಡುತ್ತಿದ್ದಾರೆ. ಆಸರಕೇರಿ ಗ್ರಾಮದವರು ಇತ್ತೀಚೆಗೆ ಕ್ರಿಕೆಟ್ ಆಡಲು ಅನುಮತಿ ಕೇಳಲು ಹೋದಾಗ ದುಬಾರಿ ಹಣದ ಬೇಡಿಕೆ ಇಟ್ಟಿದ್ದಾರೆ. ಮೈದಾನ ನೀಡುವುದಿಲ್ಲ, ಒಂದು ವೇಳೆ ಆಟವಾಡಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಹೇಳಿರುತ್ತಾರೆ. ಶಾಲಾ ಮೈದಾನವನ್ನು ಕಾನೂನು ಬಾಹಿರವಾಗಿ ಕ್ರಿಕಟ್ ಮೈದಾನ ಮಾಡಿಕೊಂಡಿರುವುದಲ್ಲದೇ ಬೇರೆಯವರಿಗೆ ಆಟ ಆಡಲು ಅಡ್ಡಿ ಪಡಿಸುತ್ತಿರುವುದು ಸರಿಯಾದ ಕ್ರಮವಲ್ಲ. ಶಾಲಾ ಪರಿಸರದ ಸುರಕ್ಷತೆ ದೃಷ್ಟಿಯಿಂದ ಮೈದಾನವನ್ನು ಪರಿಶೀಲಿಸಿ ಶಾಲೆಗೆ ಸಂಬಂಧಿಸಿದ ಕ್ರೀಡೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಚಟುವಟಿಕೆಗೆ ಮೈದಾನ ಬಳಸಲು ನೀಡಬಾರದು.



ಶಾಲಾ ಮೈದಾನದಲ್ಲಿ ಶಾಶ್ವತವಾಗಿ ನಿರ್ಮಾಣ ಮಾಡಿಕೊಂಡ ಕ್ರಿಕೆಟ್ ಅಂಕಣವನ್ನು ತೆಗೆದು ಹಾಕಿ ಶಾಲಾ ಮಕ್ಕಳಿಗೆ ಶಾಲಾ ಮೈದಾನದಲ್ಲಿ ಹೊರತುಪಡಿಸಿ ಇತರರಿಗೆ ಕ್ರೀಡಾ ಚಟುವಟಿಕೆ ನಡೆಸಲು ಅವಕಾಶ ಮಾಡಿಕೊಡದೆ ಶಾಲಾ ಪರಿಕರಗಳ ಜೊತೆಗೆ ಶಾಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಶಾಲಾಭಿವೃದ್ಧಿ ಸಮಿತಿಯವರು ಮತ್ತು ಮುಖ್ಯಶಿಕ್ಷಕರಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಲಾಗಿದೆ.

ವಿದ್ಯಾರ್ಥಿಗಳಿಗೆ ಜ್ಞಾನದ ಹಸಿವಿರಲಿ

ಹೊನ್ನಾವರ: ವಿದ್ಯಾರ್ಥಿಯಾದವನಿಗೆ ಜ್ಞಾನದ ಹಸಿವಿರಬೇಕು. ಅಂತಹ ಜ್ಞಾನದ ಹಸಿವಿರುವವರು ಮಾತ್ರ ಬದುಕಿನಲ್ಲಿ ಯಶಸ್ಸುಗಳಿಸುತ್ತಾರೆ. ಇಂತಹ ಸಂಭ್ರಮ ಆಚರಣೆಗಲ್ಲ, ನಮ್ಮ ಬೆನ್ನು ನಾವೇ ತಟ್ಟಿಕೊಳ್ಳಲು ಅಲ್ಲ. ಬದಲಿಗೆ ಹಳೆಯ ದಿನಗಳನ್ನು ಅವಲೋಕಿಸಿ ಹೊಸ ಹೆಜ್ಜೆ ಇಡುವ ಸಂಕೇತವಾಗಿ ಎಂಬುದಾಗಿ ಯಕ್ಷಗಾನ ಕಲಾವಿದ ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯರಾದ ವಿದ್ಯಾಧರರಾವ್ ಜಲವಳ್ಳಿ ಅಭಿಪ್ರಾಯಪಟ್ಟರು.

ಅವರು ಶನಿವಾರ ತಾಲೂಕಿನ ಎಂಪಿಇ ಸೊಸೈಟಿಯ ಎಸ್‌ಡಿಎಂಪದವಿ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಮತ್ತೋರ್ವ ಅತಿಥಿಗಳಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯ, ಕುಮಟಾದ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಜಿ.ಡಿ.ಭಟ್ಟ ಮಾತನಾಡಿ, ನಾವು ಆರೋಗ್ಯವಾಗಿರ ಬೇಕೆಂದರೆ ಶಿಸ್ತುಬದ್ಧ ಜೀವನ ರೂಢಿಸಿಕೊಳ್ಳಬೇಕು ಎಂದರು. ಕಾಲೇಜಿನ ಪೂರ್ವ ವಿದ್ಯಾರ್ಥಿ ಬಾರತೀಯ ಸ್ಟೇಟ್ ಬ್ಯಾಂಕ್ ನಡೆ ಪ್ಯೂಟಿ ಜನರಲ್ ಮಾನೇಜರ್‌ಆಗಿರುವ ಚಂದ್ರಶೇಖರ ಬಿ. ನಾಯ್ಕರವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ತಮ್ಮಕಾಲೇಜು ದಿನಗಳನ್ನು ನೆನಪಿಸಿಕೊಂಡರು. ಎಂ.ಪಿ.ಇ. ಸೊಸೈಟಿಯ ಅಧ್ಯಕ್ಷರಾದ ಕೃಷ್ಣಮೂರ್ತಿ ಭಟ್ಟ ಶಿವಾನಿ ಮಾತನಾಡಿದರು. ಪ್ರಾ.ಡಾ.ಜಿ.ಎನ್. ಭಟ್ಟ ಅಧ್ಯಕ್ಷತೆ ವಹಿಸಿದ್ದರು. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.ಡಾ. ಸುರೇಶ ಎಸ್. ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಡಾ.ಎಂ.ಜಿ. ಹೆಗಡೆ ವರದಿ ವಾಚಿಸಿದರು. ವಿದ್ಯಾರ್ಥಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕಾರ್ತಿಕಗೌಡ ವಂದಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ.ಆರ್. ಕೆ. ಮೇಸ್ತ ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿ ಪ್ರತಿನಿಧಿಗಳಾದ ಎಚ್. ಮನೋಜ್, ವಿಶಾಲ ಹೆಗಡೆ, ವೆಂಕಟೇಶ ಭಟ್ಟ ಉಪಸ್ಥಿತರಿದ್ದರು.



ಸತತ ಪ್ರಯತ್ನದಿಂದ ಯಶಸ್ಸು ಸಾಧ್ಯ: ಜಿಲ್ಲಾಧಿಕಾರಿ

ಕಾರವಾರ: ಆತ್ಮಸ್ಥೈರ್ಯದಿಂದ ಕಾರ್ಯ ಸಿದ್ಧಿ ಸಾಧ್ಯ. ವಿದ್ಯಾರ್ಥಿಗಳು ಓದಿನ ಜೊತೆಗೆ ಇತರೆ ಉತ್ತಮ ಹವ್ಯಾಸಗಳನ್ನೂ ರೂಢಿಸಿಕೊಳ್ಳಬೇಕು. ಜೀವನದಲ್ಲಿ ಸತತ ಪ್ರಯತ್ನ ಮುಖ್ಯವಾಗಿದ್ದು, ಪ್ರಯತ್ನದಿಂದ ಯಶಸ್ಸು ಸಾಧ್ಯ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಹೇಳಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 2025-26 ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಅತೀ ಹೆಚ್ಚು ಅಂಕ ಪಡೆದ ಮಕ್ಕಳ ಅಭಿನಂದನಾ ಸಮಾರಂಭ ಮತ್ತು ಸಂವಾದದಲ್ಲಿ ಮಾತನಾಡಿದರು.

ಈ ಬಾರಿಯ ಪರೀಕ್ಷೆಯಲ್ಲಿ ಇಲಾಖೆಯ ಪ್ರಯತ್ನ, ಪಾಲಕರ ಬೆಂಬಲ, ಸಮಾಜದ ಪ್ರೇರಣೆಯಿಂದ ಉತ್ತಮ ಸಾಧನೆಯಾಗಿದೆ ಎಂದರು. ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ದಿಲೀಷ್ ಶಶಿ ಮಾತನಾಡಿದರು.

ಸಂವಾದದಲ್ಲಿ ಯಲ್ಲಾಪುರದ ಸಮೃದ್ಧಿ ಭಾಗ್ವತ, ಭಟ್ಕಳದ ಸಾನಿಕಾ ಬೈಲೂರ್,



ವೈಭವಿ ನಾಯ್ಕ, ಹೊನ್ನಾವರದ ದೇವಿಕಾ ಪೈ ಕುಮಟಾದ ದಿಶಾಂತ್ ನಾಯ್ಕ, ಶಿರಸಿಯ ಅದಿತಿ ನಾಯ್ಕ, ಲತಿಕಾ ಹಾಗೂ ಇತರ ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡು ತಮ್ಮ ಅನಿಸಿಕೆ ಹಂಚಿಕೊಂಡರು.ರಾಜ್ಯಕ್ಕೆ ಮೊದಲ ಹತ್ತು ಸ್ಥಾನ ಗಳಿಸಿದ ಶಿರಸಿ ಮತ್ತು ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲೆಯ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕಿ ಲತಾ ನಾಯಕ, ಕುಮಟಾ ಡಯಟ್ ಉಪನಿರ್ದೇಶಕ ಎನ್.ಆರ್.ಹೆಗಡೆ, ಶಿಕ್ಷಣಾಧಿಕಾರಿ ಡಾ. ಶುಭಾ ನಾಯಕ, ಜಿಲ್ಲಾ ಯೋಜನಾ ಉಪ ಸಮನ್ವಯ ಅಧಿಕಾರಿ ಭಾಸ್ಕರ ಗಾಂವಕರ, ಡಯಟ ಕುಮಟಾ ಹಿರಿಯ ಉಪನ್ಯಾಸಕಿ ಭಾರತಿ ನಾಯ್ಕ, ವಿದ್ಯಾರ್ಥಿಗಳು ಮತ್ತು ಪೋಷಕರು ಇದ್ದರು.

ಪ್ರಾಣಿ- ಪಕ್ಷಿಗಳಿಗೆ ನೀರು ಕುಡಿಯಲು ತೊಟ್ಟಿಗಳ ನಿರ್ಮಾಣ

ಮುಂಡಗೋಡ : ತಾಲೂಕಿನ ಸನವಳ್ಳಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಪ್ರಾಣಿ ಪಕ್ಷಿಗಳಿಗೆ ನೀರು ಕುಡಿಯಲು ತೊಟ್ಟಿಗಳನ್ನು ನಿರ್ಮಾಣ ಮಾಡುವ ಮೂಲಕ ಅವುಗಳಿಗೆ ಬೇಸಿಗೆಯ ದಾಹ ಇಂಗಿಸುವ ಕಾರ್ಯ ಮಾಡಿದ್ದಾರೆ.

ಬಂಕಾಪುರ ರಸ್ತೆಯಲ್ಲಿರುವ ಪಾರ್ವತಿ- ಪರಮೇಶ್ವರ ದೇವಸ್ಥಾನದ ಬಳಿಯ ಅರಣ್ಯ ಪ್ರದೇಶದಲ್ಲಿ ಮತ್ತು ಇನ್ನೂ ಮೂರು ಜಾಗಗಳಲ್ಲಿ ಸಿಮೆಂಟ್ ತೊಟ್ಟಿಗಳ ನಿರ್ಮಾಣ ಮಾಡಿ ಟ್ಯಾಂಕರ್ ಗಳ ಮೂಲಕ ತೊಟ್ಟಿಗಳಲ್ಲಿ ನೀರು ತುಂಬಿಸಿ ಇಟ್ಟಿದ್ದಾರೆ. ಒಂದೊಂದು ತೊಟ್ಟಿ ಸುಮಾರು 3 ಟ್ಯಾಂಕರ್ ನಷ್ಟು ನೀರು ಹಿಡಿಯುತ್ತದೆ. ಕಾಡಿನಂಚಿನಲ್ಲಿ ಜಲಾಶಯ ಮತ್ತು ಹೊಲ-ಗದ್ದೆಗಳು ಇರುವುದರಿಂದ ನಮ್ಮ ಸನವಳ್ಳಿ ಭಾಗದಲ್ಲಿಯೇ ಹೆಚ್ಚಾಗಿ ಕಾಡು ಪ್ರಾಣಿಗಳು ನೀರು



ಮತ್ತು ಆಹಾರ ಅರಸಿಕೊಂಡು ಬರುತ್ತವೆ. ಕೆಲವೊಮ್ಮೆ ಜಿಂಕೆಗಳು ನಾಯಿಗಳ ದಾಳಿಯಿಂದ ಜೀವ ಕಳೆದುಕೊಂಡಿವೆ ಕೆಲವೊಂದಿಷ್ಟು ನಾವು ರಕ್ಷಿಸಿದ್ದೇವೆ. ಇತ್ತೀಚಿನ ಬಿಸಿಲಿನ ಬೇಗೆಗೆ ಪ್ರಾಣಿಗಳ ದಾಹ ಇಂಗಿಸಲು ಅರಣ್ಯ ಇಲಾಖೆಯವರು ನೀರಿನ ತೊಟ್ಟಿ ನಿರ್ಮಾಣ ಮಾಡಿರುವುದು ತುಂಬಾ ಅನುಕೂಲವಾಗಿದೆ ಎಂದು ಸನವಳ್ಳಿ ಗ್ರಾಮಸ್ಥ ಪ್ರಾಣಿ ಪ್ರಿಯ ರಾಜು ಗುಬ್ಬಕ್ಕನವರ ಮೆಚ್ಚುಗೆ ವ್ಯಕ್ತಪಡಿಸಿದರು.ಈ ವೇಳೆ ಬೀಟ್ ಫಾರೆಸ್ಟರ್ ರಾಜು ಪರೇಟ್, ವಾಚಮನ್ ಕೃಷ್ಣಾ ದೊಡ್ಡಮನಿ ಮತ್ತು ನಿಶೀಮ ಯಳವಟ್ಟಿ ಇದ್ದರು.

ಉಕ ಜಿಲ್ಲೆಯಿಂದ ಗಡಿಪಾರು

ಅಂಕೋಲಾ: ಕರ್ನಾಟಕ ಪೊಲೀಸ್ ಕಾಯ್ದೆ 1963ರ ಅಡಿಯಲ್ಲಿ ಈಗಾಗಲೇ 10 ಪ್ರಕರಣಗಳು ದಾಖಲಾಗಿದ್ದರೂ ಕಾನೂನುಬಾಹಿರ ಅಪರಾಧ ಚಟುವಟಿಕೆಗಳನ್ನು ಮುಂದುವರಿಸಿದ ಆರು ತಿಂಗಳ ಅವಧಿಗೆ ಉತ್ತರ ಕನ್ನಡ ಜಿಲ್ಲೆಯಿಂದ ಕಲಬುರ್ಗಿ ಜಿಲ್ಲೆಯ ನಗರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಗಡಿಪಾರು ಮಾಡಿ ಆದೇಶ ಹೊರಡಿಸಲಾಗಿದೆ.

ತಾಲೂಕಿನ ಕೇಣಿಯ ಶ್ಯಾಮಸುಂದರ ಜಿ ಬಂಟ(41) ಎನ್ನುವವರು ಗಡಿಪಾರು ಮಾಡಲಾದ ವ್ಯಕ್ತಿಯಾಗಿದ್ದು ಅಂಕೋಲಾ ಪೊಲೀಸ್ ನಿರೀಕ್ಷಕರ ಪ್ರಸ್ತಾವನೆ ಅರ್ಜಿಯ ಮೇರೆಗೆ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಅಧೀಕ್ಷಕರು ವಿಚಾರಣೆ ನಡೆಸಿ ಮತ್ತು ವ್ಯಕ್ತಿಯ ಹಿನ್ನೆಲೆಯನ್ನು ಪರಿಶೀಲಿಸಿ ಗಡಿಪಾರು ಅಗತ್ಯ ಎಂದು ಕಂಡು ಬಂದಿದ್ದರಿಂದ ಗಡಿಪಾರು ಆದೇಶ ಹೊರಡಿಸಿದ್ದಾರೆ. ಅಂಕೋಲಾ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಶ್ಯಾಮಸುಂದರನನ್ನು ಕಲ್ಬುರ್ಗಿಯ ನಗರ ವ್ಯಾಪ್ತಿಯ ಚೌಕ ಪೊಲೀಸ್ ಠಾಣೆಯ ಠಾಣಾಧಿಕಾರಿಗಳ ಎದುರು ಹಾಜರುಪಡಿಸಿದರು.



ಮೃತದೇಹದ ಬೇಡಿಕೆ ಇಟ್ಟ ಕುಟುಂಬಸ್ಥರು

ಅಂಕೋಲಾ: ತಾಲೂಕಿನ ಉಳುವರೆಯಲ್ಲಿ ರೈಲ್ವೆ ಸೇತುವೆ ಬಳಿ ಗಂಗಾವಳಿ ನದಿಯಲ್ಲಿ ಪತ್ತೆಯಾಗಿದ್ದ ಅಪರಿಚಿತ ವ್ಯಕ್ತಿಯ ಮೃತ ದೇಹದ ಕುರಿತಂತೆ ಮಾಹಿತಿ ಲಭ್ಯವಾಗಿದ್ದು ಮೃತನ ವಾರಸುದಾರರು ಅಂಕೋಲಾ ಪೊಲೀಸ್ ಠಾಣೆಗೆ ಭೇಟಿ ನೀಡಿ ಮೃತನ ಕುರಿತಂತೆ ಮಾಹಿತಿ ತಿಳಿಸಿದ್ದಾರೆ. ಮೃತ ವ್ಯಕ್ತಿಯನ್ನು ಮುಂಬೈ ವಿಲೆಪಾರ್ಲೆ ದಕ್ಷಿಣ ಮಿಸ್ಕಿಟಾ ಹೌಸ್ ನಿವಾಸಿ ಪ್ರಸಾದ ಸುಂದರ ಶೆಟ್ಟಿ(52) ಎಂದು ಹೇಳಲಾಗುತ್ತಿದ್ದು ಸುಮಾರು ಐದು ವರ್ಷಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಇವರು ಚಿಕಿತ್ಸೆಗಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಮುಂಬೈನಿಂದ ಉಡುಪಿಯ ಖಾಸಗಿ ಆಸ್ಪತ್ರೆಗೆ ಬರುತ್ತಿದ್ದರು.ಏ. 26ರಂದು ಮುಂಬೈನಿಂದ ಉಡುಪಿಗೆ ರೈಲಿನಲ್ಲಿ ಹೊರಟಿದ್ದ ಅವರು ಏ. 27ರಂದು ಉಡುಪಿ ತಲುಪಿದಾಗ ರೈಲಿನಲ್ಲಿ ಕಾಣಿಸದೇ ಕಾಣೆಯಾಗಿದ್ದರು ಈ ಕುರಿತಂತೆ ಉಡುಪಿ ನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು.ಏ. 27ರಂದೇ ಅಂಕೋಲಾ ತಾಲೂಕಿನ ಉಳುವರೆಯ ರೈಲ್ವೆ ಸೇತುವೆಯ ಕೆಳಗೆ ಗಂಗಾವಳಿ ನದಿಯ ನೀರಿನಲ್ಲಿ ಮೃತದೇಹ ಪತ್ತೆಯಾಗಿದ್ದರಿಂದ ಅಪರಿಚಿತವ್ಯಕ್ತಿಯ ಮೃತ ದೇಹ ಪತ್ತೆಯಾದ ಕುರಿತಂತೆ ಅಂಕೋಲಾ ಪೊಲೀಸರು ಪ್ರಕಟಣೆ ಹೊರಡಿಸಿ ಮೃತದೇಹವನ್ನು ಆಸ್ಪತ್ರೆಯ ಶೈತಾಗಾರದಲ್ಲಿ ಇರಿಸಿದ್ದರು. ಮೃತ ದೇಹ ಪತ್ತೆಯಾಗಿ ಒಂದು ವಾರ ಕಳೆದರೂ ಯಾರೂ ಬಾರದಿರುವ ಯಾವುದೇ ಮಾಹಿತಿ ದೊರಕದಿರುವ ಕಾರಣ ಮೇ 4 ರಂದು ನಿಯಮಗಳ ಪ್ರಕಾರ ಸಂಸ್ಕಾರ ಕಾರ್ಯ ನಡೆಸಲಾಗಿತ್ತು. ಉಡುಪಿಯ ಆಸ್ಪತ್ರೆಗೆ ಹೋಗಲು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿರಾತ್ರಿ ಯಾವುದೋ ಕಾರಣದಿಂದ ಚಲಿಸುತ್ತಿದ್ದ ರೈಲಿನ ಬಾಗಿಲ ಬಳಿ ಬಂದಾಗ ಆಯ ತಪ್ಪಿ ನದಿಗೆ ಬಿದ್ದ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇದೀಗ ಮೃತನ ಕುಟುಂಬದವರು ಮೃತದೇಹ ಬೇಕೆಂದು ಬೇಡಿಕೆ ಇಟ್ಟಿದ್ದರಿಂದ ಹೂತ ಮೃತದೇಹ ಹೊರತೆಗೆಯುವ ಕುರಿತಂತೆ ಅನುಮತಿಗಾಗಿ ವಿವಿಧ ಕಾನೂನಾತ್ಮಕ ಪ್ರಕ್ರಿಯೆಗಳು ನಡೆಯಬೇಕಿವೆ.



ಕಿರುಸುದ್ದಿ

ಇಂಧನ ಪೂರೈಕೆಗೆ ಮುಖ್ಯಮಂತ್ರಿಗಳಿಗೆ ಮನವಿ

ಬ್ಯಾಡಗಿ: ಪಟ್ಟಣ ಹಾಗೂ ಸುತ್ತ ಮುತ್ತಲಿನ ಪ್ರದೇಶದ ಸಾರ್ವಜನಿಕರು, ಆಟೋ ಚಾಲಕರ ಸಂಘ,ಹಾಗೂ ವಿವಿಧ ಸಂಘಟನೆಗಳವರ ಮನವಿಗೆ ಸ್ಪಂದಿಸಿದ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ ಅವರು, ಬ್ಯಾಡಗಿ ಪಟ್ಟಣದಲ್ಲಿ ಎಲ್‌ಪಿಜಿ ಹಾಗೂ ಸಿಎನ್‌ಜಿ ಇಂಧನಗಳ ಪೂರೈಕೆ ಸೌಲಭ್ಯದ ಲಭ್ಯತೆ ಇಲ್ಲದಿರುವುದರಿಂದ ಬ್ಯಾಡಗಿ ಪಟ್ಟಣ ಹಾಗೂ ಸುತ್ತ ಮುತ್ತಲಿನ ಪ್ರದೇಶದ ಸಾರ್ವಜನಿಕರು ಹಾಗೂ ಆಟೋ ಚಾಲಕರು ಹಾವೇರಿ ಜಿಲ್ಲಾ ಕೇಂದ್ರಕ್ಕೆ ಹಾಗೂ ದೂರದ ಪ್ರದೇಶದಿಂದ ಇಂಧನ ತುಂಬಿಸಿಕೊಳ್ಳುವಂಥ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ.

ಈ ಪರಿಸ್ಥಿತಿಯನ್ನು ಕುರಿತು ಪರಿಶೀಲಿಸಿ, ಇಂಧನ ಸೌಲಭ್ಯ ಪೂರೈಸುವ ಕ್ರಮ ಕೈಕೊಳ್ಳಲು ಸಂಬಂಧಿಸಿದವರಿಗೆ ನಿರ್ದೇಶನ ನೀಡಲು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮನವಿ ಮಾಡಿಕೊಂಡಿದ್ದಾರೆ.

ಧಾರ್ಮಿಕ ಪಾಠ ಶಾಲೆಗೆ ಪ್ರವೇಶ ಪ್ರಾರಂಭ

ಗುತ್ತಲ: ಸಮೀಪದ ನೆಗಳೂರ ಗ್ರಾಮದ ಶ್ರೀಗುರುಶಾಂತೇಶ್ವರ ಸಂಸ್ಥಾನ ಹಿರೇಮಠದಆಶ್ರಯದಲ್ಲಿರುವ ಶ್ರೀಜಗದ್ಗುರು ಪಂಚಾಚಾರ್ಯಧಾರ್ಮಿಕ ಪಾಠಶಾಲೆಗೆ ಪ್ರಸಕ್ತ ವರ್ಷಕ್ಕೆ 8ನೇ ತರಗತಿ ವ್ಯಾಸಂಗ ಮಾಡುವ ಹಾಗೂ ಕೇವಲ ವೇದಾಧ್ಯಯನ ಮಾಡಲುಇಚ್ಛಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಾರಂಭವಾಗಿದೆ. ಪ್ರವೇಶಅರ್ಜಿ ಸಲ್ಲಿಸಲು ಮೇ 15 ಕೊನೆಯ ದಿನವಾಗಿದ್ದು, ಮೇ 18 ರಂದುಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಬೆ.10 ರಿಂದ ಸಂಜೆ 5 ವರಗೆ ಶ್ರೀಮಠದಲ್ಲಿ ಸಂದರ್ಶನ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳು ಮೂರು ವರ್ಷಗಳ ಕಾಲ ಶ್ರೀಮಠದ ಆಶ್ರಯದಲ್ಲಿ ಶಾಲಾ ಶಿಕ್ಷಣದ ಜೊತೆಗೆ ವೇದ, ಸಂಸ್ಕೃತ, ಜೋತಿಷ್ಯ ವಿಷಯಗಳ ಅಧ್ಯಯನ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಮೊ:9731381099,9741117174 ಸಂಪರ್ಕಿಸಬಹುದು.

ಸರ್ಕಾರಿ ಕೋಟಾ ಸೀಟುಗಳಿಗೆ ಅರ್ಜಿ ಆಹ್ವಾನ

ಹಾವೇರಿ: ಪ್ರಸಕ್ತ 2026-27ನೇ ಸಾಲಿನ ಡಿ.ಎಲ್. ಇಡಿ., ಡಿ.ಪಿ.ಇಡಿ ಮತ್ತು ಡಿ.ಪಿ.ಎಸ್.ಇ. ಕೋರ್ಸ್‌ಗಳ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ ಪ್ರಕಟಿಸಲಾದ ಅಧಿಸೂಚನೆಯಲ್ಲಿ ಅರ್ಹತೆ, ಮೀಸಲಾತಿ, ಶುಲ್ಕ, ಇತ್ಯಾದಿ ವಿವರ ನೀಡಲಾಗಿದೆ ಮತ್ತು ಇದರೊಂದಿಗೆ ಜಿಲ್ಲಾವಾರು ಡಿ.ಇಲ್.ಇಡಿ., ಡಿ.ಪಿ.ಇಡಿ. ಮತ್ತು ಡಿ.ಪಿ.ಎಸ್.ಇ. ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಕ್ರಮಬದ್ಧವಾಗಿ ಅರ್ಜಿಯನ್ನು ಭರ್ತಿ ಮಾಡಿ ಜೂ.1ರೊಳಗಾಗಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರಕ್ಕೆ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕರ್ಜಗಿ ರಸ್ತೆ, ಹಾವೇರಿ) ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾವೇರಿಯ ನೋಡಲ್ ಅಧಿಕಾರಿ ಎಸ್. ಎಸ್. ಹಂಚಿನಮನಿ, ಉಪನ್ಯಾಸಕರ ಮೊ. 9008031443 ಹಾಗೂ ದ್ವಿ.ದ.ಸ. ರಮೇಶ ಪಾಟೀಲ ಸಂಪರ್ಕಿಸಬಹುದು ಎಂದು ಹಾವೇರಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್ ಡಿಕ್ಕಿ: ವೃದ್ಧೆಗೆ ಗಾಯ

ಹಾವೇರಿ: ರಸ್ತೆ ದಾಟಿ ಅಂಗಡಿಗೆ ಹೋಗುತ್ತಿದ್ದ ವೃದ್ಧೆಯೊಬ್ಬರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕೂರಗುಂದ ಗ್ರಾಮದಲ್ಲಿ ನಡೆದಿದೆ. ಕೂರಗುಂದ ಗ್ರಾಮದ ದ್ಯಾಮವ್ವ ಹನುಮಂತಪ್ಪ ವಡ್ಡರ (53) ಗಾಯಗೊಂಡ ವೃದ್ಧೆಯಾಗಿದ್ದಾರೆ.

ಇವರು ಅಂಗಡಿಗೆ ಹೋಗಲೆಂದು ರಸ್ತೆ ದಾಟುತ್ತಿರುವಾಗ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ. ಚನ್ನೂರು ಗ್ರಾಮದ ಹನುಮಂತಪ್ಪ ಭೀಮಪ್ಪ ತಳವಾರ ಎಂಬಾತನ ವಿರುದ್ಧ ದೂರು ದಾಖಲಿಸಲಾಗಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಲಕ್ಷ್ಮೇಶ್ವರ: ಪಟ್ಟಣದ ಕರೆವಾಡಿಮಠಕ್ಕೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಭೇಟಿ ನೀಡಿದರು. ಕರೆವಾಡಿಮಠದ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯರು, ಸಿದ್ದರಬೆಟ್ಟ ಶ್ರೀಗಳು ಇದ್ದರು. ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿ ಮಂಜುನಾಥಯ್ಯ ದೇವರು ಇತ್ತೀಚಿಗೆ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ಮತ್ತು ಹೊನ್ನಾಳಿ ಹಿರೇಕಲ್ಮಠ ಎಂಬ ಸಂಶೋಧನಾ ಮಹಾಪ್ರಬಂಧ ಮಂಡಿಸಿದ್ದಕ್ಕಾಗಿ ಪಿಎಚ್‌ಡಿ ಲಭಿಸಿದ್ದಕ್ಕೆ ಶ್ರೀಗಳು ಹರ್ಷವ್ಯಕ್ತಪಡಿಸಿದರು.

ದೇಶದ ಹಿತ ಧ್ಯೇಯವಾಗಿಟ್ಟುಕೊಳ್ಳಿ: ಮಾನೆ

ಹಾನಗಲ್ಲ: ಭಾರತೀಯರ ಬುದ್ಧಿವಂತಿಕೆ, ವಿವೇಕವನ್ನು ಒಡೆದಾಳಿ ಬಿಟ್ಟು ಹೋದ ಬ್ರಿಟಿಷರ ಕುತಂತ್ರ ವಿಚಾರಗಳಿಂದ ಮುಕ್ತಿ ಸಿಕ್ಕರೆ ಮಾತ್ರ ಭಾರತ ವಿಶ್ವ ನಾಯಕನಾಗಲು ಸಾಧ್ಯವಿದೆ. ನಮ್ಮ ಹಿತದೊಂದಿಗೆ ದೇಶದ ಹಿತವನ್ನೂ ಧ್ಯೇಯವಾಗಿಟ್ಟುಕೊಂಡರೆ ಮಾತ್ರ ಸಮಾಜ ಗಟ್ಟಿಯಾಗಲಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಶನಿವಾರ ಇಲ್ಲಿನ ಶಾಸಕರ ಮಾದರಿ ಶಾಲೆಯ ಮೈದಾನದಲ್ಲಿ ಪರಿವರ್ತನಾ ಕಲಿಕಾ ಕೇಂದ್ರ, ಆಯೋಜಿಸಿದ್ದ 3ನೇ ವರ್ಷದ ಸಾಧನೆ ಸಂಭ್ರಮ ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಎನ್‌ಎಂಎಂಎಸ್, ಬಿಇಡಿ, ಸ್ನಾತಕೋತ್ತರ ಪದವಿಯಲ್ಲಿ ಸಾಧನೆಗೈದ 375 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿ ಮಾತನಾಡಿದರು.

ರಾಣೇಬೆನ್ನೂರಿನ ಸಂಜೀವಿನಿ ಪದವಿ ಪೂರ್ವ ಕಾಲೇಜಿನ ಪ್ರಾ. ಪ್ರೊ.ಪ್ರಭುಲಿಂಗ ಕೋಡದ ಪ್ರೇರಣಾ ನುಡಿಗಳನ್ನಾಡಿದರು.

ಪ್ರತಿಭಾ ಪುರಸ್ಕಾರ ಪಡೆದ ಪ್ರಿಯಾ ಹರವಿ, ಸಿಂಧೂ ಪವಾರ, ಅನುಷಾ ಹೊನ್ನಮ್ಮನವರ, ಮುಸ್ತಕಿಯಾ ಬಂಕಾಪುರ ಮಾತನಾಡಿದರು.

ಬಿಇಒ ಆರ್.ವಿ.ಚೆನ್ನಿಕಟ್ಟಿ ಸಂವಿಧಾನ ಪೀಠಿಕೆ ಓದಿದರು. ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಪ್ರೊ.ಮಾರುತಿ ಶಿಡ್ಲಾಪೂರ ಪ್ರಾಸ್ತಾವಿಕ ಮಾತನಾಡಿದರು. ತಾಲೂಕಾ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಬಿ.ಉಮೇಶ ಪಾಲ್ಗೊಂಡಿದ್ದರು. ರೆಹಾನಾ ಹಿತ್ತಲಮನಿ ಪ್ರಾರ್ಥಿಸಿದರು. ಸಿದ್ದು ಗೌರಣ್ಣನವರ ನಿರೂಪಿಸಿದರು.



ಹಾನಗಲ್ಲ: ಶನಿವಾರ ಇಲ್ಲಿನ ಶಾಸಕರ ಮಾದರಿ ಶಾಲೆಯ ಮೈದಾನದಲ್ಲಿ ಪರಿವರ್ತನಾ ಕಲಿಕಾ ಕೇಂದ್ರ ಆಯೋಜಿಸಿದ್ದ 3ನೇ ವರ್ಷದ ಸಾಧನೆ ಸಂಭ್ರಮ ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಎನ್‌ಎಂಎಂಎಸ್, ಬಿಇಡಿ, ಸ್ನಾತಕೋತ್ತರ ಪದವಿಯಲ್ಲಿ ಸಾಧನೆಗೈದ 375 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿದರು.

ಪ್ರತಿ ದಿನ ಗಿಡ-ಮರಗಳಿಗೆ ನೀರು ಹಾಕುತ್ತಿರುವ ವಿದ್ಯಾರ್ಥಿಗಳು

ಬೇಸಿಗೆ ರಜೆಯಲ್ಲಿ ಪರಿಸರ ಪ್ರೇಮ

ಸಂತೋಷ ಕುಮಾರ ಪವಾರ

ದಿಗಂತ ವಿಶೇಷ

ರಟ್ಟಿಹಳ್ಳಿ: ಮಕ್ಕಳಿಗೆ ರಜೆಯೆಂದರೆ ಎಲ್ಲಿಲ್ಲದ ಖುಷಿ. ಬಗೆ ಬಗೆಯ ಆಟಗಳು, ವಿನೋದ, ಗೆಳೆಯರ ಭೇಟಿ, ಅಜ್ಜ ಅಜ್ಜಿ ಮನೆಗೆ ಹೋಗುವುದು, ವನ ವಿಹಾರ, ಚಿಕ್ಕ ಚಿಕ್ಕ ಪ್ರವಾಸ ಹೀಗೆ ಸಂತೋಷಕ್ಕೆ ನೂರಾರು ದಾರಿಗಳು. ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಕೆಲವೊಂದು ವಿಷಯಗಳು ದೂರವಾದರೂ ಅವರ ಖುಷಿಗೆ ಮಿತಿಯಿಲ್ಲದ ಆಟಗಳು ಇದ್ದೇ ಇರುತ್ತವೆ. ಇಂದು ಬಹುತೇಕ ಎಲ್ಲ ಮಕ್ಕಳು ಮೊಬೈಲ್ ದಾಸರಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ.

ಮೊಬೈಲ್ ಎಂಬ ಪ್ರಪಂಚ ಅವರ ಬಾಲ್ಯವನ್ನು ಕಿತ್ತುಕೊಳ್ಳುತ್ತಿದೆ. ಆದರೆ ಅದರ ಅರಿವು ಅವರಿಗಿಲ್ಲ. ಆದರೆ ಇಲ್ಲೊಂದು ಶಾಲೆಯಿದೆ ಮಕ್ಕಳಿಗೆ ವಿಶೇಷ ಆಸಕ್ತಿ ಮೂಡಿಸುವ ಜೊತೆಗೆ ಜವಾಬ್ದಾರಿಯನ್ನು ಹಂಚಿ ಕೊಡಲಾಗಿದೆ. ಮಕ್ಕಳು ಅದನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದಾರೆ.

ರಟ್ಟೀಹಳ್ಳಿ ತಾಲೂಕಿನ ಪುಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರೇಮಾದಾಪುರ ಶಾಲಾ ಅಂಗಳದಲ್ಲಿ ಮಕ್ಕಳು, ಶಿಕ್ಷಕರು, ಶಿಕ್ಷಕಿಯರು, ಶಾಲಾ ಸಮಿತಿ ಪದಾಧಿಕಾರಿಗಳುಮತ್ತು ಗ್ರಾಮಸ್ಥರಆಸಕ್ತಿಯಿಂದ ಗಿಡ ಮರಗಳನ್ನು ಬೆಳೆಸಲಾಗಿದೆ. ಹಿಂದೆಂದಿಗಿಂತಲೂ ಇಂದು ಬಿಸಿಲಿನ ತಾಪ ಹೆಚ್ಚಾಗಿದೆ. ಗಿಡ ಮರಗಳನ್ನು ಉಳಿಸಿಕೊಳ್ಳುವುದು ಸಮಸ್ಯೆಯಾಗಿದೆ.



- ದಿನಕ್ಕೆ ನಾಲ್ಕಾರು ಮಕ್ಕಳು ಸೇರಿ ಶಾಲೆಗೆ ಆಗಮಿಸಿ ಅರ್ಧ ಗಂಟೆ ಎಲ್ಲ ಗಿಡಗಳಿಗೆ ನೀರು ಹಾಕುವ ಕಾಯಕ
- ಶಾಲೆಗೆ ಆಗಮಿಸಿ ಗಿಡ ಮರಗಳಿಗೆ ನೀರು ಹಾಕುತ್ತಿರುವುದು ಶ್ಲಾಘನೀಯ

ಗಿಡ ಮರಗಳನ್ನು ಉಳಿಸಿಕೊಳ್ಳಲು ಎಲ್ಲರೂ ಸೇರಿ ಮಕ್ಕಳಿಗೆ ಜವಾಬ್ದಾರಿಯನ್ನು ನೀಡಿದ್ದಾರೆ. ಶಾಲೆಯಲ್ಲಿ 62 ಕ್ಕಿಂತಲೂ ಹೆಚ್ಚಿನ ಮಕ್ಕಳಿದ್ದಾರೆ. ಆದರಲ್ಲಿ ಹಿರಿಯ ತರಗತಿ ಮಕ್ಕಳಿಗೆ ದಿನಕ್ಕೆ ನಾಲ್ಕಾರು ಮಕ್ಕಳು ಸೇರಿ ಶಾಲೆಗೆ ಆಗಮಿಸಿ ಅರ್ಧ ಗಂಟೆ ಎಲ್ಲ ಗಿಡಗಳಿಗೆ ನೀರು ಹಾಕುವ ಕಾಯಕ ಮಾಡುತ್ತಿದ್ದಾರೆ.

ನಿತ್ಯ ಪಾಳಿ ಕೆಲಸದಲ್ಲಿ ಹಂಚಲಾಗಿದೆ. ಮಕ್ಕಳು ತಮ್ಮ ಅವಶ್ಯಕತೆಗೆ ತಕ್ಕಂತೆ ನೀರು ಹಾಕುವ ಕೆಲಸದಲ್ಲಿ ತೊಡಗಿದ್ದಾರೆ. ರಜೆಯಿದ್ದರೂ ಶಾಲೆಗೆ ಆಗಮಿಸಿ ಗಿಡ ಮರಗಳಿಗೆ ನೀರು ಹಾಕುತ್ತಿರುವುದು ಶ್ಲಾಘನೀಯವಾಗಿದೆ. ಈ ಮೂಲಕ ಇಲ್ಲಿನ ಶಿಕ್ಷಕ,ಶಿಕ್ಷಕಿಯರು ,ಶಾಲಾ ಸಮಿತಿ ಪದಾಧಿಕಾರಿಗಳು, ಗ್ರಾಮಸ್ಥರು ಮಕ್ಕಳಲ್ಲಿ ಪರಿಸರ ಪ್ರೇಮವನ್ನು ಸದ್ದಿಲ್ಲದೆ ಬೆಳೆಸುತ್ತಿದ್ದಾರೆ. ಶಾಲಾ ಆವರಣದಲ್ಲಿ ಗಿಡಗಳು, ಮರಗಳು ಬೆಳೆದು ಮಲೆನಾಡಿನ ಸುಂದರ ದೃಶ್ಯವನ್ನು ಮರು ಸ್ಥಾಪಿಸಿದ್ದಾರೆ. ಹೀಗೆ ಎಲ್ಲ ಮಕ್ಕಳೂ ಮತ್ತು ಪಾಲಕರು ಪರಿಸರದಲ್ಲಿನ ಗಿಡ ಮರಗಳ ರಕ್ಷಣೆ ಮಾಡಿದರೆ ಪರಿಸರ ಉಳಿಸಿದಂತೆ ಮತ್ತು ಮುಂದಿನ ಪೀಳಿಗೆಗೆ ಒಂದು ಉತ್ತಮ ವಾತಾವರಣ ಕಲ್ಪಿಸಿಕೊಟ್ಟಂತಾಗುತ್ತದೆ.

ಇಂಗ್ಲಿಷ್ ಸಂವಹನದಿಂದ ಜಾಗತಿಕ ಸಂಪರ್ಕ ಸಾಧ್ಯ

ಹಾವೇರಿ: ವೇಗವಾಗಿ ರೂಪಾಂತರಗೊಳ್ಳುತ್ತಿರುವ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನಗಳ ಕ್ಷೇತ್ರವು ಮಹತ್ವದ ಬದಲಾವಣೆಗಳನ್ನು ಕಂಡಿದೆ. ಇಂಗ್ಲಿಷ್ ಸಂವಹನದಿಂದ ಜಾಗತಿಕ ಮಟ್ಟದ ಸಂಪರ್ಕ ಸಾಧ್ಯ ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ್ ಜಂಗಮಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಇಂಗ್ಲಿಷ್ ವಿಭಾಗವು ಆಯೋಜಿಸಿದ್ದ ಇಂಗ್ಲಿಷ್ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನಗಳಲ್ಲಿ ಉದಯೋನ್ಮುಖ ಮತ್ತು ಪರಿವರ್ತನಾ ಪ್ರವೃತ್ತಿಗಳು: ಸಮಕಾಲೀನ ದೃಷ್ಟಿಕೋನಗಳು ವಿಷಯಗಳ ಕುರಿತು ಜರುಗಿದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲಿಷಿನ ಸಾಂಪ್ರದಾಯಿಕ ಮಿತಿಗಳನ್ನು ಮೀರಿ, ಜಾಗತಿಕ ಸಂವಹನ, ಅಂತರ ಸಾಂಸ್ಕೃತಿಕ ಸಂವಾದ ಮತ್ತು ಬೌದ್ಧಿಕ ವಿನಿಮಯಕ್ಕೆ ಚೈತನ್ಯಮಯ ಮಾಧ್ಯಮವಾಗಿ ರೂಪಾಂತರಗೊಂಡಿದೆ. ಡಿಜಿಟಲ್ ತಂತ್ರಜ್ಞಾನಗಳ ಉದಯ, ಜಾಗತೀಕರಣ ಮತ್ತು ಅಂತರ ವಿಷಯಕ ದೃಷ್ಟಿಕೋನಗಳು ಪಠ್ಯಗಳನ್ನು ಓದುವ, ಅರ್ಥೈಸುವ ಮತ್ತು ಅವುಗಳೊಂದಿಗೆ ತೊಡಗಿಕೊಳ್ಳುವ ವಿಧಾನಗಳನ್ನು ಮಹತ್ವವಾಗಿ ಬದಲಿಸಿವೆ. ಪರಿಸರ ಸಮಸ್ಯೆಗಳು ಮತ್ತು ಸಾಮಾಜಿಕ ನ್ಯಾಯ ಮುಂತಾದ ಸಮಕಾಲೀನ ವಿಚಾರಗಳನ್ನು ಚರ್ಚಿಸುವ ಶಕ್ತಿಶಾಲಿ ಸಾಧನವಾಗಿ ಪರಿಣಮಿಸಿದೆ ಎಂದರು.

ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಎಂ.ಸಿ. ಕೊಳ್ಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಚಾರ ಸಂಕಿರಣದ ಮೊದಲ ಅಧಿವೇಶನದಲ್ಲಿ ಕೊಲ್ಹಾಪುರ ಶಿವಾಜಿ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ. ಪ್ರಭಾಂಜನ ಮಣೆ, ಸಮಕಾಲೀನ ಸಾಹಿತ್ಯದ ವಿಮರ್ಶಾತ್ಮಕ ವಿಧಾನಗಳ ಬಗ್ಗೆ ವಿವರಿಸಿದರು. ಎರಡನೇ ಅಧಿವೇಶನದಲ್ಲಿ ಧಾರವಾಡ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಗುರುನಾಥ ಬಡಿಗೇರ ಅವರುಸಾಂಸ್ಕೃತಿಕ ಅಧ್ಯಯನಗಳಲ್ಲಿ ಹೊಸ ಪ್ರವೃತ್ತಿಗಳ ಬಗ್ಗೆ ಮಾತನಾಡಿದರು.

ಪವಿತ್ರಾ ಮತ್ತು ತಂಡ ಪ್ರಾರ್ಥಿಸಿದರು. ಪ್ರಾಚಾರ್ಯ ಪ್ರೊ.ಎಂ.ಎಂ. ಹೊಳ್ಳಿಯವರ ಸ್ವಾಗತಿಸಿದರು. ವಿಭಾಗದ ಮುಖ್ಯಸ್ಥೆ ಪ್ರೊ.ನಯನಾ ಎಸ್., ಪ್ರೊ. ಶಿವಯೋಗಿ ಎಂ. ಅಂಗಡಿ ಹಾಗೂ ಪ್ರೊ.ಸೌಭಾಗ್ಯ ಕೆ. ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ಗಿರೀಶ ಹೊಸಳ್ಳಿ ವಂದಿಸಿದರು.



ಮೇ 12 ರಂದು ಮಿನಿ ಉದ್ಯೋಗ ಮೇಳ

ಹಾವೇರಿ: ಹಾವೇರಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ವಿವಿಧ ಖಾಸಗಿ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಭರ್ತಿ ಮಾಡಿಕೊಳ್ಳಲು 'ಮಿನಿ ಉದ್ಯೋಗ ಮೇಳ'ವನ್ನು ಮೇ 12 ರಂದು ಬೆಳಗ್ಗೆ 10 ಗಂಟೆಗೆ ಹಾವೇರಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಈ ಮೇಳದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿದ ಪುರುಷ ಹಾಗೂ ಮಹಿಳಾ ಉದ್ಯೋಗಾಕಾಂಕ್ಷಿಗಳು ಭಾಗವಹಿಸಬಹುದಾಗಿದೆ. ಉದ್ಯೋಗಾಕಾಂಕ್ಷಿಗಳು ತಮ್ಮ ಬಯೋಡಾಟಾ ಮತ್ತು ಆಧಾರ್ ಕಾರ್ಡ್ ಝುರಾಕ್ಸ್ ಪ್ರತಿಯೊಂದಿಗೆ ಈ ಮೇಳದಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಂಡು ಹಾಜರಾಗಲು ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕಲ್ಮೇಶ್ವರ, ಮಾತಂಗೆಮ್ಮದೇವಿ ಮರುಪ್ರಾಣ ಪ್ರತಿಷ್ಠಾಪನೆ

ರಾಣೇಬೆನ್ನೂರ: ತಾಲೂಕಿನ ಆರೇಮಲ್ಲಾಪುರ ಗ್ರಾಮದಲ್ಲಿ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸೇವಾ ಸಮಿತಿಯಿಂದ ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ, ವೀರಭದ್ರೇಶ್ವರ ದೇವಸ್ಥಾನಗೋಪುರಕಳಸಾರೋಹಣ, ಕಲ್ಮೇಶ್ವರ ದೇವರ ಮರು ಪ್ರಾಣ ಪ್ರತಿಷ್ಠಾಪನೆ, ಮಾತಂಗೆಮ್ಮ ದೇವಿಯ ಮರುಪ್ರಾಣಪ್ರತಿಷ್ಠಾಪನೆ,ಗ್ರಾಮದಲ್ಲಿ ಕರಗಲ್ಲು ಸ್ಥಾಪನೆ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮ ನಡೆಯಲಿವೆ ಎಂದು ನೆಗಳೂರು ಸಂಸ್ಥಾನಮಠದ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಶ್ರೀಗಳು ಹೇಳಿದರು.



ನಗರದ ಚನ್ನೇಶ್ವರ ಮಠದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮೇ 10ರಂದು ಕಲ್ಮೇಶ್ವರ ದೇವರ ಮತ್ತು ಮಾತಂಗೆಮ್ಮದೇವಿಯಮರುಪ್ರಾಣಪ್ರತಿಷ್ಠಾಪನೆ ಹಾಗೂ ವಟುಗಳ ಲಿಂಗ ದೀಕ್ಷೆ ಕಾರ್ಯಕ್ರಮ ನಡೆಯುತ್ತದೆ. ಸಂಜೆ 7 ಗಂಟೆಗೆ ಧರ್ಮ ಸಭೆ ನಡೆಯುವುದು. ಭಾರತೀಯ ಹಬ್ಬಗಳು ಮತ್ತು ಧರ್ಮ ಕುರಿತು ಪ್ರವಚನ ನಡೆಯುತ್ತದೆ.

ಮೇ 11ರಂದು ಜಗದ್ಗುರು ಪಂಚಾಚಾರ್ಯ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ವೀರಭದ್ರೇಶ್ವರ ಗೋಪುರ ಕಳಸಾರೋಹಣ ಹಾಗೂ ಸಾಮೂಹಿಕ ಮದುವೆ ಕಾರ್ಯಕ್ರಮ ನಡೆಯುವದು. ಮಧ್ಯಾಹ್ನ 12 ಗಂಟೆಗೆ ಜನಜಾಗೃತಿ ಧರ್ಮ ಸಭೆ ನಡೆಯುತ್ತದೆ.

ವಕೀಲ ಪಿ.ಆರ್. ಕುಪ್ಪೇಲೂರ ಅಧ್ಯಕ್ಷತೆ ವಹಿಸುವರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಧರ್ಮ ಸಭೆ ಉದ್ಘಾಟಿಸುವರು. ಶಾಸಕ ಪ್ರಕಾಶ ಕೋಳಿವಾಡ ಅವರು ಮಾತಂಗೆಮ್ಮ ದೇವಿ ದೇವಸ್ಥಾನ ಉದ್ಘಾಟಿಸುವರು. ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರು ಕಲ್ಮೇಶ್ವರ ದೇವಸ್ಥಾನ ಉದ್ಘಾಟಿಸುವರು. ವಿಶೇಷ ಆಹ್ವಾನಿತರಾಗಿ ಸಂಸದ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಆರ್ .ಹೆಬ್ಬಾಳಕರ, ಅರಣ್ಯ ಸಚಿವ ಈಶ್ವರ ಖಂಡ್ರೆ, ಉಪ ಸಭಾಪತಿ ರುದ್ರಪ್ಪ ಲಮಾಣಿ ಆಗಮಿಸುವರು ಎಂದು ಶ್ರೀಗಳು ವಿವರಿಸಿದರು.

ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಬ್ಯಾಡಗಿ: ತಾಲೂಕ ಕದರಮಂಡಲಗಿ ಗ್ರಾಮದಲ್ಲಿ ಸ್ಪಂದನ ಪ್ರೌಢ ಶಾಲೆಯ ವಿದ್ಯಾರ್ಥಿನಿ ನಿವೇದಿತಾ ಪರಶುರಾಮಯ್ಯಾ ಆಜ್ಜಪ್ಪನವರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಪಡೆದ ಪ್ರಯುಕ್ತ ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ್ ಅವರು ವಿದ್ಯಾರ್ಥಿನಿ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿದರು. ಆದೇ ರೀತಿ ಹಾವೇರಿ ಜಿಲ್ಲೆಗೆ 3ನೇ ಸ್ಥಾನ ಪಡೆದ ಮಲ್ಲೂರು ಗ್ರಾಮದ ಭುವನ್ ಕಿರಣಕುಮಾರ್ ಹಾಗೂ ಕೆರವಡಿ ಗ್ರಾಮದ ಗೀತಾ ಕಲ್ಲಯ್ಯ ಇಂಡವಳ್ಳಿ ಇವರಿಗೂ ಸಹಾ ಅವರುಗಳ ನಿವಾಸದಲ್ಲಿ ಸನ್ಮಾನಿಸಿ ಮುಂದಿನ ಅವರ ವಿದ್ಯಾಭ್ಯಾಸ ಯಶಸ್ವಿಯಾಗೆಲೆಂದು ಹಾರೈಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಇಂದು ಪ್ರತಿಭಟನೆ

ರಟ್ಟಿಹಳ್ಳಿ : ಹಾವೇರಿ ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಎಫ್‌ಐಡಿ ಇದ್ದ ರೈತರಿಗೆ ಮಾತ್ರ ರಸಗೊಬ್ಬರ ನೀಡುವುದನ್ನು ನಿಲ್ಲಿಸುವ ಬಗ್ಗೆ ಹಾಗೂ ಜಿಲ್ಲೆಯಲ್ಲಿ 2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರು ಬೆಳೆ ವಿಮೆ ತುಂಬಿದ ರೈತರಿಗೆ ಅನೇಕ ಗ್ರಾಪಂನಲ್ಲಿ ಬೆಳೆ ವಿಮೆ ಮಂಜೂರಾಗದಿರುವ ಬಗ್ಗೆ ಮತ್ತು ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಸೋಮವಾರ ಹಾವೇರಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಹನುಮಂತಪ್ಪ ದೀವಿಗೀಹಳ್ಳಿ ನುಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ಮಾತನಾಡಿ, ರಾಜ್ಯ ಸರ್ಕಾರ ಮುಂಗಾರು ಮಳೆ ಪ್ರಾರಂಭವಾಗುವ ಮುನ್ನ ರೈತರಿಗೆ ರಸ ಗೊಬ್ಬರ ನೀಡುವಲ್ಲಿ ವಿಫಲವಾಗಿ ಗಾಯದಮೇಲೆ ಬರೆ ಎಳೆದಂತಾಗಿದೆ. ಎಫ್‌ಐಡಿ ಮುಖಾಂತರ ರಸಗೊಬ್ಬರ ನೀಡುವುದನ್ನು ನಿಲ್ಲಿಸಬೇಕು. ಹಳೆ ಮಾದರಿಯಲ್ಲಿ ರೈತರಿಗೆ ರಸಗೊಬ್ಬರ ನೀಡಬೇಕು.

ಅನೇಕ ರೈತರ ಹೆಸರಿಗೆ ಇನ್ನೂ ಜಮೀನು ಹಕ್ಕು ಪತ್ರ ನೀಡಿಲ್ಲ, ಇವರಿಗೆ ಸರ್ಕಾರ ಯಾವುದೇ ಸಾಲ ಸೌಲಭ್ಯ ಕೊಟ್ಟಿಲ್ಲ. ಈಗ ಸರ್ಕಾರ ಎಫ್.ಐ.ಡಿ. ಮುಖಾಂತರ ರಸಗೊಬ್ಬರ ನೀಡುವುದಾಗಿ ಹೇಳುತ್ತದೆ. ಹಕ್ಕು ಪತ್ರ ನೀಡದ ರೈತರಿಗೆ ಯಾವರೀತಿ ಗೊಬ್ಬರ ನೀಡುತ್ತದೆ. ಹಳೆ ಮಾದರಿಯಲ್ಲಿ ರೈತರಿಗೆ ರಸಗೊಬ್ಬರ ನೀಡಬೇಕೆಂದು ಈ ಮೂಲಕ ಒತ್ತಾಯಿಸಲಾಗುವದು ಎಂದರು.

ಬಿ.ಡಿ.ಪಾಟೀಲ ಚಂದ್ರಶೇಖರ ಕುದರಿಹಾಳ, ಮಲ್ಲಮ್ಮ ಹೂ, ಹುಲ್ಲಿನಕೊಪ್ಪ, ನಾಗರತ್ನ ಬಡೇನಾಯ್ಕರ, ಚಂದ್ರಪ್ಪ ಮಾನೇರ, ಶಿವಪ್ಪ ಜವನವರ, ಲಲಿತಮ್ಮ ಮಠದ, ಗುತ್ತೆವ್ವ ಸುಣಗಾರ ಬಸವರಾಜ, ಟಿ. ಕೆಳಗಿನಮನಿ, ಶಶಿಕಲಾ ಗ, ಹಾರೀಕಟ್ಟಿಕಾವ್ಯಾ ಹುಡೇದಪೂಜಾ ಹ, ವ್ಯಾಚರಬಸವರಾಜ ಕೋಡಿಹಳ್ಳಿ, ಚಂದ್ರಯ್ಯ ಮಠದ.,ರಮೇಶ ಓಬಳೇರ ರವಿ ಎಸ್. ಮಾಳಗೇರ, ಚನ್ನಮ್ಮಸಾತೇನಹಳ್ಳಿ, ಕನಗೌಡ, ಭ.ಕನಗೌಡ್ರ, ಅಶೋಕ ಶಿಡಗನಾಳ, ಜ್ಯೋತಿ ಎಲವದಹಳ್ಳಿ ಮತ್ತು ರೈತರು ಪ್ರತಿಭಟನೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕೌಶ್ಯಲದ ಜೊತೆಗೆ ಸಮಯಪ್ರಜ್ಞೆ ಬೆಳೆಸಿಕೊಳ್ಳಲಿ

ಹಾವೇರಿ: ವಿದ್ಯಾರ್ಥಿಗಳು ಕಾಲೇಜ್ ದಿನಗಳಲ್ಲೇ ಕೌಶ್ಯಲದ ಜತೆಗೆ ಸಮಯಪ್ರಜ್ಞೆ ಬೆಳೆಸಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದು ನಗರದ ಚರ್ಮರೋಗ ತಜ್ಞ, ರಕ್ಷಾ ಹೆಲ್ತ್ ಕೇರ್ ಚೇರ್ಮನ್ ಡಾ.ರಾಘವೇಂದ್ರ ಜಿಗಳಿಕೊಪ್ಪ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ತಾಲೂಕಿನ ದೇವಗಿರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜ್‌ನಲ್ಲಿ ಆಯೋಜಿಸಿದ್ದ ಕಾಲೇಜ್ ವಾರ್ಷಿಕೋತ್ಸವ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೌಶ್ಯಲ ತೀರಾ ಅಗತ್ಯವಾಗಿದ್ದು, ತರಗತಿ ಹಾಗೂ ಪ್ರಾಯೋಗಿಕ ಕಲಿಕೆಯ ಜತೆಯಲ್ಲೇ ಕೌಶಲಗಳನ್ನೂ ರೂಢಿಸಿಕೊಳ್ಳಬೇಕು. ತಮ್ಮ ವೃತ್ತಿಗೆ ಅಗತ್ಯವಿರುವ ಎಲ್ಲ ಕೌಶಲಗಳು ನಿಮ್ಮಲ್ಲಿ ಇದ್ದರೆ ಸುಲಭವಾಗಿ ಉತ್ತಮವಾದ ಅವಕಾಶಗಳು ನಿಮ್ಮನ್ನು ಅರಸಿ ಬರುತ್ತವೆ ಎಂದರು.

ಅಧ್ಯಕ್ಷತೆ ವಹಿಸಿಕೊಂಡಿದ್ದ ಪ್ರಾಂಶುಪಾಲ ಡಾ.ಮುನಿರಾಜು ಎಂ. ಕಾಲೇಜ್‌ನ ವಾರ್ಷಿಕ ವರದಿ ವಾಚನ ಮಾಡಿದರು. ಸಮಾರಂಭದಲ್ಲಿ ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ.ಈರಪ್ಪ ಹುನಗುಂದ, ಸಿವಿಲ್ ವಿಭಾಗದ ಡಾ.ವಾಹಿನಿ ಎಂ., ಇಸಿ ವಿಭಾಗದ ಡಾ.ಯಶವಂತಕುಮಾರ ಟಿ.ಆರ್., ಕಂಪ್ಯೂಟರ್ ಸೈನ್ಸ್ ವಿಭಾಗದ ಡಾ.ನವೀನ್ ಟಿ.ಎಚ್., ಪ್ರಥಮ ವರ್ಷದ ಸಂಯೋಜಕ ಡಾ.ಕಾಂತರಾಜ ಕೆ.ಪಿ., ರಜಿಸ್ಟ್ರಾರ್ ಜಿ.ಮಂಜುನಾಥ ಇತರರು ಇದ್ದರು.



ನೃತ್ಯ, ಗಾಯನದ ಸಂಭ್ರಮ ವೇದಿಕೆ ಸಮಾರಂಭದ ಬಳಿಕ ವಿದ್ಯಾರ್ಥಿಗಳಿಂದ ಆಕರ್ಷಕವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ವಿದ್ಯಾರ್ಥಿಗಳು ಸಮೂಹ ನೃತ್ಯ, ಗಾಯನ, ನಾಟಕ ಪ್ರದರ್ಶನ ನೀಡಿ ಗಮನ ಸೆಳೆದರು.

ರೆಡ್ ಕ್ರಾಸ್ ಸಂಸ್ಥೆಯ ಕಾರ್ಯ ಶ್ಲಾಘನೀಯ

ಹಾವೇರಿ: ಸಂಕಷ್ಟಕರ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ಸೇವಾ ಕಾರ್ಯ ಮಾಡುವ ಗುರಿ ಉದ್ದೇಶ ಹೊಂದಿರುವ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಪ್ರಾಧಿಕಾರದ ಸದ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್ .ವಿ ಅವರು ಹೇಳಿದರು.

ನಗರದ ಸಿಂದಗಿ ಶಾಂತವೀರೇಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಡಾ.ತೋಂಟದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳವರ ಸಭಾಂಗಣದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಹಾವೇರಿ ಜಿಲ್ಲಾ ಶಾಖೆ ಹಾಗೂ ಸಿಂದಗಿ ಶಾಂತವೀರೇಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಸಹಯೋಗದಲ್ಲಿ ಆಯೋಜಿಸಲಾದ ಜೀನ್ ಹೆನ್ರಿ ಡ್ಯೂನಾಂಟ್ ರವರ ಜನ್ಮದಿನ-ವಿಶ್ವ ರೆಡ್ ಕ್ರಾಸ್ ದಿನಾಚಾರಣೆ, ವೈಆರ್‌ಸಿ ಘಟಕ ಸ್ಥಾಪನೆ ಹಾಗೂ ವೈಆರ್‌ಸಿ ಮತ್ತು ಜೆಆರ್‌ಸಿ ಮಾರ್ಗಸೂಚಿ ಕೈಪಿಡಿ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಮಾನವೀಯ ತತ್ವದಡಿ ಯುದ್ಧ ವಿಕೋಪ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಮತ್ತು ಆರೋಗ್ಯಕರ ಜನರ ಸೇವೆ ಮಾಡುವ ಕೆಲಸವನ್ನು ರೆಡ್ ಕ್ರಾಸ್ ಮಾಡುತ್ತಿದೆ. ಕೋವಿಡ್, ಅತಿವೃಷ್ಟಿ ನೆರೆ ಹಾವಳಿ ಸಂದರ್ಭದಲ್ಲಿ ರೆಡ್ ಕ್ರಾಸ್ ಸ್ವಯಂ ಸೇವಕರಾಗಿ ಕೆಲಸ ಮಾಡಿರುವುದನ್ನು ನೋಡಲಾಗಿದ್ದು, ವಿದ್ಯಾರ್ಥಿಗಳು ಯುವ ಜನರು ರೆಡ್ ಕ್ರಾಸ್ ಸಂಸ್ಥೆಯ ಮೂಲಕ ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕಾಗಿದೆ. ಸಮಾಜದಲ್ಲಿ ಆರೋಗ್ಯಕರ ವಾತಾವರಣ ಮೂಡಿಸುವ ಕಾರ್ಯಕ್ರಮಗಳನ್ನು ರೆಡ್ ಕ್ರಾಸ್ ಸಂಸ್ಥೆ ಮಾಡಲಿ ಎಂದು ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಗೌರವ ಕಾರ್ಯಾಧ್ಯಕ್ಷ ಸಂಜೀವಕುಮಾರ ನೀರಲಗಿ ವೈಆರ್‌ಸಿ ಘಟಕ ಉದ್ಘಾಟಿಸಿ, ವೈಆರ್‌ಸಿ ಮತ್ತು ಜೆಆರ್‌ಸಿ ಮಾರ್ಗಸೂಚಿ ಕೈಪಿಡಿ ವಿತರಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಿಂದಗಿ ಶಾಂತವೀರೇಶ್ವರ ಆಯುರ್ವೇದ ವೈದಕೀಯ ಮಹಾವಿದ್ಯಾಲಯದ ಆಡಳಿತಾಧಿಕಾರಿ ವಿ.ಎಚ್.ಕೆ ಹಿರೇಮಠ ಮಾತನಾಡಿದರು. ವೈಆರ್‌ಸಿ ಪ್ರೋಗ್ರಾಮಿಂಗ್ ಆಫೀಸರ್‌ಗಳಾದ ಡಾ.ಸಂಗಮೇಶ ದೊಡ್ಡಗೌಡರ, ದೇವರಾಜ ಕುಂಬಾರ, ಡಾ.ಅಶ್ವಿನಿ ಹತ್ತಿಕಾಳ ಇನ್ನಿತರರಿಗೆ ವೈಆರ್ ಸಿ-ಜೆಆರ್‌ಸಿ ಕೈಪಿಡಿ ವಿತರಿಸಲಾಯಿತು.

ರೆಡ್‌ಕ್ರಾಸ್ ರಾಜ್ಯ ಸಮಿತಿ ಸದಸ್ಯರಾದ ರವಿ ಮೆಣಸಿನಕಾಯಿ, ಖಜಾಂಚಿ ಪ್ರಭು ಹಿಟ್ನಳ್ಳಿ, ಸಹಕಾರ್ಯದರ್ಶಿ ಡಾ.ಪ್ರದೀಪ ದೊಡ್ಡಗೌಡ್ರ, ಸಿದ್ದರಾಜ ಕಲಕೋಟಿ, ಎಸ್‌ಸಿ ಹಿರೇಮಠ, ಉಡಚಪ್ಪ ಮಾಳಗಿ, ವಿಜಯಕುಮಾರ ಚಿನ್ನಿಕಟ್ಟಿ, ಶಂಕರ ಮೇಹರವಾಡೆ, ಪೂರ್ಣಿಮಾ ಮಠದ, ಡಾ. ಅಂಕಿತ ಆನಂದ, ಡಾ.ದಯಾನಂದ ಸುತ್ತಕೋಟಿ, ಡಾ.ಜಿ.ಎಸ್ ಭಟ್, ಡಾ.ಕಲ್ಲನಗೌಡ ಇತರರು ಉಪಸ್ಥಿತರಿದ್ದರು.

ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಗೌರವ ಕಾರ್ಯದರ್ಶಿ ನಿಂಗಪ್ಪ ಆರೇರ ಪ್ರಾಸ್ತವಿಕವಾಗಿ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಡಾ.ಸಿ.ಎನ್. ಗೌಡರ ಸ್ವಾಗತಿಸಿ, ರೆಡ್ ಕ್ರಾಸ್ ನೋಂದಣಿ ಪತ್ರ ಸ್ವೀಕರಿಸಿದರು.

ಸಮ ಸಮಾಜ ನಿರ್ಮಾಣಕ್ಕೆ ಆದ್ಯತೆ ನೀಡಿ: ಶ್ರೀಗಳು

ಹಾನಗಲ್ಲ: ಹಿಂದಿನಿಂದಲೂ ದಾನಿಗಳು ಕೊಟ್ಟ ಭೂಮಿಯಲ್ಲಿಯೇ ಆಸ್ಪತ್ರೆ, ಶಾಲೆ, ಸಮುದಾಯ ಭವನ ನಿರ್ಮಿಸಲಾಗಿದೆ. ಆದರಿಂದು ಮನಸ್ಥಿತಿ ಬದಲಾಗಿದ್ದು ಸ್ಮಶಾನಕ್ಕೂ ಭೂಮಿ ಸಿಗದಂಥ ಪರಿಸ್ಥಿತಿ ಉದ್ಭವಗೊಂಡಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಗಂಗಾಮತ ಸಮುದಾಯದ ಗಂಗಾ ಪರಮೇಶ್ವರಿ ಸಮುದಾಯ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಭೋಜನಾಲಯ ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ 15 ವರ್ಷಗಳ ಗಂಗಾಮತ ಸಮಾಜ ಬಂಧುಗಳ ಪ್ರಯತ್ನದ ಫಲವಾಗಿ ಸುಸಜ್ಜಿತವಾದ ಸಮುದಾಯ ಭವನ ನಿರ್ಮಾಣಗೊಂಡಿದೆ. ಸಮ ಸಮಾಜ ನಿರ್ಮಾಣದ ಪರಿಕಲ್ಪನೆಯನ್ನು ಆ ದಿನಗಳಲ್ಲಿಯೇ ಕಂಡಿದ್ದ ಅಂಬಿಗರ ಚೌಡಯ್ಯ ಅವರ ವಚನಗಳ ನಿಜ ಸಾರ ತಿಳಿದು ಮೇಲು, ಕೀಳು ಭಾವನೆ ಬಿಟ್ಟು ಎಲ್ಲರೂ ಒಂದಾಗಿ ಬದುಕಬೇಕಿದೆ ಎಂದು ಹೇಳಿದರು.



ಸಾನ್ನಿಧ್ಯ ವಹಿಸಿದ್ದ ಹುಬ್ಬಳ್ಳಿಯ ವ'ೂರ'ಸಾವಿರ'ವ'ಠ'ದ' ಡಾ.ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, ಮನಸ್ಸು ಮನಸ್ಸುಗಳನ್ನು ಕಟ್ಟುವ ಕೆಲಸಕ್ಕೆ ಆದ್ಯತೆ ನಮ್ಮ ಮನಸ್ಸಿನಲ್ಲಿದ್ದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಸಮಾಜದಲ್ಲಿ ವ್ಯಕ್ತಿಯ ದಾನ ತ್ಯಾಗದಿಂದ ಒಳ್ಳೆಯ ಕೆಲಸಗಳು ಸಾಧ್ಯ. ಅದಕ್ಕಾಗಿ ಸಮಾಜವನ್ನು ಒಟ್ಟಾಗಿ ಜೋಡಿಸಿಕೊಂಡು ಹೋಗುವ ಸಮರ್ಥ ನಾಯಕರ ಕೈಯಲ್ಲಿ ಸಮಾಜ ಇರಬೇಕು. ನಿಜಶರಣ ಅಂಬಿಗರ ಚೌಡಯ್ಯನವರ ಪೀಠ ಸ್ಥಾಪನೆಯಿಂದ ಈ ಸಮುದಾಯದಲ್ಲಿ ಒಳ್ಳೆಯ ಒಗ್ಗಟ್ಟು ಸಾಧಿಸುತ್ತಿದೆ ಎಂದರು.

ಮಾಜಿ ಸಚಿವ, ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠದ ಕಾರ್ಯಾಧ್ಯಕ್ಷ ಪ್ರಮೋದ ಮಧ್ವರಾಜ, ವಿಪ ಮುಖ್ಯ ಸಚೇತಕ ಎನ್.ರವಿಕುಮಾರ ಮಾತನಾಡಿದರು. ಸುಕ್ಷೇತ್ರ ನರಸಿಪುರ ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಸಾನಿಧ್ಯವಹಿಸಿದ್ದರು.

ಸಮುದಾಯ ಭವನ ನಿರ್ಮಾಣಕ್ಕೆ ಭೂದಾನ ಮಾಡಿದ ಚಂದ್ರಶೇಖರ, ಮೋಹನ, ಪ್ರಭು, ಮಾಲತಿ ಮಲಗುಂದ ಹಾಗೂ ಚಂದ್ರಕಲಾ ಶಿವಪುತ್ರಪ್ಪ ಶೇಷಗಿರಿ ಅವರನ್ನು ಸನ್ಮಾನಿಸಲಾಯಿತು. ಗಂಗಾಮತ ಸಮಾಜ ಸೇವಾ ಸಂಸ್ಥೆ ಅಧ್ಯಕ್ಷ ಅನಂತವಿಕಾಸ ನಿಂಗೋಜಿ ಅಧ್ಯಕ್ಷತೆ ವಹಿಸಿದ್ದರು. ಧಾರವಾಡದ ನೆಲ ಜಲ ನಿರ್ವಹಣಾ ವಿಭಾಗದ ಅಧೀಕ್ಷಕ ಅಭಿಯಂತರ ಬಿ.ವೈ.ಬಂಡಿವಡ್ಡರ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಭೋಜರಾಜ ಕರೂದಿ, ಲಕ್ಷ್ಮೀ ನಾರಾಯಣಗೌಡ ಪಾಟೀಲ, ತಾಲೂಕು ಗಂಗಾಮತ ಸಮಾಜದ ಅಧ್ಯಕ್ಷ ಪ್ರದೀಪ ಶೇಷಗಿರಿ, ಹಾನಗಲ್ಲ ನಗರ ಘಟಕದ ಅಧ್ಯಕ್ಷ ಭಾಸ್ಕರ ಹುಲಮನಿ, ನೌಕರರ ಘಟಕದ ಅಧ್ಯಕ್ಷ ಎಸ್.ಎಫ್.ಕಠಾರಿ ಮುಖ್ಯ ಇದ್ದರು. ಮಮತಾ ಹಾಗೂ ಅಶೋಕ ಆರೆಗೊಪ್ಪ ಪ್ರಾರ್ಥಿಸಿದರು. ಕಾರ್ಯದರ್ಶಿ ನಾಗರಾಜ ಬಾರ್ಕಿ ಸ್ವಾಗತಿಸಿದರು. ಬಾಲಚಂದ್ರ ಅಂಬಿಗೇರ ಕಾರ್ಯಕ್ರಮ ನಿರೂಪಿಸಿದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ: ಹುವಿಸಕಂನಿ ವತಿಯಿಂದ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮೇ 10ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 33 ಕೆ.ವ್ಹಿ. ಕಾಕತಿ ಉಪಕೇಂದ್ರದಿಂದ ಸರಬರಾಜು ಆಗುವ ಬೆಳಗಾವಿ ತಾಲೂಕಿನ ಕಾಕತಿ, ಕಂಗ್ರಾಳಿ ಬಿ.ಕೆ, ಗೌಂಡವಾಡ, ದೇವಗಿರಿ, ಬೆನ್ನಾಳಿ, ಗುಂಜ್ಯಾನಟ್ಟಿ, ಕೇದನೂರ, ಮನ್ನಿಕೇರಿ, ಹಂದಿಗನೂರ, ಚೆಲ್ವೆನಟ್ಟಿ, ಮಾಳಿನಟ್ಟಿ, ಅತಿವಾಡ, ಕಟ್ಟಣಭಾವಿ, ಕುರಿಹಾಳ, ಬೋಡಕ್ಯಾನಟ್ಟಿ, ನಿಂಗ್ಯಾನಟ್ಟಿ, ಶಿವಾಪೂರ, ಪರಶ್ಯಾನಟ್ಟಿ, ಇದ್ದಲಹೊಂಡ, ಗುರಾಮಟ್ಟಿ, ಹುಲ್ಯಾನೂರ, ಬುಡ್ರ್ಯಾನೂರ, ಧರನಟ್ಟಿ, ಕಡೋಲಿ, ಆಗಸಗಾ, ಜಾಫರವಾಡಿ, ಸೊನಟ್ಟಿ ಹಾಗೂ ಹೊನಗಾ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹು.ವಿ.ಸ.ಕಂ.ನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಚಿಕ್ಕೋಡಿ: ಬೆಂಗಳೂರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ವತಿಯಿಂದ 2026ನೇ ಸಾಲಿನ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.




2026ನೇ ಸಾಲಿನಲ್ಲಿ ಪರೀಕ್ಷೆ ಬರೆದು ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಎಸೆಸೆಲ್ಸಿ ಪಿಯುಸಿ ವಿದ್ಯಾರ್ಥಿಗಳು ಮೇ 26 ರೊಳಗಾಗಿ https://powermedia.info ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ತಂದೆ-ತಾಯಿ ಕರ್ನಾಟಕ ರಾಜ್ಯ ಸರ್ಕಾರದ ಖಾಯಂನೌಕರರಾಗಿರಬೇಕು. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಮತ್ತು ಅನುದಾನಿತ ವಿದ್ಯಾಸಂಸ್ಥೆಯ ನೌಕರರು ಅರ್ಜಿ ಸಲ್ಲಿಸುವಂತಿಲ್ಲ, ಹೆಚ್ಚಿನ ಮಾಹಿತಿಗಾಗಿ 9844440661, 7353906460, 9972140436 ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚಿಕ್ಕೋಡಿ ಜಿಲ್ಲಾಧ್ಯಕ್ಷ ಬಿ ಎ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್‌ಡಿ ಪ್ರದಾನ

ಸಂಕೇಶ್ವರ: ಗಡಿ ಭಾಗದಲ್ಲಿನ ಮಹಾರಾಷ್ಟ್ರದ ಗಡಹಿಂಗ್ಲಜ್ ತಾಲೂಕಿನ ನಿಲಜಿ ಗ್ರಾಮದ ಅಕ್ಷಯ ಕಲಗೌಡ ಪಾಟೀಲ ಅವರಿಗೆ ಕೆಎಲ್‌ಇ ಅಕಾಡೆಮಿ ಆಫ ಹೈಯರ್ ಎಜುಕೇಶನ್ ಮತ್ತು ಸಂಶೋಧನಾ ವಿಶ್ವವಿದ್ಯಾಲಯವು



(ಡಿಮ್ಡ) ಪಿ.ಎಚ್.ಡಿ ಪ್ರದಾನಿಸಿ ಗೌರವಿಸಿದೆ.ಔಷಧ ವಿಜ್ಞಾನ ಶಾಸ್ತ್ರದಲ್ಲಿ ಅವರು ಮಂಡಿಸಿದ್ದ ಪ್ರಬಂಧಕ್ಕೆ ಪಿಎಚ್‌ಡಿ ನೀಡಲಾಗಿದೆ. ಕೆಎಲ್‌ಇ ಔಷಧಿ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಸುನೀಲ ಜಲಲಾಪೂರೆ ಮಾರ್ಗದರ್ಶನ ಮಾಡಿದ್ದರು. ಅಕ್ಷಯ ಪಾಟೀಲ ಅವರು ಹಿರಿಯ ಪತ್ರಕರ್ತ ಕೆ.ಎಂ.ಪಾಟೀಲ ಅವರ ಸುಪುತ್ರ ಆಗಿದ್ದಾರೆ.

ಬೋರ್‌ವೆಲ್ ವಿಚಾರಕ್ಕೆ ಹಲ್ಲೆ

ಬೆಳಗಾವಿ: ತಾಲೂಕಿನ ಧಾಮಣೆ ಎಸ್. ಗ್ರಾಮದಲ್ಲಿ ಬೋರ್ ವೆಲ್ ಹಾಕುವಾಗ ವಾಹನ ಬೇರೆಯವರ ಜಮೀನಿನಲ್ಲಿ ನಿಲ್ಲಿಸಿದ್ದಕ್ಕೆ ರೈತ ಹಾಗೂ ಆತನ ಮಗನ ಮೇಲೆ ತಲ್ವಾರ್ ಹಾಗೂ ಜಂಬೆಯಿಂದ ಹಲ್ಲೆ ಮಾಡಿದ ಘಟನೆ ಶುಕ್ರವಾರ ನಡೆದಿದೆ. ಜೀವಪ್ಪ ಗಾವಡೆ ಎಂಬ ರೈತನ ಮೇಲೆ ತಲ್ವಾರ್ ಹಾಗೂ ಜಂಬೆಯಿಂದ ಹಲ್ಲೆ ಮಾಡಿದ್ದಾರೆ. ಜಮೀನಿನಲ್ಲಿ ಬೋರ್ ವೆಲ್ ಹಾಕಲು ಬಿಡದ ದುಷ್ಕರ್ಮಿಗಳು ನಮ್ಮ ಜಮೀನು ಕಬ್ಜಾ ಮಾಡಲು ಹುನ್ನಾರ ನಡೆಸಿದ್ದರು. ಪದೇ ಪದೇ ನಮ್ಮ ಮೇಲೆ ದಬ್ಬಾಳಿಕೆ ಜಮೀನು ವಶಪಡಿಸುವ ಹುನ್ನಾರ ನಡೆಸಿದ್ದರು. ಆಗಾಗ ಅವರ ನಡುವೆ ಜಗಳ ಆಗುತ್ತಿತ್ತು. ಆದರೆ ಶುಕ್ರವಾರರಂದು ಏಕಾಏಕಿ ಯಾಗಿ ತಲ್ವಾರ್ ಹಾಗೂ ಜಂಬೆಯಿಂದ ಹಲ್ಲೆ ಮಾಡಿದ್ದು, ಜೀವಪ್ಪ ಗಂಭೀರವಾಗಿ ಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆದಾಖಲಿಸಿದ್ದಾರೆ. ಹಲ್ಲೆ ನಡೆಸುವ ಸಾಧ್ಯತೆ ಇದೆ. ನಮಗೆ ರಕ್ಷಣೆ ನೀಡುವಂತೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ರಕ್ಷಣೆ ನೀಡುವಂತೆ ಮನವಿ ಮಾಡಿದರೂ ನಮಗೆ ಸ್ಪಂದಿಸಲಿಲ್ಲ ಎಂದು ಅನಿಲ್ ಗಾವಡೆ ಆರೋಪಿಸಿದ್ದಾರೆ. ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಈಶ್ವರಪ್ಪ ಹೂಗಾರ ನಿಧನ

ಯರಗಟ್ಟಿ: ಸ್ಥಳೀಯ ನಿವಾಸಿ ವೀರಶೈವ ಲಿಂಗಾಯತ ಸಮಾಜದ ಹಿರಿಯರಾದ ಈಶ್ವರಪ್ಪ ಮಹಾದೇವಪ್ಪ ಹೂಗಾರ (80) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರು, ಸಹೋದರರು, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ರಾಯಬಾಗ: ವಿಪ ಮಾಜಿ ಸದಸ್ಯ ಹಾಗೂ ಕೆಎಂಎಫ್ ನಿರ್ದೇಶಕರಾದ ವಿವೇಕರಾವ ಪಾಟೀಲ ಅವರು ಶ್ರೀ ಮಹಾಲಕ್ಷ್ಮೀ ದೇವಿಯ ದರ್ಶನವನ್ನು ಪಡೆದರು. ಜಾತ್ರಾ ಕಮೀಟಿಯ ಸದಸ್ಯರಾದ ರಮೇಶಕುಂಬಾರ, ರಾಜು ಮಾತ್ರೆ, ರಾಮಚಂದ್ರ ಹೆಗಡೆ, ಅಶೋಕ ಅಂಗಡಿ, ಸಂತೋಷಮೇತ್ರ, ಅಮಿತ ಹೋಂಕಳೆ, ಸಂಜು ಬಾವಚೆ, ಪ್ರತಾಪ ಹೊಸಮನಿ ಭಕ್ತಾಧಿಗಳು ಉಪಸ್ಥಿತರಿದ್ದರು.

ಶ್ರೀ ಸೀಮಿ ಲಕ್ಷ್ಮೀದೇವಿ ದೇವಸ್ಥಾನ ಕಟ್ಟಡದ ಅಡಿಗಲ್ಲು ಪೂಜಾ ಕಾರ್ಯಕ್ರಮ

ಅಥಣಿ: ತಾಲೂಕಿನ ನದಿ ಇಂಗಳಗಾಂವ ಹಾಗೂ ತೀರ್ಥ ಗ್ರಾಮದ ಗಡಿ ಭಾಗದಲ್ಲಿರುವ ಶ್ರೀ ಸೀಮಿ ಲಕ್ಷ್ಮೀದೇವಿ ದೇವಸ್ಥಾನ ಕಟ್ಟಡದ ಅಡಿಗಲ್ಲು ಪೂಜಾ ಕಾರ್ಯಕ್ರಮವನ್ನು ಶಾಸಕ ಲಕ್ಷ್ಮಣ ಸವದಿ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನದಿ ಇಂಗಳಗಾಂವ ಮತ್ತು ತೀರ್ಥ ಗ್ರಾಮಸ್ಥರ ಹಲವು ವರ್ಷಗಳ ಬೇಡಿಕೆಯಾಗಿದ್ದ ಈ ದೇವಸ್ಥಾನ ನಿರ್ಮಾಣಕ್ಕೆ ಸರ್ಕಾರದಿಂದ ಅಗತ್ಯ ಅನುದಾನ ಒದಗಿಸಲಾಗುವುದು ಈ ದೇವಾಲಯವು ಎರಡೂ ಗ್ರಾಮಗಳ ಭಾವೈಕ್ಯತೆಯ ಸಂಕೇತವಾಗಲಿದೆ ಎಂದರು.

ಈ ವೇಳೆ ದೇವಸ್ಥಾನದ ನಿರ್ಮಾಣಕ್ಕೆ ಭೂ ದಾನ ಮಾಡಿದ ಪ್ರವೀಣ ನಾಡಗೌಡ ಹಾಗೂ ವಿಜಯ ಮಹಾಂತೇಶ ನಾಡಗೌಡ ತೇರದಾಳ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ಶಿವರುದ್ರ ಗೂಳಪ್ಪನ್ನವರ, ಸಂಜಯ ನಾಡಗೌಡ,ಮಲ್ಲಪ್ಪ ಠಕ್ಕಣ್ಣವರ,ಅಲಗೌಡ ಮುದಿಗೌಡರ,ಸಂಗಪ್ಪ ಸಾವಂತ್ರಿ, ಪರೀಧ ನನ್ನೆ, ಅಪ್ಪು ಮಧಬಾವಿ, ವಿಜಯ ಕಾಂಬಳೆ, ಚಿದಾನಂದ ಕಾಂಬಳೆ, ಮಹಾಂತೇಶ ಗೂಳಪ್ಪನ್ನವರ, ನಾಗಪ್ಪ ಗೂಳಪ್ಪನ್ನವರ, ಲಕ್ಕಪ್ಪ ಠಕ್ಕಣ್ಣವರ, ರಾವಸಾಬ ಪಾಟೀಲ, ರಾಮಣ್ಣ ಯಡೂರ,ಉಸ್ಮಾನ ನದಾಫ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.



ಅಥಣಿ: ತಾಲೂಕಿನ ನದಿ ಇಂಗಳಗಾಂವ ಹಾಗೂ ತೀರ್ಥ ಗ್ರಾಮದ ಗಡಿ ಭಾಗದಲ್ಲಿರುವ ಶ್ರೀ ಸೀಮಿ ಲಕ್ಷ್ಮೀದೇವಿ ದೇವಸ್ಥಾನ ಕಟ್ಟಡದ ಅಡಿಗಲ್ಲು ಪೂಜಾ ಕಾರ್ಯಕ್ರಮವನ್ನು ಶಾಸಕ ಲಕ್ಷ್ಮಣ ಸವದಿ ನೆರವೇರಿಸಿದರು. ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ಶಿವರುದ್ರ ಗೂಳಪ್ಪನ್ನವರ, ಸಂಜಯ ನಾಡಗೌಡ,ಮಲ್ಲಪ್ಪ ಠಕ್ಕಣ್ಣವರ,ಅಲಗೌಡ ಮುದಿಗೌಡರ,ಸಂಗಪ್ಪ ಸಾವಂತ್ರಿ, ಪರೀಧ ನನ್ನೆ, ಅಪ್ಪು ಮಧಬಾವಿ, ವಿಜಯ ಕಾಂಬಳೆ, ಚಿದಾನಂದ ಕಾಂಬಳೆ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

ಮನೆಗಳ್ಳತನಕ್ಕೆ ಬ್ರೇಕ್ ಹಾಕಲು ಮಾಸ್ಟರ್ ಪ್ಲ್ಯಾನ್

ಮನೆಗಳ ಮೇಲೆ ಪೊಲೀಸರ್ ನಿಗಾ!

ಬೆಳಗಾವಿ: ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಮನೆಗಳ್ಳತನ ಪ್ರಕರಣಗಳಿಗೆ ಬ್ರೇಕ್ ಹಾಕಲು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಹೊಸ ಅಭಿಯಾನನ್ನು ಪ್ರಾರಂಭಿಸಿದ್ದಾರೆ.

ಜಿಲ್ಲೆಯಲ್ಲಿ ಮನೆಗಳ್ಳತನ ತಡೆಯಲು ಪೊಲೀಸ್ ಇಲಾಖೆ ಈಗ ಹೊಸ ಮಾಸ್ಟರ್ ಪ್ಲ್ಯಾನ್ ರೂಪಿಸಿದೆ. ನೀವು ಫ್ಯಾಮಿಲಿ ಜೊತೆ ಟೂರ್ ಹೋಗುವ ಸಂದರ್ಭದಲ್ಲಿ ಮಾಹಿತಿ ನೀಡಿದ ನಂತರ ಮನೆಯ ಮೇಲೆ ಪೊಲೀಸರು ನಿಗಾ ವಹಿಸಲಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು, ಜನರು ಪ್ರವಾಸಕ್ಕೆ ಅಥವಾ ಶುಭ ಸಮಾರಂಭಗಳಿಗೆ ಮನೆಗೆ



ಬೀಗ ಹಾಕಿ ತೆರಳುವಾಗ ಕಡ್ಡಾಯವಾಗಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಜಿಲ್ಲೆಯ ಜನತೆಗೆ ಮನವಿಯನ್ನು ಮಾಡಿಕೊಂಡಿದ್ದಾರೆ. ಹೀಗೆ ಮಾಹಿತಿ ನೀಡುವ ಮೂಲಕ ಸಾರ್ವಜನಿಕರು ತಮ್ಮ ಆಸ್ತಿಪಾಸ್ತಿಗಳ ರಕ್ಷಣೆಗೆ ಪೊಲೀಸರೊಂದಿಗೆ ಕೈಜೋಡಿಸಬಹುದಾಗಿದೆ ಎಂದು ತಿಳಿಸಿದರು.

ನಿರಂತರ ಗಸ್ತು

ವಿಶೇಷವಾಗಿ 'ಕೆಎಸ್‌ಪಿ' ಮೊಬೈಲ್ ಅಪ್ಲಿಕೇಷನ್ ಬಳಸಿ ಜನರು ತಮ್ಮ ಅನುಪಸ್ಥಿತಿಯ ಬಗ್ಗೆ ಮಾಹಿತಿ ನೀಡಿದರೆ, ಆಯಾ ವ್ಯಾಪ್ತಿಯ ಬೀಟ್ ಪೊಲೀಸರು ನಿಮ್ಮ ಮನೆಗಳ ಮೇಲೆ ವಿಶೇಷ ನಿಗಾ ಇಡಲಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ಬೀಟ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದ್ದು, ಪೊಲೀಸರ ನಿರಂತರ ಗಸ್ತಿನಿಂದ ಅಪರಾಧ ಚಟುವಟಿಕೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ಕಳ್ಳತನ ನಡೆದ ಮೇಲೆ ದೂರು ನೀಡುವುದಕ್ಕಿಂತ, ಕಳ್ಳತನವಾಗದಂತೆ ಮುನ್ನೆಚ್ಚರಿಕೆ ವಹಿಸುವುದು ಉತ್ತಮ ಎಂದು ಎಸ್ಪಿ ಕೆ. ರಾಮರಾಜನ್ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಸಾಮಾಜಿಕ ಜಾಲತಾಣಗಳ ನಿಗಾ

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಹೆಚ್ಚಿನ ಪೊಲೀಸ್ ಇಲಾಖೆ ಇಂಥ ಪ್ರಕರಣಗಳ ಮೇಲೆ ನಿಗಾ ಇಟ್ಟಿದೆ. ಸಾರ್ವಜನಿಕ ಶಾಂತಿ, ಕಾನೂನು ಸುವ್ಯವಸ್ಥೆ ಹಾಗೂ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಪೋಷಕರು ಕೂಡ ಮಕ್ಕಳನ್ನು ಇಂಥ ಚಟುವಟಿಕೆಗಳಿಂದ ದೂರವಿಡಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಹೇಳಿದರು.

ಜಿಲ್ಲಾದ್ಯಂತ 18 ರೌಡಿಶೀಟರ್ ಗಡಿ ಪಾರು

ಬೆಳಗಾವಿ: ಜಿಲ್ಲೆಯಲ್ಲಿ ಸಾಮಾಜಿಕ ಜಾಲತಾಣಗಳನ್ನು ದುರುಪಯೋಗ ಪಡಿಸಿಕೊಂಡು ಬ್ಯಾಡ್ ಬಾಯ್ಸ್, ಟಗರು ಬಾಯ್ಸ್, ಕಿಂಗ್ ಮೇಕರ್ ಎಂಬ ಹೆಸರಿನಲ್ಲಿ ರೌಡಿಶೀಟರ್‌ಗಳು ಮಕ್ಕಳನ್ನು ಬಳಸಿಕೊಂಡು ರೀಲ್ಸ್ ಹಾಗೂ ವಿಡಿಯೋ ಹರಿಬಿಡುತ್ತಿರುವ ಪ್ರಕರಣ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದ್ದು, ಇಂತಹ ಚಟುವಟಿಕೆ ನಡೆಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಹೇಳಿದರು.

ನಗರದ ಪೊಲೀಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಪ್ರಾಪ್ತ ಮಕ್ಕಳನ್ನು ಮುಂದೆ ನಿಲ್ಲಿಸಿ ಗ್ಯಾಂಗ್ ಶೈಲಿಯ ವಿಡಿಯೋ, ರೀಲ್ಸ್ ಮತ್ತು ಫೋಟೋಗಳನ್ನು ಹರಿಬಿಡುವ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಸರಿಯಾಗಿ ಬದುಕಬೇಕಾದರೆ ಎಲ್ಲರೂ ಗುಡ್ ಬಾಯ್ಸ್'ಆಗಿರಬೇಕು ಎಂದರು.

ಸಿನಿಮಾ ನೋಡಿ, ತಲ್ವಾರ್ ಹಿಡಿದು ಕೇಕ್ ಕಟ್ ಮಾಡುವುದು, ಸಾಮಾಜಿಕ ಜಾಲತಾಣದಲ್ಲಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ರೌಡಿಗಳು ಸಣ್ಣ ಸಣ್ಣ ಮಕ್ಕಳ ಜೊತೆಗೆ ಸೇರಿ ವಿಡಿಯೋ ಮಾಡಿ ಭಯ ಹುಟ್ಟಿಸುವ 18 ಜನರನ್ನು ಗಡಿಪಾರು ಮಾಡಲಾಗಿದೆ.



ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿ



ಮೂಡಲಗಿ: ಆಟಗಾರರು ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು. ನಮ್ಮ ಶಿಕ್ಷಣ ಸಂಸ್ಥೆಯಿಂದ ಮುಂಬರುವ ದಿನಗಳಲ್ಲಿ ಆಟಗಳನ್ನು ಹಾಗೂ ಆಟಗಾರರನ್ನು ಪ್ರೋತ್ಸಾಹಿಸಲು ಹೆಚ್ಚು ಹೆಚ್ಚು ಕ್ರೀಡೆಗಳನ್ನು ಸಂಘಟಿಸಿಲಾಗುವುದು ಎಂದು ಮೂಡಲಗಿ ಶಿಕ್ಷಣ ಸಂಸ್ಥೆ ಚೇರಮನ್ ವೆಂಕಟೇಶ ಸೋನವಾಲ್ಕರ್ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಹಾಗೂ ಕಲಾ ವಾಣಿಜ್ಯ ಮತ್ತು ಬಿಸಿಎ ಮಹಾ ವಿದ್ಯಾಲಯಗಳ ಆತಿಥ್ಯದಲ್ಲಿ ಇತ್ತೀಚೆಗೆ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಂತರ್ ವಲಯ ಪುರುಷರ ಕಬಡ್ಡಿ ಟೂರ್ನಿಯಲ್ಲಿ ಮಾತನಾಡಿದರು.

ಮೂಡಲಗಿ ಬಿಪಿಎಡ್ ಕಾಲೇಜ್ ಚಾಂಪಿಯನ್‌ಶಿಪ್ ಪಡೆದುಕೊಂಡಿತು. ಮೂಡಲಗಿ ಎಂಪಿಇಡಿ ಕಾಲೇಜ ತಂಡ ರನ್ನರ್ ಅಪ್ ಆಯಿತು. ಅಂತಿಮ ಪಂದ್ಯದಲ್ಲಿ ಬಿಪಿಇಡಿ ಕಾಲೇಜ ತಂಡ ಮೂಡಲಗಿ ಎಂಪಿಇಡಿ ಕಾಲೇಜನ್ನು 20-18 ಅಂಕಗಳ ಅಂತರದಲ್ಲಿ ಪರಾಭವಗೊಳಿಸಿತು. ಇದಕ್ಕೂ ಪೂರ್ವದಲ್ಲಿ ಸವದತ್ತಿ ಎಸ್‌ವಿಎಸ್‌ಬಿ ಕಾಲೇಜ ತಂಡ ವಿಜಯಪುರ ಸರ್ಕಾರಿ ಪದವಿ ಕಾಲೇಜ ತಂಡವನ್ನು 26-6 ಅಂಕಗಳ ಅಂತರದಲ್ಲಿ ಪರಾಭವಗೊಳಿಸಿ ತೃತೀಯ ಸ್ಥಾನ ಪಡೆದುಕೊಂಡಿತು.

ಸವದತ್ತಿಎಸ್‌ವಿಎಸ್‌ಬಿ ಕಾಲೇಜ ತಂಡದ ಹನುಮಂತ ಬಜೇರಿ ಉತ್ತಮ ದಾಳಿಗಾರ, ಮೂಡಲಗಿ ಬಿಪಿಎಡ್‌ಕಾಲೇಜಿನ ಮಹೇಶ್ ಕೆಮ್ಮನ್ನಕೋಳ ಉತ್ತಮ ಹಿಡಿತಗಾರ ಹಾಗೂ ಎಂಪಿಎಡ್ ಕಾಲೇಜಿನ ಮಲ್ಲು ಸುಳ್ಳನ್ನವರ ಸರ್ವೋತ್ತಮ ಆಟಗಾರ ಪ್ರಶಸ್ತಿಗೆ ಭಾಜನರಾಗಿ ಟ್ರೋಫಿ ಪಡೆದಿಕೊಂಡರು.

ಹಿರಿಯ ಗ್ರಂಥಪಾಲಕ ಬಾಲಶೇಖರ ಬಂದಿ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಆರ್.ಪಿ.ಸೋನವಾಲ್ಕರ್ ಅಧ್ಯಕ್ಷತೆ ವಹಿಸಿ ಚಾಂಪಿಯನ್ ತಂಡಗಳಿಗೆ ಪಾರಿತೋಷಕಗಳನ್ನು ವಿತರಿಸಿದರು.

ಮಲೀಕ್‌ಪಾಶ್ಯಾಪುರ್, ಲಕ್ಷ್ಮಣ ಅಡಿಹುಡಿ, ಸಂಗಪ್ಪ ಸೋರಣ್ಣವರ, ಕಾಲೇಜ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಂ.ಕೆ.ಕಂಕನವಾಡಿ, ಡಾ.ಎಲ್.ಬಿ.ಮಣ್ಣಾಪುರೆ, ಪಿ.ಬಿ.ಚೌಡಕಿ, ಭೀಮಶಿ ಬಡಗನ್ನವರ, ಬಿ.ಎಸ್.ಕಂಬಾರ ಪವನ ಕುಮಾರ ಕೆ, ಸಂತೋಷ ಮುಗಳಿ, ಶಿವಾಜಿ ಮಾಲೋಜಿ, ಎಸ್.ಎಂ ಹಳ್ಳೂರ, ಎ.ಎಸ್.ಮಿಶಿ ನಾಯಿಕ ಮುಂತಾದವರರಿದ್ದರು. ಆಡಳಿತಾಧಿಕಾರಿ ಡಾ.ಎಸ್.ಎಲ್‌ಚಿತ್ರಗಾರ ಸ್ವಾಗತಿಸಿದರು. ಬಹುಮಾನ ವಿತರಣೆ ಪಿ.ಬಿ.ಚೌಡಕಿ, ಬಿ.ಕೆ. ಬಡಗನ್ನವರ ನಿರೂಪಿಸಿದರು. ಎ.ಎಸ್.ಮಿಶಿ ನಾಯಿಕ ನಿರ್ವಹಿಸಿದರು. ಬಿ.ಎಸ್.ಕಂಬಾರ ವಂದಿಸಿದರು.

ಮನರೇಗಾ ಕಾಮಗಾರಿ ಸ್ಥಳವೇ ಮದುವೆ ಮಂಟಪ



ಚನ್ನಮ್ಮನ ಕಿತ್ತೂರು: ಮನರೇಗಾ ಕಾಮಗಾರಿ ಸ್ಥಳದಲ್ಲೇ ಹಿರಿಯ ದಂಪತಿಯ 60ನೇ ವರ್ಷದ ವಿವಾಹ ಮಹೋತ್ಸವವನ್ನು ಕೂಲಿಕಾರ್ಮಿಕರು ಸರಳವಾಗಿ ಸಂಭ್ರಮದಿಂದ ಆಚರಿಸಿದ ಅಪರೂಪದ ಘಟನೆ ನಡೆಯಿತು.

ತಾಲೂಕಿನ ಖೋದಾನಪೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸೋಮವಾರ ಕಾಮಗಾರಿ ನಡೆದ ಸ್ಥಳದಲ್ಲಿ ನಡೆಯಿತು. ಗ್ರಾಮದ ಶಿವಲಿಂಗಯ್ಯ ಹಿರೇಮಠ ಹಾಗೂ ಗುರುಸಿದ್ದಮ್ಮ ಹಿರೇಮಠ ದಂಪತಿಗಳು ತಮ್ಮ ದಾಂಪತ್ಯ ಜೀವನದ 60ನೇ ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಕೆರೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿದ್ದ ಕಾರ್ಮಿಕರು ಸ್ವಯಂಪ್ರೇರಿತವಾಗಿ ಮದುವೆ ಸಮಾರಂಭ ಏರ್ಪಡಿಸಿದರು. ಕಾಮಗಾರಿ ನಡೆಯುತ್ತಿದ್ದ ಸ್ಥಳವನ್ನೇ ಮದುವೆ ಮಂಟಪವಾಗಿ ರೂಪಿಸಿ, ಸ್ಥಳೀಯವಾಗಿ ಲಭ್ಯವಿದ್ದ ಸಾಮಗ್ರಿಗಳಿಂದ ಅಲಂಕಾರ ಮಾಡಲಾಗಿತ್ತು.

> ಮನರೇಗಾ ಯೋಜನೆಯಡಿ ನಡೆಯುವ ಕಾಮಗಾರಿಗಳು ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವುದರ ಜೊತೆಗೆ, ಸಮಾಜದಲ್ಲಿ ಬಾಂಧವ್ಯ ಮತ್ತು ಸಹಕಾರವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಈ ಕಾರ್ಯಕ್ರಮ ಕಾರ್ಮಿಕರ ಮಾನವೀಯತೆ ಮತ್ತು ಸಂಸ್ಕೃತಿ ಮೇಲಿನ ಗೌರವವನ್ನು ತೋರಿಸುತ್ತದೆ.
> ■ ನಿಂಗಪ್ಪ ಮಸಳಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ

> ಇಂತಹ ಘಟನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಜೀವಂತವಾಗಿರುವ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಹಿರಿಯರನ್ನು ಗೌರವಿಸುವುದು ನಮ್ಮ ಸಂಪ್ರದಾಯದ ಭಾಗವಾಗಿದ್ದು, ಕೂಲಿಕಾರ್ಮಿಕರು ತೋರಿದ ಈ ನಡೆ ಎಲ್ಲರಿಗೂ ಮಾದರಿಯಾಗಿದೆ. ಮನರೇಗಾ ಯೋಜನೆ ಕೇವಲ ಉದ್ಯೋಗಕ್ಕೆ ಸೀಮಿತವಾಗದೆ, ಸಾಮಾಜಿಕ ಏಕತೆಯನ್ನು ಬಲಪಡಿಸುವ ವೇದಿಕೆಯಾಗಿದೆ.
> ■ ಮಹಮ್ಮದಗೌಸ್ ರಿಸಾಲ್ದಾರ್ ಸಹಾಯಕ ನಿರ್ದೇಶಕ

ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ತರಬೇತಿ ಕಾರ್ಯಕ್ರಮ

ಖಾನಾಪುರ: ಪಟ್ಟಣದ ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಶುಕ್ರವಾರ ಜರುಗಿದ ತರಬೇತಿ ಕಾರ್ಯಕ್ರಮವನ್ನು ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ''ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಬಾಲವಿಕಾಸ ಅಕಾಡೆಮಿ ಸಹಯೋಗದಲ್ಲಿ ನಡೆಯುತ್ತಿರುವ ''ಬಾಲವಿಕಾಸ ನಡಿಗೆ ಪಾಲಕರ ಕಡೆಗೆ'' ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಆಯ್ದ ಮಕ್ಕಳು ಮತ್ತು ಪಾಲಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ'' ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಿಡಿಪಿಒ ವಿಕ್ರಮ ಕೆ.ಬಿ ಮಾತನಾಡಿ, 3 ರಿಂದ 18 ವರ್ಷ ವಯೋಮಾನದ ಮಕ್ಕಳು ಮತ್ತು ಪಾಲಕರಿಗೆ ಮಕ್ಕಳ ಹಕ್ಕುಗಳು, ಮಕ್ಕಳ ಸಹಯವಾಣಿ, ಮಕ್ಕಳಿಗಾಗಿ ಇರುವ ಕಾಯ್ದೆಗಳು, ಮಕ್ಕಳ ಪಾಲನೆ-ಪೋಷಣೆಯಲ್ಲಿ ಪಾಲಕರ ಜವಾಬ್ದಾರಿ ಮತ್ತಿತರ ವಿಷಯಗಳ ಕುರಿತು



ಅರಿವು ಮೂಡಿಸಲು ಈ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿವರಿಸಿದರು.ಈ ಸಂದರ್ಭದಲ್ಲಿ ಬಿಇಓ ಪಿ.ರಾಮಪ್ಪ, ಸಂಪನ್ಮೂಲ ವ್ಯಕ್ತಿಗಳಾದ ಎನ್.ಬಿ ದ್ಯಾಪೂರ, ಮನ್ಸೂರ ಅಲಿ, ಸಂತೋಷ ನಾಯ್ಕ, ಐ.ಜಿ ಸನದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಇದ್ದರು. ಸಂದೀಪ ದೇಶಮುಖ ಕಾರ್ಯಕ್ರಮ ನಿರ್ವಹಿಸಿದರು. ಶಂಕರ ಕಮ್ಮಾರ ವಂದಿಸಿದರು.

ದೇವಿಗೆ ಉಡಿ ತುಂಬಿದ ಭಕ್ತರು

ರಾಯಬಾಗ: ಗ್ರಾಮದೇವತೆ ಜಾತ್ರಾ ಮಹೋತ್ಸವದ ಮೂರನೇ ದಿನವಾದ ಶನಿವಾರ ಬೆಳಿಗ್ಗೆ 8 ಗಂಟೆಗೆ ಸಕಲ ವಾದ್ಯ ವೃಂದದೊಂದಿಗೆ ಸುಮಂಗಲೆಯರಿಂದ ಕುಂಭಮೇಳವು ಮಾಳಿ ಗಲ್ಲಿಯಿಂದ ಪ್ರಾರಂಭವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ತಳಲಕ್ಷ್ಮೀ ದೇವಿಯ ಮಂದಿರಕ್ಕೆ ಹೋಗಿ ಅಲ್ಲಿ ಸುಮಂಗಲೆಯರಿಂದ ಉಡಿ ತುಂಬಲಾಯಿತು.

ನಂತರ ಮತ್ತೆ ಪ್ರಮುಖ ಬೀದಿಗಳ ಮಾರ್ಗವಾಗಿ ಸುತಾರಗಲ್ಲಿಯಲ್ಲಿರುವ ಶ್ರೀ ದ್ಯಾಮವ್ವ(ಕಾಳಿಕಾ) ದೇವಿಯದೇವಸ್ಥಾನಕ್ಕೆ ಬಂದು ದೇವಿಗೆ ಸುಮಂಗಲೆಯರು ಉಡಿ ತುಂಬಿದರು. ನಂತರ ಶ್ರೀ ಮಹಾಲಕ್ಷ್ಮೀದೇವಿಯಗುಡಿಗೆ ತೆರಳಿ ಅಲ್ಲಿ ಕಮೀಟಿ ವತಿಯಿಂದ ಹಾಗೂ ಸಾರ್ವಜನಿಕರಿಂದ ಉಡಿ ತುಂಬುವ ಕಾರ್ಯಕ್ರಮ ಜರುಗಿತು.





ನೇಸರಗಿ: ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಚನ್ನಮ್ಮನ ಕಿತ್ತೂರು ಮಾಜಿ ಶಾಸಕ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ, ಬೈಲಹೊಂಗಲ ಉದ್ಯಮಿ ವಿಜಯ ಮೆಟಗುಡ್ಡ, ಬೈಲಹೊಂಗಲ ತಾಲೂಕು ಬಿಜೆಪಿ ಮಂಡಳ ಅಧ್ಯಕ್ಷ ಸುಭಾಷ ತುರಮರಿ, ಬಿಜೆಪಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷರಾದ ಸಂತೋಷ ಹಡಪದ, ಬೆಳಗಾವಿ ಜಿಲ್ಲಾ ಮಾಧ್ಯಮ ವಕ್ತಾರ ಸಚಿನ ಕಡಿ, ಪ್ರದೀಪ ದೊಡ್ಡಗೌಡರ ಹಾಗೂ ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಬಿಜೆಪಿ ಕಾರ್ಯಕರ್ತರು ಬಿ.ಎಸ್.ಯಡಿಯೂರಪ್ಪ ಅವರನ್ನು ಸತ್ಕರಿಸಿ, ಸನ್ಮಾನಿಸಿದರು.

2027ರೊಳಗೆ 2 ಏತ ನೀರಾವರಿ ಯೋಜನೆ ಪೂರ್ಣ: ಪಟ್ಟಣ

ರಾಮದುರ್ಗ: ತಾಲೂಕಿನ ಮಹತ್ವಾಕಾಂಕ್ಷೆಯ ಸಾಲಾಪೂರ ಬಸವೇಶ್ವರ ಏತ ನೀರಾವರಿ ಯೋಜನೆಯನ್ನು ಮಾರ್ಚ್ 2027 ಹಾಗೂ ವಿರಭದ್ರೇಶ್ವರ ಏತ ನೀರಾವರಿ ಯೋಜನೆ ಡಿಸೆಂಬರ 2027ರ ಒಳಗೆ ಪೂರ್ಣಗೊಳಿಸಿ ರೈತರ ಜಮೀನುಗಳಿಗೆ ನೀರು ಹರಿಸಲಾಗುವುದು ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.



ಶನಿವಾರ ಗೃಹ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ರಾಮದುರ್ಗ ತಾಲೂಕಿನ 30 ಗ್ರಾಮ ಮತ್ತು ಮುಧೋಳ ತಾಲೂಕಿನ 4 ಗ್ರಾಮಗಳ 17372 ಹೆಕ್ಟೇರ್ ಪ್ರದೇಶದ ವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ 2015ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ರೂ. 544 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡಿ ಶಂಕುಸ್ಥಾಪನೆ ನೇರವೇರಿಸಿ ಮೊದಲ ಹಂತವಾಗಿ ಗುತ್ತಿಗೆ ಪಡೆದ ಕಂಪನಿ ಮೇ. ಖಿ.ಆರ್‌ಎನ್ ಇನಫ್ರಾ ಐವಿಆರ್‌ಸಿ ಲಿ. ಹುಬ್ಬಳ್ಳಿಗೆ ರೂ. 378.37 ಕೋಟಿ ಅನದಾನ ಬಿಡುಗಡೆ ಮಾಡಿ 24 ತಿಂಗಳ ಅವಧಿಯಲ್ಲಿ ಕೆಲಸ ಮುಗಿಸಲು ಷರತ್ತು ವಿಧಿಸಲಾಗಿತ್ತು. ಆದರೆ, ನಿಗದಿತ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸಲು ಗುತ್ತಿಗೆ ಪಡೆದ ಸಂಸ್ಥೆ ಈ ವರಗೆ ರೂ. 133.65 ಕೋಟಿ ಮೊತ್ತದ ಕಾಮಗಾರಿ ಮುಕ್ತಾಯಗೊಳಿಸಿದ್ದು, ಇನ್ನೂ ರೂ. 242.72 ಕೋಟಿ ಮೊತ್ತದ ಕಾಮಗಾರಿ ಮಾಡುವಲ್ಲಿ ವಿಫಲವಾಗಿದೆ.

2018ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಈ ಯೋಜನೆಯನ್ನು ನಿರ್ಲಕ್ಷ ವಹಿಸಿದ್ದರಿಂದ ರೈತರ ಜಮೀನಿಗೆ ನೀರು ಹರಿಸಲು ಸಾಧ್ಯವಾಗಲಿಲ್ಲ, ಸದ್ಯದ ಈ ಮೂರು ವರ್ಷಗಳ ಅವಧಿಯಲ್ಲಿ ಗುತ್ತಿಗೆ ರದ್ದು ಮಾಡಿ ಮರು ಟೆಂಡರ್‌ಗೆ ಕಾಂಗ್ರೆಸ್ ಸರ್ಕಾರದ ಮುಂದಾಗಿದೆ ಎಂದು ತಿಳಿಸಿದರು.

ರೈತರ ಸಲಹೆ ಮೇರೆಗೆ ಇನ್ನೊಂದು ಏತ ನೀರಾವರಿ ಯೋಜನೆಗೆ ಮುಖ್ಯಮಂತ್ರಿಗಳ ಮೇಲೆ ಒತ್ತಡತಂದು 2018ರ ಮಾರ್ಚ್ ತಿಂಗಳಲ್ಲಿ ರೂ. 566 ಕೋಟಿ ವೆಚ್ಚದಲ್ಲಿ ತಾಲೂಕಿನ 14 ಗ್ರಾಮ, ಮುಧೋಳ ತಾಲೂಕಿನ 2 ಮತ್ತತು ಬದಾಮಿ ತಾಲೂಕಿನ 6 ಗ್ರಾಮಗಳ ಒಟ್ಟು 13 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಸಾಲಾಪೂರ ಏತ ನೀರಾವರಿ ಯೋಜನೆಗೆ ಆಡಡಳಿತಾತ್ಮಕ ಅನುಮೋದನೆ ನೀಡಿದ್ದು ಮೊದಲ ಹಂತದಲ್ಲಿ ರೂ.363,59ಕೋಟಿ ಅನುದಾನ ಬಿಡುಗಡೆ ಮಾಡಿದೆ. ಈ ಏತ ನೀರಾವರಿ ಯೋಜನೆಯ ಬಹುತೇಕ ಕಾಮಗಾರಿ ಮುಕ್ತಾಯಗೊಂಡಿದ್ದು, ಈ ವರ್ಷದ ಡಿಸೆಂಬರೊಳಗೆ ಮುಕ್ತಾವಾಗಲಿದೆ ಒಟ್ಟಿನಲ್ಲಿ 2027 ಮಾರ್ಚ ಒಳಗೆ ರೈತರ ಜಮೀನಗಳಿಗೆ ನೀರು ಹರಿಸಲಾಗುವುದು ಈ ಎರಡು ಏತ ನೀರಾವರಿ ಯೋಜನೆಗೆ ಯಾವುದೇ ಹಣಕಾಸಿನ ಕೊರತೆ ಇಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನೀರವಾರಿ ಇಲಾಖೆಯ ಕಾರ್ಯನಿರ್ವಾಹಕ ಇಂಜನೀಯರ ಗಿರೀಶ ವೈ ಮೇಟಿ, ಎಇಇ ಟಿ.ಎನ್. ರುದ್ರಮುನಿ, ಶ್ರೀನಿವಶ

ಶೀಘ್ರದಲ್ಲೇ ಟೆಂಡರ್

25 ಜುಲೈ 2024 ರಂದು ಬೆಂಗಳೂರಿನಲ್ಲಿ ನೀರಾವರಿ ನಿಗಮದ ಅಧಿಕಾರಿಗಳ ಮತ್ತು ಗುತ್ತಿಗೆ ಕಂಪನಿಯ ಸಭೆ ಕರೆದು 2025 ಡಿಸೆಂಬರ್ 31ರ ಒಳಗೆ ಪೂರ್ಣಗೊಳಿಸಲು ಅಂತಿಮ ಎಚ್ಚರಿಕೆ ನೀಡಿ ಮುಚ್ಚಳಿಕೆ ಪತ್ರ ಬರೆದುಕೊಳ್ಳಲಾಯಿತು. ಮುಚ್ಚಳಿಕೆ ಪತ್ರದಂತೆ ಕಂಪನಿ ಕಾಮಗಾರಿ ಪೂರ್ಣಗೊಳಿಸದ ಹಿನ್ನಲೆಯಲ್ಲಿ ಗುತ್ತಿಗೆ ರದ್ದು ಪಡಿಸಿ ಪುನಃ ಟೆಂಡರ್ ಕರೆಯಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅನುಮತಿ ನೀಡಿದ್ದರಿಂದ ಮಾರ್ಚ್ 26ರಂದು ನಡೆದ ನಿಗಮದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ತಿರುವಳಿ ಪಡೆದಿದ್ದು, ಶೀಘ್ರದಲ್ಲಿ ಟೆಂಡರ್ ಕರೆದು ಕಾಮಗಾರಿಯನ್ನು 2027ರ ಡಿಸೆಂಬರೊಳಗೆ ಪೂರ್ಣಗೊಳಿಸಿ ನೀರು ಹರಿಸಲಾಗುವುದು ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ನೈತಿಕ, ಮಾನವೀಯ ಮೌಲ್ಯದ ಶಿಕ್ಷಣ ಅಗತ್ಯ

ಸಂಕೇಶ್ವರ: ಇಂದಿನ ಯುಗದಲ್ಲಿ ಕೇವಲ ಪದವಿ ಪಡೆದರಷ್ಟೇ ಸಾಲದು, ಎಲ್ಲರಿಗೂ ನೈತಿಕ, ಮಾನವೀಯ ಮೌಲ್ಯಾಧಾರಿತ ಶಿಕ್ಷಣ ಅಗತ್ಯವಿದೆ ಎಂದು ಯಮಕನಮರಡಿ ಹುಣಶಿಕೊಳ್ಳಮಠದ ಸಿದ್ಧಬಸವ ದೇವರು ಸ್ವಾಮೀಜಿ ಹೇಳಿದರು.



ಸಮೀಪದ ನಿಡಸೋಸಿಯ ಎಸ್ ಜೆಪಿಎನ್ ಟ್ರಸ್ಟ್‌ನ ಬಿ.ಸಿ.ಎ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ವಾರ್ಷಿಕೋತ್ಸವ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ಉನ್ನತ ಶಿಕ್ಷಣ ಪಡೆದ ಮೇಲೆ ಮನುಷ್ಯ ಎಷ್ಟೇ ದೊಡ್ಡ ಮಟ್ಟಕ್ಕೆ ಬೆಳೆದರೂ ತನ್ನ ಹೆತ್ತ ತಂದೆ-ತಾಯಿ ಹಾಗೂ ಕಲಿಸಿದ ಗುರುವೃಂದವನ್ನು ಮರೆಯಬಾರದು. ಕೃತಜ್ಞತಾ ಭಾವವಿಲ್ಲದ ಶಿಕ್ಷಣವು ವ್ಯರ್ಥ. ಸಮಾಜಕ್ಕೆ ಮಾದರಿಯಾಗುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಂಡಾಗ ಮಾತ್ರ ವಿದ್ಯಾರ್ಥಿ ಜೀವನಕ್ಕೊಂದು ಅರ್ಥ ಸಿಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಡಾ. ದೊಡ್ಡನಗೌಡ ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ನಕಾರಾತ್ಮಕ ಆಲೋಚನೆಗಳಿಂದ ದೂರವಿದ್ದು, ಆತ್ಮವಿಶ್ವಾಸದಿಂದ ಗುರಿಯತ್ತ ಹೆಜ್ಜೆ ಹಾಕಬೇಕು. ಸಮಯ ಪ್ರಜ್ಞೆ ಮತ್ತು ಕಠಿಣ ಪರಿಶ್ರಮವಿದ್ದರೆ ಸಾಧನೆ ಸುಲಭ ಎಂದು ಸಲಹೆ ನೀಡಿದರು.

ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿನಿ, ಇನ್ಫೋಸಿಸ್ ಸಾಫ್ಟ್‌ವೇರ್ ಇಂಜಿನಿಯರ್ ಭೂಮಿಕಾ ಬೇಡಿಕಿಹಾಳ ಮಾತನಾಡಿ, ಉದ್ಯೋಗ ಮಾರುಕಟ್ಟೆಯಲ್ಲಿನ ಸ್ಪರ್ಧೆಯನ್ನು ಎದುರಿಸಲು ನಿರಂತರ ಕಲಿಕೆ ಮತ್ತು ಹೊಸ ಕೌಶಲ್ಯಗಳಅಳವಡಿಕೆಅನಿವಾರ್ಯಎಂದು ತಿಳಿಸಿದರು. ನಿವೃತ್ತ ಉಪನ್ಯಾಸಕ ಜಿ. ಬಿ. ಸಂಗೋಟಿ, ಪ್ರಾಚಾರ್ಯರಾದ ಪ್ರೊ. ಬಿ. ಆರ್. ಉಮರಾಣಿ ಉಪಸ್ಥಿತರಿದ್ದರು. ಪ್ರಾಚಾರ್ಯ ಬಸವರಾಜ ಹಾಲಬಾವಿ ಮಹಾವಿದ್ಯಾಲಯದ ವಾರ್ಷಿಕ ವರದಿ ಮಂಡಿಸಿದರು. ಪ್ರೊ. ಜಿ. ಬಿ. ಕರಗುಪ್ಪಿ ಸ್ವಾಗತಿಸಿದರು. ಪ್ರೊ. ಸುಪ್ರಿಯಾ ಕೊಣ್ಣೂರಿ ವಂದಿಸಿದರು. ಪ್ರೊ. ಸೋನಾಲಿ ಜಾಧವ ಹಾಗೂ ಅಮೃತಾ ಹಿರೇಮಠ ನಿರೂಪಿಸಿದರು.

ಕಿರುಸುದ್ದಿ

ನಾಳೆ ಉಪನೋಂದಣಿ ಕಚೇರಿ ಕಾರ್ಯನಿರ್ವಹಣೆ

ಬೆಳಗಾವಿ: ನಗರದ ದಕ್ಷಿಣ ಉಪನೋಂದಣಿ ಕಚೇರಿ ಮೇ 10ರಂದು ಕಾರ್ಯನಿರ್ವಹಿಸಲಿದೆ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಮೇ 12ರಂದು ಕಚೇರಿಗೆ ರಜೆ ಇರುತ್ತದೆ ಎಂದು ಬೆಳಗಾವಿ ದಕ್ಷಿಣ ಉಪನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಗಮದ ಅಧ್ಯಕ್ಷರ ಭೇಟಿ ಇಂದು

ಬೆಳಗಾವಿ : ಕರ್ನಾಟಕ ಪಜಾ, ಪ.ಪಂಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ ಮೇ 10ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಮೇ 11ರಂದು ನಿಪ್ಪಾಣಿ ತಾಲೂಕಿನ ಭೋಜ್ ಗ್ರಾಮದಲ್ಲಿ ತಹಶೀಲ್ದಾರ್, ಸಂಬಂಧಿಸಿದ ನಗರಸಭೆಯ ಮುಖ್ಯಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಇತರೆ ಅಧಿಕಾರಿಗಳ ಜೊತೆಗೆ ಪಜಾ ಅಲೆಮಾರಿ ಮಾಂಗ್, ಗಾರುಡಿ ಮತ್ತು ಕೊರಮ ಸಮುದಾಯದ ಕುಟುಂಗಳು ವಾಸಿಸುತ್ತಿರುವ ಸ್ಥಳ ವೀಕ್ಷಣೆ ಹಾಗೂ ಸಮುದಾಯಗಳೊಂದಿಗೆ ಜನಸ್ಪಂದನ ಹಾಗೂ ಕುಂದು ಕೊರತೆಗಳ ಸಭೆ ನಡೆಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಷೇಧಾಜ್ಞೆ ಜಾರಿ

ಬೆಳಗಾವಿ: ನಗರದ ಕಪಿಲೇಶ್ವರ ದೇವಸ್ಥಾನದ ಹಿಂದೆ ಇರುವ ಕಪಿಲನಾಥ ಹೊಂಡ ಆಳವಾದ ಮತ್ತು ಅಪಾಯಕಾರಿ ಸ್ವರೂಪ ಹೊಂದಿದ್ದು, ಪದೇ ಪದೇ ದುರ್ಘಟನೆಗಳು ಸಂಭವಿಸುತ್ತಿವೆ . ಈ ಹಿನ್ನೆಲೆಯಲ್ಲಿ ಮುಂದಿನ ಆದೇಶದವರಗೆ ನಗರದ ಕಪಿಲೇಶ್ವರ ದೇವಸ್ಥಾನದ ಹಿಂದೆ ಇರುವ ಕಪಿಲನಾಥ ಹೊಂಡಕ್ಕೆ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಲಾಗಿರುತ್ತದೆ. ಆಜ್ಞೆ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ ಮತ್ತು ಪೊಲೀಸ್ ಆಯುಕ್ತ ಬೊರಸೆ ಭೂಷಣ ಗುಲಾಬರಾವ ನಿಷೇದಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ: ಕವಿಪ್ರನಿನಿ ವತಿಯಿಂದ ಮೊದಲನೇ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವುದರಿಂದ ಮೇ 10ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ 110 ಕೆವಿ ವಡಗಾಂವ ಉಪಕೇಂದ್ರ ದಿಂದ ಸರಬರಾಜು ಆಗುವ ಧಾಮನೆ, ಕುರುಬರಹಟ್ಟಿ, ಮಾಸ್ಯಾಗನಟ್ಟಿ, ದೇವಗ್ಯಾನಟ್ಟಿ, ಔಚಾರಟ್ಟಿ, ಯರಮಾಳ, ಯಳ್ಳೂರ, ಸುಳಗಾ, ರಾಜಹಂಸಗಡ, ದೇಸೂರ, ನಂದಿಹಳ್ಳಿ, ಕೊಂಡಸಕೊಪ್ಪ, ಹಲಗಾ ಹಾಗೂ ಬಸ್ತವಾಡ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೈಟ್ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹುವಿಸಕಂನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಭ್ರಮದಿಂದ ಚೌಡೇಶ್ವರಿ ಜಾತ್ರಾಮಹೋತ್ಸವ



ಬೆಳಗಾವಿ: ನಗರದ ಹಿಂದವಾಡಿಯ ವಡ್ಡರ ಗಲ್ಲಿಯಲ್ಲಿ ಚೌಡೇಶ್ವರಿ ದೇವಿ ಜಾತ್ರಾಮಹೋತ್ಸವವು ಅತ್ಯಂತ ವೈಭವದಿಂದ ಜರುಗಿತು. ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

ಬರೋಬ್ಬರಿ 31 ವರ್ಷಗಳ ದೀರ್ಘ ಕಾಲದ ನಂತರ ನಡೆದ ಈ ಜಾತ್ರೆಯಲ್ಲಿ ಭಕ್ತರಲ್ಲಿ ಹಬ್ಬದ ಕಳೆ ಮನೆ ಮಾಡಿತು. ದೇವಿ ಪ್ರತಿಷ್ಠಾಪನೆ ಕಾರ್ಯಕ್ರಮ ಶಾಸ್ತ್ರೋಕ್ತವಾಗಿ ಜರುಗಿತು. ದೇವಿಗೆ ಉಡಿ ತುಂಬುವ ಕಾರ್ಯಕ್ರಮ,ಧಾರ್ಮಿಕ ವಿಧಿ-ವಿಧಾನಗಳಲ್ಲಿ ದಂಡಗಲ ಬಂಧುಗಳು, ಪರಿವಾರದವರು ಹಾಗೂ ಬೆಳಗಾವಿಯ ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು.

ದೇವಿಯ ಭವ್ಯ ಮೆರವಣಿಗೆ ಭಕ್ತರ ಜಯಘೋಷಗಳೊಂದಿಗೆ ಅತ್ಯಂತ ಉತ್ಸಾಹದಿಂದ ಜಾತ್ರಾ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಜನತೆ ಭಾಗಿಯಾಗಿದ್ದರು.



ಬೈಲಹೊಂಗಲ: ನಗರದ ಚನ್ನಮ್ಮ ಉಪನಗರದಲ್ಲಿರುವ ಶ್ರೀದಾನಮ್ಮದೇವಿ ದೇವಸ್ಥಾನದ 17ನೇ ವರ್ಷದ ಜಾತ್ರಾಮಹೋತ್ಸವ ಅಂಗವಾಗಿ ಇತ್ತೀಚೆಗೆ ಮಹಾರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಕ್ತಿ ಸಂಭ್ರಮದಿಂದ ಅದ್ದೂರಿಯಾಗಿ ಜರುಗಿತು.

ದಾನಮ್ಮದೇವಿ ಅದ್ದೂರಿ ರಥೋತ್ಸವ

ಬೈಲಹೊಂಗಲ: ನಗರದ ಚನ್ನಮ್ಮ ಉಪನಗರದಲ್ಲಿರುವ ಶ್ರೀದಾನಮ್ಮದೇವಿ ದೇವಸ್ಥಾನದ 17ನೇ ವರ್ಷದ ಜಾತ್ರಾಮಹೋತ್ಸವ ಅಂಗವಾಗಿ ಇತ್ತೀಚೆಗೆ ಮಹಾರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಕ್ತಿ ಸಂಭ್ರಮದಿಂದ ಅದ್ದೂರಿಯಾಗಿ ಜರುಗಿತು.

ಕಬ್ಬು, ಬಾಳೆಗಿಡಗಳು ಹಾಗೂ ವಿವಿಧ ಬಣ್ಣಗಳ ಹೂಗಳಿಂದ ಅಲಂಕರಿಸಲ್ಪಟ್ಟ ಭವ್ಯ ರಥಕ್ಕೆ ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ ಹಾಗೂ ಸದಸ್ಯರು ಚಾಲನೆ ನೀಡಿದರು. ಬಳಿಕ ಭಕ್ತರ ಜಯಘೋಷಗಳ ನಡುವೆ ರಥೋತ್ಸವ ಆರಂಭವಾಯಿತು.ರಥೋತ್ಸವದ ವೇಳೆ ಭಕ್ತರು ರಥಕ್ಕೆ ಬಾಳೆಹಣ್ಣು ಎಸೆದು ತಮ್ಮ ಭಕ್ತಿ ಸಮರ್ಪಿಸಿದರು. ಶೆಟಗಾರ ಚಾಳ, ಶಿಕ್ಷಕರ ಚಾಳ ಮತ್ತು ಕೆಸಿನಗರ 2ನೇ ರಸ್ತೆಯ ಭಕ್ತರು ವಾದ್ಯಮೇಳಗಳೊಂದಿಗೆ ಆಗಮಿಸಿ ವಿವಿಧ ಬಗೆಯ ಹೂಮಾಲೆಗಳನ್ನು ಅರ್ಪಿಸಿ ಭಕ್ತಿಭಾವ ಮೆರೆದರು.

ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೇ ಸಾವಿರಾರು ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಗೆ ಹೂ, ಕಾಯಿ ಹಾಗೂ ಹಣ್ಣುಗಳನ್ನು ಸಮರ್ಪಿಸಿ ಪೂಜೆ ಸಲ್ಲಿಸಿದರು. ದೇವಸ್ಥಾನ ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಸದಸ್ಯರು, ಗಣ್ಯರು ಹಾಗೂ ಅಪಾರ ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು. ಭಕ್ತರಿಗೆ ಮಹಾಪ್ರಸಾದ ವಿತರಣೆ ನಡೆಯಿತು.



ಯಮಕನಮರಡಿ: ಸಮೀಪದ ದಡ್ಡಿ ಗುಡಗನಹಟ್ಟಿ ಗ್ರಾಮದ ಶ್ರೀ ಮಹಾಲಕ್ಷ್ಮಿ ದೇವಿ ಜಾತ್ರೆಯ ಅಂಗವಾಗಿ ಆಯೋಜಿಸಿದ್ದ ವಿವಿಧ ಜೋಡು ಎತ್ತಿನ ಹಾಗೂ ಜೋಡು ಕುದುರೆಗಳ ಶರತ್ತಿನಲ್ಲಿ ವಿಜೇತರಾದವರಿಗೆ ಯಾತ್ರಾ ಕಮಿಟಿಯವರು ಬಹುಮಾನ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಯಾತ್ರ ಕಮಿಟಿ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಮಾವು ಪ್ರದರ್ಶನ, ಮಾರಾಟ ಮೇಳ | ರಾಥೋರ ಹೇಳಿಕೆ

ಮಾವು ಮೇಳ ಯಶಸ್ಸಿಗೆ ಕೈಜೋಡಿಸಿ

ಬೆಳಗಾವಿ : ರೈತರಿಂದ ನೇರವಾಗಿ ಗ್ರಾಹಕರಿಗೆ ಗುಣಮಟ್ಟದ ಮಾವಿನ ಹಣ್ಣುಗಳನ್ನು ಯೋಗ್ಯ ದರದಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಮಾವು ಮೇಳವನ್ನು ಆಯೋಜಿಸಲಾಗಿದೆ. ಬೆಳಗಾವಿ ನಗರ ಹಾಗೂ ಜಿಲ್ಲೆಯ ಸಾರ್ವಜನಿಕರು ಮೇಳದಲ್ಲಿ ಭಾಗವಹಿಸಿ, ಮಾವುಗಳನ್ನು ಖರೀದಿಸುವ ಮೂಲಕ ಮೇಳದ ಯಶಸ್ಸಿಗೆ ಕೈಜೋಡಿಸಬೇಕು ಎಂದು ಬೆಳಗಾವಿ ಉತ್ತರ ವಲಯ ಪೊಲೀಸ್ ಮಹಾನಿರೀಕ್ಷಕ ಚೇತನಸಿಂಗ್ ರಾಥೋರ ಹೇಳಿದರು.

ನಗರದ ಕ್ಲಬ್ ರಸ್ತೆಯಲ್ಲಿರುವ ತೋಟಗಾರಿಕಾ ಇಲಾಖೆ ಆವರಣದಲ್ಲಿ (ಹ್ಯೂಮ್ ಪಾರ್ಕ್) ಜಿಲ್ಲಾ ಪಂಚಾಯತಿ ಹಾಗೂ ತೋಟಗಾರಿಕಾ ಇಲಾಖೆಯ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿರುವ ಮಾವು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಿಪಂ ಸಿಇಒ ರಾಹುಲ್ ಶಿಂಧೆ ಮಾತನಾಡಿ, ಮಾರಾಟದ ಜೊತೆಗೆ 40 ವಿವಿಧ ತಳಿಯ ಮಾವುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸಾರ್ವಜನಿಕರು ಇವುಗಳನ್ನು ವೀಕ್ಷಿಸುವುದರ ಜೊತೆಗೆ ವಿವಿಧ ತಳಿಯ ಮಾವಿನ ಹಣ್ಣುಗಳ ಕುರಿತು ಮಾಹಿತಿ ಪಡೆಯಬಹುದಾಗಿದೆ. ಮೇ 10ರವರೆಗೆ ಮೇಳ ಜರುಗಲಿದೆ ಎಂದರು.

ರೈತರು ಸಾವಯವ ಕೃಷಿ ಕೈಗೊಂಡು ಬೆಳೆದ ಮಾವುಗಳನ್ನು ವಿಶೇಷವಾಗಿ ತೋಟಗಾರಿಕಾ ಇಲಾಖೆಯಿಂದ ಗುರುತಿಸಿ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರು ಮಾರಾಟ ಮಾಡಲು ಅನುಕೂಲವಾಗುತ್ತದೆ. ಜೊತೆಗೆ ಸಾರ್ವಜನಿಕರು ಕೂಡ ಗುಣಮಟ್ಟದ ಮಾವು ರೈತರಿಂದ ನೇರವಾಗಿ ಕಡಿಮೆ ದರದಲ್ಲಿ (ಡಜನ್ ಗೆ ರೂ. 400 ರಿಂದ ರೂ.700 ರವರೆಗೆ) ಖರೀದಿಸಬಹುದಾಗಿದೆ. ಹೀಗಾಗಿ, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಖರೀದಿ ಮಾಡಬೇಕು ಎಂದು ಮನವಿ ಮಾಡಿದರು.



ಸದುಪಯೋಗ ಪಡೆದುಕೊಳ್ಳಿ

ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕು ಹಾಗೂ ಧಾರವಾಡ ಜಿಲ್ಲೆಯ ವಿವಿಧ ತಾಲೂಕುಗಳ ರೈತರು ತಮ್ಮ ಮಾವುಗಳನ್ನು ಮಾರಾಟಕ್ಕೆ ಇರಿಸಿದ್ದಾರೆ. ಜೊತೆಗೆ ಮಹಾರಾಷ್ಟ್ರದ ದೇವಗಡ, ಪಂಡರಪುರನಿಂದ ಕೂಡ ರೈತರು ತಮ್ಮ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲು ಆಗಮಿಸಿದ್ದಾರೆ. ಅಲ್ಫಾನ್ಸೋ, ಕೇಸರ್, ಗೋವಾ ಮಂಕೂರ, ಮಲ್ಲಿಕಾ, ಬಿಟ್ಕಿ ಸೇರಿ ವಿವಿಧ ತಳಿಯ ಮಾವಿನ ಹಣ್ಣುಗಳನ್ನು ಮಾರಾಟಕ್ಕೆ ಇರಿಸಲಾಗಿದೆ. ಸಾರ್ವಜನಿಕರು ನೇರವಾಗಿ ಮಾವುಗಳನ್ನು ಖರೀದಿಸುವ ಮೂಲಕ ಮೇಳದ ಸದುಪಯೋಗ ಪಡೆಯಬೇಕು ಎಂದು ಜಿಪಂ ಸಿಇಒ ರಾಹುಲ್ ಶಿಂಧೆ ಹೇಳಿದರು.



ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆ, ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ ಸೇರಿ ತೋಟಗಾರಿಕಾ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹೊಸ ಆಲೋಚನೆ ಬಳಸಿ ಪರಿವರ್ತನೆ ತರಲು ಪ್ರಯತ್ನಿಸಿ

ಸಂಕೇಶ್ವರ: ವಿದ್ಯಾರ್ಥಿಗಳು ಉದ್ಯೋಗ ಪಡೆಯುವ ಉದ್ದೇಶದಿಂದ ಪದವಿಗಳಿಸದೆ, ನೈಪುಣ್ಯತೆ, ಸೃಜನಶೀಲತೆ ಹಾಗೂ ತಮ್ಮಲಿರುವ ಹೊಸ ಆಲೋಚನೆ ಬಳಸಿಕೊಂಡು ಸಮಾಜದಲ್ಲಿ ಪರಿವರ್ತನೆ ತರಲುಪ್ರಯತ್ನಿಸಬೇಕುಎಂದುನಿಡಸೋಸಿ ಸಿದ್ಧ ಸಂಸ್ಥಾನ ಮಠದ ಡಾ.ಶಿವಲಿಂಗೇಶ್ವರ ಶ್ರೀಗಳು ಹೇಳಿದರು.

ಸಮೀಪದ ನಿಡಸೋಸಿಯ ಎಸ್ ಜೆಪಿಎನ್ ಟ್ರಸ್ಟ್‌ನ ವಿಜ್ಞಾನ, ವಾಣಿಜ್ಯ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್ಸ್ ಪದವಿ ಮಹಾವಿದ್ಯಾಲಯದಲ್ಲಿ ನಡೆದ ಅಂತಿಮ ವರ್ಷದ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಸಾನ್ನಿಧ್ಯವಹಿಸಿಆಶೀರ್ವಚನ ನೀಡಿದ ಅವರು, ಯಾವುದೇ ಸಾಧಕನ ಯಶಸ್ಸಿನ ಹಿಂದೆ ಕೇವಲ ಶೈಕ್ಷಣಿಕ ಅರ್ಹತೆ ಮಾತ್ರವಲ್ಲದೆ ದೃಢ ಸಂಕಲ್ಪ, ಪರಿಶ್ರಮ ಹಾಗೂ ಸಾಹಸ ಮನೋಭಾವ ಪ್ರಮುಖ ಪಾತ್ರ ವಹಿಸುತ್ತವೆ. ಪದವಿ ಎನ್ನುವುದು ಕೇವಲ ಜ್ಞಾನದ ಮುದ್ರೆ ಮಾತ್ರವಲ್ಲ, ಅದು ವಿದ್ಯಾರ್ಥಿಗಳ ಭವಿಷ್ಯದ ಬದುಕಿಗೆ ದಾರಿದೀಪವಾಗಬೇಕು. ಆತ್ಮವಿಶ್ವಾಸ, ಶಿಸ್ತು ಹಾಗೂ ಗುರಿ ಸಾಧಿಸುವ ಮನೋಭಾವ ಬೆಳೆಸಿಕೊಂಡರೆ ಜೀವನದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯ ಎಂದರು.

ಜಿ.ಬಿ.ಸಂಗೋಟಿ ಅಧ್ಯಕ್ಷತೆ ವಹಿಸಿ, ಮಾತನಾಡಿ, ಇಂದಿನ ಪೈಪೋಟಿ ಯುಗದಲ್ಲಿ ತಾಂತ್ರಿಕ ಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳೂ ಅತ್ಯಂತ ಅಗತ್ಯವಾಗಿವೆ. ವಿದ್ಯಾರ್ಥಿಗಳು ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ



ಗುಣ ಬೆಳೆಸಿಕೊಂಡಾಗ ಮಾತ್ರ ಶಿಕ್ಷಣದ ನಿಜವಾದ ಅರ್ಥ ಸಾರ್ಥಕವಾಗುತ್ತದೆ ಎಂದರು.

ಸಿಬಿಎಸ್‌ಇ ಶಾಲೆ ಪ್ರಾಚಾರ್ಯ ಉಮೇಶ ನಾಯಿಕ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು, ಸಮಯ ಪಾಲನೆ ಹಾಗೂ ನಾಯಕತ್ವದ ಗುಣ ಅತ್ಯಂತ ಮಹತ್ವದಾಗಿದೆ. ನಿರಂತರ ಅಧ್ಯಯನ ಮತ್ತು ಆತ್ಮವಿಶ್ವಾಸದಿಂದ ವಿದ್ಯಾರ್ಥಿಗಳು ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದು ಎಂದರು.

ಬಿಸಿಎ-168, ಬಿ.ಕಾಮ್-67, ಬಿಎಸ್ಸಿ-25 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇತ್ತೀಚೆಗೆ ಕ್ಯಾಂಪಸ್ ಸಂದರ್ಶನದ ಮೂಲಕ ವಿವಿಧ ಉದ್ಯೋಗಗಳಿಗೆ ಆಯ್ಕೆಯಾದ 213 ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು.

ಪ್ರಾಚಾರ್ಯ ಬಸವರಾಜ ಹಾಲಬಾವಿ ಸ್ವಾಗತಿಸಿದರು. ಪ್ರೀತಿ ಚಿಲಮಿ, ವೀಣಾ ಹುಗ್ಗಿ ನಿರೂಪಿಸಿದರು. ಪ್ರೊ.ಮಹಾಂತೇಶ ಪಾಟೀಲ ವಂದಿಸಿದರು.

ಮಕ್ಕಳ ಸಾಧನೆ ತಂದೆ-ತಾಯಿಗಳ ತ್ಯಾಗಕ್ಕೆ ಪ್ರತಿಫಲ



ಗೋಕಾಕ: ತಂದೆ ತಾಯಿಗಳ ತ್ಯಾಗಕ್ಕೆ ತಕ್ಕ ಪ್ರತಿಫಲ ದೊರಕಿಸಿಕೊಡುವ ಬಹುದೊಡ್ಡ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಕಾರಾಗೃಹದ ಜೈಲರ್ ಸುಷ್ಮಾ ಒಡಗೇರಿ ಹೇಳಿದರು. ನಗರದ ಸಿದ್ಧಲಿಂಗೇಶ್ವರ ಬಿಸಿಎ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಪಡೆದು ಒಳ್ಳೆಯ ನಾಗರಿಕರಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭಾವಂತರಿಗೆ ಹೆಚ್ಚಿನ ಅವಕಾಶ ಇದ್ದು, ತಾವು ಪ್ರತಿಭಾವಂತರಾಗಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಆಡಳಿತಾಧಿಕಾರಿ ಅಡಿವೇಶ ಗವಿಮಠ, ಅರ್ಪನಾ ಕುಲಕರ್ಣಿ, ಅರ್ಬನ್ ಬ್ಯಾಂಕ್ ನಿರ್ದೇಶಕ ಮಹಾಂತೇಶ ಕಲ್ಲೋಳಿ, ಪವಿತ್ರಾ ಡಿಸೋಜಾ ಇದ್ದರು.

ಅಕ್ರಮ ಮದ್ಯ ಮಾರಾಟಗಾರರ ವಿರುದ್ಧ ಕ್ರಮ

ಬೆಳಗಾವಿ: ಜಿಲ್ಲೆಯಲ್ಲಿ ಅಕ್ರಮವಾಗಿ ಸರಾಯಿ ಮಾರಾಟ ಮಾಡಿದರೆ ಮುಲ್ಲಾಜಿಲ್ಲದೆ ರೌಡಿಶೀಟ್ ಹಾಕಲಾಗುವುದು ಎಂದು ಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿ ಕೆ.ರಾಮರಾಜನ್ ಖಡಕ್ ಎಚ್ಚರಿಕೆ ನೀಡಿದ್ದಾರೆ.



ನಗರದ ಪೊಲೀಸ್ ಕಚೇರಿಯಲ್ಲಿ ಮಾಧ್ಯಮ ಗಳೊಂದಿಗೆ ಮಾತನಾಡಿದ ಅವರು, ಹಳ್ಳಿಗಳಲ್ಲಿ ಅಕ್ರಮ ಸರಾಯಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳಲಾಗುವುದು. ಒಂದು ವೇಳೆ ಅಕ್ರಮ ಸರಾಯಿ ಮಾರಾಟ ಕಂಡು ಬಂದರೆ ರೌಡಿಶೀಟ್ ದಾಖಲಿಸಿ ಗಡಿಪಾರು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಾರ್ವಜನಿಕರು ಸಹ ನಿಮ್ಮ ಮುಂದೆ ಅನ್ಯಾಯವಾಗುತ್ತಿದ್ದರೆ ಸಹಿಸಿಕೊಂಡು ಇರಬಾರದು. ನೀವು ನೀಡುವ ದೂರು ದಾಖಲೆಯಾಗಿ ಉಳಿಯಬೇಕು. ಆದ್ದರಿಂದ ಎಲ್ಲಿಯೇ ಏನೇ ಅಪರಾಧ ಕೃತ್ಯಗಳು ನಡೆಯಬಹುದು ಎನ್ನಿಸಿದರೆ ಕೂಡಲೇ ಕೆಎಸ್ ಪಿಆರ್ ಆ್ಯಪ್‌ನಲ್ಲಿ ದೂರು ನೀಡಿದರೆ ನಿಮ್ಮ ಮಾಹಿತಿ ಗೌಪ್ಯವಾಗಿ ಇಡಲಾಗುವುದು. ಇದರಿಂದ ಅಪರಾಧ ಕೃತ್ಯಗಳು ಕಡಿಮೆಯಾಗುತ್ತದೆ ಎಂದರು.

ಜಿಲ್ಲೆಯ ಎರಡು ಕಡೆಗಳಲ್ಲಿ ಮಕ್ಕಳ ಕೈಯಲ್ಲಿ ಬೈಕ್ ನೀಡಿದ್ದ ಪೋಷಕರಿಗೆ ನ್ಯಾಯಾಲಯ ಒಂದು ದಿನ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದೆ. ಪೋಷಕರು ಮಕ್ಕಳು ಕೈಯಲ್ಲಿ ಬೈಕ್ ಕೊಡುವ ಮುನ್ನ ಎಚ್ಚರಿಕೆಯಿಂದ ಇರಬೇಕು. ಬೈಕ್ ತೂಕ ಮಕ್ಕಳಿಗೆ ನಿಭಾಯಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ರಸ್ತೆ ಅಗಲೀಕರಣ, ಭೂಸ್ವಾಧೀನ ಪರಿಹಾರಕ್ಕೆ 1.09 ಕೋಟಿ ಮಂಜೂರು

ಚಿಕ್ಕೋಡಿ: ಪಟ್ಟಣದ ಅಂಕಲಿಕೂಟದಿಂದ ಶ್ರೀಕೃಷ್ಣ ವೃತ್ತದವರೆಗೆ ಅಗಲೀಕರಣಕ್ಕೆ ಅವಶ್ಯವಿರುವ ಖಾಸಗಿ ವ್ಯಕ್ತಿಗಳ ಜಮೀನು ಸ್ವಾಧೀನಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಭೂಮಾಲೀಕರಿಗೆ ಪರಿಹಾರಧನ ವಿತರಣೆಗಾಗಿ ಸರ್ಕಾರ 1.09 ಕೋಟಿ ಅನುದಾನ ಮಂಜೂರು ಮಾಡಿದೆ ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಕೆಲ ದಿನಗಳ ಹಿಂದೆಯಷ್ಟೇ ಹಳೆಯ ಪುರಸಭೆ ಕಚೇರಿಯಿಂದಶ್ರೀಕೃಷ್ಣವೃತ್ತದವರೆಗೆ 7ಕೋಟಿಮೊತ್ತದಲ್ಲಿರಸ್ತೆ ಅಗಲೀಕರಣ, ಡಾಂಬರೀಕರಣ, ಚರಂಡಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಇನ್ನು, 2.83 ಕೋಟಿ ಮೊತ್ತದಲ್ಲಿ ಭೂಗತ ವಿದ್ಯುತ್ ಕೇಬಲ್ ಹಾಗೂ ವಿದ್ಯುತ್ ದೀಪ ಅಳವಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗಿದೆ. ಇದೇ



ಮಾದರಿಯಲ್ಲಿ ಶ್ರೀಕೃಷ್ಣ ವೃತ್ತದಿಂದ ಅಂಕಲಿಕೂಟದವರೆಗೆ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗುವುದು. ಮೊದಲ ಹಂತವಾಗಿ ಖಾಸಗಿ ವ್ಯಕ್ತಿಗಳಿಗೆ ಪರಿಹಾರ ವಿತರಣೆ ಮಾಡಲು ಅನುದಾನವನ್ನು ತಾನು ಹಾಗೂ ಶಾಸಕ ಗಣೇಶ ಹುಕ್ಕೇರಿ ಪ್ರಯತ್ನದಿಂದ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಬರಲಾಗಿದೆ ಎಂದು ತಿಳಿಸಿದ್ದಾರೆ.

ಭೂಸ್ವಾಧೀನದ ಪರಿಹಾರ ಧನ ವಿತರಣೆ ಮಾಡಿದ ಬಳಿಕ ಅಗಲೀಕರಣ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುವುದು. ಅಗಲೀಕರಣದಿಂದ ವಾಹನ ಸವಾರರಿಗೆ, ವ್ಯಾಪಾರಿಗಳಿಗೆ ಹಾಗೂ ಪಾದಚಾರಿಗಳಿಗೆ ಅನುಕೂಲವಾಗಲಿದೆ ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ಯಾಜ್ಯ ವಿಂಗಡಿಸಿ ಸಂಗ್ರಹಕಾರರಿಗೆ ನೀಡಿ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರು ತಮ್ಮ ಮನೆಯಲ್ಲಿ, ವ್ಯಾಪಾರ-ಉದ್ದಿಮೆಗಳಲ್ಲಿ ಉತ್ಪತ್ತಿಯಾಗುವ ದೈನಂದಿನ ತ್ಯಾಜ್ಯವನ್ನು ಹಸಿ ತ್ಯಾಜ್ಯ, ಒಣತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ಸ್ಪೆಷಲ್ ಕೇರ್ ವೇಸ್ಟ್ (ಬಲ್ಬಗಳು, ಬ್ಯಾಟರಿಗಳು, ಅವಧಿ ಮೀರಿದ ಔಷಧಿಗಳು, ಪೇಂಟ್ ಡಬ್ಬಿಗಳು ಇತ್ಯಾದಿ) ಈ ನಾಲ್ಕು ಮಾದರಿಯಲ್ಲಿ ತ್ಯಾಜ್ಯವನ್ನು ವಿಂಗಡಿಸಿ ಪಾಲಿಕೆ ತ್ಯಾಜ್ಯ ಸಂಗ್ರಹಕಾರರಿಗೆ ನೀಡಿ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ಮಹಾನಗರ ಪಾಲಿಕೆಯೊಂದಿಗೆ ಸಹಕರಿಸುವಂತೆ ಸೂಚಿಸಲಾಗಿದೆ. ಈ ನೀಯಮ ಉಲ್ಲಂಘಿಸಿದಲ್ಲಿ ಕಾನೂನನ್ವಯ ದಂಡ ವಿಧಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚರಂಡಿ ಅವ್ಯವಸ್ಥೆ: ಗ್ರಾಪಂ ವಿರುದ್ಧ ಗ್ರಾಮಸ್ಥರ ಆಕ್ರೋಶ

ಬೈಲಹೊಂಗಲ: ತಾಲೂಕಿನ ಭಾಂವಿಹಾಳ ಗ್ರಾಮದ ಅಗಸಿ ಓಣಿಯಲ್ಲಿರುವ ಚರಂಡಿ ಅವ್ಯವಸ್ಥೆಯಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ಗ್ರಾಪಂ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಲವು ತಿಂಗಳಿನಿಂದ ಚರಂಡಿ ಸ್ವಚ್ಛಗೊಳಿಸದ ಪರಿಣಾಮ ಕಲುಷಿತ ನೀರು ನಿಂತು ದುರ್ವಾಸನೆ ಹರಡುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಗ್ರಾಮದಲ್ಲಿ ಮನೆಮಾಡಿದೆ.

ಅಂಗನವಾಡಿ ಶಾಲೆ ಸಮೀಪದಲ್ಲೇ ಈ ಚರಂಡಿ ಇರುವುದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆಗಾಲ ಆರಂಭವಾದರೆ ಪರಿಸ್ಥಿತಿ ಇನ್ನಷ್ಟು ಹದಗೆಡುವ ಆತಂಕ ವ್ಯಕ್ತವಾಗಿದೆ.

ಗ್ರಾಮಸ್ಥರಪ್ರಕಾರ, ಕಳೆದಮೂರು ತಿಂಗಳ ಹಿಂದೆಯೇ ಜಿಲ್ಲಾಧಿಕಾರಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಪಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಚರಂಡಿ ಸ್ವಚ್ಛಗೊಳಿಸುವಂತೆ ಆಗ್ರಹಿಸಲಾಗಿತು. ಆದರೆ ಯಾವುದೇ ಸ್ಪಂದನೆ ದೊರಕದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅಸಮಾಧಾನ ಹೊರಹಾಕಿದ್ದಾರೆ.

ಸ್ವಚ್ಛ ಭಾರತ ಅಭಿಯಾನಕ್ಕೆ ಸರ್ಕಾರ ಕೋಟ್ಯಂತರ ರೂ. ವೆಚ್ಚ ಮಾಡುತ್ತಿದ್ದರೂ, ಗ್ರಾಮ ಮಟ್ಟದಲ್ಲಿ ಮೂಲಭೂತ ಸ್ವಚ್ಛತಾ ವ್ಯವಸ್ಥೆ ಸಮರ್ಪಕವಾಗಿಲ್ಲ. ಚರಂಡಿ ನೀರು ನಿಂತ ಪರಿಣಾಮ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು.



ಹೋರಾಟ

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಚರಂಡಿ ಸ್ವಚ್ಛಗೊಳಿಸಬೇಕು. ಉಗ್ರ ಹೋರಾಟ ನಡೆಸಲಾಗುವುದು ಎಂದು ಗ್ರಾಮದ ಹಿರಿಯ ಅಣ್ಣಪ್ಪ ಗೌಡರ, ಭಾರತೀಯ ಕೃಷಿಕ ಸಮಾಜ ನವದೆಹಲಿ ರಾಷ್ಟ್ರೀಯ ಸಂಘಟನೆ ತಾಲೂಕು ಅಧ್ಯಕ್ಷ ಅಜ್ಮೀರ್ ನಧಾಪ್, ಗ್ರಾಮ ಘಟಕ ಅಧ್ಯಕ್ಷ ಈರಣ್ಣ ಕಾಜಗಾರ ಹಾಗೂ ತಾಲೂಕಿನ ಪ್ರಧಾನ ಕಾರ್ಯದರ್ಶಿ ಶಿವಾನಂದ ಮಾಸ್ತಮರ್ಡಿ ಎಚ್ಚರಿಕೆ ನೀಡಿದ್ದಾರೆ.

> ಕಳೆದ ಮೂರು ತಿಂಗಳ ಹಿಂದೆಯೇ ಚರಂಡಿ ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಗಿತ್ತು. ಈ ಸಮಸ್ಯೆ ಗಮನಕ್ಕೆ ಬಂದಿದ್ದು, ಕೂಡಲೇ ಸಿಬ್ಬಂದಿ ಕಳುಹಿಸಿ ಸ್ವಚ್ಛಗೊಳಿಸುವ ಕಾರ್ಯ ಕೈಗೊಳ್ಳಲಾಗುವುದು.
> ■ ಐ.ಬಿ.ಅಂಗಡಿ, ಭಾಂವಿಹಾಳ ಗ್ರಾಪಂ ಪಿಡಿಒ

ಆಝಾದ್ ನಗರದ ಸರ್ವಿಸ್ ರಸ್ತೆ ಅಭಿವೃದ್ಧಿಗೆ ಆಗ್ರಹ

ಬೆಳಗಾವಿ: ಅಭಿವೃದ್ಧಿ ಕಾಮಗಾರಿ ಹಿನ್ನೆಲೆ ಬೆಳಗಾವಿ ಆಝಾದ್ ನಗರದ ಬಳಿಯ ಸರ್ವಿಸ್ ರಸ್ತೆಯಲ್ಲಿ ಪ್ರತಿದಿನ ವಾಹನಗಳು ಸಿಲುಕಿ ಹಾಕಿಕೊಂಡು ಜನರು ಸಂಕಷ್ಟ ಅನುಭವಿಸುತ್ತಿದ್ದು, ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸಿ ಜನಹಿತವನ್ನು ಕಾಪಾಡಬೇಕೆಂದು ಜನಾಗ್ರಹ ಕೇಳಿಬಂದಿದೆ.

ಆಝಾದ್ ನಗರದ ಬಳಿ ಹಣ್ಣು ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಸರ್ವಿಸ್ ರಸ್ತೆ ಬಳಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಆದರೆ, ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವ ಹಿನ್ನೆಲೆ ರಸ್ತೆ ಹದಗೆಟ್ಟಿದ್ದು, ಕೆಸರು ಗದ್ದೆಯಾಗಿ ಪರಿಣಮಿಸಿದೆ. ಈ ಹಿನ್ನೆಲೆ ಪ್ರತಿದಿನ ಹಲವಾರು ವಾಹನಗಳು ಸಿಲುಕಿಕೊಳ್ಳುತ್ತಿದ್ದು, ಜನರು ತೊಂದರೆಗಿಡಾಗುತ್ತಿದ್ದಾರೆ.

ಕಳೆದ 2 ವರ್ಷಗಳಿಂದ ವಿಳಂಬವಾಗಿದ್ದು, ಜನರಿಗೆ ಅನಾನುಕೂಲವಾಗುತ್ತಿದೆ. ಕಳೆದ ಬಾರಿ ಇಬ್ಬರು ಕಾರ್ಮಿಕರು ಇದಕ್ಕೆ ಬಲಿಯಾಗಿದ್ದಾರೆ. ಪ್ರತಿದಿನ 3-4 ವಾಹನಗಳು ರಸ್ತೆಯಲ್ಲಿ ಸಿಲುಕಿ ಹಾಕಿಕೊಳ್ಳುತ್ತಿದ್ದು, ದ್ವಿಚಕ್ರವಾಹನ ಸವಾರರಿಗೂ ಸಂಕಷ್ಟ ತಪ್ಪಿದ್ದಲ್ಲ. ಇದರಿಂದಾಗಿ ಇಲ್ಲಿನ ವ್ಯಾಪಾರಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಯಾರೂ ನಮ್ಮ ಕಷ್ಟವನ್ನು ಕೇಳುತ್ತಿಲ್ಲವೆಂದು ಇಲ್ಲಿನ ಸ್ಥಳೀಯ ವ್ಯಾಪಾರಿಗಳು ಅಳಲನ್ನು ತೋಡಿಕೊಂಡರು. ಕಾಮಗಾರಿ ಶೀಘ್ರದಲ್ಲೇ ಪೂರ್ಣಗೊಳಿಸಬೇಕು ಆಗ್ರಹಿಸಿದ್ದಾರೆ.

ಮಹಾಂತೇಶ ನಗರದಿಂದ ಗಾಂಧಿ ನಗರದವರೆಗಿನ ಸೇತುವೆಗೆ ಹೊಂದಿಕೊಂಡು ಇರುವ ಸರ್ವಿಸ್ ರಸ್ತೆಯಲ್ಲಿನ ಸಂಚಾರ ಕಳೆದ 2 ತಿಂಗಳಿನಿಂದ ಸ್ಥಗಿತಗೊಳಿಸಲಾಗಿದೆ. ಕಾಮಗಾರಿ ಹಿನ್ನೆಲೆ ಧೂಳಿನ ಸಾಮ್ರಾಜ್ಯ ಇಲ್ಲಿ ನಿರ್ಮಾಣವಾಗಿದ್ದು, ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ಇಲ್ಲಿನ ಜನರು ದೂರಿದರು. ಕೂಡಲೇ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಿ ಜನಹಿತವನ್ನು ಕಾಪಾಡಬೇಕೆಂಬುದು ಇಲ್ಲಿನ ಜನರ ಬೇಡಿಕೆಯಾಗಿದೆ.

ಗ್ರಾಮ ದೇವತೆಯರ ಅಂಬಲಿ ಕಿಚಡಿ ಪ್ರಸಾದ ಜಾತ್ರೆ



ಯಮಕನಮರಡಿ: ಸ್ಥಳೀಯ ಗ್ರಾಮ ದೇವತೆಯರಾದ ಶ್ರೀ ದೇವತೆಯರ ಅಂಬಲಿ ಕಿಚಡಿ ಪ್ರಸಾದ ಜಾತ್ರೆಯು ಪ್ರತಿವರ್ಷದ ಪದ್ಧತಿಯಂತೆ ವಿಜೃಂಭಣೆಯಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಅರ್ಚಕರು ತಮ್ಮ ಭಕ್ತಿಯಿಂದ ಎರಡು ಪಲ್ಲಕ್ಕಿಗಳನ್ನು ದೇವಸ್ಥಾನಕ್ಕೆ ಕೊಡ ಮಾಡಿದರು. ಸಮೀಪದ ಜೀನರಾಳ ಗ್ರಾಮದ ಜನರು ಸಹಿತ ಪ್ರಸಾದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ ಅದರಂತೆ ದೇವಸ್ಥಾನದ ಪ್ರಮುಖರು ಉಪಸ್ಥಿತರಿದ್ದು ಶ್ರೀ ದೇವಿಯರ ಕೃಪೆಗೆ ಪಾತ್ರರಾದರು.

ಕಿರುಸುದ್ದಿ

ಇಂದು ಗುರುವಂದನಾ ಕಾರ್ಯಕ್ರಮ



◆**ಗುಳೇದಗುಡ್ಡ:** ಪಟ್ಟಣದ ಸೈಂಟ್ ಝೇವಿಯರ್ಸ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ 1990-91 ಮತ್ತು 1996-97ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ಮೇ 10ರಂದು ಬೆಳಗ್ಗೆ 10.30ಗಂಟೆಗೆ ಸಮೀಪದ ಆಸಂಗಿ ರಸ್ತೆ ಹತ್ತಿರದ ಕಾಟವಾ ಫಾರ್ಮ್‌ಹೌಸದಲ್ಲಿ ನಡೆಯಲಿದೆ ಎಂದು ಮನೋಹರ ಪುಟಾಣಿಕರ ಹೇಳಿದರು.ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸೈಂಟ್ ಝೇವಿಯರ್ಸ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಸಂಚಾಲಕ ಫಾದರ್ ಹ್ಯಾರಿ ರಾಬರ್ಟ್, ಶಾಲೆ ಮುಖ್ಯೋಪಾಧ್ಯಾಯ ಬಿ.ಆರ್. ದೊಡ್ಡಿಹಾಳ, ನಿವೃತ್ತ ಶಿಕ್ಷಕರಾದ ಎಸ್.ಎಸ್. ನಾರಾ, ಬಿ.ಎಂ.ಕೆಂಚಣ್ಣವರ, ಜೆ.ಆರ್.ಪಾಟೀಲ, ಸಿ.ಎ.ಮೇಟಿ, ಜಯಪ್ರಕಾಶ ಕಳ್ಳಿಗುಡ್ಡ, ಶಾಲೆಯ ಸಿಸ್ಟರ್ ತೇರೆಜಾ, ವಿನ್ನಿಲ ಬಿ.ಎಸ್ ಪಾಲ್ಗೊಳ್ಳುವರು ಎಂದು ತಿಳಿಸಿದರು. ಹುಚ್ಚೇಶ ದೊಡಮನಿ, ರವಿ ಹಿರೇಮನಿ, ಪ್ರಸನ್ ಭಾವಿಕಟ್ಟಿ, ಶಿವಾನಂದ ಆಲೂರ, ದೇವೇಂದ್ರ ಕೆರೂರ, ಸಂತೋಷ ನಿಲೂಗಲ್, ಡೆನಿಸ್ ಜೋಶಫ್, ರಾಘು ವಡ್ಡರ, ಶಿವಲೀಲಾ ಚಂದಾಪೂರ, ಸೋಮನಾಥ ತಾಂಡೂರ, ಸುಧಾ ಡಂ, ವಿದ್ಯಾ ಮುಳಗುಂದ ಮತ್ತಿತರು ಉಪಸ್ಥಿತರಿದ್ದರು.

ಭೀಮೋತ್ಸವ ಕಾರ್ಯಕ್ರಮ ಇಂದು

◆**ರಬಕವಿ-ಬನಹಟ್ಟಿ:** ಮೇ 10ರಂದು ಭಾನುವಾರ ಸಂಜೆ 5 ಗಂಟೆಗೆ ಅಂಬೇಡ್ಕರ್ ಸೇನೆ ಉತ್ತರ ಕರ್ನಾಟಕ ಸಮಿತಿಯ ವತಿಯಿಂದ ಬನಹಟ್ಟಿ ಈಶ್ವರಲಿಂಗ ಮೈದಾನದಲ್ಲಿ ಡಾ.ಬಾಬಾಸಾಹೇಬರ 135ನೇ ಜಯಂತಿ ನಿಮಿತ್ಯ ಭೀಮೋತ್ಸವ-2026 ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿದೆಯೆಂದು ಸೇನೆಯ ಉತ್ತರ ಕರ್ನಾಟಕ ಸಮಿತಿಯ ಅಧ್ಯಕ್ಷ ಶಿವಲಿಂಗ ಗೊಂಬಿಗುಡ್ಡ ತಿಳಿಸಿದ್ದಾರೆ.

ಧಮ್ಮಪಾಲ ಬಂತೇಜಿ ನವನಗರ ಬಾಗಲಕೋಟೆ ಸಾನ್ನಿಧ್ಯ ವಹಿಸಲಿದ್ದು, ಕರ್ನಾಟಕ ರಾಜ್ಯ ಕೊಳಗೇರಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಹುಬ್ಬಳ್ಳಿ ಧಾರವಾಡ ಪೂರ್ವ ಮತಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಉದ್ಘಾಟಿಸಲಿದ್ದಾರೆ. ಸೇನೆಯ ರಾಜ್ಯ ಸಂಸ್ಥಾಪಕ ಅಧ್ಯಕ್ಷ ಡಾ.ಪಿ.ಮೂರ್ತಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಚಿವ ಆರ್.ಬಿ.ತಿಮ್ಮಾಪುರ, ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ವರಿಷ್ಠ ಸಿದ್ದು ಕೊಣ್ಣೂರ, ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ. 'ಪವರ್ ಆಫ್ ಬಾಬಾಸಾಹೇಬ್ ವಿಷಯದ ಮೇಲೆ ಕಲಬುರ್ಗಿಯ ಡಾ.ವಿಠಲ ವಗ್ಗನ್ ಉಪನ್ಯಾಸ ನೀಡಲಿದ್ದಾರೆ. ಬೆಳಗಾವಿಯ ಡಾ.ಸಾಹುಕಾರ ಕಾಂಬ್ಳೆ ಆಗಮಿಸಲಿದ್ದಾರೆ. ಮೇ 11ರಂದು ಸಂಜೆ 5 ಗಂಟೆಗೆ ಡಾ.ಬಾಬಾಸಾಹೇಬ್‌ರ ಮುತ್ಥಳಿಯ ಭವ್ಯ ಮೆರವಣಿಗೆ ಬನಹಟ್ಟಿ ಸಹಕಾರಿ ನೂಲಿನ ಗಿರಣಿಯಿಂದ ರಬಕವಿ-ಬನಹಟ್ಟಿ ಸರ್ಕಾರಿ ಸಮುದಾಯ ಆರೋಗ್ಯಕೇಂದ್ರದವರೆಗೆ ನಡೆಯಲಿದೆಯೆಂದು ಶಿವಲಿಂಗ ಗೊಂಬಿಗುಡ್ಡ ತಿಳಿಸಿದ್ದಾರೆ.

ನಿಧನ ಸುದ್ದಿ

ಸೋಮಪ್ಪ ಮೇಟಿ

◆**ಬೀಳಗಿ:** ತಾಲೂಕಿನ ಕಾತರಕಿ ಗ್ರಾಮದ ಸೋಮಪ್ಪ ಹನಮಪ್ಪ ಮೇಟಿ (77) ಶುಕ್ರವಾರ ನಿಧನ ಹೊಂದಿದರು. ಕಾತರಕಿ ಮಂಡಳ ಪಂಚಾಯತಿ ಸದಸ್ಯರಾಗಿ, ಬಾಗಲಕೋಟೆ ಎಪಿಎಂಸಿ ಸದಸ್ಯರಾಗಿ, ಬೀಳಗಿ ಬ್ಲಾಕ್ ಕಾಂಗ್ರೆಸ್ ಕಮೀಟಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಸಂತಾಪ: ಸೋಮಪ್ಪ ಮೇಟಿ ಅವರ ನಿಧನಕ್ಕೆ ಶಾಸಕ ಜೆ.ಟಿ.ಪಾಟೀಲ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ ಮತ್ತು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕಾವೇರಿ ಅರಕೇರಿ

◆ **ಕಲಾದಗಿ:** ಸಮೀಪದ ಶಾರದಾಳ ಗ್ರಾಮದ ಹಿರಿಯರಾದ ಕಾವೇರಿ ಯಲ್ಲಪ್ಪ ಅರಕೇರಿ(68) ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಬಾಗಲಕೋಟೆ: ಚಿತ್ರದುರ್ಗದಲ್ಲಿ ನಡೆದ ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬಾಗಲಕೋಟೆಯಿಂದ ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ಕಾಯಕರ್ತರು ತೆರಳಿದರು. ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ನೇತೃತ್ವದಲ್ಲಿ ಕಾರ್ಯಕರ್ತರು ತೆರಳಿದರು.

ಅಧ್ಯಕ್ಷ ಸ್ಥಾನಕ್ಕೆ ಪೂಜಾರಿ ರಾಜೀನಾಮೆ

◆**ರನ್ನ ಬೆಳಗಲಿ:** ಪಟ್ಟಣದ 82 ವರ್ಷದ ಸುದೀರ್ಘ ಆಡಳಿತ ಹೊಂದಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಚಿನ್ನಪ್ಪ ಪೂಜಾರಿ ಶುಕ್ರವಾರ ಅಪಾರ ಸಂಖ್ಯೆಯ ಹಾಲುಮತ ಕುಲಬಾಂಧವರ ಬೆಂಬಲದ ಜೊತೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಹಿಕಡಿ ಅವರಿಗೆ ರಾಜೀನಾಮೆ ನೀಡಿದರು.ಈ ವೇಳೆ ಮಾತನಾಡಿದ ಚಿನ್ನಪ್ಪ ಪೂಜಾರಿ, ಹಿರಿಯರ ಬೆಂಬಲದೊಂದಿಗೆ ಅಧ್ಯಕ್ಷರಾಗಿ ರೈತರಿಗೆ ಮತ್ತು ಗ್ರಾಹಕರಿಗೆ ಅನೇಕ ಅಭಿವೃದ್ಧಿ ಕಾರ್ಯ ಒದಗಿಸಿ ಪ್ರಾಮಾಣಿಕ ಸೇವೆ ಒದಗಿಸಿದ್ದೇನೆ. ಮನೆಯ ಜವಾಬ್ದಾರಿಯಿಂದ ಸಂಘದ ಅಧ್ಯಕ್ಷ ಸ್ಥಾನ ನಿರ್ವಹಿಸಲು ಕಷ್ಟವಾಗುತ್ತಿದ್ದು, ಸ್ವ ಇಚ್ಛೆಯಿಂದ ಅಧ್ಯಕ್ಷ ಸ್ಥಾನಕ್ಕೆ ಹಾಗೂ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದರು. ಭಕ್ತ ಕನಕದಾಸ ಸೇವಾ ಸಂಘ ಅಧ್ಯಕ್ಷ ಲಕ್ಕಪ್ಪ ರಾಮಪ್ಪ ಮೇಡ್ಯಾಗೋಳ ಮಾತನಾಡಿದರು. ರಾಮಪ್ಪ ಹೊರಟ್ಟಿ, ಕೆಂಚಪ್ಪ ಗುಂಜಾಗೋಳ, ಮಹಾದೇವ ಕುಂಬಾಳಿ, ಲಕ್ಷ್ಮಣ ಕ್ವಾನ್ಯಾಗೋಳ, ಹನಮಂತ ಮನ್ನಿಕೇರಿ, ಚನ್ನಪ್ಪ ಚಾಲಿಕಟ್ಟಿ, ಪಪಂ ಸದಸ್ಯರಾದ ನೀಲಕಂಠ ಸೈದಾಪುರ, ಕರೆಪ್ಪ ಕುಂಬಾಳಿ, ಸಿದ್ದಾಪುರ ತೋಟ ಕೆಎಂಎಫ್ ಅಧ್ಯಕ್ಷ ಕರೆಪ್ಪ ಕುಂಬಾಳಿ, ಕುರಿ ಸಂಗೋಪನೆ, ಉಣ್ಣೆ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಪರಮಾನಂದ ಹಿಪ್ಪರಗಿ, ಸಿದ್ದಪ್ಪ ಕಂಬಳಿ, ಹನಮಂತ ಹೊರಟ್ಟಿ, ದುಂಡಪ್ಪ ಸೈದಾಪುರ, ಲಕ್ಕಪ್ಪ ಹಂಚಿನಾಳ, ಸದಾಶಿವ ಪೂಜಾರಿ, ಲಗಮಪ ಚಬ್ಬಿ, ಶಿವಪ್ಪ ಹಂಚಿನಾಳ ಹಾಗೂ ಸಂಗೊಳ್ಳಿ ರಾಯಣ್ಣ ಯುವಕ ಸಂಘ, ಹಾಲುಮತ ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಇಳಕಲ್: ತಾಲೂಕಿನ ವಜ್ಜಲ್ ಗ್ರಾಮದಲ್ಲಿ ಸಿಡಿಲು ಬಡಿದು ಸಾವನ್ನಪ್ಪಿದ್ದ ಶಾಂತವ್ವ ವಾಲಿಕಾರ ಅವರ ಕುಟುಂಬಕ್ಕೆ ವಿಜಯಾನಂದ ಎಸ್. ಕಾಶಪ್ಪನವರ ಭೇಟಿ ನೀಡಿ ಸಾಂತ್ವನ ಹೇಳಿ 5 ಲಕ್ಷ ರೂ.ಪರಿಹಾರ ವಿತರಿಸಿದರು. ಇಳಕಲ್ ತಹಶೀಲ್ದಾರ್ ಅಮರೇಶ ಪಮ್ಮಾರ ಗ್ರಾಮದ ಪ್ರಮುಖರು, ಕಂದಾಯ ಇಲಾಖೆಯ ಅಧಿಕಾರಿಗಳು ಇದ್ದರು.

ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ | ರೈತರಿಗೆ ಶೇ.97ರಷ್ಟು ಬಿಲ್ ಪಾವತಿ

ಬಾಕಿ ಪಾವತಿಗೆ ಗಡುವು: ಡಿಸಿ

◆**ಬಾಗಲಕೋಟೆ:** 2025-26ನೇ ಹಂಗಾಮಿನಲ್ಲಿ ಕಬ್ಬು ಪೂರೈಸಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಈಗಾಗಲೇ ಶೇ.97ರಷ್ಟು ಬಿಲ್ ಪಾವತಿ ಮಾಡಿದ್ದು, ಬಾಕಿ ಬಿಲ್ಲನ್ನು ವಾರದಲ್ಲಿ ಪಾವತಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಕಾರ್ಖಾನೆಗಳಿಗೆ ಗಡುವು ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರ, ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬೆಂಗಳೂರು ಇವರ ಆದೇಶದಂತೆ 2025-26ನೇ ಹಂಗಾಮಿಗೆ ಕಬ್ಬು ಪೂರೈಸಿದ ರೈತರಿಗೆ ಹೆಚ್ಚುವರಿಯಾಗಿ ಘೋಷಿಸಿದ ಪ್ರತಿ ಮೆಟ್ರಿಕ್ ಟನ್‌ಗೆ 50 ರೂ.ಗಳಂತೆ ಒಟ್ಟು 83.54 ಕೋಟಿ ರೂ.ಗಳ ಪೈಕಿ ಈಗಾಗಲೇ ಮೊದಲ ಕಂತಾಗಿ 69.60 ಕೋಟಿರೂ.ಗಳನ್ನು ಸರಕಾರ ಬಿಡುಗಡೆ ಮಾಡಿದೆ. ಅಲ್ಲದೇ ಎರಡನೇ ಕಂತು 13.94 ಕೋಟಿ ರೂ.ಗಳು ಬಿಡುಗೆಯಾಗಿದ್ದು, ಎರಡು ದಿನಗಳಲ್ಲಿ ಕಾರ್ಖಾನೆಗಳಿಗೆ ಜಮೆ ಆಗಲಿದೆ. ಕಾರ್ಖಾನೆಗಳು ಸಹ ಹೆಚ್ಚುವರಿ ಪ್ರತಿ ಮೆಟ್ರಿಕ್ ಟನ್‌ಗೆ ನೀಡಬೇಕಾದ 50 ರೂ.ಗಳನ್ನು ಸೇರಿಸಿ, ಪ್ರತಿ ಮೆಟ್ರಿಕ್ ಟನ್‌ಗೆ 100 ರೂ.ಗಳನ್ನು ರೈತರಿಗೆ ಜಮೆ ಮಾಡತಕ್ಕದ್ದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈಗಾಗಲೇ ಹೆಚ್ಚುವರಿಯಾಗಿ ಸರಕಾರಿ ಘೋಷಿಸಿದ ಪ್ರತಿಮೆಟ್ರಿಕ್ ಟನ್‌ಗೆ 50 ರೂ. ಹಾಗೂ ಕಾರ್ಖಾನೆಗಳ ಪಾಲಿನ 50 ರೂ. ಸೇರಿ ಒಟ್ಟು 100 ರೂ.ಗಳಂತೆ ನಾಯನೇಗಲಿಯ ಇಐಡಿ ಪ್ಯಾರಿ (ಇಂಡಿಯಾ ಲಿ) ಹಾಗೂ ಮುಧೋಳ ತಾಲೂಕಿನ ಉತ್ತೂರಿನ ಇಂಡಿಯನ್ ಕೇನ್ ಪಾವರ್ ಲಿಮಿಟೆಡ್‌ನವರು ಪಾವತಿ ಮಾಡಿರುತ್ತಾರೆ. ಉಳಿದ ಕಾರ್ಖಾನೆಗಳು ತುರ್ತಾಗಿ ರೈತರಿಗೆ ಪಾವತಿ ಮಾಡಿ ಉಪಯೋಗತಾ ಪ್ರಮಾಣ ಪತ್ರ (ಯುಸಿ) ವನ್ನು ನೀಡುವಂತೆ ಸೂಚನೆ ನೀಡಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಮಾತನಾಡಿ, ಕಬ್ಬು ಪೂರೈಸಿದ ರೈತರಿಗೆ ನಗದಿತ ಅವಧಿಯೊಳಗೆ ಬಿಲ್ ಪಾವತಿಯಾಗಬೇಕು. ಪಾವತಿಗೆ ವಿಳಂಬ ದೋರಣೆ ಅನುಸರಿಯುವಂತಿಲ್ಲ. ರೈತರ ಹಿತದೃಷ್ಟಿಯಿಂದ ಕಬ್ಬಿನ ಬಿಲ್ ಪಾವತಿ ವಿಚಾರವನ್ನು ಜಿಲ್ಲಾಡಳಿತ ಗಂಭಿರವಾಗಿ ಪರಿಗಣಿಸಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ನೀಡಿದ ಗಡುವಿನೊಳಗಾಗಿ ಬಿಲ್ ಪಾವತಿಗೆ ಕ್ರಮವಹಿಸಲು ತಿಳಿಸಿದರು.

ಉಪಅರಣ್ಯ ಸಂರಕ್ಷಣಾಧಿಕಾರಿಸ್ವಪ್ನಿಲ್‌ಮನೋಹರ ಆಹಿರೆ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಪ್ರಶಾಂತ ಬಾರಿಗಿಡದ, ಜಿಲ್ಲಾ ಪರಿಸರ ಮಾಲಿನ್ಯ ಅಧಿಕಾರಿ ಅನೀಲಕುಮಾರ ಚಳಗೇರಿ ಸೇರಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಮಾಲಿಕರು, ವ್ಯವಸ್ಥಾಪಕರ ನಿರ್ದೇಶಕರು ಉಪಸ್ಥಿತರಿದ್ದರು.

ಸಸಿ ನೆಡುವ ಅಭಿಯಾನ

ಜಿಲ್ಲೆಯಲ್ಲಿ ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಜಿಲ್ಲಾಡಳಿವು ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಸಹಯೋಗದಲ್ಲಿ ಬೃಹತ್ ಮಟ್ಟದಲ್ಲಿ ಸಸಿ ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಸಕ್ಕರೆ ಕಾರ್ಖಾನೆಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಯಡಿ ಅರಣ್ಯ ಇಲಾಖೆಯವರು ಪ್ರತಿ ಕಾರ್ಖಾನೆಗಳಿಗೆ ನಿಯೋಜಿಸಿದ 100 ಹೆಕ್ಟರ್ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಡಲು ಪ್ರಾರಂಭಿಸಿ ಅವುಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಹಸಿರು ಜಿಲ್ಲೆ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಮನವಿ ಮಾಡಿದ್ದಾರೆ.

ಪ್ರಾಯೋಗಿಕ ಅಧ್ಯಯನಕ್ಕೆ ಬಾಗಲಕೋಟೆ ಆಯ್ಕೆ

◆**ಬಾಗಲಕೋಟೆ:** ಕೃಷಿ ಕ್ಷೇತ್ರದಲ್ಲಿ ಮಕ್ಕಳ ಬಳಕೆ ತಡೆಗಟ್ಟುವ ಹಾಗೂ ಮಕ್ಕಳ ಶಿಕ್ಷಣ ಮತ್ತು ಸುರಕ್ಷತೆಗೆ ಆದ್ಯತೆ ನೀಡುವ ಉದ್ದೇಶದಿಂದ ಕೈಗೊಳ್ಳಲಾಗುತ್ತಿರುವ ಪ್ರಾಯೋಗಿಕ ಅಧ್ಯಯನಕ್ಕೆ ಬಾಗಲಕೋಟೆ ಜಿಲ್ಲೆ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪ್ರಾಯೋಗಿಕ ಅಧ್ಯಯನ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕೃಷಿ ಚಟುವಟಿಕೆಗಳಲ್ಲಿ ಮಕ್ಕಳ ತೊಡಗಿಸಿಕೊಳ್ಳುವಿಕೆ, ಅದರಿಂದಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಣಾಮಗಳು, ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಜಾಗೃತಿ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕೆಲಸಗಳಲ್ಲಿ ಮಕ್ಕಳ ಬಳಕೆ ಕುರಿತು ಸಂಗ್ರಹಣೆ, ಸಮೀಕ್ಷೆ, ಪೋಷಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೂರು ವರ್ಷಗಳ ಈ ಯೋಜನೆ ಕುರಿತು ವಿಸ್ತೃತ ಕ್ರಿಯಾಯೋಜನೆ ರೂಪಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಜಿಲ್ಲಾಮಟ್ಟದ ಅಧಿಕಾರಿಗಳು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರತಿನಿಧಿ ಜತೆ ನಿರಂತರ ಸಂಪರ್ಕದಲ್ಲಿಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಯೋಜನಾ ಸಂಯೋಜನ ಸಮನ್ವಯ ಅಧಿಕಾರಿ ರಂಜಿತ ಪ್ರಕಾಶ ಮಾತನಾಡಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಾಮಾಜಿಕ ನ್ಯಾಯ ಮತ್ತು ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಮಾನವ ಮತ್ತು ಕಾರ್ಮಿಕ ಹಕ್ಕುಗಳನ್ನು ಉತ್ತೇಜಿಸಲು ಮೀಸಲಾಗಿರುವ ವಿಶೇಷ ಸಂಸ್ಥೆಯಾಗಿದೆ. ಯೋಗ್ಯ ಕೆಲಸವನ್ನು ಉತ್ತೇಜಿಸುವುದು, ಉತ್ಪಾದಕ, ಸುರಕ್ಷಿತ ಮತ್ತು ನ್ಯಾಯಯುತ ಕೆಲಸದ ವಾತಾವರಣಗಳನ್ನು ರಚಿಸುವತ್ತ ಗಮನಹರಿಸಲಾಗುತ್ತಿದೆ ಎಂದು ಹೇಳಿದರು.

ಡಿವೈಎಸ್‌ಪಿ ಗಜಾನನ ಸುತಾರ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ರೇಷ್ಮೇ ಇಲಾಖೆಯ ಉಪನಿರ್ದೇಶಕ ಎಸ್.ಎಂ.ಕೋರೆ, ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಸ್ಥೆಯ ಯೋಜನಾ ನಿರ್ದೇಶಕ ಸುಧಾಕರ ಬಡಿಗೇರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆ ನಿರ್ದೇಶಕ ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.



ದಯಾನಂದ ಪುರಿ ಶ್ರೀಗಳ ಪಟ್ಟಾಧಿಕಾರ

◆**ಬಾದಾಮಿ:** ಸಮಾಜದ ಹೆಚ್ಚಿನ ಸಂಖ್ಯೆಯಲ್ಲಿ ನೇಕಾರರು ಇದ್ದಾರೆ ಎಂದು ತೋರಿಸಲ್ಲು ದೊಡ್ಡ ಪ್ರಯತ್ನ ನಡೆದಿದೆ. ಧರ್ಮ ಜಾತಿಯ ರಾಜಕೀಯ ಮಾಡಲು ನಾವು ತಯಾರಿದ್ದೇವೆ ಎಂದು ರಾಜ್ಯಕ್ಕೆ ದೇವಾಂಗ ಸಮಾಜ ತೋರುತ್ತಿದೆ, ದೇವರಿಗೆ ಉಡುಪು ಕೊಟ್ಟ ದೇವಾಂಗ ಸಮಾಜ, ಸರ್ಕಾರ ಬದಲಿಸುವ ಶಕ್ತಿ ಹೊಂದಿದೆ ಎಂದು ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಶನಿವಾರ ಸಮೀಪದ ಬನಶಂಕರಿಯಲ್ಲಿ ರಾಜ್ಯ ದೇವಾಂಗ(ನೇಕಾರ) ಸಮಾಜದ ಜಾಗೃತಿ ಸಮಾವೇಶ, ದಯಾನಂದ ಪುರಿ ಶ್ರೀಗಳ 36ನೇ ಪಟ್ಟಾಧಿಕಾರ, ತುಲಾಭಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಧರ್ಮದ ಹೆಸರಲ್ಲಿ ನಿಮ್ಮನ್ನು ಬಲಿ ಕೊಡುವ ಕೆಲಸ ನಡೆದಿದೆ. ಹಳೆಯ ಸಂಪ್ರದಾಯ, ಮೂಢನಂಬಿಕೆಯಿಂದ ದೂರ ಇರಿ, ಯಾವುದೇ ಆಮಿಷಗಳಿಗೆ ಒಳಗಾಗದೆ, ನಿಮ್ಮ ಮತ ಚಲಾವಣೆ ಮಾಡಿರಿ. ಸಮಾಜ ಸಂಘಟಿಸುವ ಕೆಲಸ ಮಾಡಿದ್ದು ಒಳಿಯದು ಎಂದು ಹೇಳಿದರು.

ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ, ಬೆಳಗಾವಿ ಬಿಡಿಸಿಸಿ ಬ್ಯಾಂಕ್ ನಾಮನಿರ್ದೇಶಕ ಸದಸ್ಯ ರಾಹುಲ ಜಾರಕಿಹೊಳಿ ಮಾತನಾಡಿದರು. ರಾಜ್ಯ ನೇಕಾರ ಒಕ್ಕೂಟದ ಅಧ್ಯಕ್ಷ ರವೀಂದ್ರ ಕಲಬುರಗಿ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖಂಡ ಎಂ.ಬಿ.ಹಂಗರಗಿ, ಸಮಾಜದ ಮುಖಂಡರಾದ ಗೋತಿಪ್ಪೇಶ,ಬಿ.ಜೆ.ಗಣೇಶ್, ಪಿ.ಆರ್.ಗಿರಿಯಪ್ಪ, ಮುಖಂಡರಾದ ಸಿ.ಎಲ್.ಧನಪಾಲ್, ಟಿ.ರಾಜೇಶ, ಎಚ್.ಪರಮೇಶ್ವರಪ್ಪ,ಕೆ.ಸಿ.ತಿಮ್ಮಶೆಟ್ಟಿ,ಸಂಕಣ್ಣಕರಡಿಗುಡ್ಡ, ಟಿ.ಆರ್.ಉಮಾಪತಿ, ಚುಡಾಮನಿ ಕೇಶವಮೂರ್ತಿ, ಕುಮಾರ ಶೇಬಿನಕಟ್ಟಿ, ಮಹೇಶ ಶೇಬಿನಕಟ್ಟಿ, ಗವಿರಂಗಯ್ಯ, ಶ್ರೀಧರ ದೇವಾಂಗ, ಸತೀಶ ಸಪ್ಪರದ, ಭಾರತಿ ರಮೇಶ, ಉಮೇಶ ಕಂದಗಲ್, ದಿನೇಶ ಗಿಡ್ನಂದಿ, ಆರ್.ಜಿ.ರಾಮದುರ್ಗ, ರವಿ ಬಳಿಗೇರ, ಬಸವರಾಜ ಕುದರಿ, ಸತೀಶ ಸಪ್ಪರದ, ಹೇಮಾದ್ರೆಪ್ಪ ಕೊಪ್ಪಳ, ಬಸವರಾಜ ವಡ್ಡೊಡಗಿ, ಟಿ.ಎಂ. ಜಲೇಂದ್ರ, ನಾಗಪ್ಪ ಭಾವಿಕಟ್ಟಿ ಸೇರಿದಂತೆ ಸಮುದಾಯದ ಮುಖಂಡರು ಇದ್ದರು. ಬೆಳಗ್ಗೆ ನಗರದ ಬಸವೇಶ್ವರ ವೃತ್ತದಿಂದ ಮುಖ್ಯರಸ್ತೆಯ ಮೂಲಕ ಅಂಬೇಡ್ಕರ್ ಸರ್ಕಲ್‌ವರೆಗೆ ವಿವಿಧ ಸಂಗೀತ ವಾದ್ಯಗಳ ಮೂಲಕ ಸಹಸ್ರಾರು ಮಹಿಳೆಯರಿಂದ ಕುಂಭ ಮೆರವಣಿಗೆ ಮತ್ತು ದಯಾನಂದ ಪುರಿ ಶ್ರೀಗಳ ಸಾರೋಟಗಿಯಲ್ಲಿ ಮೆರವಣಿಗೆ ಜರುಗಿತು.



ಯುವಕರು ಧರ್ಮದ ಹಾದಿಯಲ್ಲಿ ನಡೆಯಲಿ: ಶ್ರೀಗಳು

◆**ಮಹಾಲಿಂಗಪುರ:** ಸಾಧನೆಗೆ ಯೌವನದ ಹಂತ ಸೂಕ್ತ. ಬಾಲ್ಯದಲ್ಲಿ ಬುದ್ಧಿ, ವೃದ್ಧಾಪ್ಯದಲ್ಲಿ ಶಕ್ತಿ ಇರುವುದಿಲ್ಲ, ಆದ್ದರಿಂದ ಯುವಕರು ಇಂದ್ರಿಯಗಳನ್ನು ನಿಗ್ರಹಿಸಿ ಧರ್ಮದ ಹಾದಿಯಲ್ಲಿ ನಡೆಯಬೇಕು. ಇಷ್ಟಲಿಂಗ ನಿತ್ಯ ಪೂಜಿಸಿದಲ್ಲಿ ಪರಮಾತ್ಮನ ನಿಜ ಅರಿವು ಉಂಟಾಗುತ್ತದೆ ಎಂದು ಸಾಲಹಳ್ಳಿಯ ಚಿಪ್ಪಲಕಟ್ಟಿ ಬೃಹನ್ಮಠದ ಅಭಿನವ ಸಿದ್ದಲಿಂಗ ಶ್ರೀಗಳು ಹೇಳಿದರು.

ಸ್ಥಳೀಯ ಮಹಾಲಿಂಗೇಶ್ವರ ಮಠದಲ್ಲಿ ಗುರುಲಿಂಗೇಶ್ವರ ಸ್ವಾಮೀಜಿಗಳ 61ನೇ ಪುಣ್ಯಾರಾಧನೆ ಅಂಗವಾಗಿ ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಜಂಗಮ ವಟುಗಳಿಗೆ ಅಯ್ಯಾಚಾರ, ಮಹಾಲಿಂಗೇಶ್ವರ ಸ್ವಾಮೀಜಿ ಜನ್ಮಶತಾಬ್ದಿ ಹಾಗೂ ತುಲಾಭಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಲಿಂಗ ಮತ್ತು ರುದ್ರಾಕ್ಷಿ ಧರಿಸುವುದರ ಮಹತ್ವವನ್ನು ತಿಳಿಸಿಕೊಡುವುದು ಪೋಷಕರು ಮತ್ತು ಗುರುಗಳ ಕರ್ತವ್ಯ ಎಂದರು.



100ಕ್ಕೂ ಹೆಚ್ಚು ಜಂಗಮ ವಟುಗಳಿಗೆ ಅಯ್ಯಾಚಾರದೀಕ್ಷೆ, ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮೀಜಿಗಳಿಗೆ ತುಲಾಭಾರ ಮತ್ತು ಗುರುಲಿಂಗ ಜಂಗಮರ ಗದ್ದುಗೆಗೆ ರುದ್ರಾಭಿಷೇಕ ನಡೆಯಿತು. ಅಷ್ಟಾವರ್ಣಗಳಾದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದ ಅಂಶಗಳ ಮಹತ್ವ ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಜಿ.ಎ.ಮಠಪತಿ ಮಾತನಾಡಿ, ಮಕ್ಕಳು ಸುಸಂಸ್ಕೃತರಾಗಿ ಬದುಕು ಸಾಗಿಸಲು ಉತ್ತಮ ಸಂಸ್ಕಾರದ ಅಗತ್ಯವಿದ್ದು ಆ ನಿಟ್ಟಿನಲ್ಲಿ ಪಾಲಕರು ಗಮನ ಹರಿಸಬೇಕೆಂದರು. ಗುರುಪಾದಯ್ಯ ಚಟ್ಟಿಮಠ ಅಧ್ಯಕ್ಷತೆ ವಹಿಸಿದ್ದರು. ಮಹಾಂತೇಶ ಹಿಟ್ಟಿನಮಠ, ಬಸವರಾಜ ಹಿಟ್ಟಿನಮಠ, ವಿ.ಐ.ಪಂಚಕಟ್ಟಿಮಠ, ಗುರುಲಿಂಗಯ್ಯ ಮಠಪತಿ, ಬಸಯ್ಯ ಚಟ್ಟಿಮಠ, ಬಿ.ಎಂ.ಅಯ್ಯನಗೌಡರ, ಮಹಾಂತೇಶ ಮನ್ನಯ್ಯನವರಮಠ, ಚನ್ನಯ್ಯ ಮಸಗುಪ್ಪಿಮಠ, ಸಾಗರ ಮಠದ, ಈರಣ್ಣ ಚಟ್ಟಿಮಠ, ಸಂಗಯ್ಯ ವಸ್ತ್ರದ, ಸದಾಶಿವ ಹಿರೇಮಠ, ರವಿ ಹಿರೇಮಠ, ಪರಯ್ಯ ಮಠದ, ಮೃತ್ಯುಂಜಯ ಮಠಪತಿ ಇದ್ದರು. ಡಾ.ಪರಮೇಶ್ವರಿ ಈ ಹೊಸಮಠ ನಿರೂಪಿಸಿ, ಈರಣ್ಣ ಹೊಸಮಠ ವಂದಿಸಿದರು.

ಒತ್ತುವರಿ ಅಂಗಡಿಗಳ ತೆರವು: ಸಾರ್ವಜನಿಕರ ಮೆಚ್ಚುಗೆ

◆**ಇಳಕಲ್:** ನಗರಸಭೆಯ ಅಧಿಕಾರಿಗಳು ನಗರದ ಸಾರ್ವಜನಿಕರಿಗೆ ಅನುಕೂಲವಾಗುವ ಕಾರ್ಯ ಮಾಡುತ್ತಿದ್ದಾರೆ. ನಗರದಲ್ಲಿ ಫುಟ್ ಬಾತ್ ರಸ್ತೆಗಳಲ್ಲಿ ಅಂಗಡಿ ವ್ಯಾಪಾರಸ್ಥರು ಅತಿಕ್ರಮಣ ಮಾಡಿದ್ದರು. ಅಂತವರಿಗೆ ನೋಟಿಸ್ ನೀಡುವ ಮೂಲಕ ಫುಟ್ಪಾತ್ ರಸ್ತೆಯಲ್ಲಿ ಯಾವುದೇ ಅಂಗಡಿ ಅಂಗಡಿ ಉದ್ಗಟ್ಟುಗಳನ್ನು ಇಡಬಾರದು ಎಂದು ಎಚ್ಚರಿಕೆ ನೀಡುವುದರ ಜೊತೆಗೆ ಫುಟ್‌ಪಾತ್ ರಸ್ತೆ ಮೇಲಿದ್ದ ಅಂಗಡಿಗಳನ್ನು ತೆರವುಗೊಳಿಸಿದ್ದಾರೆ.

ನಗರದ ಪ್ರಮುಖ ರಸ್ತೆಗಳಲ್ಲಿ ವ್ಯಾಪಾರಸ್ಥರು ರಸ್ತೆ ಮೇಲೆ ತಮ್ಮ ಅಂಗಡಿಗಳನ್ನು ಇಟ್ಟು ಮತಚಾರಿಗಳಿಗೆ ತೊಂದರೆಯಾಗುತ್ತಿತ್ತು. ನಗರದ ಹೃದಯ ಭಾಗದ ಎಸ್.ಆರ್.ಕಂಠಿ ವೃತ್ತದಿಂದ ಬಸವೇಶ್ವರ ವೃತ್ತದವರೆಗಿನ ಎರಡು ಬಿಯ ರಸ್ತೆಯಲ್ಲಿ ನಿತ್ಯ ಹಲವಾರು ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿತ್ತು.ನಗರ ಪಿಎಸ್ಐ ಮಂಜುನಾಥ ಪಾಟೀಲ ಮತ್ತು ನಗರಸಭೆ ಆರೋಗ್ಯ ನಿರೀಕ್ಷಕ ಶರಣಪ್ಪ ಹೂಲಿ, ಬಸವರಾಜ ಕಿರಗಿ ಮುತುವರ್ಜಿ ವಹಿಸಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವವರಿಗೂ ಬಿಸಿ ಮುಟ್ಟಿಸಿ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ ವಾಹನಗಳನ್ನು ಕಸದ ಗಾಡಿಯಲ್ಲಿ ಎತ್ತಿಕೊಂಡು ಹೋಗುವ ಮೂಲಕ ವಾಹನ ಸವಾರರಿಗೆ ಎಚ್ಚರಿಕೆ ನೀಡಿದ್ದಾರೆ.



ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವ ಬೀದಿಬದಿ ವ್ಯಾಪಾರಸ್ಥರಿಗೆ ಇದು ತೊಂದರೆ ಆಗಿದ್ದರೂ ಸಹ ಅವರಿಗೆ ಸೂಕ್ತವಾದ ಸ್ಥಳವನ್ನು ನಗರಸಭೆ ಅಧಿಕಾರಿಗಳು ನಿಗದಿಪಡಿಸಿ ವ್ಯಾಪಾರ ಮಾಡಲು ಅನುಕೂಲ ಮಾಡಿಕೊಡಬೇಕು. ಇದರಿಂದ ಸಾರ್ವಜನಿಕರಿಗೂ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ ಅದೇ ರೀತಿ ಬೀದಿಬದಿ ವ್ಯಾಪಾರಸ್ಥರಿಗೂ ಸಹ ವ್ಯಾಪಾರ ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹ

ಭ್ರಷ್ಟಾಚಾರ: ಲೋಕಾಯುಕ್ತರ ದಾಳಿ

◆**ಹುನಗುಂದ:** ಭ್ರಷ್ಟಾಚಾರ ದೂರಿನ ಹಿನ್ನಲೆ ಪಟ್ಟಣದ ಪುರಸಭೆಯ ಮೇಲೆ ಗುರವಾರ ಬೆಳಗ್ಗೆ ಬಾಗಲಕೋಟೆ ಲೋಕಾಯುಕ್ತರ ದರ್ಶನವಾಗಿದೆ. ಬಾಗಲಕೋಟೆ ಲೋಕಾಯುಕ್ತ ಎಸ್‌ಪಿ ಎಂ.ಬಿ.ನಂದಗಾವಿ ನೇತೃತ್ವದಲ್ಲಿ ಡಿವೈಎಸ್‌ಪಿ ಸುರೇಶ ರೆಡ್ಡಿ, ಪಿಎಸ್‌ಐ ಗಳಾದ ಬಿ.ಎ.ಬಿರಾದಾರ, ಎಂ.ಬಿ.ಬಿರಾದಾರ, ಎನ್.ಆರ್. ಕಿಲಾರೆ ಸೇರಿ 8ಕ್ಕೂ ಹೆಚ್ಚು ಸಿಬ್ಬಂದಿಗಳ ತಂಡ ಪುರಸಭೆಯ ಕಚೇರಿಯ ಮೇಲೆ ದಿಢೀರ ದಾಳಿ ನಡೆಸಿದರು.



ದೂರಿನಲ್ಲಿರುವ ಇ-ಸ್ವತ್ತು, ಕಟ್ಟಡ ಅನುಮತಿಯ ವಿಳಂಬ ಧೋರಣೆ ವಿಷಯಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲನೆ ನಡೆಸಿದ್ದಾರೆ. ದಿನವಿಡಿ ಎಲ್ಲ ಕಡತ ಪರಿಶಿಲಿಸಿಲಿದೆ.

ಪುರಸಭೆ ಕಚೇರಿಯಲ್ಲಿ ಇ-ಸ್ವತ್ತು, ಎನ್‌ಓಸಿ ಮತ್ತು ಕಟ್ಟಡ ಕಟ್ಟಲು ಅನುಮತಿ ನೀಡುವಲ್ಲಿ ಮುಖ್ಯಾಧಿಕಾರಿ ಮತ್ತು ಸಿಬ್ಬಂದಿ ಲಂಚ ಕೇಳಿ ಅವ್ಯವಹಾರ ಮಾಡುವುದು ಮತ್ತು ಕೆಲಸ ಮಾಡಿ ಕೊಡುವಲ್ಲಿ ವಿಳಂಬ ಮಾಡಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿರುವುದರ ಕುರಿತು ಬೆಂಗಳೂರ ಲೋಕಾಯುಕ್ತ ಕಚೇರಿಗೆ ದೂರುಗಳು ಬಂದ ಹಿನ್ನಲೆ ಈ ಪರಿಶಿಲನೆ ನಡೆದಿದೆ ಎಂದು ಲೋಕಾಯುಕ್ತ ಎಸ್ಪಿ ನಂದಗಾವಿ ಸುದ್ದಿಗಾರರಿಗೆ ತಿಳಿಸಿದರು.

ಸಾರ್ವಜನಿಕರಿಗೆ ಉಪಯೋಗವಾಗಬೇಕಿರುವ ಆವರಣದಲ್ಲಿರುವ ಸಮುದಾಯ ಭವನದಲ್ಲಿ ಹಳೆ ಸಾಮುಗ್ರಿಗಳನ್ನು ಇಟ್ಟು ಬೀಗ ಹಾಕಿದ್ದನ್ನು ಕಸ ವಿಲೇವಾರಿಗೆ ಬಳಸಬೇಕಿದ್ದ ಯಂತ್ರೋಪಕರಣ ಮತ್ತು ಕೆಲವು ವಾಹನಗಳು ಬಳಕೆಯಾಗದೆ ಇಟ್ಟಲ್ಲಿಯೇ ಇಟ್ಟು ತುಕ್ಕು ಇಡಿದಿರುವುದನ್ನು ಕಂಡು ಮುಖ್ಯಾಧಿಕಾರಿ ಚೌಕಿಮಠ ಅವರನ್ನು ತರಾಟೆಗೆ ತೆಗೆದುಕೊಂಡರು.

ಮಾನವೀಯತೆ ಮುಖ್ಯ



◆**ಜಮಖಂಡಿ:** ಮನುಷ್ಯನ ಜೀವನದಲ್ಲಿ ಮಾನವೀಯತೆ ಅಳವಡಿಸಿಕೊಂಡರೆ ಅದು ನಮ್ಮ ಜೀವನವನ್ನು ಉತ್ತುಂಗಕ್ಕೆ ಒಯ್ಯುತ್ತದೆ. ಹಾಗೂ ಮಾನವೀಯತೆಯಿಂದ ಶಾಂತಿ ನೆಲೆಸುತ್ತದೆ ಎಂದು ಪ್ರಾಚಾರ್ಯ ಪ್ರೊ.ಕೆ.ಜೆ.ಜೀರಗಾಳಿ ಹೇಳಿದರು. ನಗರದ ಬಿಎಲ್‌ಡಿಇ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವ ರೆಡ್ ಕ್ರಾಸ್ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರೊ. ಎಲ್.ಎಂ.ಮಾರ್ಕಪನಳ್ಳಿ ಮಾತನಾಡಿದರು. ಪ್ರಶಿಕ್ಷಣಾರ್ಥಿ ಪ್ರಸಾದ ಮಾಳಿ ಅನಿಸಿಕೆ ವ್ಯಕ್ತಪಡಿಸಿದರು. ವಿಶ್ವ ರೆಡ್ ಕ್ರಾಸ್ ದಿನದ ಅಂಗವಾಗಿ ಜನರಲ್ಲಿ ಜಾಗೃತಿ ಮೂಡಿಸುವ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು. ರೆಡ್ ಕ್ರಾಸ್ ವಿಭಾಗದ ಮುಖ್ಯಸ್ಥ ಪ್ರೊ.ಅಶ್ವಿನಿ ಅನಂತಪೂರ, ಪ್ರೊ. ವಿಶಾಲಾಕ್ಷಿ ಸಿದರೆಡ್ಡಿ, ಪ್ರಶಿಕ್ಷಣಾರ್ಥಿಗಳಾದ ಮಧು ಮಠಪ, ಸುಶ್ಮಿತಾ ಮಂಟೂರು, ಅಲ್ಲಮಪ್ರಭು ವಾಜಂತ್ರಿ, ಪಾರ್ವತಿ ಪೂಜಾರಿ, ಮಹನಂದಾ ತೇಲಿ ಇದ್ದರು.

ಹೋರಾಟಕ್ಕೆ ಎನ್.ಎಸ್.ಹರ್ಡೇಕರ ಸ್ಫೂರ್ತಿ

◆**ಲೋಕಾಪುರ:** ಡಾ.ನಾರಾಯಣ ಸುಬ್ಬರಾವ ಹರ್ಡೇಕರ ಭಾರತದ ಸ್ವಾತಂತ್ರ್ಯ ಹೋರಾಟಗಾರ, ಸೇವಾದಳದ ಸ್ಥಾಪಕ ಮತ್ತು ಕರ್ನಾಟಕದ ಹೆಮ್ಮೆಯ ನಾಯಕ ಎಂದು ಸೇವಾದಳದ ಜಿಲ್ಲಾ ಸಂಘಟನೆಯ ಕೋಶಾಧ್ಯಕ್ಷ ಎಂ.ಎಂ.ನಾಲತವಾಡ ಹೇಳಿದರು.

ಸಮೀಪದ ಚಿಕ್ಕೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ. ನಾ.ಸು. ಹರ್ಡೇಕರ ಅವರ 137ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ನೂರು ವರ್ಷಗಳ ಹಿಂದಿಯೇ ದೇಶದ ಮೊಟ್ಟ ಮೊದಲ ದೇಶ ಪ್ರೇಮಿಗಳ ಸಂಘಟನೆ ಹಿಂದುಸ್ತಾನಿ ಸೇವಾದಳ ಸ್ಥಾಪಿಸಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಯುವ ಸಮೂಹ ಸಜ್ಜುಗೊಳಿಸಿದ ನಾ.ಸು.ಹರ್ಡೇಕರ ಜಯಂತಿ ರಾಷ್ಟ್ರೀಯ ಆಚರಣೆಯಾಗಬೇಕು ಎಂದರು.

ಮುಧೋಳ ತಾಲೂಕು ಭಾರತ ಸೇವಾದಳದ ಅಧಿನಾಯಕ ಎಚ್.ಆರ್.ದಾಸನಗೌಡರ ಮಾತನಾಡಿ, ಭಾರತೀಯರಲ್ಲಿ ಸೌಹಾರ್ದತೆ, ಸಮಾನತೆ, ಪರಸ್ಪರ ಸೇವಾ ಮನೋಭಾವನೆ ಮೂಡಿಸುವಲ್ಲಿ ಸಫಲವಾಗಿದ್ದ ಹರ್ಡೇಕರ ಸ್ಥಾಪಿಸಿದ ಹಿಂದೂಸ್ತಾನಿ ಸೇವಾದಳ ಈಗ ಭಾರತ ಸೇವಾದಳವಾಗಿ ಮಾರ್ಪಟ್ಟು, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮಕ್ಕಳ್ಳಿ ಶಿಸ್ತು ದೇಶಪ್ರೇಮ ಮೂಡಿಸಲು ಶ್ರಮಸುತ್ತಿದೆ ಎಂದರು.

ಸದಸ್ಯರಾದ ವೈ.ಆರ್.ದಾಸಪ್ಪನವರ, ಜಿಲ್ಲಾ ಸಂಘಟಕ ಮಹೇಶ ಪತ್ತಾರ, ಸದರಿ ಶಾಲೆಯ ಮುಖ್ಯಗುರು ಆರ್.ಆರ್.ಸಿಂಗರಡ್ಡಿ, ಲಕ್ಷ್ಮಣ ಪೂಜಾರಿ, ಲಕ್ಷ್ಮಣ ಅರಕೇರಿ, ರಮೇಶ ಕೋರಡ್ಡಿ, ಅರುಣ ಯಡಹಳ್ಳಿ, ಮುಧೋಳ ಭಾರತ ಸೇವಾದಳದ ತಾಲೂಕು ಕಾರ್ಯದರ್ಶಿ ಎಂ.ವಿ.ಪಾಟೀಲ, ಮಲ್ಲನ್ನವರ ಸರ್ ಉಪಸ್ಥಿರಿದ್ದರು.



ರಾಜ್ಯಮಟ್ಟದ ಪಗಡೆ ಸ್ಪರ್ಧೆ ಯಶಸ್ವಿ



◆**ಕಲಾದಗಿ:** ಸಮೀಪದ ಖಜ್ಜಿಡೋಣಿಯಲ್ಲಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮಾಂಬೆಯ ಜಾತ್ರಾ ಮಹೋತ್ಸವದ ನಿಮಿತ್ಯ ನಡೆದ ರಾಜ್ಯಮಟ್ಟದ ಹೊನಲು ಬೆಳಕಿನ ಪಗಡೆ ಸ್ಪರ್ಧೆ ಎಲ್ಲರ ಗಮನಸೆಳೆಯುವಲ್ಲಿ ಯಶಸ್ವಿಯಾಯಿತು.

ಬಾಗಲಕೋಟೆ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 20ಕ್ಕೂ ಅಧಿಕ ತಂಡಗಳು ಉತ್ಸಾಹದಿಂದ ಪಗಡೆ ಸ್ಪರ್ಧೆಯಲ್ಲಿ ಪಾಲ್ಗೊಂಡು ನಮ್ಮ ಪುರಾತನ ಪಾರಂಪರಿಕ ಆಟದಲ್ಲಿ ವಿಜೃಂಭಿಸಿದವು.ಸ್ಪರ್ಧೆಯಲ್ಲಿ ಒಟ್ಟು ಎಂಟು ವಿಜೇತ ಸ್ಥಾನಗಳಿಗೆ 40 ಸಾವಿರದಿಂದ ಹಿಡಿದು 5001 ರೂವರೆಗೂ ಬಹುಮಾನಗಳಿದ್ದವು, ಅದರಲ್ಲಿ ತೋಳಮಟ್ಟಿಯ ಶ್ರೀ ಮಲಿಕಾರ್ಜುನ ಪಗಡಿ ತಂಡ ಪ್ರಥಮ ಬಹುಮಾನ, ಸುರೇಬಾನದ ಶ್ರೀ ವೇದಮೂರ್ತಿ ಅಯ್ಯಪ್ಪ ಸ್ವಾಮಿ ಪಗಡೆ ತಂಡ ದ್ವಿತೀಯ, ನೀರಬೂದಿಹಾಳದ ಜೈ ಬಬಲಾದಿ ಪಗಡೆ ತಂಡ ತೃತೀಯ, ಕೋಟೆಕಲ್‌ನ ಶ್ರೀ ಹೊಳೆಹುಚ್ಚೇಶ್ವರ ಪಗಡೆ ತಂಡ ಚತುರ್ಥ, ಜಮಖಂಡಿಯ ಜೈ ಹನುಮಾನ ಪಗಡೆ ತಂಡ ಐದನೇಯ, ಖಜ್ಜಿಡೋಣಿಯ ಶ್ರೀ ಬೆಳ್ಳಿ ಬಸವೇಶ್ವರ ಪಗಡೆ ತಂಡ ಆರನೇಯ, ಡವಳೇಶ್ವರದ ಶ್ರೀ ಹುಳಿಮುಟ್ಟದ ರಂಗೇಶ ಪಗಡೆ ತಂಡ ಏಳನೇಯ ಹಾಗೂ ಸಾಳಗುಂದಿಯ ಶ್ರೀ ಜೈ ಹನುಮಾನ ಪಗಡೆ ತಂಡ ಎಂಟನೇಯ ಬಹುಮಾನವನ್ನು ತಮ್ಮದಾಗಿಸಿಕೊಂಡವು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕಿರುಸುದ್ದಿ

ಗೋ ಆಧಾರಿತ ಕೃಷಿಕರ ಚಿಂತನಾ ಸಮಾವೇಶ ನಾಳೆ

ವಿಜಯಪುರ: ತಾಲೂಕಿನ ಕಗ್ಗೋಡ ಗ್ರಾಮದ ಸಿದ್ಧೇಶ್ವರ ಸಂಸ್ಥೆಯ ರಾಮನಗೌಡ ಪಾಟೀಲ ಯತ್ನಾಳ ಗೋರಕ್ಷಾ ಕೇಂದ್ರದ ಆಶ್ರಯದಲ್ಲಿ ಮೇ 11ರಂದು ಬೆಳಗ್ಗೆ 9.30ರಿಂದ ಸಂಜೆ 5ರ ವರೆಗೆ ಗೋ ಶಾಲೆ ಆವರಣದಲ್ಲಿ ಸಿದ್ದೇಶ್ವರ ಸಂಸ್ಥೆ ಅಧ್ಯಕ್ಷರು ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಅಧ್ಯಕ್ಷತೆಯಲ್ಲಿ ಗೋ ಆಧಾರಿತ ಕೃಷಿಕರ ಚಿಂತನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕೃಷಿ ಕ್ಷೇತ್ರದಲ್ಲಿ ಗೋ ಆಧಾರಿತ ಆರ್ಥಿಕತೆ ಅಭಿವೃದ್ಧಿ ಪಡಿಸಲು ಹಾಗೂ ಕೃಷಿಕರು ಗೋ ಆಧಾರಿತ ಕೃಷಿ ಹಾಗೂ ಸಾವಯವ ಕೃಷಿ ಅಳವಡಿಸಿಕೊಂಡು ಆರ್ಥಿಕ ಸಬಲತೆ ಪಡೆಯುವ ದೃಷ್ಟಿಯಿಂದ ಹಮ್ಮಿಕೊಳ್ಳಲಾದ ಗೋ ಆಧಾರಿತ ಈ ಸಮಾವೇಶವನ್ನು ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್ ಸಂಶೋದನಾ ನಿರ್ದೇಶಕ ಡಾ.ಶಿವಪ್ರಕಾಶ ಬಿ.ವಿ. ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲ್‌ಕುಮಾರ್ ಭಾವಿದೊಡ್ಡಿ, ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ.ಆರ್.ಎಸ್. ಪದರಾ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಗಂಗಾಧರ ದೇಸಾಯಿ ಅವರು ಪಾಲ್ಗೊಳ್ಳಲಿದ್ದಾರೆ. ಗೋಷ್ಠಿಗಳಲ್ಲಿ ಗೋ ಆಧಾರಿತ ಕೃಷಿ ಮತ್ತು ಆರ್ಥಿಕತೆ ಕುರಿತು ಗೋ ಆಧಾರಿತ ಕೃಷಿ ಚಿಂತಕರು ಹಾಗೂ ಸಲಹೆಗಾರ ಡಾ.ಪ್ರಾಣೇಶ ಜಹಾಗೀರದಾರ, ಗೋ ಉತ್ಪನ್ನಗಳ ತಯಾರಿಕೆ ಕುರಿತು ತಜ್ಞರಾದ ಡಾ.ಸುಧೀಂದ್ರ ದೇಶಪಾಂಡೆ ಹಾಗೂ ಸಾವಯವ ಕೃಷಿ ಕುರಿತು ಡಾ.ರವಿಂದ್ರ ಬೆಳ್ಳಿ ಗೋಷ್ಠಿ ನಡೆಸಿಕೊಡುವರು. ನಿರೀಕ್ಷೆಯಿದೆ. ಜಿಲ್ಲೆಯ ರೈತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರಯೋಜನೆ ಪಡೆದುಕೊಳ್ಳಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ.

ಇಕ್ಕಟಾದ ರಸ್ತೆ: ಮುಗುಚಿ ಬಿದ್ದ ಭತ್ತದ ಲಾರಿ

ಬಸವನಬಾಗೇವಾಡಿ: ಪಟ್ಟಣದ ಮಿನಿವಿಧಾನಸೌಧದ ಮುಂಭಾಗದಲ್ಲಿ ಹಾಯ್ದು ಹೋದ ಅವೈಜ್ಞಾನಿಕ ಮನಗೂಳಿ ಬಿಜ್ಜಳ ರಾಜ್ಯ ಹೆದ್ದಾರಿ ಅಗ್ನಿ ಶಾಮಕ ದಳದ, ರಿಲಯನ್ಸ್ ಪೆಂಟ್ರೋಲ್ ಪಂಪ್ ಹತ್ತಿರ ಇಕ್ಕಟಾಗಿದ್ದರಿಂದ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿವೆ. ಎರಡ್ಮೂರು ತಿಂಗಳ ಹಿಂದೆ ರಿಲಯನ್ಸ್ ಪೆಂಟ್ರೋಲ್ ಪಂಪ್ ಹತ್ತಿರ ಕಬ್ಬು ತುಂಬಿದ್ದ ಲಾರಿಯೊಂದು ಬಿದ್ದಿದ್ದು ಅದನ್ನು ಅರಿತು ರಾಜ್ಯ ಹೆದ್ದಾರಿಗೆ ಸಂಬಂಧಪಟ್ಟ ಅಧಿಕಾರಿಗಳು ವಿಭಜಕದ ಮಧ್ಯೆದಲ್ಲಿ ಕೆಂಪು-ಹಳದಿಯ ಸೋಲಾರ್ ದೀಪ(ಸಿಂಗ್ನಲ್) ಹಾಕಿದ್ದರೂ ಸಹಿತ ರಾತ್ರಿ ಸಮಯದಲ್ಲಿ ಬರುವ ವಾಹನಗಳು ಅಪಘಾತಕ್ಕೆ ಇಡಾಗುತ್ತೀವೆ. ಗುರುವಾರ ರಾತ್ರಿ ನೆಲ್(ಭತ್ತ) ತುಂಬಿದ ಲಾರಿಯೊಂದು ರಸ್ತೆ ವಿಭಜಕ ತಾಕಿ ಮುಗುಚಿ(ಪಲ್ಟಿ) ಬಿದ್ದಿದೆ ಆದರೆ ಅದೃಷ್ಯವತ್ ಯಾವುದೇ ಪ್ರಾಣ-ಹಾನಿಯಾಗಿಲ್ಲ ಲಾರಿ ಮಾತ್ರ ಹಾನಿಯಾಗಿದೆ ಎಂದು ತಿಳಿದು ಬಂದಿದ್ದು ಈ ಕುರಿತು ಬಸವನಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿಲ್ಲ ಎಂದು ಸರ್ಕಲ್ ಪೊಲೀಸ್ ಇನ್ಸಪೆಕ್ಟರ್ (ಪಿಐ) ಗುರುಶಾಂತ ದಾಶ್ಯಾಳ ತಿಳಿಸಿದ್ದಾರೆ.

ನೀರು ವಿತರಣೆ

ಇಂಡಿ: ಪಟ್ಟಣದ ಮಹಾವೀರ ವೃತ್ತದಲ್ಲಿ ಆಯಿಷಾ ಮಜಿದದ ಇಮಾಮು ಅಹಮ್ಮದ ಸಲಾವುದ್ದೀನ ನಾಗೂರ ಅವರ ನೇತೃತ್ವದಲ್ಲಿ ನಗರದ ಮಹಾವೀರ ವೃತ್ತದಲ್ಲಿ ಉಚಿತ ಬಿಸ್ಲೇರಿ ತಂಪಾದ ಕುಡಿಯುವ ನೀರು ವಿತರಿಸಿದರು. ಗ್ರಾಮೀಣ ಮತ್ತು ನಗರದ ಜನತೆಗೆ ಸಂತೆಯ ದಿನ ಪ್ರತಿ ಮಂಗಳವಾರ ಬಾಯಾರಿಕೆ ನಿವಾರಿಸಿಕೊಳ್ಳಲು ಈ ಸೌಲಭ್ಯ ಮಾಡಲಾಗಿದೆ. ಈಗಾಗಲೇ ನಿನ್ನೆಯ ಮಂಗಳವಾರ ಪ್ರಾರಂಭವಾಗಿದ್ದು ಮೇ ತಿಂಗಳ ವರೆಗೂ ಇರುವವದು. 15 ತರುಣರು ನೀರು ಕೊಡಲು ಸಹಕರಿಸುವರು. ಪ್ರತಿ ಮಂಗಳವಾರ ಒಂದು ನೂರು ಕ್ಯಾನ ನೀರು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಹಸನ್ ಮುಜಾವರ, ವಸೀಮ ವಾಲಿಕಾರ,ಉಮರ ಫಾರುಕ ಬಾಗವಾನ, ಮೀರ್ ಅಯಾನ ಸುಲ್ತಾನ, ವಕಾಸ ಪಟೇಲ, ಫೈರುಜಾನ ಮುಲ್ಲಾ, ಅಜರ ಇಂಡಿಕರ, ಅಬ್ಬು ಕೋಟ್ನಾಳ, ಮಾರುಖ ನಾಯಿಕೊಡಿ, ಅಜಾಜ ಮುನಸಿ ಇದ್ದರು.

ರೂ.5 ಕೋಟಿ ಅನುದಾನ ಬಿಡುಗಡೆ: ಮನಗೂಳಿ

ಸಿಂದಗಿ: ನಗರ ಹಳೆಯ ತಹಶೀಲ್ದಾರ್ ಕಚೇರಿಯ ಜಾಗೆಯಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಮೆಗಾ ಮಾರ್ಕೆಟನ್ 2ನೇ ಹಂತದ ಎಸ್ಎಫ್‌ಸಿ ವಿಶೇಷ ಅನುದಾನದಡಿಯಲ್ಲಿ ರೂ.5 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಶಾಸಕ ಅಶೋಕ ಮನಗೂಳಿ ತಿಳಿಸಿದ್ದಾರೆ. ಈ ಹಿಂದೆ ಪ್ರಥಮ ಹಂತದಲ್ಲಿ ರಾಜ್ಯ ಸರಕಾರ ರೂ.5ಕೋಟಿ ಅನುದಾನ ಬಿಡುಗಡೆಯಾಗಿ ಕಾಮಗಾರಿ ಪ್ರಗತಿಯಲ್ಲಿದೆ. ಇದೀಗ ಮತ್ತೇ 5 ಕೋಟಿ ರೂಪಾಯಿ ಅನುದಾನ ಮಂಜೂರಾಗಿದೆ. ಅನುದಾನ ಮಂಜೂರು ಮಾಡಿರುವ ರಾಜ್ಯ ಸರ್ಕಾರಕ್ಕೆ ಸಿಂದಗಿ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಿದರು.





ನಾಲತವಾಡ: ಸ್ಥಳೀಯ ದೇಶಮುಖರ ವಾಡೆಯಲ್ಲಿ ಪಟ್ಟಣ ಪಂಚಾಯತಿ ಹಂಗಾಮಿ ಅಧ್ಯಕ್ಷ ಬಸವರಾಜ ಗಂಗನಗೌಡರ(ಗಡ್ಡಿ) ಅವರನ್ನು ಸನ್ಮಾನಿಸಲಾಯಿತು. ಶಂಕರ ರಾವ ದೇಶಮುಖ, ಚಂದ್ರಶೇಖರ ಮೇಟಿ, ಶಿವಾನಂದ ವಾಲಿ, ರಫೀಕ್ ತೆಗ್ಗಿನ್ಮನಿ, ವೀರೇಶ ಆಲಕೊಪ್ಪರ, ಮಹೇಶ ಇತರರು ಇದ್ದರು.

ಕಾಡು ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

ಮುದ್ದೇಬಿಹಾಳ: ಕಡು ಬೇಸಿಗೆಯಲ್ಲೂ ಉದ್ಯಾನವನ ಹಸಿರಿನಿಂದ ನಳನಳಿಸುತ್ತಿದೆ. ಅತ್ಯಂತ ಸುಂದರವಾಗಿ ತಗ್ಗು ಮಾಡಿ ನೀರು ಉಣಿಸುತ್ತಿರುವ ಕಾರ್ಮಿಕರು, ನಂದನವನ ನಿರ್ಮಿಸುತ್ತಿರುವ ಅರಣ್ಯ ಇಲಾಖೆಯ ಸರ್ವ ಸಿಬ್ಬಂದಿ ಹಸಿರು ತೋರಣ ಬಳಗ ನಿಜವಾಗಿಯೂ ಕಾಡನ್ನು ನಾಡು ಮಾಡಿ ಅದ್ಭುತವಾದ ಕೆಲಸ ಮಾಡಿದ್ದಾರೆ. ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ಅರಣ್ಯಾಧಿಕಾರಿ ಬಸನಗೌಡ ಬಿರಾದಾರ ಹೇಳಿದರು.

ಬಿದರಕುಂದಿ ಗ್ರಾಮದ ಗುಡ್ಡದಲ್ಲಿ ಇರುವ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಉದ್ಯಾನವನಕ್ಕೆ ಭೇಟಿ ನೀಡಿದ್ದ ಹಸಿರು ತೋರಣ ಗೆಳೆಯರ ಬಳಗದ ಸದಸ್ಯರ ಶ್ರಮದ ಕುರಿತು ಮಾತನಾಡಿದ ಅವರು, ತಾಯಿ ಮಗುವನ್ನು ಬೆಳೆಸಿದಂತೆ ಸಸಿಯನ್ನು ಮರವಾಗಿ ಬೆಳೆಸುವುದು ನಾಡಿನ ಪ್ರತಿಯೊಬ್ಬರ ಕರ್ತವ್ಯವಾಗಬೇಕು ಎಂದ ಅವರು ಹಸಿರು ತೋರಣ ಬಳಗದ ಪರಿಸರ ಕಾಳಜಿ ಮತ್ತು ಕಾರ್ಯದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಉಪ ಅರಣ್ಯ ಅಧಿಕಾರಿ ಗಿರೀಶ ಆಲಕುಡೆ, ಬಳಗದ ಅಧ್ಯಕ್ಷ ಅಮರೇಶ ಗೂಳಿ, ಕಾರ್ಯದರ್ಶಿ ಬಸವರಾಜ ಬಿಜ್ಜೂರ, ಗೌರವಾಧ್ಯಕ್ಷ ಸೋಮಶೇಖರ ಚೀರಲದಿನ್ನಿ, ಸಂಚಾಲಕ ಮಹಾಬಲೇಶ್ವರ ಗಡೇದ ಸೇರಿದಂತೆ ಹತೋಗೆಬ ಸದಸ್ಯರು, ಅರಣ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಮುದ್ದೇಬಿಹಾಳ: ಬಿದರಕುಂದಿ ಗ್ರಾಮದ ಗುಡ್ಡದಲ್ಲಿ ಇರುವ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಉದ್ಯಾನವನಕ್ಕೆ ಅರಣ್ಯಾಧಿಕಾರಿ ಬಸನಗೌಡ ಬಿರಾದಾರಭೇಟಿ ನೀಡಿದರು. ಉಪ ಅರಣ್ಯ ಅಧಿಕಾರಿ ಗಿರೀಶ ಆಲಕುಡೆ, ಬಳಗದ ಅಧ್ಯಕ್ಷ ಅಮರೇಶ ಗೂಳಿ, ಕಾರ್ಯದರ್ಶಿ ಬಸವರಾಜ ಬಿಜ್ಜೂರ, ಗೌರವಾಧ್ಯಕ್ಷ ಸೋಮಶೇಖರ ಚೀರಲದಿನ್ನಿ, ಸಂಚಾಲಕ ಮಹಾಬಲೇಶ್ವರ ಗಡೇದ ಸೇರಿದಂತೆ ಹತೋಗೆಬ ಸದಸ್ಯರು, ಅರಣ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನರೇಗಾ ಕಾಮಗಾರಿ ಸ್ಥಳಕ್ಕೆ ಪ್ರಕಾಶ ಭೇಟಿ

ವಿಜಯಪುರ: ಜಿಲ್ಲೆಯ ನಿಡಗುಂದಿ ತಾಲೂಕಿನ ಆಲಮಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಳದಿನ್ನಿ ಗ್ರಾಮದ ಸಮೀಪ ಬಸಿಗಾಲುವೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅವರು ಭೇಟಿ ನೀಡಿ ಪರಿಶೀಲಿಸಿದರು.



ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರ ಮಸ್ಟರ್ ರೂಲ್ ಹಾಗೂ ಫೋಟೊ ಆಧಾರಿತ ಹಾಜರಾತಿ ಪರಿಶೀಲಿಸಿದರು. ಕೂಲಿಕಾರರೊಂದಿಗೆ ಸಂವಾದ ನಡೆಸಿದ ಅವರು, ಯೋಜನೆಯಡಿ ದೊರೆಯುವ ಸೌಲಭ್ಯದ ಬಗ್ಗೆ ಮಾಹಿತಿ ಪಡೆದುಕೊಂಡರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಬಗ್ಗೆ ಪಿಡಿಒ ಹಾಗೂ ತಾಂತ್ರಿಕ ಎಂಜಿನಿಯರ್‌ಗಳಿಂದ ಮಾಹಿತಿ ಪಡೆದ ಅವರು, ಬದು ನಿರ್ಮಾಣ, ಕೃಷಿ ಹೊಂಡಗಳಂಥ ವೈಯಕ್ತಿಕ ಕಾಮಗಾರಿಗಳ ಜತೆಗೆ ಸಾಮೂಹಿಕ ಕಾಮಗಾರಿಗಳಿಗೆ ಆದ್ಯತೆ ನೀಡುವಂತೆ ತಿಳಿಸಿದರು. ಬಳಿಕ ಮಾತನಾಡಿದ ಅವರು, ಕೂಲಿಕಾರರ ಹಾಜರಾತಿಯನ್ನು ಎನ್ ಎಂಎಂಎಸ್ ಆ್ಯಪ್ ಮುಖಾಂತರವೇ ಎರಡು ಬಾರಿ ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಬಿಸಿಲಿನ ತಾಪಮಾನ ಹೆಚ್ಚುತ್ತಿರುವುದರಿಂದ ಕೆಲಸಕ್ಕೆ ಬೇಗನೆ ಬರಬೇಕು. ನಿಮಗೆ ನೀಡಿರುವ ಅಳತೆ ಪ್ರಕಾರ ಕೆಲಸ ಮಾಡಬೇಕು ಎಂದು ಕೂಲಿಕಾರರಿಗೆ ಸೂಚಿಸಿದರು.

ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಾಕಷ್ಟು ಕೂಲಿಕಾರರು ಕೆಲಸಕ್ಕೆ ಬರುವವರಿಗೆ ಎನ್‌ಎಂಆರ್ ತೆಗೆದು ಉದ್ಯೋಗ ನೀಡುವಂತೆ ಪಿಡಿಒ ಅವರಿಗೆ ಸೂಚಿಸಿದರು. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಿರಂತರವಾಗಿ ಕೆಲಸ ಒದಗಿಸಲಾಗುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಜಿಪಂ ಯೋಜನಾಧಿಕಾರಿ ಅರುಣ್ ಕುಮಾರ್ ದಳವಾಯಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ ವಂದಾಲ, ಪಿಡಿಒ ಜಿ.ಬಿ.ಕಲ್ಯಾಣಿ, ಕಾರ್ಯದರ್ಶಿ ರಮೇಶ ಉಪ್ಪನಸಿ, ತಾಲೂಕು ಐಇಸಿ ಸಂಯೋಜಕ ದಸ್ತಗೀರ್ ಗುಡಿಹಾಳ, ತಾಂತ್ರಿಕ ಸಹಾಯಕ ದಿಗಂಬರೇಶ ಪಾಟೀಲ, ಮಲಕಪ್ಪ ಕೊಳಮಲಿ, ವಿಠ್ಠಲ ಹರಳಯ್ಯ, ತಿಮ್ಮಣ್ಣ ವಡ್ಡರ, ಡಿಇಒ ಜೈನಾಬಿ ಲಷ್ಕರಿ ಇದ್ದರು.

ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ರೂಢಿಸಿಕೊಳ್ಳಿ

ಇಂಡಿ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಉತ್ತಮ ಸಂಸ್ಕಾರ ರೂಢಿಸಿಕೊಳ್ಳುವುದರ ಜೊತೆಗೆ ಸತತ ಪರಿಶ್ರಮ ಓದಿನೊಂದಿಗೆ ಜೀವನದಲ್ಲಿ ಯಶಸ್ಸು ಪಡೆಯಬೇಕು ಎಂದು ವ್ಯಕ್ತಿತ್ವ ವಿಕಸನ ತರಬೇತಿದಾರರು ವಿಜಯಪುರದ ಗೌಡಪ್ಪ ಬಿರಾದಾರ ಹೇಳಿದರು.

ನಗರದ ಜಿ.ಆರ್.ಗಾಂಧಿ ಕಲಾ, ವೈ.ಎ.ಪಾಟೀಲ ವಾಣಿಜ್ಯ ಹಾಗೂ ಎಂ.ಪಿ.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಪದವಿ ಹಂತ ಅತ್ಯಂತ ಪ್ರಮುಖವಾದದ್ದು, ಕಾಲೇಜುಗಳು ವೃತ್ತಿಗಾಗಿ ಮಾತ್ರ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸದೇ ಅವರಲ್ಲಿ ಒಳ್ಳೆಯ ಪ್ರವೃತ್ತಿ ಬೆಳೆಸುವ ಕೇಂದ್ರಗಳಾಗಬೇಕು , ಒಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಛಲ, ಬದ್ಧತೆ, ಪರಿಶ್ರಮ, ತಾಳ್ಮೆ, ಶಿಸ್ತು ಜೊತೆಗೆ ಪಾಲಕರ ಪ್ರೋತ್ಸಾಹ ಇದ್ದರೆ ಏನುಬೇಕಾದರೂ ಸಾಧಿಸಬಹುದು ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ನೀಲಕಂಠಗೌಡ ಪಾಟೀಲ, ಐಶ್ವರ್ಯ ಕಕ್ಕಳಮೇಲಿ, ಲಕ್ಷ್ಮೀ ಕೆಂಗನಾಳ, ಪ್ರಾಚಾರ್ಯ ಶ್ರೀಶೈಲ ಸಣ್ಣಕ್ಕಿ, ಚಿದಾನಂದಗೌಡ ಬಿರಾದಾರ ಜಯಪ್ರಸಾದ ಡಿ ಮಾತನಾಡಿದರು. ಐಚ್ಛಿಕ ಇಂಗ್ಲಿಷ್ ಹಾಗೂ ಅರ್ಥಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಕೋಮಲ ಕೋಟೆ ಹಾಗೂ ಐಶ್ವರ್ಯ ಗುಬ್ಬೇವಾಡ ಇವರಿಗೆ ದಿ.ವೈ.ಬಿ.ಕುಲಕರ್ಣಿ ಹಾಗೂ ಮಪುಷ್ಪಾತಾಯಿ ಕುಲಕರ್ಣಿ ಇವರ ಸ್ಮರಣಾರ್ಥವಾಗಿ ನಿರ್ದೇಶಕ ಬಾಪುಗೌಡ ಸಿ. ಪಾಟೀಲ ಇವರು ನಗದು ಬಹುಮಾನವನ್ನು ವಿತರಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಬಸವರಾಜ ತಾಂಬೆ, ಸಾತಪ್ಪಾ ತೆನ್ನಳ್ಳಿ, ಸಚೀನಕುಮಾರ ಗಾಂಧಿ, ವರ್ಧನ ಧೋಶಿ, ಬಾಪುರಾಯ ಪಾಟೀಲ ಹಾಗೂ ವಿದ್ಯಾರ್ಥಿ ಪ್ರತಿನಿಧಿ ಕುಮಾರಿ ಸುಶ್ಮೀತಾ ಬಿರಾದಾರ, ಆನಂದ ನಡವಿನಮನಿ, ವಿಶ್ವಾಸ ಕೋರವಾರ ಪಿ.ಕೆ. ರಾಠೋಡ, ಸುರೇಂದ್ರ ಕೆ., ಎಸ್.ಬಿ.ಜಾಧವ ಸಿ.ಎಸ್.ಬಿರಾದಾರ, ಶ್ರೀಕಾಂತ ರಾಠೋಡ, ಗ್ರಂಥಪಾಲಕ ಆರ್.ಪಿ.ಇಂಗನಾಳ ಮತ್ತಿತರಿದ್ದರು.



ಪೋಷಕರಿಗೆ ತಲಾ 25,000 ರೂ.ದಂಡ

ವಿಜಯಪುರ: ಮೂವರು ಅಪ್ರಾಪ್ತ ದ್ವಿಚಕ್ರ ವಾಹನ ಸವಾರರ ಪೋಷಕರಿಗೆ ತಲಾ 25,000 ರೂ. ದಂಡ, ಒಂದು ವರ್ಷ ವಾಹನಗಳ ನೋಂದಣಿ ರದ್ದತಿ ಹಾಗೂ ಅಪ್ರಾಪ್ತ ಬಾಲಕರು 25 ವರ್ಷದವರಾಗುವವರೆಗೆ ವಾಹನ ಪರವಾನಿಗೆ ನೀಡದಂತೆ ಶಿಕ್ಷೆ ವಿಧಿಸಿ ನಗರದ 4ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಲಯ ಮತ್ತು ಜೆಎಮ್‌ಎಫ್ಸಿ ನ್ಯಾಯಾಲಯ ಶುಕ್ರವಾರ ತೀರ್ಪು ನೀಡಿದೆ. ನಗರದ ವಾಜಪೇಯಿ ರಸ್ತೆ, ಬಿಎಲ್‌ಡಿಇ ರಸ್ತೆ ಹಾಗೂ ಲಿಂಗದ ಗುಡಿ ರಸ್ತೆ ಬಳಿ ಮೇ 7, 2026 ರಂದು ವಿಜಯಪುರ ಸಂಚಾರಿ ಠಾಣೆ ಅಧಿಕಾರಿಗಳು ವಾಹನಗಳನ್ನು ಪರಿಶೀಲಿಸುವ ವೇಳೆ ಮೂರು ಅಪ್ರಾಪ್ತ ವಯಸ್ಸಿನ ಬಾಲಕರು ತಮ್ಮ ದ್ವಿ ಚಕ್ರ ವಾಹನಗಳನ್ನು ಚಲಾಯಿಸುತ್ತ ಬರುತ್ತಿರುವುದನ್ನು ಸಂಚಾರಿ ಪೊಲೀಸರು ತಡೆದು ತಪಾಸಣೆ ನಡೆಸಿದಾಗ, ಅವರು ಅಪ್ರಾಪ್ತ ವಯಸ್ಸಿನವರು ಎನ್ನುವುದು ಖಚಿತ ಪಡೆಸಿಕೊಂಡು, ಮೂವರು ಬಾಲಕರ ಪೋಷಕರ ವಿರುದ್ಧ ಅಪ್ರಾಪ್ತ ವಯಸ್ಸಿನ ಬಾಲಕರಿಗೆ ವಾಹನ ಚಲಾಯಿಸಲು ನೀಡಿದ್ದರ ಕುರಿತು ನಗರದ ಸಂಚಾರಿ ಪೊಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳು ದಾಖಲಿಸಿದ್ದರು. ವಾಹನಗಳ ನೋಂದಣಿ ರದ್ದತಿ ಹಾಗೂ ಅಪ್ರಾಪ್ತ ವಯಸ್ಸಿನ 3 ಬಾಲಕರಿಗೆ ಅವರು 25 ವರ್ಷ ವಯಸ್ಸಿನವರು ಆಗುವರೆಗೂ ವಾಹನ ಪರವಾನಿಗೆ ಅಥವಾ ಕಲಿಕೆಯ ಪರವಾನಿಗೆ ನೀಡಬಾರದು ಎಂದು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಅಣೆಕಟ್ಟು ಎತ್ತರ ಹೆಚ್ಚಿಸುವಲ್ಲಿ ಇಚ್ಛಾಶಕ್ತಿ ಕೊರತೆ

ವಿಜಯಪುರ: ಜಿಲ್ಲೆಯ ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವ ನಿಟ್ಟಿನಲ್ಲಿ ಯಾವುದೇ ಪಕ್ಷದ ಜನಪತ್ರಿನಿಧಿಗೂ ಆಸಕ್ತಿ ಇಲ್ಲವಾಗಿದೆ. ಕೇಂದ್ರದ ಮೇಲೆ ರಾಜ್ಯ ಸರ್ಕಾರ ಮತ್ತು ರಾಜ್ಯ ಸರ್ಕಾರದವರ ಮೇಲೆ ಕೇಂದ್ರದವರು ಬೊಟ್ಟು ಮಾಡುತ್ತ ಸುಮ್ಮನೆ ಕಾಲಹರಣ ಮಾಡುತ್ತ ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ದರ್ಬಾರ ಹೈಸ್ಕೂಲ್ ಮೈದಾನದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಶುಕ್ರವಾರ ಹಮ್ಮಿಕೊಂಡ ರಾಜ್ಯಮಟ್ಟದ ನಾಲ್ಕನೇ ಬೃಹತ್ ರೈತ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು. ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಿಸುವುದು ಜನಪತ್ರಿನಿಧಿಗಳ ಮಾತಿಗೆ ಸಿಮೀತವಾಗಿದೆ. ಆದರೆ, ಅವರ ವೇತನ ಮಾತ್ರ ಹೆಚ್ಚಾಗುತ್ತಲೇ ಇದೆ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಂದ ಇಡೀ ರಾಜ್ಯ ಹಾಳಾಗುತ್ತಿದ್ದು, ಸರ್ಕಾರ ಕೂಡಲೇ ಗ್ಯಾರಂಟಿ ಯೋಜನೆಗಳನ್ನು ಬಂದ್ ಮಾಡಿ, ಅದರ ಬದಲಿಗೆ ರೈತರ ಸಾಲ ಮನ್ನಾ ಕಾಳಜಿ ವಹಿಸಬೇಕು ಎಂದರು.

ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಮಾತನಾಡಿ, ಸರ್ಕಾರಗಳು ಕಳೆದ 79 ವರ್ಷಗಳಿಂದ ರೈತರ ಶ್ರಮಕ್ಕೆ ತಕ್ಕ ಬೆಲೆ ಕೊಟ್ಟಿಲ್ಲ. ಒಂದು ಕಡೆ ವಿದ್ಯುತ್, ಇನ್ನೊಂದು ಕಡೇ ನೀರು ನೀಡದೆ ಕೃಷಿಕರಿಗೆ ಮೋಸ ಮಾಡಿವೆ. ಪ್ರಧಾನಿ, ಮುಖ್ಯಮಂತ್ರಿಗಳು ಎಲ್ಲರು ಸುಳ್ಳು ಹೇಳುತ್ತಿದ್ದು, ಜನಪ್ರತಿನಿಧಿಗಳು ರೈತರ ಸಾವಿನಲ್ಲಿ ರಾಜಕೀಯ ಮಾಡುತ್ತಿರುವುದು ಬೇಸರದ ಸಂಗತಿ ಎಂದರು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಆಲಮಟ್ಟಿ ಎತ್ತರ ಹೆಚ್ಚಿಸುವ ಜತೆಗೆ ಈ ಭಾಗದಲ್ಲಿ ಸಂಪೂರ್ಣ ನೀರಾವರಿ ಆಗ್ರಹಿಸಿ ಮುಂಬರುವ ದಿನಗಳಲ್ಲಿ ಕೃಷ್ಣೆ ಕಹಳೆ ಹೆಸರಿನಲ್ಲಿ ಹೋರಾಟ ಆರಂಭಿಸಲಾಗುವುದು ಎಂದು ಘೋಷಿಸಿದರು.

ಸಮಾವೇಶದ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಡಾ.ಆನಂದ ಕೆ., ಎಸ್‌ಪಿ ಲಕ್ಷ್ಮಣ ನಿಂಬರಗಿ ಅವರಿಗೆ ಸಂಘಟನೆ ಪ್ರಮುಖರು ತಮ್ಮ ಹಕೋತ್ತಾಯಗಳ ಮನವಿ ಪತ್ರವನ್ನು ಸಲ್ಲಿಸಿದರು.

ಮುಗಳಖೋಡ ಮಠದ ಮುರಘರಾಜೇಂದ್ರ ಸ್ವಾಮೀಜಿ, ಹುಕ್ಕೇರಿಯ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರರು, ಮಾತೋಶ್ರೀ ಸುವರ್ಣತಾಯಿ ಹೊಸಮಠ ಸಾನ್ನಿಧ್ಯ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ, ರಾಜ್ಯ ಉಪಾಧ್ಯಕ್ಷ ಕಲ್ಲು ಸೊನ್ನದ, ಶಾಂತಗೌಡ ಪಾಟೀಲ ನಡಹಳ್ಳಿ ಇತರರು ಇದ್ದರು.



ಬದ್ಧತೆಯಿಂದ ಕೆಲಸ ಮಾಡಿ ಸಕಾಲಕ್ಕೆ ಪ್ರಗತಿ ಸಾಧಿಸಿ: ವಡ್ಡರ

ವಿಜಯಪುರ: ಯೋಜನೆಗಳಿಗೆ ಪೂರಕವಾಗಿ ಸಕಾಲಕ್ಕೆ ಕೆಲಸ ಮಾಡಿದರೆ ಯಾವುದೇ ಸಮಸ್ಯೆಗಳು ಬರುವುದಿಲ್ಲ. ಹಾಗಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮನ್ವಯ ಸಾಧಿಸಿ ಕೆಲಸ ಮಾಡಿದರೆ ಎಲ್ಲ ಅಂಶಗಳಲ್ಲೂ ಪ್ರಗತಿ ಹೊಂದಲು ಸಾಧ್ಯ ಎಂದು ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಪ್ರಕಾಶ ವಡ್ಡರ ಹೇಳಿದರು.



ಜಿಲ್ಲೆಯ ಮುದ್ದೇಬಿಹಾಳ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮುದ್ದೇಬಿಹಾಳ ಹಾಗೂ ತಾಳಿಕೋಟಿ ತಾಲೂಕುಗಳ ಮಹಾತ್ಮ ಗಾಂಧಿ ನರೇಗಾ ಯೋಜನೆ, ಗ್ರಾಮ ಪಂಚಾಯತಿ ತೆರಿಗೆ, ಗ್ರಂಥಾಲಯ, ತೆರಿಗೆ ವಸೂಲಾತಿ, ವಸತಿ, ಎಸ್‌ಬಿಎಮ್ ಅನುದಾನ ಪಾವತಿ, ಇ-ಹಾಜರಾತಿ, ಮಹಿಳಾ ಗ್ರಾಮ ಸಭೆ, ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಸಮಯಕ್ಕೆ ಸರಿಯಾಗಿ ಕಚೇರಿಗಳಿಗೆ ತೆರಳಿ, ಪ್ರಾಮಾಣಿಕವಾಗಿ ಕೆಲಸ ಮಾಡಿ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಲಹೆ ನೀಡಿದರು.

ಎರಡು ತಾಲೂಕಿಗೆ ನಿಗದಿಪಡಿಸಿರುವ ಮಾನವ ದಿನಗಳನ್ನು ಮೇ ತಿಂಗಳ ಅಂತ್ಯದಲ್ಲಿ ಪೂರ್ಣಗೊಳಿಸಬೇಕು. ಪ್ರಸ್ತುತ ಹಾಗೂ ಬಾಕಿ ಉಳಿದ ನರೇಗಾ ಕೂಲಿಕಾರರ ಕೂಲಿಯನ್ನು ಸಕಾಲದಲ್ಲಿ ಪಾವತಿಸಬೇಕು. ನರೇಗಾ ಕೂಲಿಕಾರರ ಇಕೆವೈಸಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದರು. ಜಿಪಂ ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ, ಮುದ್ದೇಬಿಹಾಳ ತಾಪಂ ಇಒ ಸಂಗನಗೌಡ, ತಾಳಿಕೋಟಿ, ತಾಪಂ ಇಒ ಅನುಸೂಯ ಚಲವಾದಿ, ಸಹಾಯಕ ನಿರ್ದೇಶಕ ಎಸ್. ಎಸ್.ಗಣಾಚಾರ್ಯ, ಪಿ.ಎಸ್.ಕಸನಕ್ಕಿ, ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಕೋರಿ, ಸಹಾಯಕ ಲೆಕ್ಕಾಧಿಕಾರಿ ವೀರೇಶ ಹೂಗಾರ ಇದ್ದರು.

ಸಮುದಾಯ ಭವನಕ್ಕೆ 25 ಲಕ್ಷ ರೂ. ಅನುದಾನ ನೀಡಲು ಮನಗೂಳಿ ಭರವಸೆ

ಸಿಂದಗಿ: ರಜಪೂತ ಸಮಾಜದ ಬೇಡಿಕೆಗಳಾದ ಸಮುದಾಯ ಭವನಕ್ಕೆ ರೂ.25 ಲಕ್ಷ, ಶೆಟಿಗವ್ವ ದೇವಸ್ಥಾನಕ್ಕೆ ರೂ.5ಲಕ್ಷ ಅನುದಾನ ನೀಡುವುದಾಗಿ ಶಾಸಕ ಅಶೋಕ ಮನಗೂಳಿ ಭರವಸೆ ನೀಡಿದರು.



ನಗರದ ಹೀರೋಡೇಶ್ವರ ದೇವಸ್ಥಾನದಲ್ಲಿ ರಜಪೂತ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಮ್ಮಿಕೊಂಡ ರಾಷ್ಟ್ರವೀರ ಮಹಾರಾಣಾ ಪ್ರತಾಪ್‌ಸಿಂಹ ಅವರ 489ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಜಪೂತ ಸಮುದಾಯವೆಂದರೆ ಭಾರತ ದೇಶದ ಸಂಸ್ಕೃತಿ ರಕ್ಷಕರು ಮತ್ತು ರಾಷ್ಟ್ರದ ಭಕ್ತರು. ಮೊಘಲರ ವಿರುದ್ಧ ಹೋರಾಡಿದ ಮಹಾನ್ ರಾಷ್ಟ್ರವೀರರು. ಇಂತಹ ಮಹಾನ್ ವ್ಯಕ್ತಿಯ ವೃತ್ತವನ್ನು ಅತೀ ಶೀಘ್ರದಲ್ಲಿಯೇ ಸಿಂದಗಿ ನಗರದಲ್ಲಿ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು.

ಮುಖ್ಯ ಸಾಯಬಣ್ಣ ಪುರದಾಳ ಮಾತನಾಡಿ, ರಾಣಾ ಪ್ರತಾಪ್ ಸಿಂಹ ಅವರು ರಜಪೂತ ವಂಶದ ಮೇವಾರ್‌ನ 13ನೇ ರಾಜ. ಮೊಘಲ್ ಸಾಮ್ರಾಜ್ಯದ ವಿಸ್ತರಣೆಯನ್ನು ಪ್ರತಿರೋಧಿಸಿದ ಮತ್ತು ಸ್ವತಂತ್ರ ಉಳಿಯಲು ಹೋರಾಡಿದ ವೀರ ಯೋಧನಾಗಿ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ ಎಂದರು.ಶಿವಲಾಲಸಿಂಗ ರಜಪೂತ ಅಧ್ಯಕ್ಷತೆ ವಹಿಸಿದ್ದರು. ಸಂಘಟನಾ ಕಾರ್ಯದರ್ಶಿ ಹೀರಾಸಿಂಗ ರಜಪೂತ, ವಿಜಯಸಿಂಗ, ಭಗವಾನಸಿಂಗ, ಪರಶುರಾಮ ಸಿಂಗ, ಗಣಪತಿಸಿಂಗ, ವಿಕಾಸ, ವಿಠ್ಠಲಸಿಂಗ, ರಾಜು ಸಿಂಗ್, ಅರುಣ, ಅಪ್ಪಣ್ಣ ಸೇರಿದಂತೆ ಸಮಾಜದ ಮುಖಂಡರು, ಹಿರಿಯರು ಹಾಗೂ ತಾಯಂದಿರು ಇದ್ದರು. ಅನಿಲಕುಮಾರ ರಜಪೂತ ನಿರೂಪಿಸಿದರು. ಸಚಿನ್ ಠಾಕೂರ ಸ್ವಾಗತಿಸಿದರು. ಜೈಯಸಿಂಗ ರಜಪೂತ ವಂದಿಸಿದರು.

ರೈಲ್ವೆ ಕೆಳಸೇತುವೆ ಮಹತ್ತರ ಯೋಜನೆಗೆ ಹಿನ್ನಡೆ: ಜಿಗಜಿಣಗಿ

ವಿಜಯಪುರ: ಐತಿಹಾಸಿಕ ವಿಜಯಪುರ ನಗರದ ವಜ್ರಹನುಮಾನ್ ರೈಲ್ವೆ ಗೇಟ್ ಬಳಿ ಕೆಳಸೇತುವ ನಿರ್ಮಾಣಕ್ಕೆ ಭಾರತೀಯ ರೈಲ್ವೆ ಇಲಾಖೆ ಸಿದ್ಧತೆ ನಡೆಸಿದೆ. ಆದರೆ ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಕೈಗೊಳ್ಳಲು ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿರುವ ಕಾರಣ ಮಹತ್ತರ ಯೋಜನೆಯೊಂದಕ್ಕೆ ಹಿನ್ನಡೆಯಾಗುತ್ತಿದೆ ಎಂದು ಸಂಸದ ರಮೇಶ ಜಿಗಜಿಣಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಈಗಾಗಲೇ ರಸ್ತೆಯ ಲೆವೆಲ್ ಕ್ರಾಸಿಂಗ್ ಸಂಖ್ಯೆ-80ರಲ್ಲಿ ರಸ್ತೆ ಕೆಳ ಸೇತುವೆ ನಿರ್ಮಾಣಕ್ಕೆ ಭಾರತೀಯ ರೈಲ್ವೆ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಸಾರ್ವಜನಿಕ ಅನುಕೂಲಕ್ಕಾಗಿ ಹತ್ತಿರದ ಲೆವೆಲ್ ಕ್ರಾಸಿಂಗ್ ಸಂಖ್ಯೆ-80ರಲ್ಲಿ ಈಗಾಗಲೇ ರಸ್ತೆ ಓವರ್ ಬ್ರಿಡ್ಜ್ (ಆರ್‌ಒಬಿ) ಒದಗಿಸಲಾಗಿದೆ. ಇದರ ಜೊತೆಗೆ ಕೆಳಸೇತುವೆ ನಿರ್ಮಿಸಲು ಇಲಾಖೆ ಸಂಪೂರ್ಣವಾಗಿ ಸಿದ್ಧವಿದೆ. ಆದರೆ, ರಾಜ್ಯ ಸರ್ಕಾರದ ಅಧೀನದಲ್ಲಿರುವ ಸ್ಥಳೀಯ ಆಡಳಿತದಿಂದ ಪೂರಕ ಕಾಮಗಾರಿ ಕೈಗೊಳ್ಳದಿರುವುದರಿಂದ ಜನರ ಬಹುದಿನದ ಬೇಡಿಕೆ ಈಡೇರಿಕೆಗೆ ತೊಡಕುಂಟಾಗುತ್ತಿದೆ.

ಅಂದಾಜು 14 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ. ಯೋಜನೆ ಅನುಷ್ಠಾನಗೊಂಡರೆ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗಲಿದೆ. ಜನರ ಒತ್ತಾಯ ಮತ್ತು ಒತ್ತಾಸೆ ಮೇರೆಗೆ ಅನುದಾನ ಮಂಜೂರಿಸಿ ಕಾಮಗಾರಿ ಕೈಗೊಳ್ಳಲುಮುಂದಾದರೆಸ್ಥಳೀಯಸರ್ಕಾರಗಳಿಂದ ಸಹಕಾರ ಅಲಭ್ಯವಾಗಿದೆ. ಕಾಮಗಾರಿ ಸ್ಥಳದಲ್ಲಿ ವಿದ್ಯುತ್ ಮಾರ್ಗಗಳು, ಬಿಎಸ್‌ಎನ್‌ಎಲ್ ಕೇಬಲ್ ಗಳು, ನೀರು ಸರಬರಾಜು ಪೈಪ್‌ಲೈನ್‌ಗಳು, ಒಳಚರಂಡಿ ವ್ಯವಸ್ಥೆ ಹಾಗೂ ಇತರೆ ಭೂಗತ ಉಪಯುಕ್ತತಾ ಸ್ಥಳಾಂತರ ಕಾಮಗಾರಿಗಳನ್ನು ಸ್ಥಳೀಯ ಸರ್ಕಾರ ನಿರ್ವಹಿಸಬೇಕಾಗಿದೆ. ಅದಕ್ಕಾಗಿ 8 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ರಾಜ್ಯ ಸರ್ಕಾರದಿಂದ ಉಪಯುಕ್ತತಾ ಸ್ಥಳಾಂತರ ಕಾಮಗಾರಿಗಳಿಗೆ ಅಗತ್ಯವಿರುವ ನಿಧಿಯ ಅನುಮೋದನೆ ಇನ್ನೂ ಬಾಕಿ ಇದ್ದು, ಕೂಡಲೇ ಅನುದಾನ ಮಂಜೂರಿಸಬೇಕು. ಇಲ್ಲವಾದಲ್ಲಿ ರೈಲ್ವೆ ಕೆಳಸೇತುವೆ ನಿರ್ಮಾಣದಂಥ ಮಹತ್ತರ ಯೋಜನೆಗೆ ಹಿನ್ನಡೆಯಾಗಲಿದೆ. ರಾಜ್ಯ ಸರ್ಕಾರ ಅಗತ್ಯವಿರುವ ಹಣವನ್ನು ಎಷ್ಟು ಬೇಗ ಬಿಡುಗಡೆ ಮಾಡುತ್ತದೆಯೋ ಹಾಗೂ ಎಷ್ಟು ಬೇಗ ಸ್ಥಳಾಂತರ ಕಾಮಗಾರಿ ಕೈಗೊಳ್ಳುತ್ತದೋ ಅಷ್ಟು ಬೇಗ ಜನರ ಮಹತ್ತರ ಬೇಡಿಕೆ ಈಡೇರಲಿದೆ. ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಸಂಚಾರ ದಟ್ಟಣೆ ತಗ್ಗಲಿದೆ. ಜನರ ಬಹುದಿನದ ಕನಸು ನನಸಾಗಲಿದೆ ಎಂದು ತಿಳಿಸಿದ್ದಾರೆ.

ರೈಲ್ವೆ ಇಲಾಖೆ ಜವಾಬ್ದಾರಿ: ಎಂಬಿಪಾ

ವಿಜಯಪುರ: ರೇಲ್ವೆ ಕೆಳಸೇತುವೆ ನಿರ್ಮಾಣ ವೇಳೆ ಅಗತ್ಯವಾಗಿರುವ ಸೌಕರ್ಯಗಳ ಸ್ಥಳಾಂತರ ಜವಾಬ್ದಾರಿ ರೇಲ್ವೆ ಇಲಾಖೆಗೆ ಸೇರಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಇರುವುದಿಲ್ಲ ಎಂದು ಕೈಗಾರಿಕೆ,ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ರೇಲ್ವೆ ಇಲಾಖೆ ಕೈಗೊಳ್ಳುವ ಕೆಳಸೇತುವೆ ನಿರ್ಮಾಣ ಸಂದರ್ಭದಲ್ಲಿ ಅಗತ್ಯ ವಿರುವ ವಿದ್ಯುತ್ ಮಾರ್ಗಗಳು, ಒಳಚರಂಡಿ ವ್ಯವಸ್ಥೆ ಹಾಗೂ ಇತರ ಭೂಗತ ಸೌಲಭ್ಯಗಳ ಸ್ಥಳಾಂತರ ಕೆಲಸ ರೇಲ್ವೆ ಇಲಾಖೆ ಕಾಮಗಾರಿಯ ವ್ಯಾಪ್ತಿಯಲ್ಲಿಯೇ ಬರುತ್ತದೆ. ದೇಶಾದ್ಯಂತ ಇದೇ ಪದ್ಧತಿ ಅನುಸರಿಸಲಾಗುತ್ತಿದೆ. ಆದರೆ, ಸಂಸದ ರಮೇಶ ಜಿಗಜಿಣಗಿ ಅವರು ವಿಜಯಪುರ ನಗರದ ವಜ್ರಹನುಮಾನ ರೇಲ್ವೆ ಗೇಟ್ ಬಳಿ ಕೆಳಸೇತುವೆ ನಿರ್ಮಾಣದ ವಿಷಯದಲ್ಲಿ ರೇಲ್ವೆ ಇಲಾಖೆ ಮಾಡಬೇಕಾದ ಕೆಲಸದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯದೆ ರಾಜ್ಯ ಸರ್ಕಾರದ ವಿರುದ್ಧ ಮಾಡಿರುವ ಆರೋಪ ನಿರಾಧಾರವಾಗಿದೆ. ಸಂಸದರಿಗೆ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ನಿಜವಾದರೂ ಕಾಳಜಿ ಇದ್ದರೆ ತಮ್ಮ ಪ್ರಭಾವ ಬಳಸಿ ರೇಲ್ವೆ ಇಲಾಖೆಯಿಂದ ಅಗತ್ಯವಿರುವ ಅನುದಾನ ತಂದು ಕಾಮಗಾರಿ ಪೂರ್ಣಗೊಳಿಸಬೇಕು. ಅದನ್ನು ಬಿಟ್ಟು ರಾಜ್ಯ ಸರ್ಕಾರದ ವಿರುದ್ಧ ಆರೋಪಿಸುವುದು ಸರಿಯಲ್ಲ ಎಂದು ಅವರು ತಿಳಿಸಿದ್ದಾರೆ.

ಆಲಮೇಲ: ದಾನಿಗಳ ದಿನಾಚರಣೆ

ಆಲಮೇಲ: ಶಿಕ್ಷಣ ಸಂಸ್ಥೆ ಆಲಮೇಲ, ಎಚ್.ಎ.ನಂದಿ ಕಲಾ ಮಹಾವಿದ್ಯಾಲಯ, ಎ.ಕೆ.ನಂದಿ ಪದವಿ ಪೂರ್ವ ಮಹಾವಿದ್ಯಾಲಯ, ಪ್ರೌಢಶಾಲೆ ಆಲಮೇಲ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ದಾನಿಗಳ ದಿನಾಚರಣೆಯ ಅಂಗವಾಗಿ ಪುಣ್ಯಸ್ಮರಣೆ ಆಚರಿಸಲಾಯಿತು.

ಪ್ರಾಚಾರ್ಯ ಪ್ರೊ.ಎಸ್.ಎಂ.ಉಪ್ಪಾರ ಮಾತನಾಡಿ, ಮಹಾದಾನಿಗಳು ಶಿಕ್ಷಣ ಪ್ರೇಮಿ ದಿ.ಅಡಿವೆಪ್ಪ ಕರಬಸಪ್ಪ ನಂದಿ ಹಾಗೂ ದಿ.ಹೀರಾಬಾಯಿ ಅಡಿವೆಪ್ಪ ನಂದಿ ಈ ಮಹಾದಾನಿಗಳು ಹಾಗೂ ದಿ.ಮಲ್ಲಪ್ಪ ನಾಟಿಕಾರ , ಪಿಎಸ್‌ಐ ದಿ.ಶಿರೂರ ಸಾಹೇಬರು ಹಾಗೂ ಈರಪ್ಪ ಜೋಗೂರ ಅವರು ಸಲ್ಲಿಸಿರುವ ಸೇವೆಯ ಕುರಿತು ಮಾತನಾಡಿದರು.

ಪದವಿ ಮಹಾವಿದ್ಯಾಲಯದ ಪ್ರಾಪ್ರೊ.ಎಸ್‌ಎಂ ಉಪ್ಪಾರ ಪ್ರಾ.ಎನ್ ಎಸ್ ದೇವರಮನಿ ಮುಖ್ಯಗುರು ಆರ್.ಎನ್.ಮಸಳಿ, ಪ್ರೊ.ಎಸ್ .ಜಿ.ಬಮ್ಮನಳ್ಳಿ, ಡಾ.ಎಸ್.ಜೆ.ಮಾಡ್ಯಳ, ಪ್ರೊ.ವಿ.ಬಿ.ಗುಣಾರಿ, ಪ್ರೊ.ಎ.ಎಸ್ .ನಾರಾಯಣಕರ ಸುರೇಖಾ ವಾರದ, ಅರ್ಚನಾ ಶೆಟ್ಟಿ, ಎನ್.ಜಿ.ಮೊಕಾಶಿ, ಬಾಬು ನಿವಾಳಕೋಡಿ, ಎಂ.ಡಿ.ಉಮರಾಣಿ, ಉಮೇಶ ಹಿರೇಮಠ, ಆರ್. ಎಸ್.ಅಂಬಾಗೋಳ, ಕರೀಮಸೌದಾಗರ, ಎಸ್.ಎಂ.ಮಠಪತಿ, ಎಸ್.ಕೆ.ಹಾಳಿಕಿ, ಪ್ರಕಾಶ ಜಂಗಮಶೆಟ್ಟಿ, ಬಸವರಾಜ ಲಾಳಸಂಗಿ, ಶಿವಾನಂದ ಬಿರಾದಾರ, ಗಂಗಾರಾಮ, ಡಾ.ಎಸ್.ಎಸ್.ತಾವರಖೇಡ, ಎಸ್.ಬಿ.ಕುಂಬಾರ ಇದ್ದರು.



ಮೇ 14ಕ್ಕೆ ಫೋನ್-ಇನ್ ಕಾರ್ಯಕ್ರಮ

ವಿಜಯಪುರ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮೂಲಕ ಪ್ರಯಾಣಿಕರ ಅನುಕೂಲಕ್ಕಾಗಿ ಅಹವಾಲು ಮತ್ತು ಕುಂದುಕೊರತೆಗಳನ್ನು ಆಲಿಸಲು ಮೇ 14ರಂದು ಮಧ್ಯಾಹ್ನ 3.30ರಿಂದ 4ರ ವರೆಗೆ ಫೋನ್-ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ (ದೂರವಾಣಿ ಸಂಖ್ಯೆ: 6366423887) ಸಂಖ್ಯೆಗೆ ಸಾರ್ವಜನಿಕರು ಕರೆ ಮಾಡಿ, ತಮ್ಮ ಕುಂದು-ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದ್ದು, ಸಾರ್ವಜನಿಕರು ಫೋನ್-ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಪೂರ್ವಭಾವಿ ಸಭೆ ಇಂದು

ಕುಷ್ಟಗಿ: ಪಟ್ಟಣದ ಹಳೆ ಐಬಿ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಹಾಗೂ ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನಿಮಿತ್ತ ಹಾಗೂ ತಾಲೂಕಿನ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಮೇ 10ರಂದು ಮುಂಜಾನೆ 10.30ಕ್ಕೆ ಆಯೋಜಿಸಲಾಗಿದೆ ಎಂದು ಕಸಾಪ ತಾಲೂಕಾಧ್ಯಕ್ಷ ಲೆಂಕಪ್ಪ ವಾಲಿಕಾರ್ ಹಾಗೂ ಗೌರವ ಕಾರ್ಯದರ್ಶಿ ಶರಣಪ್ಪ ಲೈನದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಿ



ಸಿಂಧನೂರು: ರಾಯಚೂರು ಜಿಲ್ಲೆಯ ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ ಐದು ಬಾರಿ ಗೆದ್ದಿರುವ ಜಿಲ್ಲೆಯ ಹಿರಿಯ ಶಾಸಕರಾಗಿ ಆಯ್ಕೆಯಾಗಿ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಿದ್ದಾರೆ. ಆದ್ದರಿಂದ ಅವರಿಗೆ ಸಚಿವ ಸ್ಥಾನ ಕೊಡಬೇಕು. ಇಲ್ಲದೆ ಹೋದರೆ ಸಿಂಧನೂರು ವಿಧಾನಸಭಾ ಕ್ಷೇತ್ರದಿಂದ ರಾಜ್ಯದ ರಾಜಧಾನಿ ಬೆಂಗಳೂರಿಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದೆಂದು ಸಿಂಧನೂರು ಟಿಎಪಿಸಿಎಂಎಸ್ ಅಧ್ಯಕ್ಷ ಶರಣಪ್ಪ ರಡ್ಡೇರ್ ತಿಳಿಸಿದರು.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಹಿರಿತನ ಹಾಗೂ ಹೆಚ್ಚಿನ ಅನುಭವ ಹೊಂದಿರುವ ಶಾಸಕ ಹಂಪನಗೌಡ ಬಾದರ್ಲಿ ಅವರು ಕಾಂಗ್ರೆಸ್ ಪಕ್ಷದ ಕಟ್ಟಾಳು, ಚುನಾವಣೆಯಲ್ಲಿ ಗೆದ್ದರೂ ಸೋತರು ಕಾಂಗ್ರೆಸ್ ಪಕ್ಷಕ್ಕೆ ಕಟುಬದ್ಧರಾಗಿದ್ದಾರೆ.ಈ ಕಾರಣಕ್ಕೆ ಸಚಿವ ಸ್ಥಾನ ಕೊಡಬೇಕೆಂದು ಮನವಿ ಮಾಡಿದರು.

ಈಗಾಗಲೇ ಬೋವಿ ಹಾಗೂ ಮಾದಿಗ ಸಮಾಜದಿಂದ ಹಂಪನಗೌಡ ಬಾದರ್ಲಿ ಹಾಗೂ ಬಸನಗೌಡ ಬಾದರ್ಲಿ ಇಬ್ಬರಿಗೂ ಸಚಿವ ಸ್ಥಾನ ಕೊಡುವಂತೆ ಪ್ರತ್ಯೇಕವಾಗಿ ಪತ್ರಿಕಾಗೋಷ್ಠಿ ನಡೆಸಿ ಒತ್ತಾಯಿಸಿದ್ದಾರೆ. ನಾಳೆಯೇ ಕೆಲವೊಂದು ಸೊಸೈಟಿ ಅಧ್ಯಕ್ಷರು, ನಿರ್ದೇಶಕರು ಎಮ್ಮೆಲ್ಸಿಯವರಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಬಹುದು. ಇದರ ಗೊಂದಲ ನಿವಾರಣೆ ಯಾವಾಗ ಎಂಬ ಪತ್ರಕರ್ತರ ಪ್ರಶ್ನೆಗೆ ಅವರವರ ಕಾರ್ಯಕರ್ತರು, ಅಭಿಮಾನಿಗಳು ತಮ್ಮನೆಚ್ಚಿನ ನಾಯಕರು ಸಚಿವರಾಗಲಿ ಎಂದು ಬಯಸುವುದು ತಪ್ಪಲ್ಲ ಎಂದು ಉತ್ತರಿಸಿದರು.

ಮಲ್ಲಾಪುರ ಸೊಸೈಟಿ ಅಧ್ಯಕ್ಷ ಬಸವರಾಜ ನಿಟ್ಟೂರು, ಬಾದರ್ಲಿ ಸೊಸೈಟಿ ಅಧ್ಯಕ್ಷ ಬಸವರಾಜ, ಬೊಮ್ಮನಾಳ ಸೊಸೈಟಿ ಅಧ್ಯಕ್ಷ ಅಮರೇಗೌಡ, ಗೋರೆಬಾಳ ಸೊಸೈಟಿ ಅಧ್ಯಕ್ಷ ಬಸನಗೌಡ ಹಾಗೂ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನಗೌಡ ಉಪಸ್ಥಿತರಿದ್ದರು.

ಬಿಜೆಪಿ ವಿರುದ್ಧ ಖರ್ಗೆ ವಾಗ್ದಾಳಿ

ಕಲಬುರಗಿ: ಬಿಜೆಪಿಯವರು ಸಂವಿಧಾನವನ್ನು ಕಗ್ಗೊಲೆ ಮಾಡಿದ್ದಾರೆ. ಪಾರದರ್ಶಕ ಚುನಾವಣೆ ನಡೆದರೆ ಬಿಜೆಪಿ ಯಾವ ಚುನಾವಣೆಯಲ್ಲಿಯೂ ಗೆಲ್ಲುವುದಿಲ್ಲ, ಅಷ್ಟೇಕೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕೂಡಾ ಗೆಲ್ಲುವುದಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಮುಖ್ಯ ಚುನಾವಣೆ ನೇಮಕ ಮೋದಿ ಹೇಳಿದಂತೆ ಆಗುತ್ತದೆ.ಚುನಾವಣೆ ಆಯೋಗ, ಇಡಿ, ಸಿಬಿಐ ಮುಂತಾದವರನ್ನು ದೂರವಿಟ್ಟು ಬಿಜೆಪಿ ಚುನಾವಣೆ ಎದುರಿಸಲಿ ಎಂದು ಸವಾಲ್ ಹಾಕಿದರು. ರಾಜ್ಯಪಾಲರುಗಳು ಬಿಜೆಪಿ ಕೈಗೊಂಬೆಯಾಗಿದ್ದಾರೆ. ರಾಜ್ಯದಲ್ಲಿ ಕೆಳಮನೆ ಹಾಗೂ ಮೇಲ್ಮನೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ರಾಜ್ಯಪಾಲವರು ವಾಪಸ್ ಕಳಿಸುತ್ತಾರೆ.ತಮಿಳುನಾಡಲ್ಲಿ ಬಹುಮತ ಸಾಬೀತಿಗೆ ಫ್ಲೋರ್ ಟೆಸ್ಟ್ ಮಾಡಲಿ ಅದು ಗವರ್ನರ್ ಮುಂದೆ ಅಲ್ಲ ಎಂದು ಪ್ರತಿಕ್ರಿಯಿಸಿದರು.

ತಮಿಳುನಾಡಲ್ಲಿ ಕಾಂಗ್ರೆಸ್ ಡಿಎಂಕೆಗೆ ಬೆನ್ನಿಗೆ ಚೂರಿಹಾಕಿದ್ದಾರೆ ಎನ್ನುವ ಆರೋಪಕ್ಕೆ ಉತ್ತರಿಸಿದ ಸಚಿವರು, ಸ್ಥಳೀಯ ನಾಯಕರ ಅಭಿಪ್ರಾಯ ಹಾಗೂ ಕೋಮುವಾದಿಗಳನ್ನು ಅಧಿಕಾರದಿಂದ ದೂರವಿಡಲು ಟಿವಿಕೆಗೆ ಬೆಂಬಲ ನೀಡಲಾಗಿದೆ ಎಂದು ಅವರು ಕಾಂಗ್ರೆಸ್ ನಿರ್ಧಾರವನ್ನು ಸಮರ್ಥಿಸಿಕೊಂಡರು. ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಪ್ರಿಯಾಂಕ್ ಖರ್ಗೆ, ಈ ಬಗ್ಗೆ ಪಕ್ಷದ ಹೈಕಮಾಂಡ್, ಮಲ್ಲಿಕಾರ್ಜುನ ಖರ್ಗೆ, ಸಿಎಂ ಹಾಗೂ ಡಿಸಿಎಂ ಅವರು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು. ನರೇಗಾ ಬಗ್ಗೆ ಮೊನ್ನೆ ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.ಯಾಕೆಂದರ, ವಿಬಿ–ಜಿ–ರಾಮ್ ಜಿ ಬಗ್ಗೆ ಕೇಂದ್ರಕ್ಕೆ ಸ್ಪಷ್ಟವಾದ ಪ್ರಕ್ರಿಯೆಗಳಿಲ್ಲ ಎಂದರು. ಎಂಎಲ್ಎ ಅಲ್ಲಮಪ್ರಭು ಪಾಟೀಲ, ಎಂಎಲ್‌ಸಿಗಳಾದ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ ಸೇರಿದಂತೆ ಹಲವರಿದ್ದರು.



ಕಲಬುರಗಿ: ರೈತ ನಾಯಕ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಆಯೋಜಿಸಿದ್ದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ, ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು ಬಿಎಸ್‌ವೈಗೆ ಹೂಗುಚ್ಛ ನೀಡಿ ಗೌರವ ಸಲ್ಲಿಸಿದರು. ಮಾಜಿ ಶಾಸಕ ರಾಜಕುಮಾರ್ ಪಾಟೀಲತೇಲ್ಕೂರ್, ಧರ್ಮಪತ್ನಿ ಸಂತೋಷಿ ರಾಣಿ ಪಾಟೀಲ ಇತರರಿದ್ದರು.

ಎಸ್ಸೆಸ್ಸೆಲ್ಸಿ ರ‍್ಯಾಂಕ್: ವಿದ್ಯಾರ್ಥಿನಿಗೆ ಸನ್ಮಾನ

ಕುಷ್ಟಗಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.92.32ಅಂಕ ಪಡೆದು ಸಾಧನೆ ಮಾಡಿರುವ ಪಟ್ಟಣದ ವಿದ್ಯಾರ್ಥಿನಿ ಸುಮಾ ಚನ್ನಪ್ಪ ಭಾವಿಮನಿ(ಛಲವಾದಿ) ಇವರನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಸ್ಥಳೀಯ ಪುರಸಭೆಯಿಂದ ಗುರುವಾರ ಸಂಜೆ ಅಭ್ಯರ್ಥಿಯ ಮನೆಯಲ್ಲಿ ಸನ್ಮಾನಿಸಲಾಯಿತು.

ಸಮಾಜ ಕಲ್ಯಾಣ ಅಧಿಕಾರಿ ತುಗ್ಲೆಪ್ಪ ದೇಸಾಯಿ ಮಾತನಾಡಿ, ಯಲಬುರ್ಗಾದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿ ಬಹಳ ಪರಿಶ್ರಮದಿಂದ ಓದಿ ಸಾಧನೆ ಮಾಡಿರುತ್ತಾಳೆ. ಈಕೆಯ ಸಾಧನೆ ಉಳಿದ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಿದೆ. ಸರಕಾರ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ವಸತಿ ಶಾಲೆಗಳನ್ನು ತೆರೆದಿದೆ. ಸರಕಾರದ ಸೌಲಭ್ಯವನ್ನು ಸರಿಯಾಗಿ ಬಳಕೆ ಮಾಡಿಕೊಂಡಿರುವ ವಿದ್ಯಾರ್ಥಿಯ ಸಾಧನೆ ಶ್ಲಾಘನೀಯ ಎಂದರು.

ಪುರಸಭೆ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ ಪುರಸಭೆಯ ಪರವಾಗಿ ಪ್ರತಿಭಾವಂತ ವಿದ್ಯಾರ್ಥಿನಿಯನ್ನು ಸನ್ಮಾನಿಸಿದರು. ಈ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶರಣಪ್ಪ ವಡಿಗೇರಿ, ಛಲುವಾದಿ ಸಮಾಜದ ಅಧ್ಯಕ್ಷ ಸಿದ್ದಪ್ಪ ಛಲುವಾದಿ, ಪಾಲಕರಾದ ಚನ್ನಪ್ಪ ಭಾವಿಮನಿ, ಅನಸೂಯಾ, ಫಕೀರಪ್ಪ ಟಕ್ಕಳಕಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಪುರಸಭೆ ಸಿಬ್ಬಂದಿ ಇದ್ದರು.



ಕುಷ್ಟಗಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.92.32ಅಂಕ ಪಡೆದು ಸಾಧನೆ ಮಾಡಿರುವ ಪಟ್ಟಣದ ವಿದ್ಯಾರ್ಥಿನಿ ಸುಮಾ ಚನ್ನಪ್ಪ ಭಾವಿಮನಿ(ಛಲವಾದಿ) ಅವರನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಸ್ಥಳೀಯ ಪುರಸಭೆಯಿಂದ ಗುರುವಾರ ಸಂಜೆ ಅಭ್ಯರ್ಥಿಯ ಮನೆಯಲ್ಲಿ ಸನ್ಮಾನಿಸಲಾಯಿತು.

21ನೇ ಜಾನುವಾರು ಜನಗಣತಿ | ಸಾರ್ವಜನಿಕರಲ್ಲಿ ಹೆಚ್ಚಿದ ಆತಂಕ

ಜಾನುವಾರುಗಳ ಸಂಖ್ಯೆ ಭಾರೀ ಕುಸಿತ

ವಾಗೀಶ್ ವೀ. ಪಾಟೀಲ

ರಾಯಚೂರು: 21ನೇ ಜಾನುವಾರು ಜನಗಣತಿಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ಜಾನುವಾರು, ಎಮ್ಮೆಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿರುವುದು ಆತಂಕವನ್ನುಂಟು ಮಾಡುತ್ತಿದೆ. ಕುರಿ ಮತ್ತು ಆಡುಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತಿದೆ.

ಕೇಂದ್ರ ಸರ್ಕಾರ ಜಾನುವಾರು ಗಣತಿಯನ್ನು ದೇಶಾದ್ಯಂತ ಹತ್ತು ವರ್ಷಕ್ಕೊಮ್ಮೆ ಮಾಡುತ್ತದೆ. ಇಪ್ಪನೇ ಜಾನುವಾರು ಗಣತಿ ಹಾಗೂ ಇಪ್ಪತ್ತೊಂದನೇ ಜಾನುವಾರು ಜನಗಣತಿ ತುಲನೆ ಮಾಡಿದರೆ ಜಾನುವಾರು ಹಾಗೂ ಎಮ್ಮೆಗಳ ಸಂಖ್ಯೆ ಸಾವಿರ ಸಾವಿರ ಸಂಖ್ಯೆಯಲ್ಲಿ ಕುಸಿತವನ್ನು ಕಂಡಿದೆ.

20ನೇ ಜನಗಣತಿಯಲ್ಲಿ ಜಿಲ್ಲೆಯಲ್ಲಿ ಜಾನು ವಾರುಗಳ (ಆಕಳು) ಸಂಖ್ಯೆ 245374 ಇದ್ದರೆ 21ನೇ ಗಣತಿಯಲ್ಲಿ 22,1353 ಸಂಖ್ಯೆಗೆ ಕುಸಿತವನ್ನು ಕಾಣುವ ಮೂಲಕ ಪ್ರಸಕ್ತ ಗಣತಿಯಲ್ಲಿ 24021 ಸಂಖ್ಯೆ ಕಡಿಮೆಯಾಗಿರುವುದುಕಂಡುಬರುತ್ತಿದೆ. ಎಮ್ಮೆಗಳ ಸಂಖ್ಯೆ 20ನೇ ಗಣತಿಯಲ್ಲಿ 112420 ಇದ್ದರೆ 20ನೇ ಗಣತಿಯಲ್ಲಿ 93927 ಸಂಖ್ಯೆಗೆ ಕುಸಿತವನ್ನು ಕಂಡು ಇಲ್ಲಿ 18493 ಸಂಖ್ಯೆ ಕಡಿಮೆಯಾಗಿದೆ. 20ನೇ ಗಣತಿ ಯಲ್ಲಿ ಕುರಿಗಳ ಸಂಖ್ಯೆ 657633 ಸಂಖ್ಯೆಯಿಂದ 21ನೇ ಗಣತಿಯಲ್ಲಿ 1031562ಗೆ ಏರಿಕೆಯಾಗಿ 373 929 ಹೆಚ್ಚಾಗಿವೆ. 20ನೇ ಗಣತಿಯಲ್ಲಿ ಆಡುಗಳ ಸಂಖ್ಯೆ 282718 ಇದ್ದರೆ. 21ನೇ ಗಣತಿಯಲ್ಲಿ 413 366 ಏರಿಕೆಯಾಗುವ ಮೂಲಕ 130648 ಸಂಖ್ಯೆ ಹೆಚ್ಚಳ ವಾಗಿದೆ. ಜಿಲ್ಲೆಯಲ್ಲಿ ತುಂಗಭದ್ರಾ ಹಾಗೂ ಕೃಷ್ಣಾ ನದಿಗಳ ಮೂಲಕ ಅತ್ಯಧಿಕ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಮಾಡಿಕೊಳ್ಳಲಾಗಿದೆ.



> **ಜಾನುವಾರು ಮತ್ತು ಎಮ್ಮೆಗಳ ಸಾಕಾಣಿಕೆಗೆ ಸರ್ಕಾರ ನೀಡುವ ಪ್ರೋತ್ಸಾಹಧನ, ಉದ್ಯೋಗ ಖಾತರಿ ಯೋಜನೆಯಲ್ಲಿಯೂ ಕೊಟ್ಟಿಗೆ ನಿರ್ಮಾಣ ಮಾಡಿಕೊಳ್ಳಬಹುದೆಂಬ ವಿಚಾರವನ್ನು ರೈತರಿಗೆ ಹೆಚ್ಚಿನ ತಿಳಿಸಿ ಹೆಚ್ಚೆಚ್ಚು ಹೈನುಗಾರಿಕೆ ಪ್ರೋತ್ಸಾಹ ಮಾಡುವುದು ಅವಶ್ಯಕವಾಗಿದೆ.**
> ■ ಅಮರಗುಂಡಪ್ಪ ಆರಳಿಹಳ್ಳಿ, ಕೆಎಂಎಫ್ ನಿರ್ದೇಶಕ

ದಿಗಂತ ವಿಶೇಷ

ಸಿಂಧನೂರು, ದೇವದುರ್ಗ, ಮಾನ್ವಿ, ಸಿರವಾರ, ಮಸ್ಕಿ ತಾಲೂಕುಗಳಲ್ಲಿ ಅತ್ಯಧಿಕ ನೀರಾವರಿ ಸೌಲಭ್ಯವಿದ್ದರೆ ಉಳಿದ ತಾಲೂಕುಗಳಲ್ಲಿ ಎಮ್ಮೆ, ಆಕಳುಗಳನ್ನು ಸಾಕುವಷ್ಟು ನೀರಾವರಿ ಸೌಲಭ್ಯವನ್ನು ರೈತರು ಮಾಡಿಕೊಂಡಿದ್ದಾರೆ. ಆದರೂ ಜಿಲ್ಲೆಯಲ್ಲಿ ಎಮ್ಮೆ, ಆಕಳುಗಳ ಸಾಕಾಣಿಕೆಗೆ ದೊಡ್ಡ ರೈತರಲ್ಲದೆ ಸಣ್ಣ ಹಿಡುವಳಿ ರೈತರೂ ಮುಂದಾಗದಿರುವುದು ಆಚ್ಚರಿಯನ್ನು ತರುವಂತಹುದು.

ಉತ್ತರ ಕರ್ನಾಟಕದಲ್ಲಿ ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ನಂದಿನಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರತಿ ನಾಲ್ಕಾರು ಹಳ್ಳಿಗಳಿಗೆ ಒಂದರಂತೆ ಕಾಣಬಹುದು. ಆದರೆ ಕಲ್ಯಾಣ ಕರ್ನಾಟಕದ ಭಾಗಗಳಲ್ಲಿ ಪ್ರತಿ ತಾಲೂಕಿಗೆ 4–5 ಹಾಲು ಉತ್ಪಾದಕರ ಸಂಘಗಳು ಕಾಣ ಸಿಗುವುದಿಲ್ಲ, ರಾಯಚೂರು ಜಿಲ್ಲೆಯ ಸಿಂಧನೂರು ಹಾಗೂ ದೇವದುರ್ಗ ತಾಲೂಕಿಗಳಲ್ಲಿ ಇತ್ತೀಚೆಗೆ ನಂದಿನಿ ಹಾಲು ಉತ್ಪಾದಕರ ಸಂಘಗಳನ್ನು ಅಲ್ಲೊಂದು ಇಲ್ಲೊಂದು ಪ್ರಾರಂಭಿಸಲಾಗುತ್ತಿದೆ. ಆದರೂ ಅವು ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡುತ್ತಿಲ್ಲ ಎನ್ನುವುದನ್ನು ಕಾಣಬಹುದು.

> **ರೈತರು ಜಮೀನು ಉಳುಮೆಗೆ ಎತ್ತುಗಳ ಬಳಕೆ ಬಿಟ್ಟು ಯಂತ್ರೋಪಕರಣದತ್ತ ವಾಲಿರುವುದು. ಮನೆಯಲ್ಲಿ ಆಕಳು ಸಾಕಾಣಿ ಕಡಿಮೆ ಆಗಿದೆ. ರೈತರು ವಾಣಿಜ್ಯ ಬೆಳೆಗಳನ್ನು ಬೆಳೆದು ಒಂದೇ ಬಾರಿಗೆ ಹಣ ಬರುವುದನ್ನು ನೋಡುತ್ತಿದ್ದಾರೆ. ಸ್ವಂತ ಹಾಗೂ ಕ್ಯಾನಲ್ ನೀರಾವರಿ ಸೌಲಭ್ಯ ಇದ್ದ ಎಲ್ಲರೂ ಭತ್ತ ಬೆಳೆಯುವುದರತ್ತ ಗಮನಕೊಡುತ್ತಿದ್ದಾರೆ.**
> ■ ಪ್ರೇಮ್‌ಸಿಂಗ್, ಡಿಡಿ ಪಶುಸಂಗೋಪನಾ ಇಲಾಖೆ

ಜಿಲ್ಲೆಯು ನಂದಿನಿಯ ಬಳ್ಳಾರಿ ಘಟಕದ ವ್ಯಾಪ್ತಿಗೆ ಬರುತ್ತದೆ. ರಾಯಚೂರಿನಲ್ಲಿ ನಂದಿನಿಯ ಪ್ಯಾಕಿಂಗ್ ಘಟಕವೂ ಇದೆ. ಆದರೆಬಳ್ಳಾರಿಯ ಘಟಕದ ವ್ಯವಸ್ಥಾಪಕ ಮಂಡಳಿ ಹಾಗೂ ಚುನಾಯಿತ ಪ್ರತಿನಿಧಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಣೆ ಮಾಡದೇ ಇರುವುದರುವುದೇ ಜಿಲ್ಲೆಯಲ್ಲಿ ಹೈನೋದ್ಯಮ ಬೆಳೆಯುತಿಲ್ಲ, ಹೀಗಾಗಿ ಜಿಲ್ಲೆಯಲ್ಲಿ ಆಕಳು, ಎಮ್ಮೆಗಳ ಸಾಕಾಣಿಕೆಗೆ ರೈತರು ಮುಂದಾಗುತ್ತಿಲ್ಲ.

ನಿರುದ್ಯೋಗ ಸಮಸ್ಯೆ ವಿರುದ್ಧ ಸಂಘಟನೆಯಿಂದ ಹೋರಾಟ: ಕಡಗದ

ಕುಷ್ಟಗಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಸಂಘಟನೆಯನ್ನು ತಾಲೂಕಿನಲ್ಲಿ ಬಲಿಷ್ಠವಾಗಿ ಕಟ್ಟಲು ಶನಿವಾರ ಮುಖಂಡರ ಸಭೆ ನಡೆಯಿತು.

ರಾಜ್ಯ ಸಮಿತಿ ಸದಸ್ಯ ಅಮರೇಶ್ ಕಡಗದಮಾತನಾಡಿ,ಇಂದಿನಯುವಜನರ ನಿರುದ್ಯೋಗ ಸಮಸ್ಯೆಗೆ ಮತ್ತು ಕಲ್ಯಾಣ ಕರ್ನಾಟಕ ಹಿಂದುಳಿಯಲು ರಾಜಕೀಯ ಇಚ್ಛಾಶಕ್ತಿ ಕಾರಣ ಯುವಕರು ರಾಜಕೀಯ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸಂಘಟನೆಯು ನಿರುದ್ಯೋಗದ ವಿರುದ್ಧ ಹೋರಾಡುವುದು ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಹೋರಾಟ ಮಾಡುವ ಮೂಲಕ ಯುವ ಕಲ್ಯಾಣವನ್ನು ಉತ್ತೇಜಿಸಲು ಸಾಮ್ರಾಜ್ಯಶಾಹಿ ವಿರೋಧಿ ನೀತಿಗಳ ವಿರುದ್ಧ ಹಾಗೂ ಯುವಕರನ್ನು ಕೋಮುವಾದಕ್ಕೆ ಬೀಳುವುದನ್ನು ತಪ್ಪಿಸಿಲು ಮತ್ತು ಯುವಕರಿಗೆ ಸೈದ್ಧಾಂತಿಕ ತಿಳುವಳಿಕೆ ಕೊಡುವ ಕೆಲಸ ನಮ್ಮ ಸಂಘಟನೆಯ ಮಾಡುತ್ತದೆ. ಪಟ್ಟಣ ಹಾಗೂ ತಾಲೂಕಿನ ವಿವಿಧ ಗ್ರಾಮಗಳಿಗೆ ಆಲಮಟ್ಟಿ ಡ್ಯಾಂನಿಂದ ಕುಡಿಯಲು ಶುದ್ಧ ಕುಡಿಯುವ ನೀರನ್ನು ಸರಕಾರ ಸರಬರಾಜು ಮಾಡಿಸುತ್ತದೆ ಇದು ತಿಂಗಳಲ್ಲಿ ಎರಡ್ಮೂರು ಭಾರಿ ಪೈಪ್ ಒಡೆದು ಹೋಗವುದನ್ನು ನಾವು ಗಮನಿಸಿದ್ದೇವೆ. ಆದರೆ ಅದೇ ಆಲಮಟ್ಟಿ ಡ್ಯಾಂ ನಿಂದ ಜಿಂದಾಲ್ ಕಂಪನಿಗೆ ಪ್ರತಿನಿತ್ಯ ನೀರು ಸರಬರಾಜು ಆಗುತ್ತದೆ. ಆ ಪೈಪ್ ಎಲ್ಲಿಯು ಹೊಡಿಯುವುದಿಲ್ಲ, ಇಲಾಖೆಯ ಅಧಿಕಾರಿಗಳು ಯಾವ ರೀತಿಯ ಪೈಪ್ ಹಾಕುತ್ತಾರೆ ಎಂದು ಅಧಿಕಾರಿಗಳನ್ನು ಪ್ರಶ್ನೆ ಮಾಡಬೇಕು ಎಂದು ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಆರ್.ಕೆ.ದೇಸಾಯಿ ಮಾತನಾಡಿದರು.

ಡಿವೈಎಫ್ಐ ಮುಂಖಡರಾದ ಲಕ್ಷ್ಮಣ್, ಆನಂದ ಹೀರೆಮನಿ, ಮುತ್ತರಾಜ್, ಯಮನೂರ ಕೋರಿ, ಮೌನೇಶ್, ಶಿವುರಾಜ, ಶರಣು, ಸತೀಶ್ ವಿರೇಶ ಹಿರೇಮಠ, ಬಸವರಾಜ ಸಾರಥಿ ಇತರರರಿದ್ದರು.



ಓಪನ್ ಕ್ರಿಕೆಟ್ ಟೂರ್ನಮೆಂಟ್ ಸಮಾರೋಪ

ಕುಕನೂರ: ತಾಲೂಕಿನ ಬಿನ್ನಾಳ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಓಪನ್ ಕ್ರಿಕೆಟ್ ಟೂರ್ನಮೆಂಟ್‌ನ ಫೈನಲ್ ಪಂದ್ಯ ಹಾಗೂ ಬಹುಮಾನ ವಿತರಣೆ ಮಾಡಲಾಯಿತು.

ಪತ್ರಕರ್ತ ಜಗದೀಶ ಚಟ್ಟಿ ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯವಲ್ಲ, ಭಾಗವಹಿಸುವಿಕೆ ಮುಖ್ಯವಾಗಿದೆ ಎಂದು ಹೇಳಿದರು. ಕ್ರೀಡೆ ಪ್ರತಿಯೊಬ್ಬರ ಆರೋಗ್ಯ ವೃದ್ಧಿಗೆ ಉತ್ತಮ ವೇದಿಕೆಯಾಗಿದ್ದು, ಯುವಕರು ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯಕರ ಜೀವನ ನಡೆಸಬೇಕಾದರೆ ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಕ್ರೀಡಾಕೂಟ ಯಶಸ್ವಿಗೆ ಆಯೋಜಕರ ನಿರಂತರ ಶ್ರಮ ಕಾರಣವಾಗಿದ್ದು ಆಟಗಾರರ ಪರವಾಗಿ ಅವರಿಗೆ ಅಬಿನಂದನೆಗಳನ್ನ ಸಲ್ಲಿಸಿದರು.

ಬಿಜೆಪಿ ಯುವ ಮುಖಂಡ ಕಲ್ಲಪ್ಪ ಕರೆಣ್ಣವರ, ಕಾಂಗ್ರೆಸ್ ಗ್ಯಾರಂಟಿ ಸಮಿತಿ ಸದಸ್ಯ ಸಂತೋಷ ಮೆಣಸಿನಕಾಯಿ, ಕ್ರೀಡಾ ಪ್ರೇಮಿಗಳಾದ ಕಳಕಪ್ಪ ಕಲ್ಲೂರ, ಮಂಜುನಾಥ ಪಂತರ, ಮುತ್ತಪ್ಪ ಗುರಿಕಾರ, ಬಸವರಾಜ ಕೊಪ್ಪದ, ರಮೇಶ ಮ್ಯಾಗೇರಿ, ಪ್ರಗತಿಪರ ರೈತ ಕೋಟೇಶ ಮೆಣಸಿನಕಾಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಟೂರ್ನಮೆಂಟ್‌ನಲ್ಲಿ ಬಿನ್ನಾಳ ಗ್ರಾಮದ ಬಿಸಿಸಿ ತಂಡ ಪ್ರಥಮ ಸ್ಥಾನ ಪಡೆದು 21 ಸಾವಿರ ನಗದು ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಈ ಬಹುಮಾನವನ್ನು ಗ್ರಾಮದ ಕ್ರೀಡಾ ಪ್ರೇಮಿ ಹಾಗೂ ತಾ.ಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಅವರು ಪ್ರಾಯೋಜಿಸಿದ್ದರು.

ಆಳವಂಡಿ ಗ್ರಾಮದ ಕ್ರಿಕೆಟ್ ತಂಡ ದ್ವಿತೀಯ ಸ್ಥಾನ ಪಡೆದು 11 ಸಾವಿರ ನಗದು ಹಾಗೂ ಟ್ರೋಫಿ ಪಡೆದಿತು.

ತೃತೀಯ ಸ್ಥಾನವನ್ನು ಬಿನ್ನಾಳ ಗ್ರಾಮದ ಆರ್‌ಸಿಬಿ ತಂಡ ಪಡೆದು 7,100 ನಗದು ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಬಹುಮಾನವನ್ನು ಗ್ರಾಮದ ಕ್ರೀಡಾ ಪ್ರೇಮಿ ಹಾಗೂ ಬಿಜೆಪಿ ಯುವ ಮುಖಂಡ ಕಲ್ಲಪ್ಪ ಕರೆಣ್ಣವರ ಅವರು ಪ್ರಾಯೋಜಿಸಿದ್ದರು.

ಕ್ರಿಕೆಟ್ ಟೂರ್ನಮೆಂಟ್ ಯಶಸ್ವಿಯಾಗಿ ಜರುಗಲು ಆಟಗಾರರಿಗೆ ಜರ್ಸಿ, ಬ್ಯಾಟ್, ಬಾಲ್ ಉಡುಗೊರೆ ನೀಡಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದವರಿಗೆ ಅಭಿನಂದಿಸಲಾಯಿತು.



ಹುಲಿಹೈದರನಲ್ಲಿ ಕೃಷಿ ಇಲಾಖೆಯಿಂದ ರೈತರ ಜಾಗೃತಿ ಸಭೆ

ಕನಕಗಿರಿ: ತಾಲೂಕಿನ ಹುಲಿಹೈದರ ಗ್ರಾಮದಲ್ಲಿ ತೊಗರಿ ಬೆಳೆಯಲ್ಲಿ ಗೊಡ್ಡು ರೋಗ ನಿವಾರಣ ಹಾಗೂ ರಸಗೊಬ್ಬರಗಳ ಸಮರ್ಪಕ ನಿರ್ವಹಣೆ ಕುರಿತು ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ ಮುಖ್ಯಸ್ಥ ರಾಘವೇಂದ್ರ ಎಲಿಗಾರ ಅವರು ಶುಕ್ರವಾರ ರೈತರೊಂದಿಗೆ ಜಾಗೃತಿ ಸಭೆ ನಡೆಸಿದರು.

ಬಳಿಕ ಸಸ್ಯರೋಗ ಶಾಸ್ತ್ರಜ್ಞೆ ರೇವತಿ ಮಾತನಾಡಿ, ಗೊಡ್ಡುರೋಗ ರೋಗ ನಿರೋಧ ತಳಿಗಳಾದ ಜಿಆರ್‌ಜಿ –152, ಜಿಆರ್‌ಜಿ –158 ಬೆಳೆಯಬೇಕು. ನುಸಿನಾಶಕಗಳಾದ ನೀರಲ್ಲಿ ಕರುಗುವ ಗಂಧಕ 2.5 ಗ್ರಾಂ. ಪ್ರತಿ ಲೀಟರ್ ನೀರಿಗೆ ಕಲಿಸಿ ಸಿಂಪಡಿಸಬೇಕು. ರೋಗಕ್ಕೆ ತುತ್ತಾದ ಗಿಡಗಳನ್ನು ಕಿತ್ತಿ ಹಾಕಬೇಕು ಹಾಗು ಮಣ್ಣಿನ ಫಲವತ್ತತೆ ಕಾಪಡಿಕೊಳ್ಳಲು ಹಸಿರು ಎಲೆ ಗೊಬ್ಬರಗಳಾದ ಜೂನಿ, ಸೆಣಬು, ದಾಯಿಂಚಿ ಮುಂತಾದ ಬೆಳೆಗಳನ್ನು ಬೆಳೆಯಬೇಕು. ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶಕ ಒದಗಿಸುವ ಯೂರಿಯಾ ಹಾಗು ಡಿಎಪಿಯನ್ನು ರೂಢಿತವಾಗಿ ಬಳಸುತ್ತಿದ್ದು ಪರ್ಯಾಯವಾಗಿ ಗಂಧಕ ಒದಗಿಸುವ ರಸಗೊಬ್ಬರಗಳನ್ನು ಬಳಸಲು ತಿಳಿಸಿದರು.

ರೈತರು ಹೆಚ್ಚಿನ ಆದಾಯ ಗಳಿಸಲು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಬೇಕು ಹಾಗೂ ರೈತರು ಬೆಳೆಯುವ ಮುನ್ನ ಬೀಜಗಳಿಗೆ ಟ್ರೈಕೋಡರ್ಮ, ರೈಜೋಬಿಯಂ ಮುಂತಾದ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡಬೇಕೆಂದು ರೈತರಿಗೆ ಸಲಹೆ ನೀಡಿದರು.

ಗ್ರಾಮದ ರೈತರಾದ ಪ್ರಭುಸ್ವಾಮಿ, ಜಗದೀಶಪ್ಪ ಗದ್ದಿ, ದೊಡ್ಡಪ್ಪ, ಶರಣಪ್ಪ, ಶೇಕ್ರಪ್ಪ, ವಿರೂಪಣ್ಣ ತಾತ, ಹುಲಿಹೈದರ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ನವೀನ್ ಕೆ. ಸಿಬ್ಬಂದಿ ಶಿವಪ್ಪ ಹಳ್ಳಿ ಇತರರಿದ್ದರು.



ಮಾನ್ವಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಕ್ರಮ

ಮಾನ್ವಿ: ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿಗಾಗಿ 70 ಕೋಟಿ ವೆಚ್ಚದಲ್ಲಿ ಅಮೃತ–2 ಯೋಜನೆಯನ್ನು ಮಂಜೂರು ಮಾಡಿಸಿದು ಕಾಮಗಾರಿ ಕೂಡ ಪ್ರಗತಿಯಲ್ಲಿದು ಪೈಪ್‌ಲೈನ್ ಕಾಮಗಾರಿ ವೇಗವಾಗಿ ನಡೆಯುತ್ತಿದೆ. ಎಪಿಎಂಸಿ ಆವರಣದಲ್ಲಿ 12.5 ಲಕ್ಷಲೀ. ಸಂಗ್ರಹಣ ಸಾಮಾರ್ಥ್ಯದ ಟ್ಯಾಂಕ್ ಹಾಗೂ ಜಯನಗರದಲ್ಲಿ 7.5 ಲಕ್ಷ ಲೀ. ಸಂಗ್ರಹಣ ಸಾಮಾರ್ಥ್ಯದ ಟ್ಯಾಂಕ್ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದು ನಗರ ಯೋಜನೆ ಪ್ರಾಧಿಕಾರ ಅಧ್ಯಕ್ಷ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದೂಲ್ ಗಾಫೂರ್ ಸಾಬ್ ಹೇಳಿದರು. ಪಟ್ಟಣದ ಭಾರತ ಜೋಡೊ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ



ಎನ್.ಎಸ್.ಬೋಸರಾಜು ಹಾಗೂ ಶಾಸಕ ಹಂಪಯ್ಯನಾಯಕ ರವರು ರಬ್ಬಣಕಲ್ ಕೆರೆಯಲ್ಲಿ 7.5 ಮೀಟರ್ ನೀರನ್ನು ಸಂಗ್ರಹಿಸಲಾಗಿದೆ. ಕಾತರಕಿ ಚಾಕವೇಲ್‌ನಲ್ಲಿ ಕೂಡ ಯಂತ್ರಗಳನ್ನು ಹಾಕಲಾಗುತ್ತಿದೆ. ಪೈಪ್‌ಲೈನ್ ಹಾಗೂ ವಾಲ್‌ಗಳ ದುರಸ್ಥಿ ಕೈಗೊಳ್ಳಲಾಗುತ್ತಿದೆ. ಜುಮ್ಮಲದೊಡ್ಡಿ ಸಿಲ್ವಾರ್ ಜ್ಯೂಬಲಿ ಟ್ಯಾಂಕ್ ನಿಂದ 5ವಾಡ್‌ಗಳಿಗೆ ಸಂಪರ್ಕ ಪೈಪ್‌ಲೈನ್ ಹಾಕಲಾಗುತ್ತಿದೆ. ಪುರಸಭೆಯಿಂದ ಬೇಸಿಗೆಯಲ್ಲಿ ನೀರಿನ ತೊಂದರೆ ಇದ್ದರು ಕೂಡ ವಾರ್ಡ್‌ಗಳಿಗೆ 5 ದಿನಗಳಿಗೊಮ್ಮೆ ನೀರನ್ನು ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಮೃತ –2 ಯೋಜನೆ ಪೂರ್ಣಗೊಳಿಸಿ ನಿರಂತರವಾಗಿ ನೀರು ಪೂರೈಕೆಗೆಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪಟ್ಟಣದಲ್ಲಿ ಬೇಸಿಗೆ ಅಂಗವಾಗಿ ಪಟ್ಟಣದ 27 ವಾರ್ಡ್‌ಗಳಲ್ಲಿನ ಜನರಿಗೆ ಅಗತ್ಯವಿರುವ ಕುಡಿಯುವ ನೀರಿನ ಪೂರೈಕೆಗಾಗಿ ಪುರಸಭೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅಗತ್ಯ ಇರುವ ಕಡೆ ಟ್ಯಾಂಕರ್ ಮೂಲಕ ಕೂಡ ನೀರು ಪೂರೈಕೆ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ತಾ.ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಬಿ.ಕೆ.ಅಮರೇಶಪ್ಪ ಇದ್ದರು.

ಮಸ್ಕಿ ಪಟ್ಟಣಕ್ಕೆ ಬೇಕಿದೆ ಮಹಿಳಾ ಪದವಿ ಕಾಲೇಜ್

ಸಿದ್ದಯ್ಯ ಹೆಸರೂರು

ಮಸ್ಕಿ: ರಾಯಚೂರು ಜಿಲ್ಲೆಯಲ್ಲಿ ಮಸ್ಕಿ ಪಟ್ಟಣವು ಇತಿಹಾಸದ ಪುಟ್ಟದಲ್ಲಿ ಹೆಸರುವಾಸಿಯಾಗಿ ಅಗ್ರ ಸ್ಥಾನದಲ್ಲಿದ್ದು,ಪದವಿ ಅಭ್ಯಾಸ ಮಾಡಲು ಬಡ ವಿದ್ಯಾರ್ಥಿಗಳಿಗೆ ಪಟ್ಟಣದಲ್ಲಿ ಒಂದೇ ಒಂದು ಸರಕಾರಿ ಪದವಿ ಮಹಿಳಾ ಕಾಲೇಜ್ ಇಲ್ಲ,ಇದರಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಪರದಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಸದ್ಯ ಪಟ್ಟಣದಲ್ಲಿ ಒಂದೇ ಖಾಸಗಿ ಪದವಿ ಮಹಿಳಾ ಕಾಲೇಜ್ ಇದ್ದು,ಅಲ್ಲಿ ಬಿಎ, ಬಿಕಾಂ, ಪದವಿಗಳು ಮಾತ್ರ ಇವೆ. ಇನ್ನೂ ಪಟ್ಟಣದಲ್ಲಿಯೇ ಸುಮಾರು ಐದು ಪಿಯು ಕಾಲೇಜ್‌ಗಳಿರುವುದರಿಂದ ವರ್ಷಕ್ಕೆ ಏನಿಲ್ಲ ಅಂದರೂ ಸುಮಾರು 500 ವಿದ್ಯಾರ್ಥಿನಿಯರು ಪಿಯುಸಿ ತೇರ್ಗಡೆ ಹೊಂದಿ ಪದವಿ ಕಲಿಯಲು ಬರುತ್ತಾರೆ. ಆವರೆಲ್ಲರಿಗೂ ಇರುವ ಒಂದೇ ಕಾಲೇಜ್‌ನಲ್ಲಿ ಪ್ರವೇಶ ದೊರೆಯುವುದು ಕಷ್ಟ ಸಾಧ್ಯವಾಗಿದೆ. ಅಲ್ಲದೇ ಪದವಿ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಅವರಿಗೆ ಬೇಕಾಗುವ ಐಚ್ಛಿಕ ವಿಷಯಗಳು ಸಿಗಲಾರವು.ಒಂದು ವಿಷಯ ಬೇಕಿದ್ದರೆ ಮತ್ತೊಂದು ವಿಷಯ ಸಿಗುವುದಿಲ್ಲ.

ಭಾರವಾದ ದುಬಾರಿ ಶುಲ್ಕ: ಅಲ್ಲದೇ ಅದೇ ಕಾಲೇಜಿನಲ್ಲಿ ಪ್ರವೇಶ ಬಯಸಿದರೆ ಆಡಳಿತ ಮಂಡಳಿ ನಿಗದಿ ಪಡಿಸಿರುವ ಹಣ ಕಟ್ಟಬೇಕು. ಇದರಿಂದಾಗಿ ಹೆಚ್ಚಿನ ಹಣ ಕಟ್ಟಿ ಶಿಕ್ಷಣ ಪಡೆಯುವುದು ಬಡ ಜನರಿಗೆ ಕಷ್ಟವಾಗಿದೆ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತದೆ.

> **ಮಸ್ಕಿ ಪಟ್ಟಣಕ್ಕೆ ಮಹಿಳಾ ಪದವಿ ಕಾಲೇಜ್ ಮಂಜೂರು ಮಾಡಿಸಲು ಸರಕಾರದ ಮಟ್ಟದಲ್ಲಿ ಪ್ರಯತ್ನ ಮಾಡಿ ಆದಷ್ಟೂ ಬೇಗನೆ ಮಂಜೂರು ಮಾಡುವ ಕೆಲಸ ಮಾಡುವೆ.**
> ■ ಆರ್.ಬಸನಗೌಡ ತುರುವಿಹಾಳ, ಮಸ್ಕಿ ಶಾಸಕ

ದಿಗಂತ ವಿಶೇಷ

ಅಷ್ಟು ಹಣ ಕಟ್ಟಿ ಪ್ರವೇಶ ಪಡೆಯಲು ಆಗದ ಬಡ ವಿದ್ಯಾರ್ಥಿಗಳು 30 ಕಿಮೀ. ದೂರವಿರುವ ಸಿಂಧನೂರು ನಗರದ ಸರಕಾರಿ ಪದವಿ ಮಹಿಳಾ ಕಾಲೇಜ್‌ನತ್ತ ಹಾಗೂ 25 ಕಿಮೀ. ದೂರದ ಲಿಂಗಸಗೂರು ನಗರ ಕಡೆಗೆ ಮುಖ ಮಾಡುತ್ತಿದ್ದಾರೆ.

ಪಟ್ಟಣ ಹಾಗೂ ಗ್ರಾಮೀಣ ಬಡ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮಸ್ಕಿ ಪಟ್ಟಣದಲ್ಲಿಯೇ ಹೊಸದಾಗಿ ಸರಕಾರ ಪದವಿ ಮಹಿಳಾ ಕಾಲೇಜ್‌ನ್ನು ತೆರೆಯಬೇಕು ಎಂಬುದು ಈ ಭಾಗದ ವಿದ್ಯಾರ್ಥಿಗಳ,ಪಾಲಕರ ಹಾಗೂ ಶಿಕ್ಷಣ ಪ್ರೇಮಿಗಳ ಬಹುದಿನಗಳ ಆಶಯವಾಗಿದೆ.

ಈ ಮಹಿಳಾ ಕಾಲೇಜ್ ಆರಂಭ ಆಗುವುದರಿಂದ ವಿದ್ಯಾರ್ಥಿನಿಯರಿಗೂಅನುಕೂಲವಾಗುತ್ತದೆಹಾಗೂ ಎಷ್ಟೋ ಬಡ ಕುಟುಂಬದ ಮಕ್ಕಳು ಬೇರೆ ಪಟ್ಟಣಕ್ಕೆ ತೆರಳಿ ವಿದ್ಯಾಭ್ಯಾಸ ಮಾಡಲಾಗದೇ ಅರ್ಧದಲ್ಲಿಯೇ ಓದಿಗೆ ಫುಲ್‌ಸ್ಟಾಪ್ ಇಟ್ಟು ದೊಡ್ಡ ದೊಡ್ಡ ನಗರಗಳಿಗೆ ದುಡಿಯಲು ತೆರಳುವುದು ತಪ್ಪುತ್ತದೆ. ಪಟ್ಟಣದಲ್ಲಿ ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ ಪದವಿ ಕೋರ್ಸ್ ಆರಂಭಿಸಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಲಾ ವಿಷಯದ ಜತೆಗೆ ಇತರೆ ವಿಷಯಗಳ ಆಸಕ್ತಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಹಾಗೂ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಇಲ್ಲೊಂದು ಪದವಿ ಕಾಲೇಜ್ ಸ್ಥಾಪಿಸಬೇಕೆಂಬ ಆಶಯ ಪಟ್ಟಣದ ನಾಗರಿಕರದ್ದಾಗಿದೆ.

ಸರ್ಕಾರಿ ಬಾಲಕರ ಕಾಲೇಜ್‌ನಲ್ಲಿ ಸುಮಾರು ಎರಡು ಎಕರೆ ಜಾಗೆ ಇದ್ದು ಅದು ಬೇಕಾಗುವಷ್ಟು ಪದವಿ ಕಾಲೇಜ್ ಕಟ್ಟಡಕ್ಕೆ ಹಾಗೂ ವರ್ಗಗಳು ನಡೆಸಲು ಜಾಗೆ ಇದೆ.ಅದನ್ನು ಸದುಪಯೋಗ ಮಾಡಿಕೊಳ್ಳಲು ಅಧಿಕಾರಿಗಳು ಹಾಗೂ ಇಲಾಖೆ ಮುಂದೆ ಬರಬೇಕು.ಇದರಿಂದ ಪಟ್ಟಣದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಜಿಲ್ಲೆಯ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸೋಣ: ಡಿಸಿ

ರಾಯಚೂರು: ಜಿಲ್ಲೆಯ ಅಭಿವೃದ್ಧಿಗೆ ವಿವಿಧ ಇಲಾಖೆಯ ಎಲ್ಲಾ ಅಧಿಕಾರಿಗಳು ಒಟ್ಟಾಗಿ ಶ್ರಮಿಸೋಣ ಎಂದು ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಹೇಳಿದರು.

ಗುರುವಾರ ಜಿಲ್ಲಾಡಳಿತ ವತಿಯಿಂದ ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರಿಗೆ ಸ್ವಾಗತ ಹಾಗೂನಿರ್ಗಮಿತಜಿಲ್ಲಾಧಿಕಾರಿ ನಿತೀಶ.ಕೆಅವರಿಗೆ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಜಿಲ್ಲೆಗೆ ನನ್ನ ಮೇಲಾಧಿಕಾರಿಗಳು ಹೋಗುತ್ತಿರಾ ಎಂದಾಗ ನಾನು ಹಿಂದೆ ಮುಂದೆ ಯೋಚನೆ ಮಾಡದೆ ಹೋಗುವೆ ಎಂದು ಹೇಳಿದೆ ಎಕೆಂದರೆ ನಾನು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲಸ ಮಾಡಿರಲಿಲ್ಲ ಹಾಗಾಗಿ ನಾನು ಹೋಗುವೆ ಎಂದೆ ಎಂದರು.

ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ.ಕೆ ಅವರು ಜಿಲ್ಲೆಯಲ್ಲಿ ಉತ್ತಮ ಕೆಲಸ ಮಾಡಿ ನಮಗೆ ದಾರಿ ಸುಗಮವಾಗುವಂತೆ ಮಾಡಿದ್ದಾರೆ. ಎರಡು ವರ್ಷಗಳ ಕಡಿಮೆ ಅವಧಿಯಲ್ಲಿ ಅವರು ಉತ್ತಮ ಕೆಲಸ ಮಾಡಿರುವುದಕ್ಕೆ ತಾವು ಹೇಳುತ್ತಿರುವುದರಿಂದ ತಿಳಿಯುತ್ತದೆ. ಜಿಲ್ಲೆಯ ಅಭಿವೃದ್ಧಿಯ ದಾರಿಯಲ್ಲಿ ನಾವೆಲ್ಲರೂ ಸಾಗೋಣ ಎಂದರು.



ನಿರ್ಗಮಿತಜಿಲ್ಲಾಧಿಕಾರಿ ನಿತೀಶ.ಕೆಮಾತನಾಡಿ, ರಾಯಚೂರು ಜಿಲ್ಲೆಗೆ ಬರುವ ಮುಂಚೆ ಅನೇಕ ತಪ್ಪು ಕಲ್ಪನೆಗಳಿದ್ದವು. ಇಲ್ಲಿ ಪ್ರಾಮಾಣಿಕವಾಗಿ ಕಷ್ಟಪಟ್ಟು ಕೆಲಸಮಾಡಿದರೆ ಜನರು. ಜನಪ್ರತಿನಿಧಿಗಳು ಹಾಗೂ ಸಂಘಟನೆಗಳು ನಮಗೆ ಬಹಳ ಪ್ರೀತಿ ಮತ್ತು ಕಾಳಜಿಯನ್ನು ತೋರುತ್ತಾರೆ. ಬೇರೆ ಜಿಲ್ಲೆಗೆ ಹೋಲಿಸಿದರೆ ರಾಯಚೂರು ಜಿಲ್ಲೆಯಲ್ಲಿ ಬಹಳಷ್ಟು ಹೆಸರು ಮತ್ತು ಕೆಲಸ ಮಾಡಬಹುದು ಎಂದರು. ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸ ಮಾಡುವುದು ಕಲಿಕೆ. ರಾಯಚೂರು ಜಿಲ್ಲೆಯಲ್ಲಿ ಕೆಲಸ ಮಾಡಿದರೆ ಭಾರತ ದೇಶದಲ್ಲಿ ಎಲ್ಲಿ ಬೇಕಾದರು ಕೆಲಸ ಮಾಡಬಹುದು. ಪ್ರತಿಯೊಂದು ಜಿಲ್ಲೆ ಪುಣ್ಯಕ್ಷೇತ್ರವಿದಂತೆ ಜನರನ್ನು ದೇವರೆಂದು ನಾವು ಕೆಲಸ ಮಾಡಬೇಕು ಜಿಲ್ಲೆಯಲ್ಲಿ ಕೆಲಸ ಮಾಡಲು ನನಗೆ ಸಹಕಾರ ನೀಡಿದಕ್ಕಾಗಿ ಎಲ್ಲರಿಗೂ ಧನ್ಯವಾದಗಳು ನನ್ನಂತೆ ನೂತನ ಜಿಲ್ಲಾಧಿಕಾರಿಗಳಿಗೆ ಸಹಕಾರ ನೀಡಬೇಕೆಂದು ಹೇಳಿದರು. ಜಿಪಂ ಸಿಇಒ ಈಶ್ವರ ಕುಮಾರ ಕಾಂದೂ, ಎಸ್ಪಿ ಅರುಣಾಂಗ್ಷು ಗಿರಿ. ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೋಹಪಾತ್ರ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ ಹಾಗೂ ಎಡಿಸಿ ಶಿವಾನಂದ ಭಜಂತ್ರಿ ಮಾತನಾಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಈರಣ್ಣ ಬಿರಾದಾರ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಾ. ಡಿಎಚ್‌ಒ ಡಾ.ಸುರೇಂದ್ರ ಬಾಬು ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಐಜಿಪಿ ಹರ್ಷಗೆ ಡಾಕ್ಟರೇಟ್: ಅಭಿನಂದನೆ



◆**ಬಳ್ಳಾರಿ:** ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಐಪಿಎಸ್ ಅವರಿಗೆ, ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಬಂಡೀಪುರ ನಾಗರಹೊಳೆ ಭದ್ರಾ ಹುಲಿ ಅಭಿಯಾರಣ್ಯಗಳಲ್ಲಿ ಹುಲಿಗಳಿಗೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಗೆ ಕುವೆಂಪು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದ್ದು, ಅತ್ಯಂತ ಸಂತಸ ಮೂಡಿಸಿದೆ. ಬರುವ ದಿನಗಳಲ್ಲಿ ಇನ್ನೂ ಅನೇಕ ಪ್ರಶಸ್ತಿ ಪಡೆದು ಇತರರಿಗೆ ಮಾದರಿಯಾಗಲಿ ಎಂದು ಕುರುಗೋಡು ಸಿಪಿಐ ಬಾಳನಗೌಡ ಎಸ್.ಎಂ.ಹರ್ಷ ವ್ಯಕ್ತಪಡಿಸಿದ್ದಾರೆ. ವನ್ಯಜೀವಿ ಪ್ರೇಮಿಯಾದ ಬಾಳನಗೌಡ ಎಸ್.ಎಂ. ಬಳ್ಳಾರಿ ಐಜಿಪಿ ಕಚೇರಿಗೆ ತೆರಳಿ ಡಾ.ಹರ್ಷ ಅವರಿಗೆ ಅಭಿನಂದನೆ, ಗೌರವ ಸಲ್ಲಿಸಿ, ಶುಭಾಶಯ ತಿಳಿಸಿದ್ದಾರೆ.

12ನೇ ಮೇ ಸಾಹಿತ್ಯ ಮೇಳ ಮೇ 16,17ರಂದು

◆**ಹೂವಿನಹಡಗಲಿ:** ಲಡಾಯಿ ಪ್ರಕಾಶನ ಗದಗ ಚಿತ್ತಾರ ಕಲಾ ಬಳಗ ಧಾರವಾಡ, ಕವಿ ಪ್ರಕಾಶನ ಕವಲಕ್ಕಿ ಮೇ ಸಾಹಿತ್ಯ ಮೇಳ ಹುಬ್ಬಳ್ಳಿ ಬಳಗದ ವತಿಯಿಂದ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮೇ 16,17ರಂದು 12ನೇ ಮೇ ಸಾಹಿತ್ಯ ಮೇಳ ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿದೆ ಎಂದು ಹೂವಿನ ಹಡಗಲಿ ಮೇ



ಸಾಹಿತ್ಯ ಮೇಳ ಬಳಗದ ಸುರೇಶ ಅಂಗಡಿ ತಿಳಿಸಿದ್ದಾರೆ. ಮುಂಬೈ ನ್ಯಾ.ಬಿ.ಜೆ.ಕೋಳ್ಸೆ ಪಾಟೀಲ, ಕರ್ನೂಲಿನ ಪಾಣಿ ಬೆಂಗಳೂರಿನ ವಿ.ಬಾಲಸುಬ್ರಮಣಿಯನ್, ಕಲಬುರ್ಗಿಯ ಕೆ.ನೀಲಾ ದಿಕ್ಸೂಚಿ ಮಾತಾಡುವವರು. ಸನತ ಕುಮಾರ್ ಬೆಳಗಲಿ, ಬಿ.ಜೆ.ಸೊಪ್ಪಿನ, ಕೆ.ಎಸ್. ಶರ್ಮಾ, ವಿವೇಕಾನಂದ ದೊಡ್ಡಮನಿ, ಬೀಬಿಜಾನ್ ಮುಲ್ಲಾ, ಫರೀದಾ ಕರ್ನೂಲ್, ಲಿನೆಟ್ ಡಿಸಿಲ್ವ ಮೇಳ ಉದ್ಘಾಟಿಸುವವರು. ಮೇ 17ರಂದು ಎಸ್ ಐಆರ್ ರದ್ದುಗೊಳಿಸಿ ಪ್ರತಿಭಟನಾ ಮೆರವಣಿಗೆ ಕುಂ.ವೀರಭದ್ರಪ್ಪ ಮೂಡ್ನಾಕೂಡ ಚಿನ್ನಸ್ವಾಮಿ, ರಂಜಾನ್ ದರ್ಗಾ, ಸವಿತಾ ಬನ್ನಾಡಿ, ಶ್ರೀಪಾದ್ ಭಟ್ ನೇತೃತ್ವದಲ್ಲಿ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪದವರೆಗೆ ನಡೆಯಲಿದೆ. ಕವಿಗೋಷ್ಠಿ ಚಿತ್ರಕಲಾ ಪ್ರದರ್ಶನ, ವಿವಿಧ ಪ್ರಕಾಶಕರ ಪುಸ್ತಕ ಪ್ರದರ್ಶನ ಹಾಗೂ ಮಾರಾಟ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿವೆ. ನ್ಯಾ.ನಾಗಮೋಹನ್ ದಾಸ್, ಹಿರಿಯ ಪತ್ರಕರ್ತ ದಿನೇಶ ಅಮೀನ್ ಮಟ್ಟು, ಚಿಂತಕ ಡಾ.ಬಂಜಗೆರೆ ಜಯಪ್ರಕಾಶ, ನೂರ ಶ್ರೀಧರ, ಮಾವಳ್ಳಿ ಶಂಕರ, ಕೆ.ಪಿ.ಸುರೇಶ, ಡಾ.ಬಿ.ಆರ್.ಮಂಜುನಾಥ , ಕೆ.ಫಣಿರಾಜ ಇತರರು ಭಾಗವಹಿಸಲಿದ್ದಾರೆ.

ಕಾವ್ಯ ಕಮ್ಮಟ: ಕವಯತ್ರಿಯರಿಗೆ ಆಹ್ವಾನ

◆**ಹೂವಿನಹಡಗಲಿ:** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು ಹಾಗೂ ಸಮತಾ ಅಧ್ಯಯನ ಕೇಂದ್ರ ಮೈಸೂರು ಸಹಯೋಗದೊಂದಿಗೆ ಮೇ 31 ಹಾಗೂ ಜೂ.1ರಂದು ಮೈಸೂರಿನ ಇಂಟರ್ನ್ಯಾಷನಲ್ ಯೂತ್ ಹಾಸ್ಟೆಲ್, ಗೋಕುಲಂನಲ್ಲಿ ಎರಡು ದಿನದ ಕಾವ್ಯ ಕಮ್ಮಟ ಆಯೋಜಿಸಲಾಗಿದೆ.

ಹಿರಿಯ ಕವಯಿತ್ರಿ ಪ್ರತಿಭಾ ನಂದಕುಮಾರ್ ಕಮ್ಮಟದ ನಿರ್ದೇಶಕರಾಗಿರುತ್ತಾರೆ.

ಆಸಕ್ತ ಲೇಖಕಿಯರು ಒಂದಾದರೂ ಕವನ ಸಂಕಲನ ಹೊರತಂದಿರಬೇಕು ಅಥವಾ ಕವನ ಪ್ರಕಟ ಮಾಡಿರಬೇಕು. ಕೇವಲ 30 ಜನಕ್ಕೆ ಮಾತ್ರ ಅವಕಾಶವಿದ್ದು, ಮೊದಲು ನೋಂದಾಯಿಸಿಕೊಂಡವರಿಗೆ ಆದ್ಯತೆ. ನೋಂದಣಿ ಶುಲ್ಕ 500 ರೂ. ಇದ್ದು, ನೋಂದಣಿ ಸಮಯದಲ್ಲಿ ಪಾವತಿಸಬೇಕು. ಯಾವುದೇ ಕಾರಣದಿಂದ ಭಾಗವಹಿಸಲು ಸಾಧ್ಯವಾಗದೆ ಇದ್ದರೆ ಹಣ ಹಿಂತಿರುಗಿಸಲಾಗುವುದಿಲ್ಲ. ಜಿಲ್ಲಾವಾರು ಪ್ರತಿನಿಧಿಗಳಿಗೆ ಅವಕಾಶ ನೀಡುವ ಆದ್ಯತೆ ಇರುವುದರಿಂದ ಶಿಬಿರಾರ್ಥಿಗಳ ಅಂತಿಮ ಆಯ್ಕೆಯ ನಿರ್ಧಾರ ಕಲೇಸಂನದು. ಗೂಗಲ್ ಫಾರ್ಮ್‌ನ್ನು ಸದ್ಯದಲ್ಲಿಯೇ ಹಾಕುಲಾಗುವುದು. ಆಸಕ್ತರು ತಕ್ಷಣ ಗೂಗಲ್ ಫಾರ್ಮ್ ತುಂಬಿ ಕಳಿಸಬೇಕು. ಹೆಚ್ಚಿನ ಮಾಹಿತಿಗೆ ಸರ್ವಮಂಗಳಾ 9448818900, ಸುಮಾ ಸತೀಶ್ 9481480220 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿಂಧನೂರು: ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿರುವ ಅಭಿವೃದ್ಧಿ ಅಧಿಕಾರಿಗಳ ಸರಣಿ ಅಸಹಜ ಸಾವುಗಳು ಹಿನ್ನೆಲೆಯಲಲ್ಲಿ ರಾಜ್ಯಪಾಲರು ಮಧ್ಯಸ್ಥಿಕೆ ವಹಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ (ಬಿ-ಗ್ರೇಡ್) ಹುದ್ದೆ ಉನ್ನತೀಕರಣ ಸಂಘದ ತಾಲೂಕು ಘಟಕದ ವತಿಯಿಂದ ತಾಪಂ ಕಚೇರಿ ಮುಂದೆ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಅವರಿಗೆ ಮನವಿ ಪತ್ರ ಸಲ್ಲಿಸಿತು.

ಶಾಲೆ ವಿಲೀನ ವಿರೋಧಿಸಿ ಪೋಷಕರಿಂದ ಪತ್ರ ಚಳವಳಿ

◆**ಕುರುಗೋಡು:** ತಾಲೂಕಿನ ಮದಿರೆ ಗ್ರಾಮದಲ್ಲಿನ ಸರ್ಕಾರಿ ಶಾಲೆಯನ್ನು ಕೆಪಿಎಸ್ ಯೋಜನೆ ಹೆಸರಿನ ಮೇಲೆ ಕೋಳೂರು ಶಾಲೆಗೆ ವಿಲೀನ ಮಾಡುವುದನ್ನು ವಿರೋಧಿಸಿ ಗ್ರಾಮದಲ್ಲಿ ಪೋಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಗುರಳ್ಳಿ ರಾಜ ಮಾತನಾಡಿ, ರಾಜ್ಯ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ಕೆಪಿಎಸ್ ಯೋಜನೆ ಶಿಕ್ಷಣ ಸಂಪೂರ್ಣವಾಗಿ ಖಾಸಗೀಕರಣಗೊಳಿಸುವ ನೀಲ ನಕ್ಷೆಯಾಗಿದೆ. ಈ ನೀತಿ ಯಾವುದೇ ಪೋಷಕರ, ಶಿಕ್ಷಕರ, ಶಿಕ್ಷಣ ತಜ್ಞರ ಅಭಿಪ್ರಾಯ ಸಂಗ್ರಹಿಸದೆ, ಸರ್ವಾಧಿಕಾರಿ ಧೋರಣೆಯಿಂದ ಜಾರಿಗೆ ತರಲಾಗಿದೆ. ಇದು ಶಿಕ್ಷಣ ಕಾರ್ಪೊರೇಟ್ ಕಂಪನಿಗಳಿಗೆ ಶಿಕ್ಷಣ ಕ್ಷೇತ್ರ ಹಸ್ತಾಂತರಿಸುವ ಯೋಜನೆಯಾಗಿದೆ. ಹಳ್ಳಿಗೊಂದು ಶಾಲೆ ಸಹ ಉಳಿಸದೆ, ಮುಚ್ಚಲು ಹೊರಟಿರುವ ಸರ್ಕಾರವು ತೀವ್ರ ಜನಾಕ್ರೋಶಕ್ಕೆ ಗುರಿಯಾಗಿದೆ. ಸರ್ಕಾರ ಶಿಕ್ಷಣಕ್ಕಾಗಿ 8 ಗ್ಯಾರಂಟಿ ಪ್ರಚಾರ ಮಾಡುತ್ತಿದೆ. ಜನಸಾಮಾನ್ಯರು ಈ ಕುತಂತ್ರ ಅರ್ಥಮಾಡಿಕೊಂಡು, ಅದರ ವಿರುದ್ಧ ಹೋರಾಟಗಳು ಬೆಳೆಯುತ್ತಿವೆ. ಸರ್ಕಾರ ಉತ್ತಮ ಶಿಕ್ಷಕರನ್ನು ನೇಮಿಸಿಕೊಂಡು ಈಗಿರುವ ಶಾಲೆಯಲ್ಲೇ ಉತ್ತಮ ಶಿಕ್ಷಣ ಸಿಗುವಂತೆ ಕ್ರಮ ವಹಿಸುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದರು.

ಈ ವೇಳೆ ಸದಸ್ಯೆ ವಿದ್ಯಾವತಿ, ದೊಡ್ಡಬಸಪ್ಪ, ಲೋಕೇಶ್, ಲಾಲೆಪ್ಪ, ರಮೇಶ್, ರವಿಚಂದ್ರ ಸೇರಿದಂತೆ ಇತರರು ಇದ್ದರು.



ಕುರುಗೋಡು: ತಾಲೂಕಿನ ಮದಿರೆ ಗ್ರಾಮದಲ್ಲಿನ ಸರ್ಕಾರಿ ಶಾಲೆಯನ್ನು ಕೆಪಿಎಸ್ ಯೋಜನೆ ಹೆಸರಿನ ಮೇಲೆ ಕೋಳೂರು ಶಾಲೆಗೆ ವಿಲೀನ ಮಾಡುವುದನ್ನು ವಿರೋಧಿಸಿ ಗ್ರಾಮದಲ್ಲಿ ಪೋಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದರು. ಸದಸ್ಯೆ ವಿದ್ಯಾವತಿ, ದೊಡ್ಡಬಸಪ್ಪ, ಲೋಕೇಶ್, ಲಾಲೆಪ್ಪ, ರಮೇಶ್, ರವಿಚಂದ್ರ ಸೇರಿದಂತೆ ಇತರರು ಇದ್ದರು.

ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳ ದುರಸ್ತಿ

ಭತ್ತನಾಟಿ ವಿರಳ: ಆರ್ಥಿಕ ಸಂಕಷ್ಟದಲ್ಲಿ ರೈತ

▶ಜಿಎಂ ಪುಷ್ಪವತಿ ಜಿಎಂ ಬಸಯ್ಯ

◆**ಕುರುಗೋಡು:** ಪ್ರಸಕ್ತ ಭತ್ತ ವಿವಿಧ ತಳಿ ಬೇಸಿಗೆಯ ಕಟಾವು ಕೊನೆಯ ಹಂತ ಅಂತಿಮವಾಗಿದ್ದು, ಬಹುತೇಕ ಇಳುವರಿಯಲ್ಲಿ ರೈತರಲ್ಲಿ ಹರ್ಷ ಹಾಗೂ ದರದಲ್ಲಿ ಕೂಡ ತೃಪ್ತಿ ಕಂಡು ಬಂದಿದೆ.

ಬೆಳೆ ಇಲ್ಲದಕ್ಕ ರೊಕ್ಕ ರೊಕ್ಕ ಇಲ್ಲದೇ ಕಷ್ಟ ಆಗೈತಿ, ಎಂದೇ ಮಾತು ಆರಂಭಿಸುವ ಬಹುತೇಕರು, ಖರ್ಚು ವೆಚ್ಚಕ್ಕೆ ಲೆಕ್ಕ ಹಾಕುತ್ತಿದ್ದಾರೆ. ಬೆಳೆ ಇದ್ದರೆ ಸಾಲ ಕೊಡುವವರೂ ಇರುತ್ತಿದ್ದರು. ಬೆಳೆ ಇಲ್ಲದೆ ಇರುವುದರಿಂದ ಖಾಸಗಿಯಾಗಿ ಸಾಲಗಳೂ ಸಿಗದಂತಾಗಿದೆ. ಕೃಷಿಯನ್ನೇ ನೆಚ್ಚಿಕೊಂಡು ಬದುಕುವ ರೈತ ಕುಟುಂಬಗಳು ಭಾರಿ ಪ್ರಮಾಣದ ಆರ್ಥಿಕ ಮುಗ್ಗಟ್ಟಿಗೆ ಗುರಿಯಾಗಿದ್ದು, ಮಕ್ಕಳ ಶಾಲೆ, ಕಾಲೇಜು ವಿದ್ಯಾಭ್ಯಾಸಕ್ಕೆ ಹಣ ಹೊಂದಿಸಲು ಹೆಣಗಾಡುವ ಸ್ಥಿತಿ ಉಂಟಾಗಿದೆ. ಬೇಸಿಗೆ ಬೆಳೆ ಇಲ್ಲದ್ದರಿಂದ ಮಾರುಕಟ್ಟೆ ಮೇಲೆ ಭಾರೀ ಪರಿಣಾಮ ಬೀರಿದೆ. ಖರೀದಿ ಪ್ರಕ್ರಿಯೆ ಸ್ಥಗಿತಗೊಂಡಿವೆ.

ಅಲ್ಲಲ್ಲಿ ಕೊಳವೆಬಾವಿ, ಪಂಪ್‌ಸೆಟ್, ನದಿಗಳ ದಡ ಬೋರ್, ಹಳ್ಳಗಳ ಸೇರಿದಂತೆ ದಲ್ಲಿನ ವ್ಯಾಪ್ತಿಯಲ್ಲಿ ನೂರಾರು ಎಕರೆ ಪ್ರದೇಶದಲ್ಲಿ ಭತ್ತನಾಟಿ ಮಾಡಿದ ರೈತರು ಬಹುತೇಕ ಯಂತ್ರಗಳ ಸಹಾಯದಿಂದ ಕಟಾವು ಕೊನೆ ಹಂತ ತಲುಪಿದೆ.

ಇನ್ನೂ ಕೆಲ ರೈತರು ಬೋರ್ ಹಳ್ಳಗಳ ನೀರು ಸಂಗ್ರಹ ಕಡಿಮೆಯಾಗಿದ್ದು, ಕಾರಣ ಕೆಲ ರೈತರು ಭತ್ತನಾಟಿ ಮಾಡಿ ಮಧ್ಯದಲ್ಲಿ ಕೈಸುಟ್ಟು ನಷ್ಟಕ್ಕೀಡಾಗಿದ್ದು, ಇನ್ನೂ ನೀರಿನ ಉತ್ತಮ ಜಲನಂಬಿ ತೆಗ್ಗಾದ ಪ್ರದೇಶದಲ್ಲಿ ರೈತರು ಉತ್ತಮ ಇಳುವರಿಯ ಎಕರೆ ಪ್ರದೇಶಕ್ಕೆ 40 ರಿಂದ 45



ಆರ್ಥಿಕ ಪ್ರಗತಿ ಸಾಧಿಸುತ್ತಿದ್ದ ರೈತರು

ಪ್ರಸಕ್ತ ಬೇಸಿಗೆ ಬೆಳೆಯಲ್ಲಿ ಸ್ವಲ್ಪ ಮಟ್ಟಿಗೆ ಕ್ರಿಮಿ, ಕೀಟಕಾಟ ಕಮ್ಮಿ ನಡುವೆ ಸುಗ್ಗಿ ಬೆಳೆಗಿಂತ ಬೇಸಿಗೆ ಬೆಳೆಗೆ ತೃಪ್ತಿಯಾಗಿದ್ದಾರೆ. ಆದರೆ ತುಂಗಭದ್ರಾ ಜಲಾಶಯದ ನೀರನ್ನೇ ಆಶ್ರಯಿಸಿ ವರ್ಷಕ್ಕೆ ಎರಡು ಬೆಳೆ ಬೆಳೆದು ಆರ್ಥಿಕ ಪ್ರಗತಿ ಸಾಧಿಸುತ್ತಿದ್ದ ರೈತರು, ಈ ಬಾರಿ ಬೇಸಿಗೆ ಬೆಳೆ ಇಲ್ಲದ ಪರಿಣಾಮ ಎಪಿಎಂಸಿ ಮಾರುಕಟ್ಟೆ ಸ್ತಬ್ದಗೊಂಡಿದ್ದು, ಆರ್ಥಿಕ ವಹಿವಾಟಿಗೆ ಪೆಟ್ಟು ಬಿದ್ದಿದೆ.

ಚೀಲ(75ಕೆಜಿ) ಬೆಳೆದು ದರ 1600-ರಿಂದ 160 ಬೆಲೆ ಸಿಕ್ಕಿದೆ.

ತಳಿಗಳು: ಕಾವೇರಿ ಸೋನಾ, ಆರ್‌ಎನ್‌ಆರ್ ಇತರೆ ಸೇರಿದಂತೆ ಕಳೆದ ವರ್ಷ 1350 ರಿಂದ 1400 ದರ (75 ಕೆ.ಜಿ) ಪ್ರಸಕ್ತ ಧರ 1600 ರಿಂದ 1660 ಮಾರುಕಟ್ಟೆಯಲ್ಲಿ ದೊರೆತಿದೆ.

ತಾಲೂಕಿನ ಎಚ್.ವೀರಾಪುರ, ನೆಲ್ಲುಡಿ, ಗುತ್ತಿಗನೂರು, ಗೆಣಿಕೆಹಾಳ್, ನದಿಯ ದಡದಲ್ಲಿನ ಸೂಗೂರು, ಮಣ್ಣೂರು, ರಾಮಚಂದ್ರಪುರ, ಸೇರಿದಂತೆ ಕನಿಷ್ಟ 1000 ಎಕರೆ ಪ್ರದೇಶದಲ್ಲಿ ಭತ್ತ ಕಟಾವು ಕೊನೆಹಂತ ತಲಿಪಿದೆ.

ನಿರೀಕ್ಷಿತಕ್ಕಿಂತ ಕಡಿಮೆ ವ್ಯಾಪಾರ

ಭತ್ತವೇ ಆಧಾರವಾಗಿರುವ ಮಾರುಕಟ್ಟೆಯಲ್ಲಿ ಬೆಳೆ ಇಲ್ಲದೆ ಇರುವುದರಿಂದ ವ್ಯಾಪಾರ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ, ಮುಂಗಾರಿನ ಬೆಳೆ ಬಂದ ಮೇಲೆ ಮಾರುಕಟ್ಟೆ ಮತ್ತೆ ಆಶಾಭಾವನೆಯಲ್ಲಿದೆ ಎಂದು ವರ್ತಕರಾದ ಎಮ್ಮಿಗನೂರು ವೈ.ರಾಘವೇಂದ್ರ ರೆಡ್ಡಿ, ದಸಾರಿ ನಾರಾಯಣ ಹೇಳಿದರು.

ಪ್ರಸಕ್ತ ಬೇಸಿಗೆ ಬೆಳೆಯಲ್ಲಿ ಸ್ವಲ್ಪ ಮಟ್ಟಿಗೆ ಕ್ರಿಮಿ, ಕೀಟಕಾಟ ಕಮ್ಮಿ ನಡುವೆ ಸುಗ್ಗಿ ಬೆಳೆಗಿಂತ ಬೇಸಿಗೆ ಬೆಳೆಗೆ ತೃಪ್ತಿಯಾಗಿದ್ದಾರೆ. ಆದರೆ ತುಂಗಭದ್ರಾ ಜಲಾಶಯದ ನೀರನ್ನೇ ಆಶ್ರಯಿಸಿ ವರ್ಷಕ್ಕೆ ಎರಡು ಬೆಳೆ ಬೆಳೆದು ಆರ್ಥಿಕ ಪ್ರಗತಿ ಸಾಧಿಸುತ್ತಿದ್ದ ರೈತರು, ಈ ಬಾರಿ ಬೇಸಿಗೆ ಬೆಳೆ ಇಲ್ಲದ ಪರಿಣಾಮ ಎಪಿಎಂಸಿ ಮಾರುಕಟ್ಟೆ ಸ್ತಬ್ಧಗೊಂಡಿದ್ದು, ಆರ್ಥಿಕ ವಹಿವಾಟಿಗೆ ಪೆಟ್ಟು ಬಿದ್ದಿದೆ.

ಪ್ರತಿ ಬೇಸಿಗೆ ತುಂಗಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ 1 ಲಕ್ಷ ಎಕರೆಗೂ ಅಧಿಕ ಭೂಮಿಯಲ್ಲಿ ಭತ್ತ ಬೆಳೆಯಲಾಗುತ್ತಿದೆ. ಅರ್ಧಕ್ಕಿಂತ ಹೆಚ್ಚು ನೀರಾವರಿ ಭೂಮಿಯೇ ಇರುವ ಗ್ರಾಮೀಣ ಭಾಗದಲ್ಲಿ ಭತ್ತದ ಖಣಜವೆಂದೇ ಖ್ಯಾತಿಗಳಿಸಿದೆ. ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳ ದುರಸ್ತಿ ಕಾರಣಕ್ಕಾಗಿ ಬೇಸಿಗೆ ಬೆಳೆಗೆ ನೀರು ಹರಿಸಿಲ್ಲ, ಇದೇ ಕಾರಣಕ್ಕಾಗಿ ಕೆಲವರು ಜೋಳ, ಸಜ್ಜೆ ಸೇರಿ ಇತರೆ ಪರ್ಯಾಯ ಬೆಳೆ ಬೆಳೆದರೂ ನಿರೀಕ್ಷಿತ ಆದಾಯ ಗಳಿಸಿಲ್ಲ, ಆದಾಯದ ಮೂಲವಾಗಿರುವ ಭತ್ತದ ಬೆಳೆ ಇಲ್ಲದೇ ಇರುವುದು ಇಡೀ ಮಾರುಕಟ್ಟೆಯ ಆರ್ಥಿಕ ಮುಗ್ಗಟ್ಟಿಗೆ ಕಾರಣವಾಗಿದೆ.

ನೀರಿನ ಅರವಟ್ಟಿಗೆ ನಿರ್ಮಾಣ: ಮೆಚ್ಚುಗೆ

▶ಅರವಿಂದ್ ಬಸಾಪುರ್

◆**ಕೊಟ್ಟೂರು:** ವಿಜಯನಗರ ಜಿಲ್ಲೆಯ ಕೊಟ್ಟೂರು ಪಟ್ಟಣದ ಬಸ್ ನಿಲ್ದಾಣ ಮುಂಭಾಗ ಅಪ್ಪು ಅಭಿಮಾನಿ ಪ್ರಕಾಶ್ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ನಿರ್ಮಾಣ ಮಾಡುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ವಿವಿಧ ಮಹಾದಾಸೋಹಿ ಪದ್ಮಭೂಷಣ ಡಾ.ಶಿವಕುಮಾರ ಮಹಾಶಿಯೋಗಿ ಹಾಗೂ ಕರ್ನಾಟಕ ರತ್ನ ಡಾ.ಪುನೀತ್ ರಾಜ ಕುಮಾರ ರವರ ಜನ್ಮದಿನದ ಅಂಗವಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅರವಟ್ಟಿಗೆ ನಿರ್ಮಾಣ ಮಾಡಿದ್ದಾರೆ.

ಪಟ್ಟಣದ ಡಾ.ಪುನೀತ್‌ರಾಜ್ ಕುಮಾರರ ಅಭಿಮಾನಿ ಪ್ರಕಾಶ್ರವರು ಬೇಸಿಗೆ ಈ ಸಮಯದಲ್ಲಿ ಕೊಟ್ಟೂರಿನ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಕೊರತೆ ಕಂಡು ಸ್ವಂತ ಹಣದಿಂದ ತಂಪಾದ ನೀರಿನ ಅರವಟ್ಟಿಗೆ ನಿರ್ಮಿಸುವುದರ ಮೂಲಕ ನಿಸ್ವಾರ್ಥ ಸೇವೆಗೈದ ಇವರು ಸಾರ್ವಜನಿಕರ ದಾಹತೀರಿಸೋದಕ್ಕೆ ಕುಡಿಯುವ ನೀರಿನ ಅರವಟ್ಟಿಗೆ ಎಂಬ ಮಹತ್ತರ ಕಾರ್ಯ ಕೈಗೊಂಡಿರೋದು ಅತ್ಯಂತ ಶ್ಲಾಘನೀಯ. ವೃತ್ತಿಯಲ್ಲಿ ಹಮಾಲಿ ಕೆಲಸ ಮಾಡೋ ಆರ್.ಪ್ರಕಾಶ ಅವರ ಸಮಾಜ ಸೇವೆ ಕಾರ್ಯಕ್ಕೆ ಸಾರ್ವಜನಿಕರ ಮೆಚ್ಚುಗೆಯ ಮಹಾಪೂರವೇ ಹರಿದು ಬರ್ತಾ ಇದೆ. ಪಟ್ಟಣದ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು ಪತ್ರಿಕಾ ವರದಿ ಮಾಡಲಾಗಿತ್ತು, ಎಚ್ಚೆತ್ತುಕೊಳ್ಳದ ಸರ್ಕಾರ,



ಹಮಾಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿರುವೆ. ನನಗೆ ದಿನಕ್ಕೆ 1000 ದಿಂದ 1500 ರೂ. ಸಂಪಾದನೆ ಇದೆ. ನಾನು ಅಪ್ಪು ಅವರ ಅಪ್ಪಟ ಅಭಿಮಾನಿ. ಡಾ.ಪುನಿತ್‌ರಾಜ ಕುಮಾರ್ ಅವರಿಂದ ಪ್ರೇರಣೆಗೊಂಡ ನಾನು ಸಾರ್ವಜನಿಕರ ನೀರಿನ ದಾಹ ಇಂಗಿಸುವ ಮೂಲಕ ಸಮಾಜಕ್ಕಾಗಿ ಅಳಿಲು ಸೇವೆ ಮಾಡುತ್ತಿದ್ದೇನೆ. ದಿನಕ್ಕೆ 70ರಿಂದ 80 ಕ್ಯಾನ್‌ಗಳ ನೀರು ಖರ್ಚಾಗುತ್ತಿದೆ.

■ ಪ್ರಕಾಶ್, ಅಪ್ಪು ಅಭಿಮಾನಿ, ಸಮಾಜ ಸೇವಕ

ಶಾಸಕರು, ಅಧಿಕಾರಿಗಳು ಕೇವಲ ಹಮಾಲಿ ಕೆಲಸ ಮಾಡೋ ಯುವಕ ಆಧುನಿಕ ಭಗೀರಥನಾಗಿ ಸಾರ್ವಜನಿಕರಿಗೆ ನೀರಿನ ವ್ಯವಸ್ಥೆ ಮಾಡಿದ್ದಾರೆ.

ಇದಲ್ಲದೇ ಪ್ರತಿ ವರ್ಷ ಪುನೀತ್‌ರಾಜ ಕುಮಾರ್ ಜನ್ಮದಿನದಂದು ಅನೇಕ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ ಪುಸ್ತಕ, ಪೆನ್, ಬ್ಯಾಗ್ ನೀಡುವುದರ ಮೂಲಕ ಸಮಾಜ ಸೇವೆ ಮಾಡುತ್ತಿದ್ದಾರೆ.

ವೈವಿಧ್ಯಮಯ ಬೆಳೆ ವ್ಯವಸ್ಥೆ ಜಾಗೃತಿ ಅಭಿಯಾನ

◆**ಬಳ್ಳಾರಿ:** ಸುಸ್ಥಿರ ಕೃಷಿ ಮತ್ತು ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ರೈತರು ಸಾಂಪ್ರದಾಯಿಕ ಏಕಬೆಳೆ ಪದ್ಧತಿಯಿಂದ ಹೊರಬಂದು ವೈವಿಧ್ಯಮಯ ಬೆಳೆ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ಐಸಿಎಆರ್ -ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ರಮೇಶ ಎಂ.ಎನ್. ಹೇಳಿದರು.

ಬಳ್ಳಾರಿ ಪ್ರಾದೇಶಿಕ ಕೇಂದ್ರದ ಐಸಿಎಆರ್ -ಐಐಎಸ್‌ಡಬ್ಲ್ಯೂಸಿ ವತಿಯಿಂದ ಬುಡಕಟ್ಟು ಉಪ ಯೋಜನೆಯಡಿ ಸಂಡೂರು ತಾಲೂಕಿನ ಮಟ್ಟಜನಹಳ್ಳಿ ಗ್ರಾಮದಲ್ಲಿ ನಡೆದ ಮಣ್ಣಿನ ಆರೋಗ್ಯ ಚೇತನಕ್ಕಾಗಿ ವೈವಿಧ್ಯಮಯ ಬೆಳೆ ವ್ಯವಸ್ಥೆಗಳು ಜಾಗೃತಿ ಅಭಿಯಾನದಲ್ಲಿ ಮಾತನಾಡಿ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ಬಳಸಿ ಸಾವಯವ ಗೊಬ್ಬರ ತಯಾರಿಸುವುದು, ಬೆಳೆ ಅವಶೇಷ ಸುಡದೆ ಮಣ್ಣಿನಲ್ಲಿ ಸೇರಿಸುವುದು, ಮಣ್ಣಿನ ಆರೋಗ್ಯಕ್ಕೆ ಪೂರಕ. ಪಶುಪಾಲನೆ, ಹಸಿರು ಎಲೆ ಗೊಬ್ಬರ ಮತ್ತು ಕೃಷಿ ಅರಣ್ಯ ವ್ಯವಸ್ಥೆ ರೈತರಿಗೆ ಹೆಚ್ಚುವರಿ ಆದಾಯ ನೀಡುವುದಲ್ಲದೆ, ಹವಾಮಾನ ವೈಪರೀತ್ಯ ಎದುರಿಸಲು ಶಕ್ತಿ ನೀಡುತ್ತವೆ ಎಂದರು.

ಹಿರಿಯ ವಿಜ್ಞಾನಿ ಡಾ.ಮಹಿಪಾಲ ಚೌಧರಿ ಮಾತನಾಡಿ, ರೈತರು ಸರಿಯಾದ ಮೂಲ, ಸರಿಯಾದ ದರ, ಸರಿಯಾದ ಸಮಯ ಮತ್ತು ಸರಿಯಾದ ಸ್ಥಳ (4ಆರ್ ವಿಧಾನ) ಎಂಬ ಸೂತ್ರದಡಿ ರಸಗೊಬ್ಬರ ಬಳಸಬೇಕು. ಮಟ್ಟಜನಹಳ್ಳಿಯ ಕಬ್ಬಿಣ ಸಮೃದ್ಧ ಕೆಂಪು ಮಣ್ಣಿಗೆ ಜಿಪ್ಸಂ ಬಳಸುವುದರಿಂದ ಮಣ್ಣಿನ ರಚನೆ ಸುಧಾರಿಸಿ, ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ ಎಂದರು.

ಹಿರಿಯ ವಿಜ್ಞಾನಿ ಡಾ.ರವಿ ದುಪ್ಪಾಲ್



ಮಾತನಾಡಿ, ಬೆಳೆ ವೈವಿಧ್ಯೀಕರಣ ಮತ್ತು ಎಫ್‌ವೈಎಂ, ಹಸಿರು ಗೊಬ್ಬರ, ಕಾಂಪೋಸ್ಟ್, ವರ್ಮಿಕಾಂಪೋಸ್ಟ್ ಒಳಚರಂಡಿ ಕೆಸರು ಮತ್ತು ಪ್ರೆಸ್‌ಮಡ್‌ನಂತಹ ಪರ್ಯಾಯ ಪೋಷಕಾಂಶ ಮೂಲಗಳ ಬಳಕೆಯಿಂದ ಇನ್‌ಪುಟ್ ವೆಚ್ಚ ಕಡಿಮೆ ಮಾಡುತ್ತದೆ. ಲಾಭದಾಯಕತೆ ಸುಧಾರಿಸುತ್ತದೆ. ಪೋಷಕಾಂಶಗಳ ಬಳಕೆಯ ದಕ್ಷತೆ ಹೆಚ್ಚಿಸುತ್ತದೆ ಎಂದರು.

ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಬೆಳೆ ಸ್ಥಿತಿಸ್ಥಾಪಕತ್ವ ಸುಧಾರಿಸುವಲ್ಲಿ, ಇಳುವರಿ ಸ್ಥಿರಗೊಳಿಸುವಲ್ಲಿ ಅವುಗಳ ಪಾತ್ರ ಬಹುಮುಖ್ಯ. ವರ್ಮಿಕಾಂಪೋಸ್ಟ್, ಕಾಂಪೋಸ್ಟ್, ಹಸಿರು ಗೊಬ್ಬರದ ಬಳಕೆಯಿಂದ ಕೃಷಿ ವೆಚ್ಚ ತಗ್ಗಿಸಿ ಲಾಭದಾಯಕತೆ ಹೆಚ್ಚಿಸುತ್ತದೆ ಎಂದರು.

ಇನ್ನೋರ್ವ ವಿಜ್ಞಾನಿ ಡಾ.ಕವಿತಾ.ಪಿ.ಜಾಧವ ಮಾತನಾಡಿ, ಜೀವಾಮೃತ, ಬೀಜಾಮೃತ, ಮಲ್ಚಿಂಗ್(ಹೊದಿಕೆ) ಅಳವಡಿಕೆಯಿಂದ ಪರಿಸರ ಸ್ನೇಹಿ ಕೃಷಿ ಸಾಧ್ಯ. ಸೂಕ್ಷ್ಮ ಪೋಷಕಾಂಶಗಳ ಕೊರತೆ ನೀಗಿಸುವ ಮೂಲಕ ಸುಸ್ಥಿರ ಇಳುವರಿ ಪಡೆಯಬಹುದು ಎಂದರು.

ರೈತರಿಗೆ ಸುಧಾರಿತ ತಳಿಯ ತೊಗರಿ ಬೀಜ ವಿತರಿಸಲಾಯಿತು. ಜಿಪ್ಸಂ, ಸೂಕ್ಷ್ಮ ಪೋಷಕಾಂಶ ಜಮೀನಿನಲ್ಲಿ ಬಳಸುವ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಈ ವೇಳೆ ಗ್ರಾಮದ ಸುಮಾರು 40ಕ್ಕೂ ಹೆಚ್ಚು ರೈತರು ಈ ಅಭಿಯಾನದಲ್ಲಿ ಭಾಗವಹಿಸಿ ಮಾಹಿತಿ ಪಡೆದರು.

ಪಿಡಿಒಗಳ ಸರಣಿ ಅಸಹಜ ಸಾವು: ರಾಜ್ಯಪಾಲರ ಮಧ್ಯಸ್ಥಿಕೆಗೆ ಒತ್ತಾಯ

◆**ಸಿಂಧನೂರು:** ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿರುವ ಅಭಿವೃದ್ಧಿ ಅಧಿಕಾರಿಗಳ ಸರಣಿ ಅಸಹಜ ಸಾವುಗಳು, ಅವರ ಮೇಲಿನ ಹಲ್ಲೆ ಪ್ರಕರಣಗಳು, ಮಾನಸಿಕ ಒತ್ತಡ ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯಪಾಲರು ಮಧ್ಯಸ್ಥಿಕೆ ವಹಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ (ಬಿ-ಗ್ರೇಡ್) ಹುದ್ದೆ ಉನ್ನತೀಕರಣ ಸಂಘದ ತಾಲೂಕು ಘಟಕದ ವತಿಯಿಂದ ತಾಪಂ ಕಚೇರಿ ಮುಂದೆ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಅವರಿಗೆ ಮನವಿ ಪತ್ರ ಸಲ್ಲಿಸಿತು.

ಸಂಘದ ಮಹ್ಮದ್ ಹನೀಫ್ ಮಾತನಾಡಿ, ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಘನತೆ ಮತ್ತು ಸುರಕ್ಷತೆಯೊಂದಿಗೆ ಬದುಕುವ ಹಕ್ಕನ್ನು ನೀಡಿದೆ. ಇನ್ನೂ ಕರ್ನಾಟಕ ಗ್ರಾಮೀಣಾಭಿವೃದ್ಧಿಯ ಆಡಳಿತ ಯಂತ್ರದಲ್ಲಿ ಮುಂಚೂಣಿ ಸೈನಿಕರಂತೆ ಕೆಲಸ ಮಾಡುತ್ತಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪ್ರಸ್ತುತ ದಿನಗಳಲ್ಲಿ ಅತ್ಯಂತ ಭೀಕರ ಮತ್ತು ಅಸುರಕ್ಷಿತ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘದ ಸಿ.ಎಚ್.ಮುದುಕಪ್ಪ ಮಾತನಾಡಿ, ರೋಣ ತಾಲೂಕಿನ ಅಸೂಟಿ ಹಾಗೂ ಕೊತಬಾಳ ಗ್ರಾಪಂಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮುಕ್ಕುಂ ಹುಸೇನ್ ಕರಡಿಗುಡ್ಡ ಇತ್ತೀಚೆಗೆ ರೋಣದಲ್ಲಿ ಬಾಡಿಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಅಘಾತಕಾರಿಯಾಗಿದೆ. ಇಂತಹ ಘಟನೆ ಅಧಿಕಾರಿಗಳ ಕುಟುಂಬಗಳನ್ನು ಅನಾಥವಾಗಿಸುತ್ತಿವೆ ಎಂದರು.

14 ವರ್ಷಗಳಿಂದ 2500ಕ್ಕೂ ಹೆಚ್ಚು ಅಧಿಕಾರಿಗಳು ಒಂದೇ ಹುದ್ದೆಯಲ್ಲಿ ಸ್ಥಗಿತಗೊಂಡಿದ್ದು, ಅಧಿಕಾರಿಗಳ ರಕ್ಷಣೆಗಾಗಿ ಪಿಡಿಒ ವಿಶೇಷ ರಕ್ಷಣಾ ನೀತಿ ಜಾರಿಗೊಳಿಸಬೇಕು. ಮೃತ ಅಧಿಕಾರಿಗಳ ಕುಟುಂಬಗಳಿಗೆ ಕನಿಷ್ಠ 50 ಲಕ್ಷ ರೂ. ಆರ್ಥಿಕ ನೆರವು, ಅನುಕಂಪದ ನೇಮಕಾತಿ ಒದಗಿಸಲು ರಾಜ್ಯ ಆರ್‌ಡಿಪಿಆರ್ ಸಹಾಯನಿಧಿ ಸ್ಥಾಪಿಸಬೇಕು. ರಾಜ್ಯದ ಗ್ರಾಮೀಣ ಆಡಳಿತ ವ್ಯವಸ್ಥೆಯಲ್ಲಿ ಪಿಡಿಒಗಳನ್ನು ಉಳಿಸಲು ರಾಜ್ಯಪಾಲರು ತುರ್ತು ಮಧ್ಯಸ್ಥಿಕೆ ವಹಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಸಹಾಯಕ ಯೋಜನಾಧಿಕಾರಿ ಯಂಕಪ್ಪ,ಸದಸ್ಯರಾದ ಪ್ರಕಾಶ ಪಾಟೀಲ್, ಜಯಶ್ರೀ ಹಾಜರಿದ್ದರು.

ವಸತಿ ನಿಲಯಗಳ ನೋಂದಣಿ ಕಡ್ಡಾಯ: ಡಿಸಿ ಪ್ರಸಾದ್ ಸೂಚನೆ

◆**ಬಳ್ಳಾರಿ:** ಜಿಲ್ಲೆಯ ಎಲ್ಲ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಾಲೆ-ಕಾಲೇಜುಗಳ ವಸತಿ ನಿಲಯಗಳು ಕಡ್ಡಾಯವಾಗಿ ಹೊಸ ನಿಯಮಾವಳಿಗಳಡಿ ನೋಂದಾಯಿಸಿಕೊಳ್ಳಬೇಕು. ಮಕ್ಕಳ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಖಡಕ್ ಸೂಚನೆ ನೀಡಿದರು.

ನಗರದ ಜಿಪಂ ನಜೀರ್‌ಸಾಬ್ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2 ತಿಂಗಳ ಅವಧಿಯೊಳಗೆ ಎಲ್ಲ ವಸತಿ ನಿಲಯಗಳು 'ಕರ್ನಾಟಕ ಮಕ್ಕಳ ವಸತಿ ನಿಲಯಗಳ ನಿಯಂತ್ರಣ ನಿಯಮಗಳು-2025'ರ ಅಡಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬೇಕು. ತಪ್ಪಿದಲ್ಲಿ ಅಂತಹ ಸಂಸ್ಥೆಗಳ ಮಾನ್ಯತೆ ರದ್ದುಪಡಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್.ಡಿ.ಪನ್ನೇಕರ್ ಮಾತನಾಡಿ, ಪ್ರತಿ ಶಾಲಾ-ಕಾಲೇಜುಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ, ಮೇಲ್ವಿಚಾರಣಾ ಸಮಿತಿ ಮತ್ತು ರ್‍ಯಾಗಿಂಗ್ ತಡೆ ಸಮಿತಿ ರಚಿಸಿ ಪ್ರತಿ ತಿಂಗಳು ಸಭೆ ನಡೆಸಬೇಕು. 1098 ಮತ್ತು 112 ಸಹಾಯವಾಣಿ ಸಂಖ್ಯೆ ಗೋಡೆಗಳ ಮೇಲೆ ಕಡ್ಡಾಯವಾಗಿ ಬರೆಸಬೇಕು ಎಂದರು.



ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಮಾತನಾಡಿ, ವಸತಿ ನಿಲಯಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಕಾರ್ಯನಿರ್ವಹಣೆ ಖಾತ್ರಿಪಡಿಸಿಕೊಳ್ಳಲು ಸೂಚಿಸಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ತ್ರಿವೇಣಿ ಪತ್ತಾರ ಮಾತನಾಡಿ, ಸಿಬ್ಬಂದಿಗಳ ಕಡ್ಡಾಯ ಪೊಲೀಸ್ ಪರಿಶೀಲನೆ, ದೂರು ಪೆಟ್ಟಿಗೆಗಳ ಅಳವಡಿಕೆ, ನಿಗದಿತ ಊಟದ ಮೆನು ಪಾಲನೆ, ಮಕ್ಕಳ ಮಾನಸಿಕ, ದೈಹಿಕ ಆರೋಗ್ಯಕ್ಕಾಗಿ ತಜ್ಞರಿಂದ ನಿರಂತರ ತಪಾಸಣೆ ಕೈಗೊಳ್ಳಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಮಕೃಷ್ಣ ನಾಯಕ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರದೇವಿ, ಡಿಡಿಪಿಐ ಉಮಾದೇವಿ, ಜಿಲ್ಲೆಯ ವಿವಿಧ ವಸತಿ ನಿಲಯಗಳ 170ಕ್ಕೂ ಹೆಚ್ಚು ಮುಖ್ಯಸ್ಥರು, ನಿಲಯಪಾಲಕರು ಇದ್ದರು.

ಕುಡಿಯುವ ನೀರಿನ ಸಮಸ್ಯೆಗೆ ಕ್ರಮ ಕೈಗೊಳ್ಳಿ: ಜಿಪಂ ಸಿಇಒ

◆**ಯಾದಗಿರಿ:** ಬೇಸಿಗೆಯಲ್ಲಿ ಭೂಮಿಯ ಅಂತರ್ಜಲ ಮಟ್ಟ ಕಡಿಮೆಯಾಗಿ ಕೆಲವು ಬೋರವೆಲ್‌ಗಳಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ಸಮಸ್ಯೆಯಾಗಿ ಜನರಿಗೆ ನೀರು ಸಿಗದೆ ತೊಂದರೆಯಾಗುತ್ತದೆ. ಇಂತಹ ಸಮಸ್ಯೆ ಉದ್ಭವಿಸುವ ಗ್ರಾಮಗಳನ್ನು ಗುರುತಿಸಿ, ಅಗತ್ಯ ಕ್ರಮ ಕೈಗೊಳ್ಳಿ ಎಂದು ಜಿಪಂ ಸಿಇಒ ಲವೀಶ ಒರಡಿಯಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ವೈದ್ಯಕೀಯ ವಿಜ್ಞಾನಗಳ ಪದವಿ ಮಹಾವಿದ್ಯಾಲಯದ ಉಪನ್ಯಾಸ ಸಭಾಂಗಣದಲ್ಲಿ ನಡೆದ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳಡಿ ಅನುಷ್ಠಾನ ಮಾಡಿ, ನಿರ್ವಹಣೆ ಮಾಡುತ್ತಿರುವ ನಾನಾ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ದೂರವಾಣಿ ಸಂಖ್ಯೆ ದಿನದ 24ಗಂಟೆಗಳ ಕಾಲ ಚಾಲ್ತಿಯಾಗಿಡಬೇಕು. ಫೋನ್ ಕರೆ ಮೂಲಕವೂ ಕೆಲವು ಸಮಸ್ಯೆ ಪರಿಹರಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಎಲ್ಲ ಗ್ರಾಮಗಳಲ್ಲಿನ 360 ಗ್ರಾಪಂ ಬೋರವೆಲ್‌ಗಳಿವೆ, ಯಾವ ಬೋರ್‌ವೆಲ್‌ಗಳಲ್ಲಿ



ಮೇ ತಿಂಗಳಲ್ಲಿ ಜಿಲ್ಲೆಯ 33 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಲಿದೆ ಎಂದು ಸಮೀಕ್ಷೆ ವರದಿ ಹೇಳಿದೆ. ಹೀಗಾಗಿ ಅಂತಹ ಗ್ರಾಮಗಳ ಜನರಿಗೆ ಕುಡಿಯುವ ನೀರು ಪೂರೈಕೆಗೆ ಪರ್ಯಾಯ ವ್ಯವಸ್ಥೆ ಮಾಡಿ.

■ ಲವೀಶ್ ಒರಡಿಯಾ, ಜಿಪಂ ಸಿಇಒ

ನೀರಿನ ಇಳುವರಿ ಕಡಿಮೆ ಇದೆ ಎಂಬುದರ ಬಗ್ಗೆ ಅಧಿಕಾರಿಗಳಲ್ಲಿ ಮಾಹಿತಿ ಇರಬೇಕು. ಉದ್ದೇಶ ಪೂರ್ವಕವಾಗಿ ನೀರಿನ ಸಮಸ್ಯೆ ಕುರಿತು ವದಂತಿ ಹಬ್ಬಿಸುವವರ ಬಗ್ಗೆ ನಿಗಾ ವಹಿಸಬೇಕು ಎಂದರು.

ಮಹಾತ್ಮ ಗಾಂಧಿ ನರೇಗಾ ಯೋಜನೆ, ವಿವಿಧ ವಸತಿ ಯೋಜನೆ, ಸ್ವಚ್ಛ ಭಾರತ ಮಿಷನ್(ಗ್ರಾ), ಗ್ರಾಪಂ ಮಟ್ಟದ ಮಕ್ಕಳ ಕಾವಲು ಸಮಿತಿ ಬಲಪಡಿಸುವಿಕೆ ಹಾಗೂ ಲೋಕಾಯುಕ್ತ ದೂರುಗಳ ನಿರ್ವಹಣೆ ಪ್ರಗತಿ ಬಗ್ಗೆ ವರದಿ ಪರಿಶೀಲಿಸಿದರು.

ಜಿಪಂ ಉಪಕಾರ್ಯದರ್ಶಿ ವಿಜಯಕುಮಾರ ಮಡ್ಡೆ, ಯೋಜನಾ ನಿರ್ದೇಶಕ ಸಿ.ಬಿ.ದೇವರಮನಿ, ಮುಖ್ಯ ಲೆಕ್ಕಾಧಿಕಾರಿ ವೆಂಕಟೇಶ ಚಟ್ನಳ್ಳಿ, ಜಿಲ್ಲೆಯ ಎಲ್ಲಾ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಬಸವರಾಜ ಶರಬೈ, ಅಂಬ್ರೇಶ ಪಾಟೀಲ, ಮಹಾದೇವ ಬಾಬಲಗಿ, ಬಸವರಾಜ ಸಜ್ಜನ, ಶಶಿಧರ ಹಿರೇಮಠ, ಬಸಣ್ಣ ನಾಯಕ, ಸಹಾಯಕ ನಿರ್ದೇಶಕರು, ಪಂಚಾಯತಿ ರಾಜ್ ಇಂಜಿನಿಯರಿಂಗ್, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ಎಲ್ಲಾ ಗ್ರಾಪಂ ಆಡಳಿತಾಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಜಿಪಂ ವಿವಿಧ ಶಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕ್ಷೇತ್ರದ ಜನತೆಗೆ ಎರಡೂವರೆ ವರ್ಷದ ಲೆಕ್ಕ ಕೊಟ್ಟ ಶಾಸಕ


◆**ವಿಜಯನಗರ:** ಸ್ಥಳೀಯ ಶಾಸಕ ಎಚ್.ಆರ್. ಗವಿಯಪ್ಪ ಅವರು ಶುಕ್ರವಾರ ಹೊಸಪೇಟೆಯ ಒಳಾಂಗಣ ಕ್ರೀಡಾಂಗಣದಲ್ಲಿ ಸಾರ್ವಜನಿಕ ಸಭೆ ಆಯೋಜಿಸುವ ಮೂಲಕ ಕ್ಷೇತ್ರದಲ್ಲಿ ನಡೆಯುತ್ತಿರುವ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳನ್ನು ವಿವರಿಸುವ ಮೂಲಕ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎಂಬ ವಿಪಕ್ಷಗಳ ಆರೋಪಕ್ಕೆ ತಿರುಗೇಟು ನೀಡಿದರು.

ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ 80 ಕೋಟಿ ರೂ., ಕಮಲಾಪುರ ಪುರಸಭೆ ವ್ಯಾಪ್ತಿಯಲ್ಲಿ 15 ಕೋಟಿ ರೂ., ಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ 20 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲಾಗಿದ್ದು, ಅವು ವಿವಿಧ ಹಂತದಲ್ಲಿವೆ ಎಂದು ಸಾರ್ವಜನಿಕರೊಂದಿಗೆ ಹಂಚಿಕೊಂಡರು.

ಸಭೆಯಲ್ಲಿ ಪಕ್ಷದ ಕಾರ್ಯಕರ್ತರು, ಸಾರ್ವಜನಿಕರು, ಅಧಿಕಾರಿಗಳು, ಗುತ್ತಿಗೆದಾರರು ಇದ್ದರು. ಪ್ರತಿಯೊಂದು ವಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರಗಳನ್ನು ಆಯಾ ಭಾಗದ ಜನರಿಗೆ, ಜನಪ್ರತಿನಿಧಿಗಳಿಗೆ ಒದಗಿಸಲಾಯಿತು. ಈ ವೇಳೆ ಕೆಲವರು ವಿವಿಧ ಕಾಮಗಾರಿಗಳ ಕುರಿತು ಪೂರ್ವ ಪರ ಮಾಹಿತಿಯಿಲ್ಲದೇ ಹಾಗೂ ಸಭೆಯಲ್ಲಿ ಒದಗಿಸಿದ ಕಾಮಗಾರಿಗಳ ದಾಖಲೆಗಳನ್ನು ಓದದೇ ಟಿಪ್ಪಣಿ ಮಾಡಲು ಮುಂದಾದವರ ವಿರುದ್ಧ ಸಿಡಿಮಿಡಿಗೊಂಡ ಶಾಸಕರು, ಮೊದಲು ನೀವು ದಾಖಲೆಗಳಲ್ಲಿರುವ ಮಾಹಿತಿ ಅವಲೋಕಿಸಿ, ನಂತರ ಸಲಹೆ, ಸೂಚನೆ ನೀಡುವಂತೆ ಸೂಚಿದರು.

ಬಳಿಕ ಎಚ್ಚೆತ್ತುಕೊಂಡ ಅನೇಕರು, ಪ್ರತಿಯೊಂದು ಕಾಮಗಾರಿಯ ಕುರಿತು ಶಾಸಕರಿಗೆ ಸಲಹೆ, ಅಭಿಪ್ರಾಯ ವ್ಯಕ್ತಪಡಿಸಿದರು. ರಸ್ತೆ, ಒಳಚರಂಡಿ ಕಾಮಗಾರಿಗಳೇ ಅಧಿಕ ಪ್ರಮಾಣದಲ್ಲಿ ಇದ್ದು, ಜನರು ಅವುಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ನಗರಸಭೆಯ ಕೆಲವು ಸದಸ್ಯರು ಸಹ ಇದ್ದರು. ಕೆಲವು ಸದಸ್ಯರು ಗುತ್ತಿಗೆದಾರರ ಜತೆಗೆ ಬಂದು, ಕಾಮಗಾರಿಗಳಲ್ಲಿ ಆಗಬೇಕಾದ ಮಾರ್ಪಾಡುಗಳ ಕುರಿತು ಶಾಸಕರ ಗಮನಕ್ಕೆ ತಂದರು.

ಎಸಿ ಪಿ.ವಿವೇಕಾನಂದ, ನಗರಸಭೆ ಆಯುಕ್ತ ಎ.ಶಿವಕುಮಾರ, ಜಿಲ್ಲಾ ಯೋಜನಾ ಕೋಶದ ಯೋಜನಾ ನಿರ್ದೇಶಕ ಮನೋಹರ್, ತಾಪಂ ಇಒ ಆಲಂ ಬಾಷಾ, ಲೋಕೋಪಯೋಗಿ ಇಲಾಖೆಯ ಎಇಇ ರವಿ ನಾಯ್ಕ್, ಕಾಮಗಾರಿಗಳ ಗುಣಮಟ್ಟ ಮೌಲ್ಯಮಾಪನ ಮಾಡುವ ವಿಭಾಗದ ಸುಧಾಕರ್ ಇತರರು ಶಾಸಕರಿಗೆ ಸಾಥ್ ನೀಡಿದರು.



ಪಕ್ಷದ ಸಭೆಯಲ್ಲಿ ಅಧಿಕಾರಿಗಳು?

ಶಾಸಕ ಎಚ್.ಆರ್.ಗವಿಯಪ್ಪ ಅವರು ಕ್ಷೇತ್ರದ ಕುಂದು-ಕೊರತೆ ಹಾಗೂ ಪ್ರಗತಿ ವರದಿ ಮಂಡಿಸಲು ಅಧಿಕಾರಿಗಳು, ಸಾರ್ವಜನಿಕರ ತುರ್ತು ಸಭೆ ಆಯೋಜಿಸಲು ಆಪ್ತ ಸಹಾಯಕರಿಗೆ ಸೂಚಿಸಿದ್ದರು. ಅದನ್ನು ಗ್ರಹಿಸುವಲ್ಲಿ ಎಡವಿದ್ದ ಸಹಾಯಕ ಸಿಬ್ಬಂದಿ 'ಪಕ್ಷದ ಕಾರ್ಯಕರ್ತರ ಸಭೆ' ಎಂಬ ಸಂದೇಶ ಸಾಮಾಜಿಕ ಜಾಲತಾಣದಲ್ಲಿ ಸಾರಿದ್ದರು. ಆದರೆ, ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ವೇದಿಕೆ ಹಂಚಿಕೊಂಡಿದ್ದರಿಂದ ವಿಪಕ್ಷಗಳಿಂದ ಆಕ್ಷೇಪದ ಮಾತುಗಳು ಕೇಳಿ ಬಂದವು.